compose.kerala.gov.in
egazette.kerala.gov.in
printing.kerala.gov.in

Regn.No. KERBIL/2012/45073
dated 2012-09-05 with RNI
Reg No.KL/TV(N)/634/2021-2023

കേരള സർക്കാർ
GOVERNMENT OF KERALA

കേരള ഗസറ്റ്
KERALA GAZETTE

ആധികാരികമായി പ്രസിദ്ധപ്പെടുത്തുന്നത്
PUBLISHED BY AUTHORITY

ചൊവ്വ, 2026 മാർച്ച് 10
Tuesday, 10th March 2026

1201 കുംഭം 26
26th Kumbham 1201

1947 ഫാൽഗുനം 19
19th Phalguna 1947

വാല്യം 15
Vol. XV

നമ്പർ / **No.** **10**

Part I -Section (iii)

Law Department

©
കേരള സർക്കാർ
GOVERNMENT OF KERALA
2026

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಸಿ) ಇಲಾಖೆ

ಅಧಿಸೂಚನೆ

2023 ಡಿಸೆಂಬರ್ 8,

ನಂಬ್ರ 58/ಲೆಗ್. ಸಿ3/2023/ಕಾನೂನು. ತಿರುವನಂತಪುರಂ, 1199 ವೃಶ್ಚಿಕ 22/

1945 ಅಗ್ರಹಾಯನ 17.

2023 ಡಿಸೆಂಬರ್ 7ನೇ ದಿನಾಂಕದಂದು ಕೇರಳ ರಾಜ್ಯಪಾಲರು ಪ್ರಖ್ಯಾಪಿಸಿದಂತಹ ಈ ಕೆಳಗಿನ ಅಧ್ಯಾದೇಶವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ.

ರಾಜ್ಯಪಾಲರ ಆಜ್ಞಾಪ್ರಕಾರ,

ಕೆ. ಜಿ. ಸನಲ್ ಕುಮಾರ್,

ಕಾನೂನು ಕಾರ್ಯದರ್ಶಿ.

2023ರ 4ನೇ ನಂಬ್ರ ಅಧ್ಯಾದೇಶ

2023ರ ಕೇರಳ ಪಂಚಾಯತ್ ರಾಜ್ (ತಿದ್ದುಪಡಿ) ಅಧ್ಯಾದೇಶ

ಭಾರತ ಗಣರಾಜ್ಯದ ಎಪ್ಪತ್ತನಾಲ್ಕನೇ ವರ್ಷದಲ್ಲಿ ಕೇರಳ ರಾಜ್ಯಪಾಲರಿಂದ ಪ್ರಖ್ಯಾಪಿಸಲ್ಪಟ್ಟಿತು

1994ರ ಕೇರಳ ಪಂಚಾಯತ್ ರಾಜ್ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಿರುವ

ಒಂದು

ಅಧ್ಯಾದೇಶ

ಪೀಠಿಕೆ—1994ರ ಕೇರಳ ಪಂಚಾಯತ್ ರಾಜ್ ಅಧಿನಿಯಮವನ್ನು ಇನ್ನು ಮುಂದಿನ ಅಗತ್ಯಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದಲೂ;

ಕೇರಳ ರಾಜ್ಯ ವಿಧಾನಸಭೆಯು ಅಧಿವೇಶನದಲ್ಲಿಲ್ಲದಿರುವುದರಿಂದಲೂ ತಾನು ತ್ವರಿತ ಕ್ರಮವನ್ನು ಕೈಗೊಳ್ಳಲು ಅಗತ್ಯವಾದ ಸನ್ನಿವೇಶವು ಅಸ್ತಿತ್ವದಲ್ಲಿದೆಯೆಂದು ಕೇರಳ ರಾಜ್ಯಪಾಲರಿಗೆ ಮನವರಿಕೆಯಾಗಿರುವುದರಿಂದಲೂ;

ಈಗ, ಆದುದರಿಂದ, ಭಾರತ ಸಂವಿಧಾನದ 213ನೇ ಅನುಚ್ಛೇದದ ಖಂಡ (1)ರ ಪ್ರಕಾರ ನೀಡಲ್ಪಟ್ಟ ಅಧಿಕಾರಗಳನ್ನು ವಿನಿಯೋಗಿಸಿ, ಕೇರಳ ರಾಜ್ಯಪಾಲರು ಈ ಕೆಳಗಿನ ಅಧ್ಯಾದೇಶವನ್ನು ಪ್ರಖ್ಯಾಪಿಸಲು ಇಚ್ಛಿಸುವರು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧ್ಯಾದೇಶವನ್ನು 2023ರ ಕೇರಳ ಪಂಚಾಯತ್ ರಾಜ್ (ತಿದ್ದುಪಡಿ) ಅಧ್ಯಾದೇಶವೆಂದು ಕರೆಯಬಹುದು.

(2) ಇದು ಕೂಡಲೇ ಜಾರಿಗೆ ಬರುವುದಾಗಿದೆ.

G. 13/2025/GPC.

This is a digitally signed Gazette.
Authenticity may be verified through https://compose.kerala.gov.in/

2. ತಾತ್ಕಾಲಿಕವಾಗಿ ತಿದ್ದುಪಡಿಮಾಡಬೇಕಾದ 1994ರ 13ನೇ ಅಧಿನಿಯಮ.—*ಈ ಅಧ್ಯಾದೇಶವು ಜಾರಿಯಲ್ಲಿರುವ ಕಾಲಾವಧಿಯಲ್ಲಿ, 1994ರ ಕೇರಳ ಪಂಚಾಯತ್ ರಾಜ್ ಅಧಿನಿಯಮ (1994ರ 13) (ಇನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲ್ಪಡುವುದು)ಕ್ಕೆ 3ರಿಂದ 25ರ ವರೆಗಿನ ವಿಭಾಗಗಳಲ್ಲಿ ನಿರ್ದಿಷ್ಟಪಡಿಸಿರುವ ತಿದ್ದುಪಡಿಗಳಿಗೆ ವಿಧೇಯವಾಗಿ ಪರಿಣಾಮವಿರುವುದಾಗಿದೆ.*

3. 189ನೇ ವಿಭಾಗದ ತಿದ್ದುಪಡಿ.—*ಪ್ರಧಾನ ಅಧಿನಿಯಮದ 189ನೇ ವಿಭಾಗದ (1)ನೇ ಉಪ-ವಿಭಾಗದಲ್ಲಿ, "ಕಲ್ಯಾಣ ಕಾರ್ಯಕ್ರಮಗಳು" ಎಂಬ ಪದದ ಮತ್ತು ಚಿಹ್ನೆಯ ನಂತರ "ತ್ಯಾಜ್ಯ ಸಂಸ್ಕರಣೆ" ಎಂಬ ಪದವನ್ನು ಮತ್ತು ಚಿಹ್ನೆಯನ್ನು ಸೇರಿಸತಕ್ಕದ್ದು.*

4. XXನೇ ಅಧ್ಯಾಯದ ಶೀರ್ಷಿಕೆಯ ತಿದ್ದುಪಡಿ.—*ಪ್ರಧಾನ ಅಧಿನಿಯಮದ XXನೇ ಅಧ್ಯಾಯದ ಶೀರ್ಷಿಕೆಯಲ್ಲಿ "ಸಾರ್ವಜನಿಕ ರಕ್ಷಣೆ, ಸೌಕರ್ಯ ಮತ್ತು ಆರೋಗ್ಯ" ಎಂಬ ಪದಗಳ ನಂತರ "ತ್ಯಾಜ್ಯ ಸಂಸ್ಕರಣೆ" ಎಂಬ ಪದವನ್ನು ಸೇರಿಸತಕ್ಕದ್ದು.*

5. 219ನೇ ವಿಭಾಗದ ತಿದ್ದುಪಡಿ.—*ಪ್ರಧಾನ ಅಧಿನಿಯಮದ 219ನೇ ವಿಭಾಗದಲ್ಲಿ,*—

(i) *ಪಾರ್ಶ್ವ ಶೀರ್ಷಿಕೆಯ ಬದಲು ಈ ಕೆಳಗಿನ ಪಾರ್ಶ್ವ ಶೀರ್ಷಿಕೆಯನ್ನು ಸೇರಿಸತಕ್ಕದ್ದು, ಅದೇನೆಂದರೆ:*—

"*ಜನರು ಒಟ್ಟು ಸೇರುವ ಸ್ಥಳಗಳ ಮೇಲೆ ನಿಯಂತ್ರಣವಿರುವ ವ್ಯಕ್ತಿಗಳ ಜವಾಬ್ದಾರಿಗಳು*";

(ii) *ಅಸ್ತಿತ್ವದಲ್ಲಿರುವ ಉಪಬಂಧವನ್ನು ಅದರ (1)ನೇ ಉಪ-ವಿಭಾಗವಾಗಿ ಅಂಕಿತಗೊಳಿಸತಕ್ಕದ್ದು ಮತ್ತು ಆ ರೀತಿ ಅಂಕಿತಗೊಳಿಸಿದ (1)ನೇ ಉಪ-ವಿಭಾಗದ ನಂತರ ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:*—

"*2 ಯಾವುದೇ ವ್ಯಕ್ತಿಯು ಕನಿಷ್ಠ ಮೂರು ಕೆಲಸದ ದಿನಗಳಿಗಿಂತ ಮುಂಚಿತವಾದರೂ ಗ್ರಾಮ ಪಂಚಾಯತ್ತಿಗೆ ತಿಳಿಸದೆ, ಅನುಮತಿಯಿಲ್ಲದ ಯಾವುದೇ ಸ್ಥಳದಲ್ಲಿ ನೂರಕ್ಕಿಂತ ಹೆಚ್ಚು ಜನರ ಒಂದು ಕಾರ್ಯಕ್ರಮ ಅಥವಾ ಒಕ್ಕೂಟವನ್ನು ಸಂಘಟಿಸತಕ್ಕದ್ದಲ್ಲ ಮತ್ತು ಅಂತಹ ವ್ಯಕ್ತಿ ಅಥವಾ ಅಂತಹ ಕಾರ್ಯಕ್ರಮದ ಸಂಯೋಜಕನು ಮೂಲದಲ್ಲಿಯೇ ತ್ಯಾಜ್ಯವನ್ನು ಬೇರ್ಪಡಿಸಲಾಗುತ್ತಿದೆ ಎಂದು ಖಾತ್ರಿಪಡಿಸತಕ್ಕದ್ದು ಮತ್ತು ಗ್ರಾಮಪಂಚಾಯತ್ ನಿರ್ಧರಿಸುವ ಶುಲ್ಕವನ್ನು ನೀಡಿ ಗ್ರಾಮಪಂಚಾಯತ್ ನಿಯೋಜಿಸಿದ ತ್ಯಾಜ್ಯ ಸಂಗ್ರಹದಾರರಿಗೋ ಏಜೆನ್ಸಿಗಳಿಗೋ ಅದನ್ನು ಹಸ್ತಾಂತರಿಸತಕ್ಕದ್ದು:*

ಆದರೆ, ಅಂತಹ ಶುಲ್ಕಗಳು ತ್ಯಾಜ್ಯ ಸಂಸ್ಕರಣೆಗಿರುವ ಯಥಾರ್ಥ ಖರ್ಚಿಗಿಂತ ಕಡಿಮೆ ದರ ಆಗಿರತಕ್ಕದ್ದಲ್ಲ ಮತ್ತು ಅದನ್ನು ಗ್ರಾಮಪಂಚಾಯತ್ ನಿರ್ದೇಶಿಸಿದ ಪ್ರಕಾರ ಮುಂಗಡವಾಗಿ ಪಾವತಿಸತಕ್ಕದ್ದು.

ವಿವರಣೆ.—1. ಈ ವಿಭಾಗದ ಮತ್ತು 189ನೇ ವಿಭಾಗದ ಮತ್ತು 219ಎ ಯಿಂದ 219 ವೈ ವರೆಗಿನ ವಿಭಾಗಗಳ ಉದ್ದೇಶಕ್ಕಾಗಿ "ತ್ಯಾಜ್ಯ ಸಂಸ್ಕರಣೆ" ಎಂದರೆ ಘನ ತ್ಯಾಜ್ಯಗಳು ಒಳಗೊಂಡ ತ್ಯಾಜ್ಯಗಳ ಬೇರ್ಪಡಿಸುವಿಕೆ, ಸಂಗ್ರಹಣೆ, ಸಾಗಣೆ, ಶೇಖರಣೆ, ಸಂಸ್ಕರಣೆ ಅಥವಾ ವಿಲೇವಾರಿ ಎಂದರ್ಥ.

ವಿವರಣೆ.—2. ಈ ಅಧಿನಿಯಮದಲ್ಲಿ ಉಪಯೋಗಿಸಿರುವಂತಹ ಆದರೆ ವ್ಯಾಖ್ಯಾನಿಸದಂತಹ, ಆದರೆ 1986ರ ಪರಿಸರ (ಸಂರಕ್ಷಣೆ) ಅಧಿನಿಯಮ (1986ರ 29ನೇ ಕೇಂದ್ರ ಅಧಿನಿಯಮ)ದಲ್ಲಿ ಮತ್ತು ಅದರ ಅಡಿಯಲ್ಲಿ ರಚಿಸಿರುವ ನಿಯಮಗಳಲ್ಲಿ ವ್ಯಾಖ್ಯಾನಿಸಿರುವ ಪದಗಳಿಗೆ ಮತ್ತು ಪ್ರಯೋಗಗಳಿಗೆ ಪ್ರಸ್ತುತ ಅಧಿನಿಯಮದಲ್ಲಿ ಮತ್ತು ನಿಯಮಗಳಲ್ಲಿ ಅದಕ್ಕೆ ಅನುಕ್ರಮವಾಗಿ ನೀಡಿರುವ ಅದೇ ಅರ್ಥಗಳು ಇರುವುದಾಗಿದೆ.".

6. 219ಎ ವಿಭಾಗದ ತಿದ್ದುಪಡಿ.—*ಪ್ರಧಾನ ಅಧಿನಿಯಮದ 219ಎ ವಿಭಾಗದ,*—

(i) *(2), (3) ಮತ್ತು (4) ಎಂಬೀ ಉಪ-ವಿಭಾಗಗಳ ಬದಲು ಈ ಕೆಳಗಿನ ಉಪ-ವಿಭಾಗಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:*—

"*(2) 219ನೇ ವಿಭಾಗದಲ್ಲಿ ಮತ್ತು 219ಎ ಯಿಂದ 219 ವೈ ವರೆಗಿನ ವಿಭಾಗಗಳಲ್ಲಿ ಉಪಬಂಧಿಸಿದ ಮತ್ತು ಈ ಅಧಿನಿಯಮದ ಅಡಿಯಲ್ಲಿನ ನಿಯಮಗಳಲ್ಲಿ ಮತ್ತು 1986ರ ಪರಿಸರ (ಸಂರಕ್ಷಣೆ) ಅಧಿನಿಯಮ (1986ರ 29ನೇ ಕೇಂದ್ರ ಅಧಿನಿಯಮ)ದಲ್ಲಿ ಮತ್ತು ಅದರ ಅಡಿಯಲ್ಲಿನ ನಿಯಮಗಳಲ್ಲಿ ಉಪಬಂಧಿಸಿರುವ ತ್ಯಾಜ್ಯ ಸಂಸ್ಕರಣೆಗೆ ಸಂಬಂಧಪಟ್ಟ ಗ್ರಾಮಪಂಚಾಯತಿನ ಎಲ್ಲಾ ಕರ್ತವ್ಯಗಳು, ಜವಾಬ್ದಾರಿಗಳು ಮತ್ತು ಪ್ರಕಾರ್ಯಗಳು ಗ್ರಾಮಪಂಚಾಯತಿನಲ್ಲಿ ನಿಹಿತವಾಗಿರುವುದು ಮತ್ತು ಗ್ರಾಮಪಂಚಾಯತ್ ಅದರ ಕರ್ತವ್ಯಗಳನ್ನು, ಜವಾಬ್ದಾರಿಗಳನ್ನು ಮತ್ತು ಪ್ರಕಾರ್ಯಗಳನ್ನು ಕಾರ್ಯದರ್ಶಿಯವರ ಮುಖಾಂತರ ನಿರ್ವಹಿಸತಕ್ಕದ್ದು.*

(3) (2)ನೇ ಉಪ-ವಿಭಾಗದ ಪ್ರಕಾರದ ಗ್ರಾಮಪಂಚಾಯತಿನ ಕರ್ತವ್ಯಗಳನ್ನು, ಜವಾಬ್ದಾರಿಗಳನ್ನು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸುವುದು ಕಾರ್ಯದರ್ಶಿಯವರ ಹೊಣೆಗಾರಿಕೆಯಾಗಿರುವುದಾಗಿದೆ ಮತ್ತು ಕಾರ್ಯದರ್ಶಿಯವರಿಗೆ, ಅದನ್ನು ಲಿಖಿತ ಆದೇಶದ ಮುಖೇನ ತ್ಯಾಜ್ಯ ಸಂಸ್ಕರಣೆ, ಸಾರ್ವಜನಿಕಾರೋಗ್ಯ, ನೈರ್ಮಲ್ಯ ಮತ್ತು ಎಂಜಿನಿಯರಿಂಗ್ ಎಂಬಿವುಗಳ ಹೊಣೆಗಾರಿಕೆಯಿರುವ ಅಧಿಕಾರಿಗಳಿಗೆ ಮತ್ತು

This is a digitally signed Gazette.
Authenticity may be verified through https://compose.kerala.gov.in/

ನೌಕರರಿಗೆ ಅಥವಾ ಗ್ರಾಮಪಂಚಾಯತಿನ ಇತರ ಯಾವುದೇ ಅಧಿಕಾರಿಗಳಿಗೆ ಅಥವಾ ನೌಕರರಿಗೆ, ಬೀದಿಗಳ ಅಥವಾ ಪ್ರದೇಶಗಳ ಕೆಲಸದ ರೀತಿಯ ತಳಹದಿಯಲ್ಲಿ ವಹಿಸಿಕೊಡಬಹುದಾಗಿದೆ ಮತ್ತು ಅಂತಹ ಕರ್ತವ್ಯಗಳನ್ನು, ಜವಾಬ್ದಾರಿಗಳನ್ನು ಮತ್ತು ಪ್ರಕಾರ್ಯಗಳನ್ನು ಅವರಿಂದ ಸರಿಯಾಗಿ ನಿರ್ವಹಿಸಲ್ಪಡುವಂತೆ ಮಾಡಲ್ಪಡತಕ್ಕದ್ದಾಗಿದೆ.

(4) ಪ್ರತಿಯೊಬ್ಬ ಚುನಾಯಿತ ಸದಸ್ಯನು, ತಾನು ಪ್ರತಿನಿಧಿಸುವ ಚುನಾವಣಾ ಕ್ಷೇತ್ರದ ಪ್ರದೇಶದಿಂದಿರುವ ಕಸಗಳು ಮತ್ತು ಇತರ ತ್ಯಾಜ್ಯಗಳನ್ನು ಸಂಗ್ರಹಿಸಿ ನೀಗಿಸುವ ಚಟುವಟಿಕೆಯನ್ನು ಸೂಕ್ಷ್ಮವಾಗಿ ವೀಕ್ಷಿಸತಕ್ಕದ್ದು ಮತ್ತು ಈ ವಿಷಯದಲ್ಲಿ ಉಂಟಾಗಿರುವ ಲೋಪ ಅಥವಾ ನಿರ್ಲಕ್ಷ್ಯವನ್ನು ಕಾರ್ಯದರ್ಶಿಯವರ ಗಮನಕ್ಕೆ ತರತಕ್ಕದ್ದು ಮತ್ತು ಆ ರೀತಿ ಗಮನಕ್ಕೆ ತಂದಲ್ಲಿ ಕಾರ್ಯದರ್ಶಿಯವರು ತುರ್ತಾಗಿ ಅಗತ್ಯವಾದ ಪರಿಹಾರ ಕ್ರಮಗಳನ್ನು ಕೈಗೊಳ್ಳತಕ್ಕದ್ದು.".

(ii) ಆ ರೀತಿ ಬದಲಾಗಿ ಸೇರಿಸಿದ ಉಪ-ವಿಭಾಗಗಳ ನಂತರ ಈ ಕೆಳಗಿನ ಉಪ-ವಿಭಾಗಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(5) (3)ನೇ ಉಪ-ವಿಭಾಗ ಪ್ರಕಾರ ತನ್ನಲ್ಲಿ ನಿಹಿತವಾಗಿರುವ ಜವಾಬ್ದಾರಿಯ ನಿರ್ವಹಣೆಯಲ್ಲಿ ಕಾರ್ಯದರ್ಶಿಯವರು ಲೋಪ ಉಂಟುಮಾಡಿ ಆ ಮೂಲಕ, ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಕಸಗಳು, ತ್ಯಾಜ್ಯಗಳು ರಾಶಿಬಿದ್ದು ಪರಿಸರ ಸಮಸ್ಯೆಗಳನ್ನು ಮತ್ತು ಮಾಲಿನ್ಯವನ್ನು ಉಂಟುಮಾಡುವುದಾದಲ್ಲಿ, ಗ್ರಾಮಪಂಚಾಯತಿಗೆ ಅಥವಾ ಸರಕಾರಕ್ಕೆ ಕಾರ್ಯದರ್ಶಿಯವರ ವಿರುದ್ಧ ಕರ್ತವ್ಯ ಲೋಪದ ಹೆಸರಿನಲ್ಲಿ ಶಿಕ್ಷಾ ಕ್ರಮಗಳನ್ನು ಕೈಗೊಳ್ಳಬಹುದಾಗಿದೆ.

(6) ಕಾರ್ಯದರ್ಶಿಯವರು, (1)ನೇ ಉಪ-ವಿಭಾಗದಲ್ಲಿ ಉಲ್ಲೇಖಿಸಿರುವ ಉಗ್ರಾಣಗಳು, ಸ್ಥಳಗಳು, ಸಂಗ್ರಹಣೆಗಳು, ಕಸದ ತೊಟ್ಟಿಗಳು, ವಾಹನಗಳು, ನೌಕೆಗಳು ಮತ್ತು ಪರಿಸರ ಸಮಸ್ಯೆಗಳಿಗೆ, ಮಾಲಿನ್ಯಕ್ಕೆ ಮತ್ತು ಸಾರ್ವಜನಿಕಾರೋಗ್ಯ ಸಮಸ್ಯೆಗಳಿಗೆ ಕಾರಣವಾಗಬಹುದಾದಂತಹ ಉಪದ್ರವಕಾರಿಗಳಾಗಿ ಪರಿಣಮಿಸುವುದನ್ನು ತಡೆಗಟ್ಟಲು, ಸಾಕಷ್ಟು ಏರ್ಪಾಟುಗಳನ್ನು ಮಾಡತಕ್ಕದ್ದು.

(7) ಗ್ರಾಮಪಂಚಾಯತಿಗೆ, ಸ್ವತಃ ಅಲ್ಲದಿದ್ದಲ್ಲಿ ಯಾವುದೇ ವ್ಯಕ್ತಿಯ ಮುಖಾಂತರವೋ ಏಜೆನ್ಸಿಯ ಮುಖಾಂತರವೋ ಕರಾರಿನ ತಳಹದಿಯಲ್ಲಿ ಅಥವಾ ಅಲ್ಲದೆ ಈ ಅಧಿನಿಯಮದಲ್ಲಿ ಅಥವಾ ಅದರ ಅಡಿಯಲ್ಲಿನ ನಿಯಮಗಳಲ್ಲಿ ಅಥವಾ 1986ರ ಪರಿಸರ (ಸಂರಕ್ಷಣೆ) ಅಧಿನಿಯಮ (1986ರ 29ನೇ ಕೇಂದ್ರ ಅಧಿನಿಯಮ)ದ ಅಥವಾ ಅದರ ಅಡಿಯಲ್ಲಿನ ನಿಯಮಗಳಲ್ಲಿ ಇರುವ ತ್ಯಾಜ್ಯ ಸಂಸ್ಕರಣೆ ಚಟುವಟಿಕೆಗಳನ್ನು ಸಂಪೂರ್ಣವಾಗಿ ಅಥವಾ ಭಾಗಶಃವಾಗಿ ಮಾಡುವುದಕ್ಕಿರುವ ವ್ಯವಸ್ಥೆಗಳನ್ನು ಏರ್ಪಡಿಸಬಹುದಾಗಿದೆ.

(8) ಈ ಅಧಿನಿಯಮದಲ್ಲಿ ಅಥವಾ ತತ್ಕಾಲ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಸರಕಾರಕ್ಕೆ, ಸಾರ್ವಜನಿಕ ಹಿತಾಸಕ್ತಿಗಾಗಿ, ಆ ರೀತಿ ಮಾಡುವುದು ಅಗತ್ಯವೆಂದು ಮನವರಿಕೆಯಾಗುವುದಾದಲ್ಲಿ, ಘನ ತ್ಯಾಜ್ಯಗಳು, ಕಸ ಮತ್ತು ಮಾಲಿನ್ಯಗಳು ಮತ್ತು ಆ ರೀತಿಯಲ್ಲಿನ ಇತರ ವಸ್ತುಗಳು ಮತ್ತು ಎರಡು ಅಥವಾ ಅದಕ್ಕಿಂತ ಹೆಚ್ಚು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಿಂದ ನೇರವಾಗಿ ಅಥವಾ ಸರಕಾರ ಅಧಿಕೃತಗೊಳಿಸಿದ ಏಜೆನ್ಸಿಯ ಮುಖೇನ ಸಂಗ್ರಹಿಸುವುದಕ್ಕೆ, ಸಾಗಿಸುವುದಕ್ಕೆ, ವಿಲೇವಾರಿ ಮಾಡುವುದಕ್ಕೆ ಮತ್ತು ಸಂಸ್ಕರಣೆ ಮಾಡುವುದಕ್ಕೆ ಕರಾರಿನ ತಳಹದಿಯಲ್ಲಿ ಅಥವಾ ಇತರ ರೀತಿಯಲ್ಲಿ ವ್ಯವಸ್ಥೆಮಾಡಬಹುದಾಗಿದೆ ಅಥವಾ ಘನತ್ಯಾಜ್ಯಗಳು, ಕಸ ಮತ್ತು ಮಾಲಿನ್ಯಗಳು ಮತ್ತು ಆ ರೀತಿಯ ಇತರ ವಸ್ತುಗಳನ್ನು ಸಂಗ್ರಹಿಸುವುದಕ್ಕೆ, ಸಾಗಿಸುವುದಕ್ಕೆ, ವಿಲೇವಾರಿ ಮಾಡುವುದಕ್ಕೆ ಮತ್ತು ಸಂಸ್ಕರಣೆ ಮಾಡುವುದಕ್ಕೆ ಗಣನೀಯವಾಗಿ ಖರ್ಚು ಬರುವ ಯಾವುದೇ ಯೋಜನೆಯನ್ನು ವಹಿಸಿಕೊಳ್ಳಬಹುದಾಗಿದೆ.

(9) ಈ ಅಧಿನಿಯಮದಲ್ಲಿ ಅಥವಾ ತತ್ಕಾಲ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, (8)ನೇ ಉಪ-ವಿಭಾಗದ ಉಪಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ಸರಕಾರಕ್ಕೆ, ಪ್ರಸ್ತುತ ಉಪ-ವಿಭಾಗದಲ್ಲಿ ನಿರ್ದಿಷ್ಟಪಡಿಸಿದ ಯೋಜನೆಯನ್ನು ಜಾರಿಗೊಳಿಸಲು ಉದ್ದೇಶಿಸಿರುವ ಮತ್ತು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಯ ಸ್ವಾಧೀನದಲ್ಲಿರುವ ಯಾವುದೇ ಭೂಮಿಯನ್ನು ಅಧಿಕೃತ ಗಜೆಟಿನಲ್ಲಿ ಪ್ರಕಟಿಸುವ ಒಂದು ಅಧಿಸೂಚನೆಯ ಮೂಲಕ, ವಹಿಸಿಕೊಳ್ಳುವುದಕ್ಕೆ ಅಧಿಕಾರವಿರುವುದಾಗಿದೆ.".

7. 219ಎ ವಿಭಾಗದ ನಂತರ ಹೊಸ ವಿಭಾಗಗಳ ಸೇರ್ಪಡೆ.—ಪ್ರಧಾನ ಅಧಿನಿಯಮದ 219ಎ ವಿಭಾಗದ ನಂತರ ಈ ಕೆಳಗಿನ ವಿಭಾಗಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"219ಎಎ. ಸರಕಾರದ ನಿರ್ದೇಶಗಳನ್ನು ಗ್ರಾಮಪಂಚಾಯತ್ ಜಾರಿಗೊಳಿಸತಕ್ಕದೆಂದು.—(1) ಈ ಅಧಿನಿಯಮದ ಅಡಿಯಲ್ಲಿ ಅಲ್ಲದಿದ್ದಲ್ಲಿ 1986ರ ಪರಿಸರ (ಸಂರಕ್ಷಣೆ) ಅಧಿನಿಯಮ (1986ರ 29ನೇ ಕೇಂದ್ರ ಅಧಿನಿಯಮ)ದ ಮತ್ತು ಅದರ ಅಡಿಯಲ್ಲಿ ರಚಿಸಿದ ನಿಯಮಗಳಲ್ಲಿ ಘನ ತ್ಯಾಜ್ಯ ಸಂಸ್ಕರಣೆಗೆ ಸಂಬಂಧಿಸಿ ಸರಕಾರವು ಜಾರಿಗೊಳಿಸುವ ನಿರ್ದೇಶಗಳನ್ನು ಜಾರಿಗೊಳಿಸಬೇಕಾದುದು ಗ್ರಾಮಪಂಚಾಯತಿನ ಜವಾಬ್ದಾರಿಯಾಗಿರುವುದು.

(2) (1)ನೇ ಉಪ-ವಿಭಾಗದಲ್ಲಿ ಉಲ್ಲೇಖಿಸಿರುವ ನಿರ್ದೇಶಗಳಿಗೆ ಸಂಬಂಧಿಸಿ ತಯಾರಿಸಿದ ಅಜೆಂಡಾವನ್ನು ಪಂಚಾಯತಿನ ನಿಕಟಾನಂತರದ ಸಭೆಯಲ್ಲಿ ಮಂಡಿಸಲಾಗುವುದೆಂದು ಅಧ್ಯಕ್ಷರು ಖಾತ್ರಿಪಡಿಸತಕ್ಕದ್ದು ಮತ್ತು ಅಂತಹ ಅಜೆಂಡಾದ ಮೇಲೆ ಗ್ರಾಮಪಂಚಾಯತ್ ನಿರ್ಧಾರ ತೆಗೆಯತಕ್ಕದ್ದಾಗಿದೆ.

This is a digitally signed Gazette.
Authenticity may be verified through https://compose.kerala.gov.in/

(3) (1)ನೇ ಉಪ-ವಿಭಾಗದ ಪ್ರಕಾರವಿರುವ ಯಾವುದಾದರೂ ನಿರ್ದೇಶಗಳು ಲಭಿಸಿ ಆ ರೀತಿಯ ನಿರ್ದೇಶಗಳಿಗನುಸಾರವಾಗಿ ಒಂದು ತಿಂಗಳಿನೊಳಗೆ, ನಿರ್ಧಾರ ತೆಗೆದುಕೊಳ್ಳುವುದರಲ್ಲಿ ಗ್ರಾಮಪಂಚಾಯತ್ ವಿಫಲವಾಗುವ ಸಂದರ್ಭಗಳಲ್ಲಿ ಅಂತಹ ನಿರ್ದೇಶಗಳನ್ನು ಜಾರಿಗೊಳಿಸುವುದಕ್ಕಿರುವ ಅನುಮತಿಯನ್ನು ಗ್ರಾಮಪಂಚಾಯತ್ ಅಂಗೀಕರಿಸಿರುವುದಾಗಿಯೋ ನೀಡಿರುವುದಾಗಿಯೋ ಭಾವಿಸತಕ್ಕದ್ದು.

(4) (3)ನೇ ಉಪ-ವಿಭಾಗದ ಪ್ರಕಾರವಿರುವ ಅಂಗೀಕಾರ ನೀಡಿರುವುದಾಗಿ ಭಾವಿಸಲ್ಪಡುವುದು ಒಳಗೊಂಡು ಆ ರೀತಿಯ ನಿರ್ಧಾರಗಳನ್ನು ಜಾರಿಗೊಳಿಸುವುದಕ್ಕೆ ಕಾರ್ಯದರ್ಶಿಯವರು ತುರ್ತಾಗಿ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಆ ರೀತಿಯ ನಿರ್ಧಾರವನ್ನು ಜಾರಿಗೊಳಿಸುವುದರಲ್ಲಿ ಕಾರ್ಯದರ್ಶಿಯವರಿಗೋ ಬೇರೆ ಯಾವುದಾದರೂ ಜವಾಬ್ದಾರರಾದ ಅಧಿಕಾರಿಗೋ ವೈಫಲ್ಯ ಅಥವಾ ಲೋಪ ಉಂಟಾಗಿದ್ದಲ್ಲಿ ಅದನ್ನು ಕರ್ತವ್ಯ ಲೋಪವೆಂದು ಪರಿಗಣಿಸಿ ಕಾರ್ಯದರ್ಶಿಯವರ ಮೇಲೆ ಅಲ್ಲದಿದ್ದಲ್ಲಿ ಅಂತಹ ಅಧಿಕಾರಿಯ ಮೇಲೆ ಸರಕಾರಕ್ಕೆ ಶಿಸ್ತುಕ್ರಮವನ್ನು ಸ್ವೀಕರಿಸಬಹುದಾಗಿದೆ.

(5) (1)ನೇ ಉಪ-ವಿಭಾಗದ ಪ್ರಕಾರವಿರುವ ಸರಕಾರದ ನಿರ್ದೇಶಗಳನ್ನು ಪಾಲಿಸುವುದರಲ್ಲಿ ಗ್ರಾಮಪಂಚಾಯತ್ ಲೋಪವೆಂಟು ಮಾಡಿದ್ದಲ್ಲಿ, ಗ್ರಾಮಪಂಚಾಯತಿನ ವಿರುದ್ಧವಾಗಿ ಕೈಗೊಳ್ಳಬಹುದಾದ ಇತರ ಕ್ರಮಗಳಿಗೆ ಭಂಗಬರದ ರೀತಿಯಲ್ಲಿ ಸರಕಾರಕ್ಕೆ ಅಂತಹ ಲೋಪಕ್ಕೆ ಗ್ರಾಮಪಂಚಾಯತಿನ ಮೇಲೆ ಜುಲ್ಮಾನೆಯನ್ನು ಹೊರಿಸಬಹುದಾಗಿದೆ:

ಆದರೆ, ಆ ರೀತಿಯಲ್ಲಿ ಜುಲ್ಮಾನೆಯನ್ನು ಹೊರಿಸುವುದಕ್ಕಿಂತ ಮೊದಲು ಗ್ರಾಮಪಂಚಾಯತಿಗೆ ಹೇಳಲಿರುವುದನ್ನು ಹೇಳಲು ಯುಕ್ತ ಅವಕಾಶವನ್ನು ನೀಡತಕ್ಕದ್ದಾಗಿದೆ.

219ಎಬಿ. ತ್ಯಾಜ್ಯ ಸಂಸ್ಕರಣೆಯಲ್ಲಿ ಕಾರ್ಯದರ್ಶಿಯವರ ಜವಾಬ್ದಾರಿಗಳು.—(1) 219ನೇ ವಿಭಾಗದ ಮತ್ತು 219ಎ ಯಿಂದ 219ವೈ ವರೆಗಿನ ವಿಭಾಗಗಳಲ್ಲಿನ ಉಪಬಂಧಗಳನ್ನು ಉಲಂಘಿಸುವ ಯಾವುದೇ ವ್ಯಕ್ತಿಯ ವಿರುದ್ಧವಾಗಿ ಕಾರ್ಯದರ್ಶಿಯವರಿಗೆ ಕಾನೂನು ಕ್ರಮಗಳನ್ನು ಆರಂಭಿಸಬಹುದಾಗಿದೆ ಆದರೆ ಈ ಅಧಿನಿಯಮಕ್ಕೆ ಅನುಸಾರವಾಗಿ ಅಥವಾ ಅದರ ಅಡಿಯಲ್ಲಿನ ನಿಯಮಗಳಿಗನುಸಾರವಾಗಿ ರಾಜಿ ಮಾಡಬಹುದಾದ ಅಪರಾಧಗಳನ್ನು ರಾಜಿಮಾಡಬಹುದಾಗಿದೆ.

(2) (1)ನೇ ಉಪ-ವಿಭಾಗ ಪ್ರಕಾರವಿರುವ ತ್ಯಾಜ್ಯ ಸಂಸ್ಕರಣೆಗೆ ಸಂಬಂಧಿಸಿ 219ನೇ ವಿಭಾಗದ ಮತ್ತು 219ಎ ಯಿಂದ 219ವೈ ವರೆಗಿನ ವಿಭಾಗಗಳಲ್ಲಿನ ಅಥವಾ ತತ್ಕಾಲದಲ್ಲಿ ಪ್ರಾಬಲ್ಯದಲ್ಲಿರುವ ಬೇರೆ ಯಾವುದೇ ಕಾನೂನುಗಳಿಗನುಸಾರವಾಗಿ ಜವಾಬ್ದಾರಿಗಳನ್ನು ದಕ್ಷವಾಗಿ ನಿರ್ವಹಿಸುವುದಕ್ಕಿರುವ ಎಲ್ಲಾ ಅಧಿಕಾರಗಳು ಕಾರ್ಯದರ್ಶಿಯವರಿಗೆ ಇರುವುದಾಗಿದೆ.

(3) ಕಾರ್ಯದರ್ಶಿಯವರಿಗೆ, ತುರ್ತುಸಂದರ್ಭಗಳಲ್ಲಿ, ಅಧ್ಯಕ್ಷರಿಗೆ ತಿಳಿಸಿದ ನಂತರ, ತ್ಯಾಜ್ಯ ಸಂಸ್ಕರಣೆಗೆ ಸಂಬಂಧಿಸಿ 219ನೇ ವಿಭಾಗದ ಮತ್ತು 219ಎ ಯಿಂದ 219 ವೈ ವರೆಗಿನ ವಿಭಾಗಗಳಲ್ಲಿನ ಅಥವಾ ತತ್ಕಾಲದಲ್ಲಿ ಪ್ರಾಬಲ್ಯದಲ್ಲಿರುವ ಬೇರೆ ಯಾವುದೇ ಕಾನೂನುಗಳಿಗನುಸಾರವಾಗಿ ತನ್ನಲ್ಲಿ ನಿಹಿತವಾದ ಜವಾಬ್ದಾರಿಗಳನ್ನು ನಿರ್ವಹಿಸಲು ಸಂಬಂಧಪಟ್ಟ ಪಂಚಾಯತ್ ಫಂಡಿನಿಂದ ಎರಡು ಲಕ್ಷಕ್ಕಿಂತ ಅಧಿಕವಲ್ಲದ ಮೊತ್ತವನ್ನು ಖರ್ಚುಮಾಡಬಹುದಾಗಿದೆ.

219ಎಸಿ. ಬೇರ್ಪಡಿಸಿದ ತ್ಯಾಜ್ಯವನ್ನು ಗ್ರಾಮಪಂಚಾಯತಿಗೆ ಅಥವಾ ಅಂಗೀಕೃತ ಏಜೆನ್ಸಿಗೆ ಹಸ್ತಾಂತರಿಸುವ ಜವಾಬ್ದಾರಿ.—(1) ಕಾರ್ಯದರ್ಶಿಯವರು ಸಾರ್ವಜನಿಕ ನೋಟೀಸು ಮೂಲಕ ನಿರ್ದೇಶಿಸಿದಂತೆ, ಬೇರ್ಪಡಿಸಿದ ತ್ಯಾಜ್ಯಗಳನ್ನು ಹಸ್ತಾಂತರಿಸುವುದಕ್ಕೆ ಅಥವಾ ನಿಶ್ಚಿತ ಸ್ಥಳದಲ್ಲಿ ನಿಕ್ಷೇಪಿಸುವುದಕ್ಕೆ ಅಥವಾ ಯೂಸರ್ ಫೀಸನ್ನು ಗ್ರಾಮಪಂಚಾಯತಿಗೆ ಅಥವಾ ಅಂಗೀಕೃತ ಏಜೆನ್ಸಿಗೆ ನೀಡುವುದಕ್ಕೆ ಹಾಗು ಎಲ್ಲಾ ಮನೆಗಳಿಗೆ ಹಾಗು ಯಾವುದೇ ಪ್ರದೇಶಗಳ ಹೋಟೆಲಿನ, ರೆಸ್ಟೋರೆಂಟ್‌ನ, ಕೈಗಾರಿಕೆಯ, ಆಸ್ಪತ್ರೆಯ ಅಥವಾ ಬೇರೆ ಯಾವುದಾದರೂ ಸಂಸ್ಥೆಯ ಮಾಲಿಕರಿಗೆ ಮತ್ತು ಅನುಭೋಗದಾರರಿಗೆ ಜವಾಬ್ದಾರಿಯಿರುವುದಾಗಿದೆ.

(2) (1)ನೇ ಉಪ-ವಿಭಾಗದ ಉಪಬಂಧಗಳನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿಯ ಮೇಲೆ ಕಾರ್ಯದರ್ಶಿಯವರಿಗೆ ಸಾವಿರ ರೂಪಾಯಿಗಿಂತ ಕಡಿಮೆಯಲ್ಲದ ಮತ್ತು ಹತ್ತು ಸಾವಿರ ರೂಪಾಯಿಗಿಂತ ಅಧಿಕವಲ್ಲದ ಜುಲ್ಮಾನೆಯನ್ನು ಹೊರಿಸಬಹುದಾಗಿದೆ.

219ಎಡಿ. ಯೂಸರ್ ಫೀಸಿಗೆ ಸಂಬಂಧಿಸಿದ ಉಪಬಂಧಗಳು.—(1) ಪ್ರತಿಯೊಂದು ಗ್ರಾಮಪಂಚಾಯತ್ ತ್ಯಾಜ್ಯ ಬೇರ್ಪಡಿಸುವಿಕೆ, ಸಂಗ್ರಹಣೆ, ಸಾಗಣೆ, ಶೇಖರಣೆ, ಸಂಸ್ಕರಣೆ ಮತ್ತು ಅದರ ವಿಲೇವಾರಿ ಇತ್ಯಾದಿಗೆ ಸಂಬಂಧಿಸಿದ ಸೇವೆಗಳನ್ನು ನೀಡುವುದಕ್ಕೆ ಸಂಪೂರ್ಣವಾದ ಅಥವಾ ಭಾಗಶಃವಾದ ಖರ್ಚು ವಹಿಸುವುದಕ್ಕೆ ಪ್ರತಿಯೊಬ್ಬ ತ್ಯಾಜ್ಯ ಉತ್ಪಾದಕನೂ ನೀಡಬೇಕಾದ ಯೂಸರ್ ಫೀಸನ್ನು ನಿಶ್ಚಯಿಸತಕ್ಕದ್ದು ಮತ್ತು ಅದನ್ನು ನಿರ್ದಿಷ್ಟಪಡಿಸಿದ ರೀತಿಯಲ್ಲಿ ವಸೂಲು ಮಾಡತಕ್ಕದ್ದು:

ಆದರೆ, ಯೂಸರ್ ಫೀಸ್‌ಗೆ ಸರಕಾರವು ದರವನ್ನು ನಿಶ್ಚಯಿಸಿದ್ದಲ್ಲಿ, ಸರಕಾರವು ನಿಶ್ಚಯಿಸಿದ ದರಕ್ಕಿಂತ ಕಡಿಮೆ ದರವನ್ನು ಗ್ರಾಮಪಂಚಾಯತ್ ನಿಶ್ಚಯಿಸತಕ್ಕದ್ದಲ್ಲ.

This is a digitally signed Gazette.
Authenticity may be verified through https://compose.kerala.gov.in/

(2) ಪ್ರತಿಯೊಬ್ಬ ತ್ಯಾಜ್ಯ ಉತ್ಪಾದಕನೂ ಯೂಸರ್ ಫೀಸನ್ನು ಗ್ರಾಮಪಂಚಾಯತಿಗೆ ಅಲ್ಲದಿದ್ದಲ್ಲಿ ಯಾವುದಾದರೂ ಅಂಗೀಕೃತ ಏಜೆನ್ಸಿಗೆ ಪ್ರತಿ ತಿಂಗಳ ಕೊನೆಯ ದಿನಾಂಕಕ್ಕೆ ಮುಂಚಿತವಾಗಿ ಅಥವಾ ಗ್ರಾಮಪಂಚಾಯತ್ ತೀರ್ಮಾನಿಸಬಹುದಾದ ಅಂತಹ ಅವಧಿಗಿಂತ ಮೊದಲು ನೀಡತಕ್ಕದ್ದು.

(3) ಯಾವುದೇ ತ್ಯಾಜ್ಯ ಉತ್ಪಾದಕನು *(2)*ನೇ ಉಪ-ವಿಭಾಗದ ಪ್ರಕಾರ ಉಪಬಂಧಿಸಿರುವ ಯೂಸರ್ ಫೀಸನ್ನು ಪಾವತಿಸಲು ವಿಫಲನಾದಲ್ಲಿ ಅದನ್ನು ಪ್ರತಿ ತಿಂಗಳು ಐವತ್ತು ಶೇಕಡಾ ಜುಲ್ಮಾನೆಯೊಂದಿಗೆ ವಸೂಲು ಮಾಡತಕ್ಕದ್ದು:

ಆದರೆ, ನಿಶ್ಚಿತ ದಿನಾಂಕದಿಂದ ತೊಂಭತ್ತು ದಿನಗಳ ನಂತರವೂ ಯೂಸರ್ ಫೀಸನ್ನು ಪಾವತಿಸುವುದರಲ್ಲಿ ವಿಫಲನಾದಲ್ಲಿ ಮಾತ್ರ ಅಂತಹ ಜುಲ್ಮಾನೆಯನ್ನು ವಸೂಲು ಮಾಡತಕ್ಕದ್ದು.

(4) ಯೂಸರ್ ಫೀಸನ್ನು ಮತ್ತು ಜುಲ್ಮಾನೆಯನ್ನು *210*ನೇ ವಿಭಾಗದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಸಾರ್ವಜನಿಕ ತೆರಿಗೆ ಬಾಕಿ ಎಂಬಂತೆ ವಸೂಲು ಮಾಡತಕ್ಕದ್ದು.

(5) ಯೂಸರ್ ಫೀಸನ್ನು ಪಾವತಿಸಲು ನ್ಯೂನತೆಯೆಸಗುವ ವ್ಯಕ್ತಿಯ ವಿರುದ್ಧ ಕೈಗೊಳ್ಳಬಹುದಾದ ಇತರ ಯಾವುದೇ ಕ್ರಮಗಳಿಗೆ ಭಂಗಬರದಂತೆ, ಯೂಸರ್ ಫೀಸನ್ನು ಪಾವತಿಸುವವರೆಗೆ ಆ ರೀತಿಯಲ್ಲಿ ನ್ಯೂನತೆಯೆಸಗುವ ವ್ಯಕ್ತಿಗೆ ಗ್ರಾಮಪಂಚಾಯತಿನಿಂದಿರುವ ಯಾವುದೇ ಸೇವೆಯನ್ನು ನೀಡಲು ಕಾರ್ಯದರ್ಶಿಯವರಿಗೆ ನಿರಾಕರಿಸಬಹುದಾಗಿದೆ.

(6) ಸರಕಾರಕ್ಕೆ ಅಥವಾ ಕಾಲಾಕಾಲಗಳಲ್ಲಿ ಸರಕಾರವು ಹೊರಡಿಸುವ ಮಾರ್ಗಸೂಚಿಗಳಿಗನುಸಾರವಾಗಿ ಗ್ರಾಮಪಂಚಾಯತಿಗೆ, ಯಾವುದೇ ತ್ಯಾಜ್ಯ ಉತ್ಪಾದಕನನ್ನು ಅಥವಾ ತ್ಯಾಜ್ಯ ಉತ್ಪಾದಕರ ವರ್ಗವನ್ನು ಅಲ್ಲದಿದ್ದಲ್ಲಿ ಜನವಾಸವಿಲ್ಲದ ಅಥವಾ ಖಾಲಿಯಾಗಿರುವ ಕಟ್ಟಡಗಳ ಮಾಲಿಕರನ್ನು ಅಥವಾ ಅನುಭೋಗದಾರರನ್ನು ಯೂಸರ್ ಫೀಸ್ ಪಾವತಿಸುವುದರಿಂದ ಸಂಪೂರ್ಣವಾಗಿ ಅಥವಾ ಭಾಗಶಃವಾಗಿ ಹೊರತುಪಡಿಸಬಹುದಾಗಿದೆ.".

8. 219ಬ ವಿಭಾಗದ ಬದಲಾಗಿ ಹೊಸ ವಿಭಾಗದ ಸೇರ್ಪಡೆ.—ಪ್ರಧಾನ ಅಧಿನಿಯಮದ 219ಬ ವಿಭಾಗದ ಬದಲಾಗಿ ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*219ಬ ಘನತ್ಯಾಜ್ಯಗಳ ಸಂಗ್ರಹಣೆ ಮತ್ತು ಶೇಖರಣೆಗೆ ತ್ಯಾಜ್ಯ ಉತ್ಪಾದಕನಿಗಿರುವ ಜವಾಬ್ದಾರಿಗಳು.—(1)* ಜೈವಿಕ ತ್ಯಾಜ್ಯಗಳು, ಅಜೈವಿಕ ತ್ಯಾಜ್ಯಗಳು ಮತ್ತು ಹಾನಿಕರವಾದ ಗೃಹ ತ್ಯಾಜ್ಯಗಳನ್ನು ಸಂಗ್ರಹಿಸುವುದಕ್ಕಾಗಿ ನಿಯಮಗಳಲ್ಲಿ ಅಥವಾ ಬೈಲಾಗಳಲ್ಲಿ ನಿಗದಿಪಡಿಸಿದ ಪ್ರಕಾರ ಅಲ್ಲದಿದ್ದಲ್ಲಿ ಕಾರ್ಯದರ್ಶಿಯವರು ನಿರ್ದಿಷ್ಟಪಡಿಸಿದಂತಹ ಗಾತ್ರದ ಮತ್ತು ಬಣ್ಣದಲ್ಲಿರುವ ಪ್ರತ್ಯೇಕ ಬಿನ್ನುಗಳನ್ನು ಅಥವಾ ಸಂಗ್ರಹಣೆಗಳನ್ನು ಸಜ್ಜುಗೊಳಿಸಬೇಕಾದುದು ಪ್ರತಿಯೊಬ್ಬ ತ್ಯಾಜ್ಯ ಉತ್ಪಾದಕನ ಕರ್ತವ್ಯವಾಗಿದೆ.

(2) ಅಂತಹ ಬಿನ್ನುಗಳನ್ನು ಅಲ್ಲದಿದ್ದಲ್ಲಿ ಸಂಗ್ರಹಣೆಗಳನ್ನು ಸದಾಕಾಲ ಸರಿಯಾದ ರೀತಿಯಲ್ಲಿ ಕಾಯ್ದುಕೊಳ್ಳತಕ್ಕದ್ದು ಮತ್ತು ಕಾರ್ಯದರ್ಶಿಯವರು ಆಯಾಯ ಕಾಲದಲ್ಲಿ ಸಾರ್ವಜನಿಕ ನೋಟೀಸಿನಲ್ಲಿ ನಿರ್ದೇಶಿಸುವಷ್ಟು ಸಂಖ್ಯೆಯಲ್ಲಿ ಅಂತಹ ಸ್ಥಳಗಳಲ್ಲಿ ಸಜ್ಜುಗೊಳಿಸತಕ್ಕದ್ದು.

(3) ಗ್ರಾಮಪಂಚಾಯತ್ ನಿಯೋಜಿಸಿದಂತಹ ನೌಕರರಿಗೆ ಅಥವಾ ಗುತ್ತಿಗೆದಾರರಿಗೆ ಆ ರೀತಿಯ ತ್ಯಾಜ್ಯಗಳನ್ನು ಸುಲಭವಾಗಿ ಸಂಗ್ರಹಿಸಲು ಮತ್ತು ನೀಗಿಸಲು ಪ್ರತಿಯೊಬ್ಬ ತ್ಯಾಜ್ಯ ಉತ್ಪಾದಕನೂ ನಿಯಮಗಳಲ್ಲಿ ಹಾಗೂ ಬೈಲಾಗಳಲ್ಲಿ ನಿಗದಿಪಡಿಸಿದ ತ್ಯಾಜ್ಯಗಳನ್ನು ಬೇರ್ಪಡಿಸಿ ನಿಕ್ಷೇಪಿಸತಕ್ಕದ್ದು.

*(4) (3)*ನೇ ಉಪ-ವಿಭಾಗದ ಉಪಬಂಧಗಳನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿಯ ಮೇಲೆ, ಕಾರ್ಯದರ್ಶಿಯವರಿಗೆ ಸಾವಿರ ರೂಪಾಯಿಗಿಂತ ಕಡಿಮೆಯಲ್ಲದ ಮತ್ತು ಹತ್ತುಸಾವಿರ ರೂಪಾಯಿಗಿಂತ ಅಧಿಕವಲ್ಲದ ಜುಲ್ಮಾನೆಯನ್ನು ಹೊರಿಸಬಹುದಾಗಿದೆ.".

9. 219ಸಿ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 219ಸಿನೇ ವಿಭಾಗದಲ್ಲಿ,—

(i) ಪಾರ್ಶ್ವ ಶೀರ್ಷಿಕೆಯ ಬದಲಾಗಿ ಈ ಕೆಳಗಿನ ಪಾರ್ಶ್ವ ಶೀರ್ಷಿಕೆಯನ್ನು ಸೇರಿಸತಕ್ಕದ್ದು, ಅದೇನೆಂದರೆ:—

"ತ್ಯಾಜ್ಯಗಳನ್ನು ನೀಗಿಸಲು ತ್ಯಾಜ್ಯ ಉತ್ಪಾದಕನೊಂದಿಗೆ ಅಥವಾ ಯಾವುದೇ ಆವರಣಗಳ ಮಾಲೀಕನೊಂದಿಗೆ ಅಥವಾ ನಿವಾಸಿಗರೊಂದಿಗೆ ಮಾಡಿದ ಒಪ್ಪಂದ";

(ii) ಅಸ್ತಿತ್ವದಲ್ಲಿರುವ ಉಪಬಂಧದಲ್ಲಿನ, "ಯಾವುದೇ ಆವರಣದ ಮಾಲೀಕನೊಂದಿಗೆ ಅಥವಾ ನಿವಾಸಿಗನೊಂದಿಗೆ" ಎಂಬ ಪದಗಳಿಗೆ ಬದಲಾಗಿ "ತ್ಯಾಜ್ಯ ಉತ್ಪಾದಕನೊಂದಿಗೆ ಅಥವಾ ಯಾವುದೇ ಆವರಣಗಳ ಮಾಲೀಕನೊಂದಿಗೆ ಅಥವಾ ನಿವಾಸಿಗನೊಂದಿಗೆ" ಎಂಬ ಪದಗಳನ್ನು ಮತ್ತು "ಕಸ ಅಥವಾ ತ್ಯಾಜ್ಯವನ್ನು ನೀಗಿಸಲು" ಎಂಬ ಪದಗಳಿಗೆ ಬದಲಾಗಿ "ತ್ಯಾಜ್ಯಗಳನ್ನು ನೀಗಿಸಲು" ಎಂಬ ಪದಗಳನ್ನು ಸೇರಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

10. 219ಡಿ ವಿಭಾಗದ ಬದಲಾಗಿ ಹೊಸ ವಿಭಾಗದ ಸೇರ್ಪಡೆ.—ಪ್ರಧಾನ ಅಧಿನಿಯಮದ 219ಡಿ ವಿಭಾಗದ ಬದಲಾಗಿ ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*219ಡಿ ಮನೆಬಾಗಿಲಿನ ತ್ಯಾಜ್ಯ ಸಂಗ್ರಹಣೆ.*—*(1)* ಪ್ರತಿಯೊಂದು ಗ್ರಾಮಪಂಚಾಯತ್, ಗ್ರಾಮಪಂಚಾಯತ್ ಪ್ರದೇಶದಲ್ಲಿರುವ ಪ್ರತಿ ಮನೆಗಳಿಂದಲೂ, ಜನವಾಸ ಕೇಂದ್ರಗಳಿಂದಲೂ, ವ್ಯಾಪಾರ ಸಂಸ್ಥೆಗಳಿಂದಲೂ, ಇತರ ವಸತಿರಹಿತ ಪ್ರದೇಶಗಳಿಂದಲೂ, ಬಹು ಅಂತಸ್ತು ಕಟ್ಟಡಗಳು, ಬೃಹತ್ ವ್ಯಾಪಾರ ಸಮುಚ್ಚಯಗಳು, ಮಳಿಗೆಗಳು, ಗೃಹ ಸಮುಚ್ಚಯಗಳು ಎಂಬವುಗಳ ವಿಷಯದಲ್ಲಿ ಪ್ರವೇಶ ದ್ವಾರದಿಂದಲೋ ಅಥವಾ ಕಾರ್ಯದರ್ಶಿಯವರು ಸಾರ್ವಜನಿಕ ನೋಟೀಸಿನಲ್ಲಿ ನಿರ್ದೇಶಿಸಿದ ಬೇರೆ ಯಾವುದಾದರೂ ಸ್ಥಳಗಳಿಂದಲೋ ಬೇರ್ಪಡಿಸಿದ ತ್ಯಾಜ್ಯಗಳನ್ನು ಮನೆ ಬಾಗಿಲಿನಿಂದ ಸಂಗ್ರಹಿಸುವುದಕ್ಕಿರುವ ವ್ಯವಸ್ಥೆಗಳನ್ನು ಏರ್ಪಡಿಸತಕ್ಕದ್ದು.

*(2) (1)*ನೇ ಉಪ-ವಿಭಾಗದ ಪ್ರಕಾರ ಸಂಗ್ರಹಿಸಿದ ಬೇರ್ಪಡಿಸಿದ ತ್ಯಾಜ್ಯಗಳನ್ನು ಸರಿಯಾಗಿ ಮುಚ್ಚಿಡದೆ ಸಂಸ್ಕರಣೆಗೋ ವಿಲೇವಾರಿಗೋ ಬೇಕಾಗಿ ಕೊಂಡುಹೋಗುವುದೋ ತಲುಪಿಸುವುದೋ ಮಾಡತಕ್ಕದ್ದಲ್ಲ.";

10. 219ಎಫ್ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 219ಎಫ್ ವಿಭಾಗದಲ್ಲಿ,—

*(i) (1)*ನೇ ಉಪ-ವಿಭಾಗದ ಬದಲಾಗಿ ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*(1) ಘನ, ದ್ರವ, ಮಲಿನ ಜಲ ಅಲ್ಲದಿದ್ದರೆ ಫೀಕಲ್ ಸ್ಲಡ್ಜ್ ಸಂಸ್ಕರಣೆ ಪ್ಲಾಂಟ್ ಇಲ್ಲದ ಮತ್ತು ಗ್ರಾಮಪಂಚಾಯತ್ ಪ್ರದೇಶದೊಳಗೆ ಅಥವಾ ಹೊರಗೆ ಖಾಲಿಯಾದ ಭೂಮಿ ಸ್ವಾಧೀನದಲ್ಲಿರುವ ಗ್ರಾಮಪಂಚಾಯತ್, ಅಂತಹ ಪ್ಲಾಂಟುಗಳನ್ನೋ ಸೌಕರ್ಯಗಳನ್ನೋ ಪ್ರಸ್ತುತ ಭೂಮಿಯಲ್ಲಿ ಸ್ಥಾಪಿಸುವುದಕ್ಕಿರುವ ಯೋಜನೆಗಳಿಗೆ ಅದ್ಯತೆ ನೀಡಿ ವಹಿಸಿಕೊಳ್ಳತಕ್ಕದ್ದಾಗಿದೆ.".*

*(ii) ಆ ರೀತಿಯಲ್ಲಿ ಬದಲಾಗಿ ಸೇರ್ಪಡೆಗೊಳಿಸಿದ (1)*ನೇ ಉಪ-ವಿಭಾಗದ ನಂತರ, ಈ ಕೆಳಗಿನ ಉಪ-ವಿಭಾಗಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*(1ಎ) ಪ್ರತಿಯೊಂದು ಗ್ರಾಮಪಂಚಾಯತ್ ತ್ಯಾಜ್ಯ ಸಂಸ್ಕರಣೆಗಾಗಿ ಗ್ರಾಮಪಂಚಾಯತ್ ಪ್ರದೇಶದೊಳಗೆಯೋ ಹೊರಗೆಯೋ ಯೋಗ್ಯವಾದ ಖಾಸಗಿ ಸ್ಥಳವನ್ನು ಕಂಡುಹಿಡಿಯತಕ್ಕದ್ದು ಮತ್ತು ಅಗತ್ಯವಿದ್ದಲ್ಲಿ 2013*ರ ದಿ ರೈಟ್ ಟು ಫೇರ್ ಕೋಂಪನ್ಸೇಷನ್ ಆಂಡ್ ಟ್ರಾನ್ಸ್‌ಪರೆನ್ಸಿ ಇನ್ ಲ್ಯಾಂಡ್ ಅಕ್ವಿಸಿಷನ್, ರೀಹಾಬಿಲಿಟೇಷನ್ ಆಂಡ್ ರೀಸೆಟ್ಲ್‌ಮೆಂಟ್ ಆಕ್ಟ್ *(2013*ರ *30*ನೇ ಕೇಂದ್ರ ಅಧಿನಿಯಮ*)* ಪ್ರಕಾರವೋ, ಭೂಮಿ ಬಿಟ್ಟುಕೊಡುವಿಕೆ ಪ್ರಕಾರವೋ, ಗುತ್ತಿಗೆ ಮೂಲಕವೋ, ಖಾಸಗಿ ಖರೀದಿಯ ಮೂಲಕವೋ ಸ್ಥಳವನ್ನು ಆರ್ಜಿಸತಕ್ಕದ್ದು.

(1ಬಿ) (1ಎ) ಉಪ-ವಿಭಾಗ ಪ್ರಕಾರ ಗ್ರಾಮಪಂಚಾಯತ್ ಆರ್ಜಿಸುವ ಭೂಮಿಯನ್ನು ಸರಕಾರದ ಪೂರ್ವಾನುಮತಿಯಿಲ್ಲದೆ ಬೇರೆ ಯಾವುದೇ ಅಗತ್ಯಗಳಿಗೆ ಉಪಯೋಗಿಸತಕ್ಕದ್ದಲ್ಲ.

(1ಸಿ) ತ್ಯಾಜ್ಯ ಸಂಸ್ಕರಣೆ ಚಟುವಟಿಕೆಗಳಿಗಾಗಿ ಖಾಲಿಯಾದ ಸ್ವಂತ ಭೂಮಿ ಅಥವಾ ತಮ್ಮಲ್ಲಿ ನಿಹಿತವಾದ ಭೂಮಿಯು ಲಭ್ಯವಿದ್ದಲ್ಲಿ ಅದನ್ನು ವಿನಿಯೋಗಿಸಲು ಪ್ರತಿಯೊಂದು ಗ್ರಾಮಪಂಚಾಯತ್ ಅದ್ಯತೆ ನೀಡತಕ್ಕದ್ದು.

(1ಡಿ) ತ್ಯಾಜ್ಯ ಸಂಸ್ಕರಣೆ ಚಟುವಟಿಕೆಗಳಿಗಾಗಿ ಮೊದಲು ಉಪಯೋಗಿಸಿದ್ದ ಆದರೆ ಈಗ ವಿವಿಧ ಕಾರಣಗಳಿಂದ ಉಪಯೋಗಿಸದ ಭೂಮಿಯಲ್ಲಿ, ತ್ಯಾಜ್ಯ ಸಂಸ್ಕರಣೆ ಚಟುವಟಿಕೆಗಳನ್ನು ಪುನರಾರಂಭಿಸಲು ಸಾಧ್ಯವಾದ ಎಲ್ಲಾ ಕ್ರಮಗಳನ್ನು ಗ್ರಾಮಪಂಚಾಯತ್ ಕೈಗೊಳ್ಳತಕ್ಕದ್ದು:

ಆದರೆ, ಸರಕಾರದ ಪೂರ್ವಾನುಮತಿಯಿಲ್ಲದೆ ಪ್ರಸ್ತುತ ಭೂಮಿಯನ್ನು ಬೇರೆ ಯಾವುದೇ ಅಗತ್ಯಕ್ಕೆ ಮೀಸಲಿಡುವುದೋ ಉಪಯೋಗಿಸುವುದೋ ಮಾಡತಕ್ಕದ್ದಲ್ಲ.";

*(iii) (2)*ನೇ ಉಪ-ವಿಭಾಗದಲ್ಲಿ "*(1)*ನೇ ಉಪ-ವಿಭಾಗದ ಪ್ರಕಾರ ಸ್ಥಳವನ್ನು ಅಧಿಸೂಚಿಸುವಾಗ" ಎಂಬ ಪದಗಳ, ಅಂಕೆಯ, ಚಿಹ್ನೆಯ ಮತ್ತು ಆವರಣಗಳ ಬದಲಾಗಿ, "*(1ಎ)* ಉಪ-ವಿಭಾಗದ ಪ್ರಕಾರ ಭೂಮಿಯನ್ನು ಕಂಡುಹಿಡಿಯುವಾಗ" ಎಂಬ ಪದಗಳನ್ನು, ಅಂಕೆಯನ್ನು, ಅಕ್ಷರವನ್ನು ಮತ್ತು ಆವರಣವನ್ನು ಸೇರಿಸತಕ್ಕದ್ದು.

12. 219ಎಫ್ ವಿಭಾಗದ ನಂತರ ಹೊಸ ವಿಭಾಗಗಳ ಸೇರ್ಪಡೆ.—ಪ್ರಧಾನ ಅಧಿನಿಯಮದ 219ಎಫ್ ವಿಭಾಗದ ನಂತರ ಈ ಕೆಳಗಿನ ವಿಭಾಗಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*219ಎಫ್ಎ. ಸಂಯುಕ್ತ ತ್ಯಾಜ್ಯ ಸಂಸ್ಕರಣೆ ಯೋಜನೆಗಳ ಸ್ಥಾಪನೆ.*—ಗ್ರಾಮಪಂಚಾಯತಿಗೆ, ಅದು ಆ ರೀತಿ ತೀರ್ಮಾನಿಸುವುದು ಅಲ್ಲದಿದ್ದರೆ ಸರಕಾರವು ಆ ರೀತಿ ಅವಶ್ಯಪಡುವುದಾದಲ್ಲಿ, ಇತರ ಯಾವುದೇ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳೊಂದಿಗೆ ಸೇರಿಕೊಂಡು, ಅಂತಹ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳು ಅಂಗೀಕರಿಸಿದಂತಹ ಷರತ್ತುಗಳಿಗೆ ಮತ್ತು ನಿಬಂಧನೆಗಳಿಗನುಸರಿಸಿ ಇದಕ್ಕಾಗಿ ಸರಕಾರವು ಹೊರಡಿಸಬಹುದಾದ ಮಾರ್ಗನಿರ್ದೇಶಗಳಿಗೆ ವಿಧೇಯವಾಗಿ ಸಂಯುಕ್ತ ತ್ಯಾಜ್ಯ ಸಂಸ್ಕರಣೆ ಯೋಜನೆಗಳನ್ನು ಸ್ಥಾಪಿಸಬಹುದಾಗಿದೆ.

This is a digitally signed Gazette.
Authenticity may be verified through https://compose.kerala.gov.in/

219ಎಫ್‌ಬಿ. ಗ್ರಾಮಪಂಚಾಯತ್ ನಿರಂತರವಾಗಿ ತಪಾಸಣೆ ಮತ್ತು ಮೇಲ್ವಿಚಾರಣೆಗೆ ಏರ್ಪಾಟು ಮಾಡತಕ್ಕದ್ದು.—*ಗ್ರಾಮಪಂಚಾಯತಿನ ತ್ಯಾಜ್ಯ ಸಂಸ್ಕರಣೆ ಚಟುವಟಿಕೆಗಳು ಮತ್ತು ಯೋಜನೆಗಳು ಅಗತ್ಯವಿರುವ ಮಾನದಂಡಗಳನ್ನು ಪಾಲಿಸುತಾ ಹಾಗೂ ಅಸ್ತಿತ್ವದಲ್ಲಿರುವ ಕಾನೂನುಗಳಿಗನುಸಾರವಾಗಿ ಆಗಿದೆ ಕಾರ್ಯಾಚರಿಸುತ್ತಿರುವುದೆಂದು ಮತ್ತು ಕಾರ್ಯಗತಗೊಳ್ಳುವುದೆಂದು ದೃಢಪಡಿಸುವುದಕ್ಕಾಗಿ ನಿರಂತರವಾದ ತಪಾಸಣೆ ಹಾಗೂ ಮೇಲ್ವಿಚಾರಣೆಗೆ ಅವಶ್ಯಕವಾದ ವ್ಯವಸ್ಥೆಗಳನ್ನು ಏರ್ಪಡಿಸಬೇಕಾದುದು ಗ್ರಾಮಪಂಚಾಯತಿನ ಜವಾಬ್ದಾರಿಯಾಗಿದೆ.*

219ಎಫ್ ಸಿ. ವ್ಯಕ್ತಿಗಳ ಜವಾಬ್ದಾರಿಗಳು ಮತ್ತು ಅಪರಾಧಗಳ ಕುರಿತು ವರದಿ ಮಾಡುವುದಕ್ಕಿರುವ ಪಾರಿತೋಷಕಗಳು.—*(1) 219ನೇ ವಿಭಾಗದ ಮತ್ತು 219ಎ ಯಿಂದ 219ವೈ ವರೆಗಿನ ವಿಭಾಗಗಳಲ್ಲಿನ ಉಪಬಂಧಗಳ ಯಾವುದೇ ಉಲ್ಲಂಘನೆ ಅಥವಾ ಸಾರ್ವಜನಿಕ ಸ್ಥಳಗಳಲ್ಲಿಯೂ, ಜಲಾಶಯಗಳಲ್ಲಿಯೂ ತ್ಯಾಜ್ಯವನ್ನು ಎಸೆಯುವುದು, ಹಾಕುವುದು ಅಥವಾ ರಾಶಿಹಾಕುವುದು ಮುಂತಾದವುಗಳನ್ನು ಒಳಗೊಂಡ ತ್ಯಾಜ್ಯ ಸಂಸ್ಕರಣೆಗೆ ಸಂಬಂಧಿಸಿದ ಯಾವುದಾದರೂ ಅಪರಾಧಕ್ಕೆ ಸಂಬಂಧಿಸಿ ಮಾಹಿತಿಗಳನ್ನು ಯಾವುದೆ ವ್ಯಕ್ತಿಗೆ ಕಾರ್ಯದರ್ಶಿಯವರ ಸಮಕ್ಷದಲ್ಲಿ ವರದಿ ಮಾಡಬಹುದಾಗಿದೆ.*

(2) ಗ್ರಾಮಪಂಚಾಯತಿಗೆ, ಸರಕಾರವು ಕಾಲಾಕಾಲಗಳಲ್ಲಿ ಹೊರಡಿಸುವ ಮಾರ್ಗನಿರ್ದೇಶಗಳಿಗೆ ವಿಧೇಯವಾಗಿ, (1)ನೇ ಉಪ-ವಿಭಾಗದ ಪ್ರಕಾರದ ಉಲ್ಲಂಘನೆಗಳನ್ನು ಮತ್ತು ಅಪರಾಧಗಳನ್ನು ವರದಿಮಾಡುವ ಜನರಿಗೆ ಪಾರಿತೋಷಕ ನೀಡಬಹುದಾಗಿದೆ.

(3) ಇತರರಿಗೆ ದ್ರೋಹ ಅಥವಾ ನಷ್ಟವುಂಟಾಗುವ ರೀತಿಯಲ್ಲಿ ದುರುದ್ದೇಶದಿಂದ ಅಥವಾ ಉದ್ದೇಶಪೂರ್ವಕವಾಗಿ (1)ನೇ ಉಪ-ವಿಭಾಗದ ಪ್ರಕಾರ ತಪ್ಪಾದ ಒಂದು ಮಾಹಿತಿ ನೀಡುವ ಯಾವುದೇ ವ್ಯಕ್ತಿಯನ್ನು ಅಪರಾಧ ನಿರ್ಣಯತಿಯ ಮೇಲೆ ಹತ್ತು ಸಾವಿರ ರೂಪಾಯಿಯವರೆಗಿನ ಜುಲ್ಮಾನೆ ವಿಧಿಸಿ ಶಿಕ್ಷಿಸತಕ್ಕದ್ದು.

219ಎಫ್ ಡಿ. ತ್ಯಾಜ್ಯ ಸಂಸ್ಕರಣೆ ಕೇಂದ್ರಗಳ ಸಮೀಪವಿರುವ ನಿವಾಸಿಗರಿಗೆ ಉಪಯುಕ್ತವಾದ ಉಪಬಂಧಗಳು.—*(1) ಗ್ರಾಮಪಂಚಾಯತಿಗೆ, ಸರಕಾರವು ರಚಿಸುವ ನಿಯಮಗಳಿಗೆ ಅಥವಾ ಹೊರಡಿಸುವ ಮಾರ್ಗನಿರ್ದೇಶಗಳಿಗೆ ವಿಧೇಯವಾಗಿ, ಕೇಂದ್ರೀಕೃತ ತ್ಯಾಜ್ಯಸಂಸ್ಕರಣೆ ಕೇಂದ್ರಗಳು ಅಥವಾ ವಿಲೇವಾರಿ ಸ್ಥಳಗಳು ಮುಂತಾದವುಗಳ ಸಮೀಪ ವಾಸಿಸುವವರಿಗೆ ತೆರಿಗೆ ವಿನಾಯಿತಿ, ರಿಯಾಯಿತಿ ಅಥವಾ ಕಲ್ಯಾಣ ಯೋಜನೆಗಳನ್ನು ಒಳಗೊಂಡವುಗಳಲ್ಲಿ ಮಾತ್ರ ಸೀಮಿತವಾಗಿರಿಸದೆ ಇತರ ಪ್ರೋತ್ಸಾಹಗಳನ್ನು ನೀಡಬಹುದಾಗಿದೆ.*

(2) ಗ್ರಾಮಪಂಚಾಯತಿಗೆ, ಕೇಂದ್ರೀಕೃತ ತ್ಯಾಜ್ಯ ಸಂಸ್ಕರಣೆ ಕೇಂದ್ರಗಳು ಅಥವಾ ವಿಲೇವಾರಿ ಸ್ಥಳಗಳ ಸಮೀಪ ವಾಸಿಸುವವರ ಕಲ್ಯಾಣಕ್ಕೆ ಮತ್ತು ಮನರಂಜನೆಗಾಗಿ ಪಾರ್ಕುಗಳು, ಆಟದ ಮೈದಾನಗಳು, ರೀಸೈಕ್ಲಿಂಗ್ ಸೌಕರ್ಯಗಳು, ಸ್ವಾಪ್‌ಶೋಪ್ಸ್, ದೈಹಿಕ ತರಬೇತಿ ಸೌಕರ್ಯಗಳು ಮುಂತಾದ ಉಪಯುಕ್ತ ಮತ್ತು ಪ್ರಯೋಜನಕಾರಿ ವ್ಯವಸ್ಥೆಗಳನ್ನು ಏರ್ಪಡಿಸಬಹುದಾಗಿದೆ.".

13. 219ಐ ವಿಭಾಗದ ಬದಲಾಗಿ ಹೊಸ ವಿಭಾಗದ ಸೇರ್ಪಡೆ.—*ಪ್ರಧಾನ ಅಧಿನಿಯಮದ* 219ಐ *ವಿಭಾಗದ ಬದಲಾಗಿ ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—*

"*219ಐ. ಅಂಗಡಿಗಳ ಮತ್ತು ವ್ಯಾಪಾರ ಸಂಸ್ಥೆಗಳ ಪರಿಸರವನ್ನು ಶುಚಿಯಾಗಿ ಕಾಯ್ದಿರಿಸುವುದಕ್ಕಿರುವ ಜವಾಬ್ದಾರಿ.*—*(1) ಪ್ರತಿಯೊಂದು ಅಂಗಡಿಯ ಮತ್ತು ವ್ಯಾಪಾರ ಸಂಸ್ಥೆಯ ಪರಿಸರವನ್ನು ಶುಚಿಯಾಗಿರಿಸತಕ್ಕದ್ದು ಹಾಗೂ ಅದರ ಪರಿಸರದಲ್ಲಿ ತ್ಯಾಜ್ಯ ಎಸೆಯುವುದು, ರಾಶಿಹಾಕುವುದು ಮತ್ತು ಉರಿಸುವುದನ್ನು ಮಾಡದಿರುವುದು ಅಲ್ಲದಿದ್ದಲ್ಲಿ ಅದರ ಪರಿಸರದಲ್ಲಿ ಯಾವುದೇ ತ್ಯಾಜ್ಯವನ್ನು ಎಸೆಯಲೋ, ರಾಶಿ ಹಾಕಲೋ, ಉರಿಸಲೋ ಗ್ರಾಹಕರಿಗೆ ಅನುಮತಿ ನೀಡದಿರುವುದು ಮಾಲೀಕರ ಮತ್ತು ಅನುಭೋಗದಾರರ ಜವಾಬ್ದಾರಿಯಾಗಿದೆ.*

(2) (1)ನೇ ಉಪ-ವಿಭಾಗದ ಉಪಬಂಧಗಳಿಗೆ ವಿರುದ್ಧವಾಗಿ ಯಾವುದೇ ವ್ಯಕ್ತಿ ವರ್ತಿಸಿರುವನೆಂದು ಮನದಟ್ಟಾದಲ್ಲಿ ಕಾರ್ಯದರ್ಶಿಯವರಿಗೆ ಅಥವಾ ಕಾರ್ಯದರ್ಶಿಯವರು ವಿಶೇಷವಾಗಿ ನಿಯೋಜಿಸಿದ ಅಧಿಕಾರಿ ಅಂತಹ ವ್ಯಕ್ತಿಯ ಮೇಲೆ ಐದು ಸಾವಿರ ರೂಪಾಯಿಯ ಜುಲ್ಮಾನೆಯನ್ನು ಹೊರಿಸಬಹುದಾಗಿದೆ.

(3) (2)ನೇ ಉಪ-ವಿಭಾಗದ ಪ್ರಕಾರ ಹೊರಿಸಲ್ಪಟ್ಟ ಜುಲ್ಮಾನೆಯನ್ನು ಅದನ್ನು ಹೊರಿಸಿದ ದಿನಾಂಕದಿಂದ ಹದಿನೈದು ದಿನದೊಳಗೆ ಪಾವತಿಸತಕ್ಕದ್ದು ಮತ್ತು ಆ ರೀತಿ ಪಾವತಿಸಲು ಲೋಪ ಉಂಟುಮಾಡುವುದಾದಲ್ಲಿ ಕಾರ್ಯದರ್ಶಿಯವರು, ಆತನ ವಿರುದ್ಧ ಕೈಗೊಳ್ಳಬಹುದಾದ ಇತರ ಕ್ರಮಗಳಿಗೆ ಭಂಗವುಂಟಾಗದಂತೆ ಕಾನೂನು ಕ್ರಮಗಳನ್ನು ಆರಂಭಿಸತಕ್ಕದ್ದಾಗಿದೆ.

ವಿವರಣೆ.—*ಈ ವಿಭಾಗದ ಅಗತ್ಯಕ್ಕಾಗಿ, 'ಅಂಗಡಿಗಳು', 'ವಾಣಿಜ್ಯ ಸಂಸ್ಥೆ' ಎಂಬೀ ಪದಗಳಿಗೆ ಅನುಕ್ರಮವಾಗಿ 1960ರ ಕೇರಳ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳು ಅಧಿನಿಯಮ (1960ರ 34)ದಲ್ಲಿ ಅದಕ್ಕೆ ನೀಡಿರುವ ಅದೇ ಅರ್ಥಗಳು ಇರುವುದಾಗಿದೆ.*".

This is a digitally signed Gazette.
Authenticity may be verified through https://compose.kerala.gov.in/

14. 219ಕೆ ವಿಭಾಗದ ಬದಲಾಗಿ ಹೊಸ ವಿಭಾಗದ ಸೇರ್ಪಡೆ.—ಪ್ರಧಾನ ಅಧಿನಿಯಮದ 219ಕೆ ವಿಭಾಗದ ಬದಲು ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*219ಕೆ. ಉಪಯೋಗಿಸಿದ ನೀರನ್ನು ಸಾರ್ವಜನಿಕ ಸ್ಥಳಗಳಿಗೋ ಜಲಾಶಯಗಳಿಗೋ ಹರಿಸುವುದನ್ನು ತಡೆಯುವಿಕೆ.*—*(1)* ಯಾವುದೇ ವ್ಯಕ್ತಿಯು ಯಾವುದಾದರೂ ಸಿಂಕ್, ಚರಂಡಿ, ಹಟ್ಟಿ, ಹೋಟೆಲ್, ರೆಸ್ಟೋರೆಂಟ್, ಮನೆ, ಕೈಗಾರಿಕೆ, ಆಸ್ಪತ್ರೆ ಅಲ್ಲದಿದ್ದಲ್ಲಿ ಇತರ ಸಂಸ್ಥೆಗಳು ಇತ್ಯಾದಿಗಳಿಂದಿರುವ ಹೊಲಸು ನೀರು, ಸಾರ್ವಜನಿಕ ಚರಂಡಿ, ರಸ್ತೆ, ಬೀದಿ, ಸಾರ್ವಜನಿಕ ಸ್ಥಳ, ಜಲಾಶಯ ಅಲ್ಲದಿದ್ದಲ್ಲಿ ಜಲಮಾರ್ಗಗಳಿಗೆ ಹರಿಸುವುದು ಹಾಗೂ ಹರಿಯುವಂತೆ ಮಾಡುವುದು ಅಲ್ಲದಿದ್ದಲ್ಲಿ ಅಂತಹ ಪರಿಸರಗಳಿಂದ ಆ ರೀತಿಯಲ್ಲಿ ಉಪಯೋಗಿಸಿದ ನೀರನ್ನು ಹರಿಸಲು ಸಮ್ಮತಿಸುವುದು ಅಥವಾ ಅದಕ್ಕೆ ಕಾರಣವಾಗುವುದು ಮಾಡತಕ್ಕದ್ದಲ್ಲ.

(2) (1)ನೇ ಉಪ-ವಿಭಾಗದ ಉಪಬಂಧಗಳನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿಯ ಮೇಲೆ ಕಾರ್ಯದರ್ಶಿಯವರಿಗೆ ಐದು ಸಾವಿರಕ್ಕಿಂತ ಕಡಿಮೆಯಲ್ಲದ ಆದರೆ ಐವತ್ತು ಸಾವಿರ ರೂಪಾಯಿಗಿಂತ ಅಧಿಕವಲ್ಲದ ಜುಲ್ಮಾನೆಯನ್ನು ಹೊರಿಸಬಹುದಾಗಿದೆ.

(3) ಕಾರ್ಯದರ್ಶಿಯವರಿಗೆ, ಯಾವುದಾದರೂ ಸಾರ್ವಜನಿಕ ರಸ್ತೆಗೋ, ಚರಂಡಿಗೋ, ಬೀದಿಗೋ ಅಲ್ಲದಿದ್ದಲ್ಲಿ ಬೇರೆ ಯಾವುದಾದರೂ ಸಾರ್ವಜನಿಕ ಸ್ಥಳಗಳಿಗೋ ಅಥವಾ ಜಲಾಶಯಗಳಿಗೋ ಹೊಲಸು ನೀರನ್ನು ಹರಿದು ಬಿಡುವ ಯಾವುದೇ ಪೈಪ್, ಟ್ಯೂಬ್ ಅಥವಾ ಬೇರೆ ಯಾವುದೇ ಮಾರ್ಗವನ್ನು ಮುಚ್ಚಲು, ಬಂದು ಮಾಡಲು ಅಥವಾ ನೀಗಿಸಲು ನೋಟಿಸು ಮುಖೇನ ಅಂತಹ ಪರಿಸರದ ಮಾಲೀಕನೊಡನೆ ಅಥವಾ ಅನುಭೋಗದಾರನೊಡನೆ ನಿರ್ದೇಶಿಸಬಹುದಾಗಿದೆ.

(4) (3)ನೇ ಉಪ-ವಿಭಾಗ ಪ್ರಕಾರವಿರುವ ನಿರ್ದೇಶ ಲಭಿಸಿದ ಯಾವುದೇ ವ್ಯಕ್ತಿಯು ನಿರ್ದೇಶ ಲಭಿಸಿ ಏಳು ದಿನದೊಳಗೆ ಆ ರೀತಿಯ ನಿರ್ದೇಶಗಳನ್ನು ಪಾಲಿಸತಕ್ಕದ್ದು ಮತ್ತು ಆ ರೀತಿಯ ನಿರ್ದೇಶಗಳನ್ನು ಪಾಲಿಸುವುದರಲ್ಲಿ ಆತನು ಲೋಪವೆಸಗಿದ್ದಲ್ಲಿ, ಕಾರ್ಯದರ್ಶಿಯವರು, *(2)*ನೇ ಉಪ-ವಿಭಾಗದ ಪ್ರಕಾರ ಕೈಗೊಳ್ಳಬಹುದಾದ ಯಾವುದೇ ಕ್ರಮಗಳಿಗೆ ಭಂಗವುಂಟಾಗದಂತೆ, ಆ ರೀತಿಯ ಪೈಪ್, ಟ್ಯೂಬ್ ಅಲ್ಲದಿದ್ದಲ್ಲಿ ಇತರ ಮಾರ್ಗಗಳನ್ನು ಮುಚ್ಚುವುದೋ ಬಂದುಮಾಡುವುದೋ ಅಲ್ಲದಿದ್ದಲ್ಲಿ ನೀಗಿಸುವುದೋ ಮಾಡತಕ್ಕದ್ದು ಮತ್ತು ಇದಕ್ಕಾಗಿ ಬೇಕಾಗುವ ಯಥಾರ್ಥ ಖರ್ಚನ್ನು ಆತನಿಂದ ವಸೂಲು ಮಾಡತಕ್ಕದ್ದು.".

15. 219 ಎನ್ ವಿಭಾಗದ ಬದಲು ಹೊಸ ವಿಭಾಗದ ಸೇರ್ಪಡೆ.—ಪ್ರಧಾನ ಅಧಿನಿಯಮದ 219ಎನ್. ವಿಭಾಗದ ಬದಲಾಗಿ ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*219ಎನ್. ಸಾರ್ವಜನಿಕ ಸ್ಥಳಗಳಿಗೋ, ಖಾಸಗಿ ಸ್ಥಳಗಳಿಗೋ ತ್ಯಾಜ್ಯ ಎಸೆಯುವುದಕ್ಕಿರುವ ನಿಷೇಧ.*—*(1)* ತ್ಯಾಜ್ಯವನ್ನು ಹಾಕುವುದಕ್ಕೆ ಉದ್ದೇಶಿಸಿದ ಸ್ಥಳಗಳ ಹೊರತಾದ ಬೀದಿಯಲ್ಲಿಯೋ, ಚರಂಡಿಯಲ್ಲಿಯೋ, ಸಾರ್ವಜನಿಕ ಸ್ಥಳದಲ್ಲಿಯೋ ಯಾವುದೇ ವ್ಯಕ್ತಿ ಯಾವುದಾದರೂ ತ್ಯಾಜ್ಯವನ್ನು ಎಸೆಯುವುದೋ, ಎಸೆದು ಮಲಿನಗೊಳಿಸುವುದೋ, ರಾಶಿಹಾಕುವುದೋ ಉರಿಸುವುದೋ, ಹುಗಿದು ಹಾಕುವುದೋ ಅಥವಾ ಅಂತಹ ಕೆಲಸಗಳನ್ನು ಮಾಡುವುದಕ್ಕೆ ಕಾರಣವಾಗುವುದೋ ಮಾಡತಕ್ಕದ್ದಲ್ಲ.

(2) ನಿಗದಿಪಡಿಸಿದ ಪ್ರಕಾರ ಅಥವಾ ಕಾರ್ಯದರ್ಶಿಯವರು ಹೊರಡಿಸುವ ಮಾರ್ಗನಿರ್ದೇಶಗಳಿಗನುಸಾರವಾಗಿ ಅಲ್ಲದೆ ಯಾವುದೇ ವ್ಯಕ್ತಿಯು ಯಾವುದೇ ಖಾಸಗಿ ಸ್ಥಳಗಳಲ್ಲಿ ತ್ಯಾಜ್ಯವನ್ನು ಎಸೆಯುವುದೋ, ಎಸೆದು ಮಲಿನಗೊಳಿಸುವುದೋ, ರಾಶಿಹಾಕುವುದೋ ಉರಿಸುವುದೋ, ಹುಗಿದು ಹಾಕುವುದೋ ಅಥವಾ ಅಂತಹ ಕೆಲಸಗಳನ್ನು ಮಾಡುವುದಕ್ಕೆ ಕಾರಣವಾಗುವುದೋ ಮಾಡತಕ್ಕದ್ದಲ್ಲ.

(3) (1)ನೇ ಉಪ-ವಿಭಾಗದ ಅಥವಾ (2)ನೇ ಉಪ-ವಿಭಾಗದ ಉಪಬಂಧಗಳಿಗೆ ವಿರುದ್ಧವಾಗಿ ಯಾವುದೇ ವ್ಯಕ್ತಿಯು ವರ್ತಿಸಿರುವನೆಂದು ಮನದಟ್ಟಾದಲ್ಲಿ ಕಾರ್ಯದರ್ಶಿಯವರಿಗೆ ಅಥವಾ ಕಾರ್ಯದರ್ಶಿಯವರು ಈ ಆಗತ್ಯಕ್ಕಾಗಿ ವಿಶೇಷವಾಗಿ ನಿಯೋಜಿಸಿದ ಅಧಿಕಾರಿಗೆ ಆ ರೀತಿಯ ವ್ಯಕ್ತಿಯ ಮೇಲೆ ಸ್ಥಳದಲ್ಲೇ ಐದುಸಾವಿರ ರೂಪಾಯಿಯ ಜುಲ್ಮಾನೆಯನ್ನು ಹೊರಿಸಬಹುದಾಗಿದೆ.

(4) (3)ನೇ ಉಪ-ವಿಭಾಗದ ಪ್ರಕಾರ ಹೊರಿಸಲ್ಪಟ್ಟ ಜುಲ್ಮಾನೆಯನ್ನು ಅದನ್ನು ಹೊರಿಸಿದ ದಿನಾಂಕದಿಂದ ಹದಿನೈದು ದಿನದೊಳಗೆ ಪಾವತಿಸತಕ್ಕದ್ದು ಮತ್ತು ಆ ರೀತಿಯಲ್ಲಿ ಪಾವತಿಸುವುದರಲ್ಲಿ ಲೋಪ ಉಂಟುಮಾಡುವುದಾದಲ್ಲಿ ಕಾರ್ಯದರ್ಶಿಯವರು, ಆ ವ್ಯಕ್ತಿಯ ವಿರುದ್ಧ ಕೈಗೊಳ್ಳಬಹುದಾದ ಯಾವುದೇ ಕ್ರಮಗಳಿಗೆ ಭಂಗವುಂಟಾಗದಂತೆ ಕಾನೂನು ಕ್ರಮಗಳನ್ನು ಆರಂಭಿಸತಕ್ಕದ್ದು.".

16. 219 ಎಸ್ ವಿಭಾಗದ ಬದಲಾಗಿ ಹೊಸ ವಿಭಾಗದ ಸೇರ್ಪಡೆ.—ಪ್ರಧಾನ ಅಧಿನಿಯಮದ 219ಎಸ್ ವಿಭಾಗದ ಬದಲಾಗಿ ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*219ಎಸ್. ತ್ಯಾಜ್ಯ, ಕಸ ಮತ್ತು ಮಲವಿಸರ್ಜನೆಗಳನ್ನು ಜಲಾಶಯಗಳಲ್ಲಿ ಹಾಗೂ ಜಲಮೂಲಗಳಲ್ಲಿ ನಿಕ್ಷೇಪಿಸುವುದಕ್ಕೆ ನಿಷೇಧ.*—*(1)* ಯಾವುದೇ ವ್ಯಕ್ತಿಯು ಸಾರ್ವಜನಿಕ ಜಲಗಮನ ಮಾರ್ಗ, ಜಲಾಶಯ ಅಥವಾ ಜಲಮೂಲಗಳಲ್ಲಿ ತ್ಯಾಜ್ಯ, ಕಸ ಮತ್ತು ಮಲವಿಸರ್ಜನೆಗಳನ್ನು ಎಸೆಯುವುದು, ರಾಶಿಹಾಕುವುದು, ಅದಕ್ಕೆ ಹೊಲಸು ಜಲವನ್ನು ಹರಿಸುವುದು, ಯಾವುದಾದರೂ ಶೌಚಾಲಯದಿಂದ ಅದಕ್ಕೆ

This is a digitally signed Gazette.
Authenticity may be verified through https://compose.kerala.gov.in/

ನೀರು ಹರಿಯಲು ಅನುಮತಿಸುವುದು ಅಲ್ಲದಿದ್ದಲ್ಲಿ ಹೊಲಸು ನೀರನ್ನು ಅದಕ್ಕೆ ಹರಿಯಲು ಅನುಮತಿಸುವುದು ಅಥವಾ ಬೇರೆ ಯಾವುದಾದರೂ ರೀತಿಯಲ್ಲಿ ಜಲವನ್ನು ಮಲಿನಗೊಳಿಸುವುದು ಅಥವಾ ಆ ರೀತಿಯ ಒಂದು ಚಟುವಟಿಕೆಯನ್ನು ಮಾಡುವುದಕ್ಕೆ ಯಾರನ್ನಾದರೂ ನಿಯಮಿಸುವುದು, ನಿಯೋಜಿಸುವುದು ಅಥವಾ ನಿರ್ಬಂಧಿಸುವುದು ಅಥವಾ ಪ್ರೇರೇಪಿಸುವುದು ಮಾಡತಕ್ಕದ್ದಲ್ಲ.

(2) (1)ನೇ ಉಪ-ವಿಭಾಗದ ಪ್ರಕಾರದ ಒಂದು ಅಪರಾಧವು ಸಂಜ್ಞೇಯ ಅಪರಾಧವಾಗಿರುವುದು ಮತ್ತು ಜಾಮೀನು ರಹಿತವಾಗಿರುವುದು.

(3) (1)ನೇ ಉಪ-ವಿಭಾಗದಲ್ಲಿ ಉಲ್ಲೇಖಿಸಿರುವ ಒಂದು ಅಪರಾಧವನ್ನು ಮಾಡುವ ಯಾವುದೇ ವ್ಯಕ್ತಿಯು, ಅಪರಾಧ ನಿರ್ಣಯತೀಯ ಮೇಲೆ ಹತ್ತು ಸಾವಿರ ರೂಪಾಯಿಗಿಂತ ಕಡಿಮೆಯಲ್ಲದ ಹಾಗೂ ಐವತ್ತು ಸಾವಿರ ರೂಪಾಯಿಗಿಂತ ಅಧಿಕವಲ್ಲದ ಜುಲ್ಮಾನೆ ಹಾಗು ಆರು ತಿಂಗಳಿಗಿಂತ ಕಡಿಮೆಯಲ್ಲದ ಹಾಗೂ ಒಂದು ವರ್ಷಕ್ಕಿಂತ ಮೀರದ ಕಾಲಕ್ಕೆ ಕಾರಾಗೃಹ ವಾಸಕ್ಕೆ ವಿಧಿಸಿ ಶಿಕ್ಷಿಸತಕ್ಕದ್ದು.".

17. 219ಟಿ ವಿಭಾಗದ ತಿದ್ದುಪಡಿ.—*ಪ್ರಧಾನ ಅಧಿನಿಯಮದ 219ಟಿ ವಿಭಾಗದಲ್ಲಿ, "219 ಎಸ್ ವಿಭಾಗದ ವ್ಯಾಪ್ತಿಯಲ್ಲಿ ಒಳಪಡದಿದ್ದಲ್ಲಿ" ಎಂಬ ಪದಗಳಿಗೆ, ಅಂಕೆಗಳಿಗೆ, ಅಕ್ಷರಗಳಿಗೆ ಮತ್ತು ಚಿಹ್ನೆಗೆ ಬದಲು "219ನೇ ವಿಭಾಗದಲ್ಲಿ ಮತ್ತು 219ಎ ಯಿಂದ 219ವೈ ವರೆಗಿನ ವಿಭಾಗಗಳಲ್ಲಿ ಶಿಕ್ಷೆಯನ್ನು ವಿಧಿಸದಿದ್ದಲ್ಲಿ" ಎಂಬ ಪದಗಳನ್ನು, ಅಂಕೆಗಳನ್ನು, ಅಕ್ಷರಗಳನ್ನು ಮತ್ತು ಚಿಹ್ನೆಯನ್ನು ಸೇರಿಸತಕ್ಕದ್ದು.*

18. 219ಯು ವಿಭಾಗದ ಬದಲು ಹೊಸ ವಿಭಾಗದ ಸೇರ್ಪಡೆ.—*ಪ್ರಧಾನ ಅಧಿನಿಯಮದ 219ಯು ವಿಭಾಗದ ಬದಲು ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—*

"219ಯು. ತ್ಯಾಜ್ಯವನ್ನೋ ಮಲವಿಸರ್ಜನೆಗಳನ್ನು ಸಾಗಿಸಲು ಉಪಯೋಗಿಸಿದ ವಾಹನದ ಸ್ವಾಧೀನಪಡಿಸುವಿಕೆ ಹಾಗೂ ಮುಟ್ಟುಗೋಲು ಹಾಕುವಿಕೆ.—(1) 219ನೇ ವಿಭಾಗದ ಮತ್ತು 219ಎ ಯಿಂದ 219ವೈ ವರೆಗಿನ ವಿಭಾಗಗಳ ಕೆಳಗಿನ ಒಂದು ಅಪರಾಧವನ್ನು ಮಾಡುವ ಉದ್ದೇಶದಿಂದಲೋ, ಸಜ್ಜೀಕರಣದಿಂದಲೋ ತ್ಯಾಜ್ಯವನ್ನೋ, ಮಲವಿಸರ್ಜನೆಗಳನ್ನೋ, ಸಾರ್ವಜನಿಕ ಸ್ಥಳದ ಮುಖಾಂತರವೋ, ಸಾರ್ವಜನಿಕ ರಸ್ತೆಯ ಮುಖಾಂತರವೋ ಸಾಗಿಸುವುದೋ ಅಥವಾ ಆ ರೀತಿಯಲ್ಲಿ ನಿಕ್ಷೇಪಿಸುವುದಕ್ಕೆ ಬಳಸಿದ ಆನಂತರ ಪಿಂತಿರುಗಿ ಹೋಗುವಂತಹುದೋ ಎಂದು ನ್ಯಾಯಯುತವಾಗಿ ಅನುಮಾನಿಸಲು ಕಾರಣವಿರುವ ಒಂದು ವಾಹನವನ್ನು ಅಥವಾ ನೌಕೆಯನ್ನು, ಕಾರ್ಯದರ್ಶಿಯವರು ಅಥವಾ ಈ ಅಗತ್ಯಕ್ಕಾಗಿ ಕಾರ್ಯದರ್ಶಿಯವರು ಅಧಿಕೃತಗೊಳಿಸಿದ ಗ್ರಾಮಪಂಚಾಯತಿನ ಒಬ್ಬ ಉದ್ಯೋಗಸ್ಥ ಅಥವಾ ಸಬ್ ಇನ್ಸ್‌ಪೆಕ್ಟರರ ದರ್ಜೆಗಿಂತ ಕಡಿಮೆಯಲ್ಲದ ಒಬ್ಬ ಪೋಲೀಸು ಅಧಿಕಾರಿಯು ವಶಪಡಿಸತಕ್ಕದ್ದು ಹಾಗು ಅಧಿಕಾರ ವ್ಯಾಪ್ತಿಯಿರುವ ಸಬ್ ಡಿವಿಷನಲ್ ಮೆಜಿಸ್ಟ್ರೇಟ್‌ರವರ ಸಮಕ್ಷದಲ್ಲಿ ಹಾಜರುಪಡಿಸತಕ್ಕದ್ದು.

(2) ವಿಚಾರಣೆಯ ನಂತರ, 219ನೇ ವಿಭಾಗದ ಮತ್ತು 219ಎ ಯಿಂದ 219ವೈ ವರೆಗಿನ ವಿಭಾಗಗಳ ಅಡಿಯಲ್ಲಿನ ಯಾವುದಾದರೂ ಅಪರಾಧಗಳನ್ನು ಮಾಡಲು ವಾಹನವನ್ನು ಅಥವಾ ನೌಕೆಯನ್ನು ಉಪಯೋಗಿಸಿರುವುದಾಗಿ ನಂಬಲು ಯುಕ್ತವಾದ ಕಾರಣವುಂಟೆಂದು ಸಬ್ ಡಿವಿಷನಲ್ ಮೆಜಿಸ್ಟ್ರೇಟ್‌ರವರಿಗೆ ಮನದಟ್ಟಾದಲ್ಲಿ ಆ ರೀತಿ ಸ್ವಾಧೀನಪಡಿಸಿದ ವಾಹನವನ್ನು ಅಥವಾ ನೌಕೆಯನ್ನು ಮುಟ್ಟುಗೋಲು ಹಾಕತಕ್ಕದ್ದು ಅಲ್ಲದಿದ್ದಲ್ಲಿ ಅದನ್ನು ಬಿಟ್ಟುಕೊಡತಕ್ಕದ್ದು.

(3) ವಾಹನದ ಅಥವಾ ನೌಕೆಯ ಮಾಲೀಕನಿಗೋ ಅಲ್ಲದಿದ್ದಲ್ಲಿ ಯಾರಿಂದ ಅದನ್ನು ಸ್ವಾಧೀನಪಡಿಸಿರುವುದು ಅವರಿಗೆ—

(i) ವಾಹನ ಅಥವಾ ನೌಕೆಯನ್ನು ಮುಟ್ಟುಗೋಲು ಹಾಕಲು ಕಾರಣವಾದ ವಿಷಯಗಳ ಕುರಿತು ಆ ವ್ಯಕ್ತಿಗೆ ಲಿಖಿತ ಮುಖೇನ ತಿಳಿಸುತಾ ಒಂದು ನೋಟೀಸು ನೀಡದೆಯೂ; ಹಾಗೂ

(ii) ಮುಟ್ಟುಗೋಲು ಹಾಕುವ ಕಾರಣದ ವಿರುದ್ಧವಾಗಿ, ನೋಟೀಸಿನಲ್ಲಿ ಸ್ಪಷ್ಟಪಡಿಸಿರುವ ಯುಕ್ತವಾದ ಸಮಯದೊಳಗೆ, ಆ ವ್ಯಕ್ತಿಗೆ ಹೇಳಲಿರುವುದನ್ನು ಹೇಳಲು ಯುಕ್ತವಾದ ಒಂದು ಅವಕಾಶ ನೀಡದೆಯೂ

ಈ ವಿಭಾಗದ ಪ್ರಕಾರ ಯಾವುದಾದರೂ ವಾಹನವನ್ನು ಅಥವಾ ನೌಕೆಯನ್ನು ಮುಟ್ಟುಗೋಲು ಹಾಕುವುದಕ್ಕಿರುವ ಆದೇಶವನ್ನು ಜಾರಿಗೊಳಿಸತಕ್ಕದ್ದಲ್ಲ.

(4) ಸ್ವಾಧೀನಪಡಿಸಿದ ವಾಹನದಲ್ಲಿ ಅಥವಾ ನೌಕೆಯಲ್ಲಿ ತ್ಯಾಜ್ಯ, ಕಸ ಅಥವಾ ಮಲವಿಸರ್ಜನೆಗಳಿರುವ ಸಂದರ್ಭಗಳಲ್ಲಿ, ವಾಹನ ಅಥವಾ ನೌಕೆಯನ್ನು ಸ್ವಾಧೀನಪಡಿಸುವ ವ್ಯಕ್ತಿ, ಆ ವ್ಯಕ್ತಿಯು ಕಾರ್ಯದರ್ಶಿಯವರಲ್ಲದಿದ್ದಲ್ಲಿ, ಅಂತಹ ಸ್ವಾಧೀನಪಡಿಸುವಿಕೆಯನ್ನು ಕೂಡಲೇ ಕಾರ್ಯದರ್ಶಿಯವರಿಗೆ ತಿಳಿಸತಕ್ಕದ್ದು ಮತ್ತು 219ನೇ ವಿಭಾಗದ ಮತ್ತು 219ಎ ಯಿಂದ 219ವೈ ವರೆಗಿನ ವಿಭಾಗಗಳ ಅಡಿಯಲ್ಲಿ ಕೈಗೊಳ್ಳಬಹುದಾದ ಯಾವುದೇ ಕ್ರಮಗಳಿಗೆ ಭಂಗವುಂಟಾಗದಂತೆ, ವಾಹನದ ಅಥವಾ ನೌಕೆಯ ಮಾಲೀಕನ ಖರ್ಚಿನಲ್ಲಿ ತ್ಯಾಜ್ಯ, ಕಸ ಅಥವಾ ಮಲವಿಸರ್ಜನೆಗಳನ್ನು ಕಾರ್ಯದರ್ಶಿಯವರು ನೀಗಿಸತಕ್ಕದ್ದು ಮತ್ತು ಈ ರೀತಿ ನೀಗಿಸುವುದಕ್ಕಿರುವ ಖರ್ಚನ್ನು ಮತ್ತು ಐದು ಸಾವಿರ ರೂಪಾಯಿಗಿಂತ ಅಧಿಕವಲ್ಲದ ಜುಲ್ಮಾನೆಯನ್ನು ಕಾರ್ಯದರ್ಶಿಯವರು ಮಾಲೀಕನಿಂದ ವಸೂಲುಮಾಡತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

(5) ವಾಹನ ಅಥವಾ ನೌಕೆಯನ್ನು ಮುಟ್ಟುಗೋಲು ಹಾಕುವ ವಿಷಯದಲ್ಲಿ ಅದನ್ನು ಏಲಂ ಮಾಡತಕ್ಕದ್ದು ಮತ್ತು ಆ ರೀತಿ ಲಭಿಸುವ ಮೊತ್ತವನ್ನು ತ್ಯಾಜ್ಯ ಸಂಸ್ಕರಣೆ ಫಂಡಿಗೆ ಜಮೆಮಾಡತಕ್ಕದ್ದು.".

19. 219 ಎಕ್ಸ್ ವಿಭಾಗದ ಬದಲಾಗಿ ಹೊಸ ವಿಭಾಗದ ಸೇರ್ಪಡೆ.—ಪ್ರಧಾನ ಅಧಿನಿಯಮದ 219ಎಕ್ಸ್ ವಿಭಾಗದ ಬದಲಾಗಿ ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*219ಎಕ್ಸ್. ತ್ಯಾಜ್ಯ ಸಂಸ್ಕರಣೆ ಫಂಡಿನ ರಚನೆ.—(1)* ಪ್ರತಿಯೊಂದು ಗ್ರಾಮಪಂಚಾಯತ್ "ತ್ಯಾಜ್ಯ ಸಂಸ್ಕರಣೆ ಫಂಡ್" ಎಂಬ ಹೆಸರಿನಲ್ಲಿ ಒಂದು ಫಂಡ್ ರೂಪೀಕರಿಸತಕ್ಕದ್ದಾಗಿದೆ ಮತ್ತು ಅದನ್ನು ಸರಕಾರವು ರಚಿಸುವ ಕಾನೂನುಗಳಿಗೆ ಅಥವಾ ಹೊರಡಿಸುವ ಮಾರ್ಗನಿರ್ದೇಶಗಳಿಗೆ ಅನುಸಾರವಾಗಿ ನಿರ್ವಹಿಸತಕ್ಕದ್ದಾಗಿದೆ.

(2) ತ್ಯಾಜ್ಯ ಸಂಸ್ಕರಣೆ ಫಂಡಿಗೆ ಈ ಕೆಳಗಿನವುಗಳನ್ನು ಜಮೆಮಾಡತಕ್ಕದ್ದಾಗಿದೆ, ಅದೇನೆಂದರೆ:—

(ಎ) ತ್ಯಾಜ್ಯ ಸಂಸ್ಕರಣೆಯ ಉಲ್ಲಂಘನೆಗೆ ಸಂಬಂಧಿಸಿದ ಜುಲ್ಮಾನೆಯಾಗಿಯೋ ದಂಡವಾಗಿಯೋ ವಸೂಲುಮಾಡಿದ ಮೊತ್ತ;

(ಬಿ) ತ್ಯಾಜ್ಯ ಸಂಸ್ಕರಣೆಯ ಚಟುವಟಿಕೆಗಳಿಗಾಗಿ ಕೋರ್ಪರೇಟ್ ಸೋಷ್ಯಲ್ ರೆಸ್ಪೋನ್ಸಿಬಿಲಿಟಿ (ಸಿ.ಎಸ್.ಆರ್.) ಫಂಡಿನಿಂದ ಲಭಿಸಿದ ಕೊಡುಗೆಗಳು;

(ಸಿ) ಈ ಅಗತ್ಯಕ್ಕಾಗಿ ಲಭಿಸಿದ ಪ್ರಾಯೋಜಕತ್ವ ಮೊತ್ತ ಅಥವಾ ಇತರ ಕೊಡುಗೆಗಳು;

(ಡಿ) ಸರಕಾರವು ನಿರ್ದೇಶಿಸುವ ಬೇರೆ ಯಾವುದಾದರೂ ಮೊತ್ತಗಳು.

(3) ಫಂಡನ್ನು ಈ ಕೆಳಗಿನ ಅಗತ್ಯಗಳಿಗಾಗಿ,—

(ಎ) ತ್ಯಾಜ್ಯಗಳ ಬೇರ್ಪಡಿಸುವಿಕೆ, ಸಂಗ್ರಹಣೆ, ಸಾಗಣೆ, ಪಾಲನೆ, ಸಂಸ್ಕರಣೆ ಮತ್ತು ನಿರ್ಮೂಲನೆಗೆ ಮಾತ್ರ ಸೀಮಿತಗೊಳಿಸದೆ, ಎಲ್ಲಾ ತ್ಯಾಜ್ಯ ಸಂಸ್ಕರಣೆ ಚಟುವಟಿಕೆಗಳಿಗೂ;

(ಬಿ) ದಕ್ಷವಾದ ತ್ಯಾಜ್ಯಸಂಸ್ಕರಣೆಗೆ ಅವಶ್ಯಕವಾದ ಉಪಕರಣಗಳನ್ನು ಖರೀದಿಸಲು ಮತ್ತು ಸ್ಥಾಪಿಸಲು;

(ಸಿ) ತ್ಯಾಜ್ಯ ಸಂಸ್ಕರಣೆಯಲ್ಲಿ ನಿರತರಾಗಿರುವ ನೌಕರರ ಕೌಶಲ್ಯ ಮತ್ತು ಜ್ಞಾನವನ್ನು ಹೆಚ್ಚಿಸುವುದಕ್ಕಾಗಿರುವ ತರಬೇತಿಗೆ ಹಾಗೂ ಕಾರ್ಯಕ್ಷಮತೆ ಅಭಿವೃದ್ಧಿ ಕಾರ್ಯಕ್ರಮಗಳಿಗೆ;

(ಡಿ) ಸರಕಾರವು ಅಂಗೀಕರಿಸಿದ ತ್ಯಾಜ್ಯ ಸಂಸ್ಕರಣೆಗೆ ಸಂಬಂಧಿಸಿದ ಇತರ ಯಾವುದೇ ಚಟುವಟಿಕೆಗಳಿಗೂ ಉಪಯೋಗಿಸತಕ್ಕದ್ದು.".

20. 219 ಎಕ್ಸ್ ವಿಭಾಗದ ನಂತರ ಹೊಸ ವಿಭಾಗದ ಸೇರ್ಪಡೆ.—ಪ್ರಧಾನ ಅಧಿನಿಯಮದ 219ಎಕ್ಸ್ ವಿಭಾಗದ ನಂತರ ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*219ವೈ. ಜುಲ್ಮಾನೆ ಹೊರಿಸುವುದಕ್ಕೆ ಸಂಬಂಧಿಸಿದ ಉಪಬಂಧಗಳು.—(1) 219ಐ, 219ಎನ್* ಎಂಬೀ ವಿಭಾಗದಲ್ಲಿ ನಿರ್ದಿಷ್ಟಪಡಿಸಿದ ಶಿಕ್ಷೆಗಳ ಹೊರತು *219ನೇ* ವಿಭಾಗದ ಮತ್ತು *219ಎ* ಯಿಂದ *219ಎಕ್ಸ್* ವರೆಗಿನ ವಿಭಾಗಗಳ ಕೆಳಗಿನ ಯಾವುದೇ ಜುಲ್ಮಾನೆಯು—

(i) ಅದನ್ನು ಹೊರಿಸಲು ಕಾರಣವಾದ ವಿಷಯಗಳ ಕುರಿತು ಆತನಿಗೆ ಲಿಖಿತ ಮುಖೇನ ತಿಳಿಸುತಾ ಒಂದು ನೋಟೀಸನ್ನು ನೀಡದೆಯೂ; ಅದಲ್ಲದೆ

(ii) ಅದನ್ನು ಹೊರಿಸುವುದಕ್ಕಿರುವ ಕಾರಣದ ವಿರುದ್ಧ ನೋಟೀಸಿನಲ್ಲಿ ಸ್ಪಷ್ಟಪಡಿಸಿದ ಯುಕ್ತವಾದ ಸಮಯದೊಳಗೆ, ಆತನಿಗೆ ಹೇಳಲಿಕ್ಕಿರುವುದನ್ನು ಹೇಳಲು ಒಂದು ಅವಕಾಶವನ್ನು ನೀಡದೆಯೂ ಕಾರ್ಯದರ್ಶಿಯವರು ಹೊರಿಸತಕ್ಕದ್ದಲ್ಲ.

*(2) (1)*ನೇ ಉಪ-ವಿಭಾಗದ ಪ್ರಕಾರ ಜುಲ್ಮಾನೆ ನಿಶ್ಚಯಿಸುವ ವಿಷಯಗಳಲ್ಲಿ ಕಾರ್ಯದರ್ಶಿಯವರು ಅದರಲ್ಲಿ ಒಳಗೊಂಡಿರುವ ತ್ಯಾಜ್ಯದ ಗಾತ್ರ ಅಥವಾ ಪ್ರಮಾಣ ಮತ್ತು ಮನೆ, ಹೋಟೆಲ್, ಕೈಗಾರಿಕೆ ಅಥವಾ ಇತರ ಸಂಸ್ಥೆಗಳ ವಿಧ, ಗಾತ್ರ, ಸ್ಥಳ ಅಲ್ಲದೆ ಸರಕಾರವು ಇದಕ್ಕಾಗಿ ರಚಿಸಿದ ಅಥವಾ ಹೊರಡಿಸಿದ ಯಾವುದಾದರೂ ನಿಯಮಗಳನ್ನು ಅಲ್ಲದಿದ್ದಲ್ಲಿ ಮಾರ್ಗನಿರ್ದೇಶಗಳನ್ನು ಪರಿಗಣಿಸತಕ್ಕದ್ದು.

*(3) 219*ನೇ ವಿಭಾಗದ ಮತ್ತು *219ಎ* ಯಿಂದ *219ಡಬ್ಲ್ಯೂ* ವರೆಗಿನ ವಿಭಾಗಗಳ ಕೆಳಗೆ ಹೊರಿಸುವ ಯಾವುದೇ ಜುಲ್ಮಾನೆಯನ್ನು *210*ನೇ ವಿಭಾಗದಲ್ಲಿ ನಿಗದಿಪಡಿಸಿದ ಪ್ರಕಾರ ಸಾರ್ವಜನಿಕ ತೆರಿಗೆಯ ಬಾಕಿ ಎಂಬಂತೆ ವಸೂಲು ಮಾಡತಕ್ಕದ್ದು.".

This is a digitally signed Gazette.
Authenticity may be verified through https://compose.kerala.gov.in/

21. 254ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 254ನೇ ವಿಭಾಗದ (2)ನೇ ಉಪ-ವಿಭಾಗದಲ್ಲಿ (xxi)ನೇ ಖಂಡದ ನಂತರ ಈ ಕೆಳಗಿನ ಖಂಡಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(xxiಎ) 219ನೇ ವಿಭಾಗದ ಮತ್ತು 219ಎ ಯಿಂದ 219ಜೆ ವರೆಗಿನ ವಿಭಾಗಗಳಲ್ಲಿ ನಿಗದಿಪಡಿಸಿದ ತ್ಯಾಜ್ಯ ಸಂಸ್ಕರಣೆಗೆ ಸಂಬಂಧಿಸಿದ ವಿಷಯಗಳು;

(xxiಬಿ) 1986ರ ಪರಿಸರ (ಸಂರಕ್ಷಣೆ) ಅಧಿನಿಯಮ (1986ರ 29ನೇ ಕೇಂದ್ರ ಅಧಿನಿಯಮ)ಕ್ಕೆ ಮತ್ತು ಅದರ ಅಡಿಯಲ್ಲಿ ರಚಿಸಿದ ಕಾನೂನುಗಳಿಗೆ ವಿಧೇಯವಾಗಿ ನಿರ್ಮಾಣ-ಕೆಡವುವಿಕೆ ತ್ಯಾಜ್ಯಗಳು, ಇ-ತ್ಯಾಜ್ಯಗಳು, ನೈರ್ಮಲ್ಯ ತ್ಯಾಜ್ಯಗಳು, ಅಪಘಾತಕಾರಿಯಾದ ಗೃಹ ತ್ಯಾಜ್ಯಗಳು, ಪ್ಲಾಸ್ಟಿಕ್ ತ್ಯಾಜ್ಯಗಳು ಮತ್ತು ದ್ರವ ತ್ಯಾಜ್ಯಗಳು ಎಂಬವುಗಳಿಗೆ ಸಂಬಂಧಿಸಿದ ವಿಷಯಗಳು.".

22. 255ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 255ನೇ ವಿಭಾಗದಲ್ಲಿ, "ಸಾವಿರ ರೂಪಾಯಿಯವರೆಗೆ" ಎಂಬ ಪದಗಳಿಗೆ ಬದಲಾಗಿ "ಹತ್ತು ಸಾವಿರ ರೂಪಾಯಿಯವರೆಗೆ" ಎಂಬ ಪದಗಳನ್ನು ಮತ್ತು "ಐವತ್ತು ರೂಪಾಯಿಗಿಂತ" ಎಂಬ ಪದಗಳಿಗೆ ಬದಲಾಗಿ "ಇನ್ನೂರು ರೂಪಾಯಿಗಿಂತ" ಎಂಬ ಪದಗಳನ್ನು ಸೇರಿಸತಕ್ಕದ್ದು.

23. 256ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 256ನೇ ವಿಭಾಗದ (2)ನೇ ಉಪ-ವಿಭಾಗದಲ್ಲಿ "ಐನೂರು ರೂಪಾಯಿಗಿಂತ" ಎಂಬ ಪದಗಳಿಗೆ ಬದಲು "ಹತ್ತು ಸಾವಿರ ರೂಪಾಯಿಗಿಂತ" ಎಂಬ ಪದಗಳನ್ನು ಮತ್ತು "ಐವತ್ತು ರೂಪಾಯಿಗಿಂತ" ಎಂಬ ಪದಗಳಿಗೆ ಬದಲು "ಇನ್ನೂರು ರೂಪಾಯಿಗಿಂತ" ಎಂಬ ಪದಗಳನ್ನು ಸೇರಿಸತಕ್ಕದ್ದು.

24. 276ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 276ನೇ ವಿಭಾಗದಲ್ಲಿ,—

(i) (1)ನೇ ಉಪ-ವಿಭಾಗದಲ್ಲಿ "235 ಐ" ಎಂಬ ಅಂಕೆಗಳ ಮತ್ತು ಅಕ್ಷರಗಳ ಮೊದಲು "219ಎಸಿ, 219ಬಿ, 219ಐ, 219ಕೆ, 219ಎನ್" ಎಂಬ ಅಂಕೆಗಳನ್ನು, ಅಕ್ಷರಗಳನ್ನು ಮತ್ತು ಚಿಹ್ನೆಗಳನ್ನು ಸೇರಿಸತಕ್ಕದ್ದು;

(ii) (4)ನೇ ಉಪ-ವಿಭಾಗದಲ್ಲಿ "235 ಐ" ಎಂಬ ಅಂಕೆಗಳ ಮತ್ತು ಅಕ್ಷರಗಳ ಮೊದಲು "219ಎಸಿ, 219ಬಿ, 219ಐ, 219ಕೆ, 219ಎನ್" ಎಂಬ ಅಂಕೆಗಳನ್ನು, ಅಕ್ಷರಗಳನ್ನು ಮತ್ತು ಚಿಹ್ನೆಗಳನ್ನು ಸೇರಿಸತಕ್ಕದ್ದು.

25. 6ನೇ ಅನುಸೂಚಿಯ ತಿದ್ದುಪಡಿ.—ಪ್ರಧಾನ ಅಧಿನಿಯಮದ 6ನೇ ಅನುಸೂಚಿಯಲ್ಲಿ (1)ನೇ ಕಾಲಂನ "209ಸಿ" ಎಂಬ ನಮೂದುಗಳ ನಂತರ ಈ ಕೆಳಗಿನ ನಮೂದುಗಳನ್ನು ಅನುಕ್ರಮವಾಗಿ (1), (3), (4)ನೇ ಕಾಲಂಗಳಲ್ಲಿ ಸೇರಿಸತಕ್ಕದ್ದು, ಅದೇನೆಂದರೆ:—

"219ಐ	ಅಂಗಡಿಗಳ ಮತ್ತು ವಾಣಿಜ್ಯ ಸಂಸ್ಥೆಗಳ ಪರಿಸರವನ್ನು ಶುಚಿಯಾಗಿ ಇಡುವುದಕ್ಕಿರುವ ಜವಾಬ್ದಾರಿ	ಹತ್ತು ಸಾವಿರ ರೂಪಾಯಿ
219ಎಂ	ತ್ಯಾಜ್ಯವನ್ನು ಮತ್ತು ಇತರವುಗಳನ್ನು ತೊಲಗಿಸಲು ಮುಚ್ಚದ ಯಾವುದಾದರೂ ವಾಹನವನ್ನು ಉಪಯೋಗಿಸುವುದು	ಐದು ಸಾವಿರ ರೂಪಾಯಿ
219ಎನ್	ಸಾರ್ವಜನಿಕ ಸ್ಥಳಗಳಲ್ಲಿ ಅಥವಾ ಖಾಸಗಿ ಸ್ಥಳಗಳಲ್ಲಿ ತ್ಯಾಜ್ಯವನ್ನು ಎಸೆಯುವುದು	ಹತ್ತು ಸಾವಿರ ರೂಪಾಯಿ".

ಆರಿಫ್ ಮೊಹಮ್ಮದ್ ಖಾನ್,

ರಾಜ್ಯಪಾಲರು.

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಸಿ) ಇಲಾಖೆ

ಅಧಿಸೂಚನೆ

2024 ಮಾರ್ಚ್ 2,

ನಂಬ್ರ 58/ಲೆಗ್. ಸಿ3/2023/ಕಾನೂನು. ತಿರುವನಂತಪುರಂ, 1199 ಕುಂಭ 18/

1945 ಫಾಲ್ಗುಣ 12.

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2024 ಮಾರ್ಚ್ 1ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಸಿ. ವಿಜಯಲಕ್ಷ್ಮಿ,
ವಿಶೇಷ ಕಾರ್ಯದರ್ಶಿ (ಕಾನೂನು).

2024ರ 5ನೇ ಅಧಿನಿಯಮ

2024ರ ಕೇರಳ ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ

1994ರ ಕೇರಳ ಪಂಚಾಯತ್ ರಾಜ್ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ—1994ರ ಕೇರಳ ಪಂಚಾಯತ್ ರಾಜ್ ಅಧಿನಿಯಮವನ್ನು ಇನ್ನು ಮುಂದಿನ ಅಗತ್ಯಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2024ರ ಕೇರಳ ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮವೆಂದು ಕರೆಯಬಹುದು.

(2) ಇದು 2023 ಡಿಸೆಂಬರ್ 9ನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. 189ನೇ ವಿಭಾಗದ ತಿದ್ದುಪಡಿ.—1994ರ ಕೇರಳ ಪಂಚಾಯತ್ ರಾಜ್ ಅಧಿನಿಯಮ (1994ರ 13) (ಇನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲ್ಪಡುವುದು)ದ 189ನೇ ವಿಭಾಗದ (1)ನೇ ಉಪ-ವಿಭಾಗದಲ್ಲಿ, "ಕಲ್ಯಾಣ ಕಾರ್ಯಕ್ರಮಗಳು" ಎಂಬ ಪದದ ಮತ್ತು ಚಿಹ್ನೆಯ ನಂತರ "ತ್ಯಾಜ್ಯ ಸಂಸ್ಕರಣೆ" ಎಂಬ ಪದವನ್ನು ಮತ್ತು ಚಿಹ್ನೆಯನ್ನು ಸೇರಿಸತಕ್ಕದ್ದು.

G. 14/2025/GPC.

This is a digitally signed Gazette.
Authenticity may be verified through https://compose.kerala.gov.in/

2

3. XXನೇ ಅಧ್ಯಾಯದ ಶೀರ್ಷಿಕೆಯ ತಿದ್ದುಪಡಿ.—ಪ್ರಧಾನ ಅಧಿನಿಯಮದ XXನೇ ಅಧ್ಯಾಯದ ಶೀರ್ಷಿಕೆಯಲ್ಲಿ "ಸಾರ್ವಜನಿಕ ರಕ್ಷಣೆ, ಸೌಕರ್ಯ ಮತ್ತು ಆರೋಗ್ಯ" ಎಂಬ ಪದಗಳ ನಂತರ "ತ್ಯಾಜ್ಯ ಸಂಸ್ಕರಣೆ" ಎಂಬ ಪದವನ್ನು ಸೇರಿಸತಕ್ಕದ್ದು.

4. 219ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 219ನೇ ವಿಭಾಗದಲ್ಲಿ,

(i) ಪಾರ್ಶ್ವ ಶೀರ್ಷಿಕೆಯ ಬದಲಾಗಿ ಈ ಕೆಳಗಿನ ಪಾರ್ಶ್ವ ಶೀರ್ಷಿಕೆಯನ್ನು ಸೇರಿಸತಕ್ಕದ್ದು, ಅದೇನೆಂದರೆ:—

"ಜನರು ಒಟ್ಟು ಸೇರುವ ಸ್ಥಳಗಳ ಮೇಲೆ ನಿಯಂತ್ರಣವಿರುವ ವ್ಯಕ್ತಿಗಳ ಜವಾಬ್ದಾರಿಗಳು"

(ii) ಅಸ್ತಿತ್ವದಲ್ಲಿರುವ ಉಪಬಂಧವನ್ನು ಅದರ (1)ನೇ ಉಪ-ವಿಭಾಗವಾಗಿ ಅಂಕಿತಗೊಳಿಸತಕ್ಕದ್ದು ಮತ್ತು ಆ ರೀತಿ ಅಂಕಿತಗೊಳಿಸಿದ (1)ನೇ ಉಪ-ವಿಭಾಗದ ನಂತರ ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(2) ಯಾವುದೇ ವ್ಯಕ್ತಿಯು ಕನಿಷ್ಠ ಮೂರು ಕೆಲಸದ ದಿನಗಳಿಗಿಂತ ಮುಂಚಿತವಾದರೂ ಗ್ರಾಮ ಪಂಚಾಯತಿಗೆ ತಿಳಿಸದೆ, ಅನುಮತಿಯಿಲ್ಲದ ಯಾವುದೇ ಸ್ಥಳದಲ್ಲಿ ನೂರಕ್ಕಿಂತ ಹೆಚ್ಚು ಜನರ ಒಂದು ಕಾರ್ಯಕ್ರಮ ಅಥವಾ ಒಕ್ಕೂಟವನ್ನು ಸಂಘಟಿಸತಕ್ಕದ್ದಲ್ಲ ಮತ್ತು ಅಂತಹ ವ್ಯಕ್ತಿ ಅಥವಾ ಅಂತಹ ಕಾರ್ಯಕ್ರಮದ ಸಂಯೋಜಕನು ಮೂಲದಲ್ಲಿಯೇ ತ್ಯಾಜವನ್ನು ಬೇರ್ಪಡಿಸಲಾಗುತ್ತಿದೆ ಎಂದು ಖಾತ್ರಿಪಡಿಸತಕ್ಕದ್ದು ಮತ್ತು ಗ್ರಾಮಪಂಚಾಯತ್ ನಿಗದಿಪಡಿಸುವ ಶುಲ್ಕವನ್ನು ನೀಡಿ ಗ್ರಾಮಪಂಚಾಯತ್ ನಿಯೋಜಿಸಿದ ತ್ಯಾಜ್ಯ ಸಂಗ್ರಹದಾರರಿಗೋ ಏಜನ್ಸಿಗಳಿಗೋ ಅದನ್ನು ಹಸ್ತಾಂತರಿಸತಕ್ಕದ್ದು:

ಆದರೆ, ಅಂತಹ ಶುಲ್ಕಗಳು ತ್ಯಾಜ್ಯ ಸಂಸ್ಕರಣೆಗಿರುವ ಯಥಾರ್ಥ ಖರ್ಚಿಗಿಂತ ಕಡಿಮೆ ದರ ಆಗಿರತಕ್ಕದ್ದಲ್ಲ ಮತ್ತು ಅದನ್ನು ಗ್ರಾಮಪಂಚಾಯತ್ ನಿರ್ದೇಶಿಸಿದ ಪ್ರಕಾರ ಮುಂಗಡವಾಗಿ ಪಾವತಿಸತಕ್ಕದ್ದು.

ವಿವರಣೆ.—1. ಈ ವಿಭಾಗದ ಮತ್ತು 189ನೇ ವಿಭಾಗದ ಮತ್ತು 219ಎ ಯಿಂದ 219ಜೆ ವರೆಗಿನ ವಿಭಾಗಗಳ ಉದ್ದೇಶಕ್ಕಾಗಿ "ತ್ಯಾಜ್ಯ ಸಂಸ್ಕರಣೆ" ಎಂದರೆ ಘನ ತ್ಯಾಜ್ಯಗಳು ಒಳಗೊಂಡ ತ್ಯಾಜ್ಯಗಳ ಬೇರ್ಪಡಿಸುವಿಕೆ, ಸಂಗ್ರಹಣೆ, ಸಾಗಣೆ, ಶೇಖರಣೆ, ಸಂಸ್ಕರಣೆ ಅಥವಾ ವಿಲೇವಾರಿ ಎಂದರ್ಥ.

ವಿವರಣೆ.—2. ಈ ಅಧಿನಿಯಮದಲ್ಲಿ ಉಪಯೋಗಿಸಿರುವಂತಹ ಆದರೆ ವ್ಯಾಖ್ಯಾನಿಸದಂತಹ, ಆದರೆ 1986ರ ಪರಿಸರ (ಸಂರಕ್ಷಣೆ) ಅಧಿನಿಯಮ (1986ರ 29ನೇ ಕೇಂದ್ರ ಅಧಿನಿಯಮ)ದಲ್ಲಿ ಮತ್ತು ಅದರ ಅಡಿಯಲ್ಲಿ ರಚಿಸಿರುವ ನಿಯಮಗಳಲ್ಲಿ ವ್ಯಾಖ್ಯಾನಿಸಿರುವ ಪದಗಳಿಗೆ ಮತ್ತು ಪ್ರಯೋಗಗಳಿಗೆ ಪ್ರಸ್ತುತ ಅಧಿನಿಯಮದಲ್ಲಿ ಮತ್ತು ನಿಯಮಗಳಲ್ಲಿ ಅದಕ್ಕೆ ಅನುಕ್ರಮವಾಗಿ ನೀಡಿರುವ ಅದೇ ಅರ್ಥಗಳು ಇರುವುದಾಗಿದೆ.".

5. 219ಎ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 219ಎ ವಿಭಾಗದ,—

(i) (2), (3) ಮತ್ತು (4) ಎಂಬೀ ಉಪ-ವಿಭಾಗಗಳ ಬದಲಾಗಿ ಈ ಕೆಳಗಿನ ಉಪ-ವಿಭಾಗಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(2) 219ನೇ ವಿಭಾಗದಲ್ಲಿ ಮತ್ತು 219ಎ ಯಿಂದ 219ಜೆ ವರೆಗಿನ ವಿಭಾಗಗಳಲ್ಲಿ ಉಪಬಂಧಿಸಿದ ಮತ್ತು ಈ ಅಧಿನಿಯಮದ ಅಡಿಯಲ್ಲಿನ ನಿಯಮಗಳಲ್ಲಿ ಮತ್ತು 1986ರ ಪರಿಸರ (ಸಂರಕ್ಷಣೆ) ಅಧಿನಿಯಮ (1986ರ 29ನೇ ಕೇಂದ್ರ ಅಧಿನಿಯಮ)ದಲ್ಲಿ ಮತ್ತು ಅದರ ಅಡಿಯಲ್ಲಿನ ನಿಯಮಗಳಲ್ಲಿ ಉಪಬಂಧಿಸಿರುವ ತ್ಯಾಜ್ಯ ಸಂಸ್ಕರಣೆಗೆ ಸಂಬಂಧಪಟ್ಟ ಗ್ರಾಮಪಂಚಾಯತಿನ ಎಲ್ಲಾ ಕರ್ತವ್ಯಗಳು, ಜವಾಬ್ದಾರಿಗಳು ಮತ್ತು ಪ್ರಕಾರ್ಯಗಳು ಗ್ರಾಮಪಂಚಾಯತಿನಲ್ಲಿ ನಿಹಿತವಾಗಿರುವುದು ಮತ್ತು ಗ್ರಾಮಪಂಚಾಯತ್ ಅದರ ಕರ್ತವ್ಯಗಳನ್ನು, ಜವಾಬ್ದಾರಿಗಳನ್ನು ಮತ್ತು ಪ್ರಕಾರ್ಯಗಳನ್ನು ಕಾರ್ಯದರ್ಶಿಯವರ ಮುಖಾಂತರ ನಿರ್ವಹಿಸತಕ್ಕದ್ದು.

(3) (2)ನೇ ಉಪ-ವಿಭಾಗ ಪ್ರಕಾರದ ಗ್ರಾಮಪಂಚಾಯತಿನ ಕರ್ತವ್ಯಗಳನ್ನು, ಜವಾಬ್ದಾರಿಗಳನ್ನು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸುವುದು ಕಾರ್ಯದರ್ಶಿಯವರ ಹೊಣೆಗಾರಿಕೆಯಾಗಿರುವುದಾಗಿದೆ ಮತ್ತು ಕಾರ್ಯದರ್ಶಿಯವರಿಗೆ, ಅದನ್ನು ಲಿಖಿತ ಆದೇಶದ ಮುಖೇನ ತ್ಯಾಜ್ಯಸಂಸ್ಕರಣೆ, ಸಾರ್ವಜನಿಕಾರೋಗ್ಯ, ನೈರ್ಮಲ್ಯ ಮತ್ತು ಎಂಜಿನಿಯರಿಂಗ್ ಎಂಬಿವುಗಳ ಹೊಣೆಗಾರಿಕೆಯಿರುವ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಅಥವಾ ಗ್ರಾಮಪಂಚಾಯತಿನ ಇತರ ಯಾವುದೇ ಅಧಿಕಾರಿಗಳಿಗೆ ಅಥವಾ ನೌಕರರಿಗೆ, ಬೀದಿಗಳ ಅಥವಾ ಪ್ರದೇಶಗಳ ಕೆಲಸದ ರೀತಿಯ ತಳಹದಿಯಲ್ಲಿ ವಹಿಸಿಕೊಡಬಹುದಾಗಿದೆ ಮತ್ತು ಅಂತಹ ಕರ್ತವ್ಯಗಳನ್ನು, ಜವಾಬ್ದಾರಿಗಳನ್ನು ಮತ್ತು ಪ್ರಕಾರ್ಯಗಳನ್ನು ಅವರಿಂದ ಸರಿಯಾಗಿ ನಿರ್ವಹಿಸಲ್ಪಡುವಂತೆ ಮಾಡಲ್ಪಡತಕ್ಕದ್ದಾಗಿದೆ.

This is a digitally signed Gazette.
Authenticity may be verified through https://compose.kerala.gov.in/

(4) ಪ್ರತಿಯೊಬ್ಬ ಚುನಾಯಿತ ಸದಸ್ಯನು, ತಾನು ಪ್ರತಿನಿಧಿಸುವ ಚುನಾವಣಾ ಕ್ಷೇತ್ರದ ಪ್ರದೇಶದಿಂದಿರುವ ಕಸಗಳು ಮತ್ತು ಇತರ ತ್ಯಾಜ್ಯಗಳನ್ನು ಸಂಗ್ರಹಿಸಿ ನೀಗಿಸುವ ಚಟುವಟಿಕೆಯನ್ನು ಸೂಕ್ಷ್ಮವಾಗಿ ವೀಕ್ಷಿಸತಕ್ಕದ್ದು ಮತ್ತು ಈ ವಿಷಯದಲ್ಲಿ ಉಂಟಾಗಿರುವ ಲೋಪ ಅಥವಾ ನಿರ್ಲಕ್ಷ್ಯವನ್ನು ಕಾರ್ಯದರ್ಶಿಯವರ ಗಮನಕ್ಕೆ ತರತಕ್ಕದ್ದು ಮತ್ತು ಆ ರೀತಿ ಗಮನಕ್ಕೆ ತಂದಲ್ಲಿ ಕಾರ್ಯದರ್ಶಿಯವರು ತುರ್ತಾಗಿ ಅಗತ್ಯವಾದ ಪರಿಹಾರ ಕ್ರಮಗಳನ್ನು ಕೈಗೊಳ್ಳತಕ್ಕದ್ದು.";

(ii) ಆ ರೀತಿ ಬದಲಾಗಿ ಸೇರಿಸಿದ ಉಪ-ವಿಭಾಗಗಳ ನಂತರ ಈ ಕೆಳಗಿನ ಉಪ-ವಿಭಾಗಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(5) (3)ನೇ ಉಪ-ವಿಭಾಗ ಪ್ರಕಾರ ತನ್ನಲ್ಲಿ ನಿಹಿತವಾಗಿರುವ ಜವಾಬ್ದಾರಿಯ ನಿರ್ವಹಣೆಯಲ್ಲಿ ಕಾರ್ಯದರ್ಶಿಯವರು ಲೋಪ ಉಂಟುಮಾಡಿ ಆ ಮೂಲಕ, ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಕಸಗಳು, ತ್ಯಾಜ್ಯಗಳು ರಾಶಿಬಿದ್ದು ಪರಿಸರ ಸಮಸ್ಯೆಗಳನ್ನು ಮತ್ತು ಮಾಲಿನ್ಯವನ್ನು ಉಂಟುಮಾಡುವುದಾದಲ್ಲಿ, ಗ್ರಾಮಪಂಚಾಯತ್ತಿಗೆ ಅಥವಾ ಸರಕಾರಕ್ಕೆ ಕಾರ್ಯದರ್ಶಿಯವರ ವಿರುದ್ಧ ಕರ್ತವ್ಯಲೋಪದ ಹೆಸರಿನಲ್ಲಿ ಶಿಕ್ಷಾಕ್ರಮಗಳನ್ನು ಕೈಗೊಳ್ಳಬಹುದಾಗಿದೆ.

(6) ಕಾರ್ಯದರ್ಶಿಯವರು, (1)ನೇ ಉಪ-ವಿಭಾಗದಲ್ಲಿ ಉಲ್ಲೇಖಿಸಿರುವ ಉಗ್ರಾಣಗಳು, ಸ್ಥಳಗಳು, ಸಂಗ್ರಹಣೆಗಳು, ಕಸದ ತೊಟ್ಟಿಗಳು, ವಾಹನಗಳು ಮತ್ತು ನೌಕೆಗಳು, ಪರಿಸರ ಸಮಸ್ಯೆಗಳಿಗೆ, ಮಾಲಿನ್ಯಕ್ಕೆ ಮತ್ತು ಸಾರ್ವಜನಿಕಾರೋಗ್ಯ ಸಮಸ್ಯೆಗಳಿಗೆ ಕಾರಣವಾಗಬಹುದಾದಂತಹ ಉಪದ್ರವಕಾರಿಗಳಾಗಿ ಪರಿಣಮಿಸುವುದನ್ನು ತಡೆಗಟ್ಟಲು, ಸಾಕಷ್ಟು ಏರ್ಪಾಟುಗಳನ್ನು ಮಾಡತಕ್ಕದ್ದು.

(7) ಗ್ರಾಮಪಂಚಾಯತ್ತಿಗೆ, ಸ್ವತಃ ಅಲ್ಲದಿದ್ದಲ್ಲಿ ಯಾವುದೇ ವ್ಯಕ್ತಿಯ ಮುಖಾಂತರವೋ ಏಜೆನ್ಸಿಯ ಮುಖಾಂತರವೋ ಕರಾರಿನ ತಳಹದಿಯಲ್ಲಿ ಅಥವಾ ಅಲ್ಲದೆ ಈ ಅಧಿನಿಯಮದಲ್ಲಿ ಅಥವಾ ಅದರ ಅಡಿಯಲ್ಲಿನ ನಿಯಮಗಳಲ್ಲಿ ಅಥವಾ 1986ರ ಪರಿಸರ (ಸಂರಕ್ಷಣೆ) ಅಧಿನಿಯಮ (1986ರ 29ನೇ ಕೇಂದ್ರ ಅಧಿನಿಯಮ)ದ ಅಥವಾ ಅದರ ಅಡಿಯಲ್ಲಿನ ನಿಯಮಗಳಲ್ಲಿ ಇರುವ ತ್ಯಾಜ್ಯ ಸಂಸ್ಕರಣೆ ಚಟುವಟಿಕೆಗಳನ್ನು ಸಂಪೂರ್ಣವಾಗಿ ಅಥವಾ ಭಾಗಶಃವಾಗಿ ಮಾಡುವುದಕ್ಕಿರುವ ವ್ಯವಸ್ಥೆಗಳನ್ನು ಏರ್ಪಡಿಸಬಹುದಾಗಿದೆ.

(8) ಈ ಅಧಿನಿಯಮದಲ್ಲಿ ಅಥವಾ ತತ್ಕಾಲ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಸರಕಾರಕ್ಕೆ, ಸಾರ್ವಜನಿಕ ಹಿತಾಸಕ್ತಿಗಾಗಿ, ಆ ರೀತಿ ಮಾಡುವುದು ಅಗತ್ಯವೆಂದು ಮನದಟ್ಟಾದಲ್ಲಿ, ಘನತ್ಯಾಜ್ಯಗಳು, ಕಸ ಮತ್ತು ಮಾಲಿನ್ಯಗಳು ಮತ್ತು ಆ ರೀತಿಯಲ್ಲಿನ ಇತರ ವಸ್ತುಗಳು ಮತ್ತು ಎರಡು ಅಥವಾ ಅದಕ್ಕಿಂತ ಹೆಚ್ಚು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಿಂದ ನೇರವಾಗಿ ಅಥವಾ ಸರಕಾರ ಅಧಿಕೃತಗೊಳಿಸಿದ ಏಜೆನ್ಸಿಯ ಮುಖೇನ ಸಂಗ್ರಹಿಸುವುದಕ್ಕೆ, ಸಾಗಿಸುವುದಕ್ಕೆ, ವಿಲೆವಾರಿ ಮಾಡುವುದಕ್ಕೆ ಮತ್ತು ಸಂಸ್ಕರಣೆ ಮಾಡುವುದಕ್ಕೆ ಕರಾರಿನ ತಳಹದಿಯಲ್ಲಿ ಅಥವಾ ಇತರ ರೀತಿಯಲ್ಲಿ ವ್ಯವಸ್ಥೆ ಮಾಡಬಹುದಾಗಿದೆ ಅಥವಾ ಘನತ್ಯಾಜ್ಯಗಳು, ಕಸ ಮತ್ತು ಮಾಲಿನ್ಯಗಳು ಮತ್ತು ಆ ರೀತಿಯ ಇತರ ವಸ್ತುಗಳನ್ನು ಸಂಗ್ರಹಿಸುವುದಕ್ಕೆ, ಸಾಗಿಸುವುದಕ್ಕೆ, ವಿಲೇವಾರಿ ಮಾಡುವುದಕ್ಕೆ ಮತ್ತು ಸಂಸ್ಕರಣೆ ಮಾಡುವುದಕ್ಕೆ ಗಣನೀಯವಾಗಿ ಖರ್ಚು ಬರುವ ಯಾವುದೇ ಯೋಜನೆಯನ್ನು ವಹಿಸಿಕೊಳ್ಳಬಹುದಾಗಿದೆ.

(9) ಈ ಅಧಿನಿಯಮದಲ್ಲಿ ಅಥವಾ ತತ್ಕಾಲ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, (8)ನೇ ಉಪ-ವಿಭಾಗದ ಉಪಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ಸರಕಾರಕ್ಕೆ, ಪ್ರಸ್ತುತ ಉಪ-ವಿಭಾಗದಲ್ಲಿ ನಿರ್ದಿಷ್ಟಪಡಿಸಿದ ಯೋಜನೆಯನ್ನು ಜಾರಿಗೊಳಿಸಲು ಉದ್ದೇಶಿಸಿರುವ ಮತ್ತು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಯ ಸ್ವಾಧೀನದಲ್ಲಿರುವ ಯಾವುದೇ ಭೂಮಿಯನ್ನು, ಅಧಿಕೃತ ಗಜೆಟಿನಲ್ಲಿ ಪ್ರಕಟಿಸುವ ಒಂದು ಅಧಿಸೂಚನೆಯ ಮೂಲಕ, ವಹಿಸಿಕೊಳ್ಳುವುದಕ್ಕೆ ಅಧಿಕಾರವಿರುವುದಾಗಿದೆ.".

6. 219ಎ ವಿಭಾಗದ ನಂತರ ಹೊಸ ವಿಭಾಗಗಳ ಸೇರ್ಪಡೆ.—ಪ್ರಧಾನ ಅಧಿನಿಯಮದ 219ಎ ವಿಭಾಗದ ನಂತರ, ಈ ಕೆಳಗಿನ ವಿಭಾಗಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"219ಎಎ. ಸರಕಾರದ ನಿರ್ದೇಶಗಳನ್ನು ಗ್ರಾಮಪಂಚಾಯತ್ ಜಾರಿಗೊಳಿಸತಕ್ಕದ್ದೆಂದು.—(1) ಈ ಅಧಿನಿಯಮದ ಅಡಿಯಲ್ಲಿ ಅಥವಾ 1986ರ ಪರಿಸರ (ಸಂರಕ್ಷಣೆ) ಅಧಿನಿಯಮ (1986ರ 29ನೇ ಕೇಂದ್ರ ಅಧಿನಿಯಮ)ದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳಲ್ಲಿ ಘನತ್ಯಾಜ್ಯ ಸಂಸ್ಕರಣೆಗೆ ಸಂಬಂಧಿಸಿ ಸರಕಾರವು ಜಾರಿಗೊಳಿಸುವ ನಿರ್ದೇಶಗಳನ್ನು ಜಾರಿಗೊಳಿಸಬೇಕಾದುದು ಗ್ರಾಮಪಂಚಾಯತಿನ ಜವಾಬ್ದಾರಿಯಾಗಿರುವುದು.

(2) (1)ನೇ ಉಪ-ವಿಭಾಗದಲ್ಲಿ ಉಲ್ಲೇಖಿಸಿರುವ ನಿರ್ದೇಶಗಳಿಗೆ ಸಂಬಂಧಿಸಿ ತಯಾರಿಸಿದ ಅಜೆಂಡಾವನ್ನು ಪಂಚಾಯತಿನ ನಿಕಟಾನಂತರದ ಸಭೆಯಲ್ಲಿ ಮಂಡಿಸಲಾಗುವುದೆಂದು ಅಧ್ಯಕ್ಷರು ಖಾತ್ರಿಪಡಿಸತಕ್ಕದ್ದು ಮತ್ತು ಅಂತಹ ಅಜೆಂಡಾದ ಮೇಲೆ ಗ್ರಾಮಪಂಚಾಯತ್ ನಿರ್ಧಾರ ಕೈಗೊಳ್ಳತಕ್ಕದ್ದಾಗಿದೆ.

This is a digitally signed Gazette.
Authenticity may be verified through https://compose.kerala.gov.in/

4

(3) (1)ನೇ ಉಪ-ವಿಭಾಗ ಪ್ರಕಾರವಿರುವ ಯಾವುದಾದರೂ ನಿರ್ದೇಶಗಳು ಲಭಿಸಿ ಆ ರೀತಿಯ ನಿರ್ದೇಶಗಳಿಗನುಸಾರವಾಗಿ, ಒಂದು ತಿಂಗಳಿನೊಳಗೆ ನಿರ್ಧಾರ ಕೈಗೊಳ್ಳುವುದರಲ್ಲಿ ಗ್ರಾಮಪಂಚಾಯತ್ ವಿಫಲವಾಗುವ ಸಂದರ್ಭಗಳಲ್ಲಿ ಅಂತಹ ನಿರ್ದೇಶಗಳನ್ನು ಜಾರಿಗೊಳಿಸುವುದಕ್ಕಿರುವ ಅನುಮತಿಯನ್ನು ಗ್ರಾಮಪಂಚಾಯತ್ ಅಂಗೀಕರಿಸಿರುವುದಾಗಿಯೋ ನೀಡಿರುವುದಾಗಿಯೋ ಭಾವಿಸತಕ್ಕದ್ದು.

(4) (3)ನೇ ಉಪ-ವಿಭಾಗ ಪ್ರಕಾರವಿರುವ ಅಂಗೀಕಾರ ನೀಡಿರುವುದಾಗಿ ಭಾವಿಸಲ್ಪಡುವುದು ಒಳಗೊಂಡು ಆ ರೀತಿಯ ನಿರ್ಧಾರಗಳನ್ನು ಜಾರಿಗೊಳಿಸುವುದಕ್ಕೆ ಕಾರ್ಯದರ್ಶಿಯವರು ತುರ್ತಾಗಿ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಆ ರೀತಿಯ ನಿರ್ಧಾರವನ್ನು ಜಾರಿಗೊಳಿಸುವುದರಲ್ಲಿ ಕಾರ್ಯದರ್ಶಿಯವರಿಗೋ ಬೇರೆ ಯಾವುದಾದರೂ ಜವಾಬ್ದಾರರಾದ ಅಧಿಕಾರಿಗೋ ವೈಫಲ್ಯ ಅಥವಾ ಲೋಪ ಉಂಟಾಗಿದ್ದಲ್ಲಿ ಅದನ್ನು ಕರ್ತವ್ಯ ಲೋಪವೆಂದು ಪರಿಗಣಿಸಿ ಕಾರ್ಯದರ್ಶಿಯವರ ಮೇಲೆ ಅಲ್ಲದಿದ್ದಲ್ಲಿ ಅಂತಹ ಅಧಿಕಾರಿಯ ಮೇಲೆ ಸರಕಾರಕ್ಕೆ ಶಿಸ್ತುಕ್ರಮವನ್ನು ಸ್ವೀಕರಿಸಬಹುದಾಗಿದೆ.

(5) (1)ನೇ ಉಪ-ವಿಭಾಗ ಪ್ರಕಾರವಿರುವ ಸರಕಾರದ ನಿರ್ದೇಶಗಳನ್ನು ಪಾಲಿಸುವುದರಲ್ಲಿ ಗ್ರಾಮಪಂಚಾಯತ್ ಲೋಪವುಂಟುಮಾಡಿದ್ದಲ್ಲಿ, ಗ್ರಾಮಪಂಚಾಯತಿನ ವಿರುದ್ಧವಾಗಿ ಕೈಗೊಳ್ಳಬಹುದಾದ ಇತರ ಕ್ರಮಗಳಿಗೆ ಭಂಗಬರದ ರೀತಿಯಲ್ಲಿ ಸರಕಾರಕ್ಕೆ ಅಂತಹ ಲೋಪಕ್ಕೆ ಗ್ರಾಮಪಂಚಾಯತಿನ ಮೇಲೆ ಜುಲ್ಮಾನೆಯನ್ನು ಹೊರಿಸಬಹುದಾಗಿದೆ:

ಆದರೆ, ಆ ರೀತಿಯಲ್ಲಿ ಜುಲ್ಮಾನೆಯನ್ನು ಹೊರಿಸುವುದಕ್ಕಿಂತ ಮೊದಲು ಗ್ರಾಮಪಂಚಾಯತಿಗೆ ಹೇಳಲಿರುವುದನ್ನು ಹೇಳಲು ಯುಕ್ತ ಅವಕಾಶವನ್ನು ನೀಡತಕ್ಕದ್ದಾಗಿದೆ.

219ಎಬಿ. ತ್ಯಾಜ್ಯ ಸಂಸ್ಕರಣೆಯಲ್ಲಿ ಕಾರ್ಯದರ್ಶಿಯವರ ಜವಾಬ್ದಾರಿಗಳು.—(1) 219ನೇ ವಿಭಾಗದ ಮತ್ತು 219ಎ ಯಿಂದ 219ವೈ ವರೆಗಿನ ವಿಭಾಗಗಳಲ್ಲಿನ ಉಪಬಂಧಗಳನ್ನು ಉಲಂಘಿಸುವ ಯಾವುದೇ ವ್ಯಕ್ತಿಯ ವಿರುದ್ಧವಾಗಿ ಕಾರ್ಯದರ್ಶಿಯವರಿಗೆ ಕಾನೂನು ಕ್ರಮಗಳನ್ನು ಆರಂಭಿಸಬಹುದಾಗಿದೆ ಆದರೆ ಈ ಅಧಿನಿಯಮಕ್ಕೆ ಅನುಸಾರವಾಗಿ ಅಥವಾ ಅದರ ಅಡಿಯಲ್ಲಿನ ನಿಯಮಗಳಿಗನುಸಾರವಾಗಿ ರಾಜಿ ಮಾಡಬಹುದಾದ ಅಪರಾಧಗಳನ್ನು ರಾಜಿಮಾಡಬಹುದಾಗಿದೆ.

(2) (1)ನೇ ಉಪ-ವಿಭಾಗ ಪ್ರಕಾರವಿರುವ ಮತ್ತು ತ್ಯಾಜ್ಯ ಸಂಸ್ಕರಣೆಗೆ ಸಂಬಂಧಿಸಿ 219ನೇ ವಿಭಾಗದ ಮತ್ತು 219ಎ ಯಿಂದ 219ವೈ ವರೆಗಿನ ವಿಭಾಗಗಳಲ್ಲಿನ ಅಥವಾ ತತ್ಕಾಲದಲ್ಲಿ ಪ್ರಾಬಲ್ಯದಲ್ಲಿರುವ ಬೇರೆ ಯಾವುದೇ ಕಾನೂನುಗಳಿಗನುಸಾರವಾದ ಜವಾಬ್ದಾರಿಗಳನ್ನು ದಕ್ಷವಾಗಿ ನಿರ್ವಹಿಸುವುದಕ್ಕಿರುವ ಎಲ್ಲಾ ಅಧಿಕಾರಗಳು ಕಾರ್ಯದರ್ಶಿಯವರಿಗೆ ಇರುವುದಾಗಿದೆ.

(3) ಕಾರ್ಯದರ್ಶಿಯವರಿಗೆ, ತುರ್ತುಸಂದರ್ಭಗಳಲ್ಲಿ, ಅಧ್ಯಕ್ಷರಿಗೆ ತಿಳಿಸಿದ ನಂತರ, ತ್ಯಾಜ್ಯ ಸಂಸ್ಕರಣೆಗೆ ಸಂಬಂಧಿಸಿ 219ನೇ ವಿಭಾಗದ ಮತ್ತು 219ಎ ಯಿಂದ 219 ವೈ ವರೆಗಿನ ವಿಭಾಗಗಳಲ್ಲಿನ ಅಥವಾ ತತ್ಕಾಲದಲ್ಲಿ ಪ್ರಾಬಲ್ಯದಲ್ಲಿರುವ ಬೇರೆ ಯಾವುದೇ ಕಾನೂನುಗಳಿಗನುಸಾರವಾಗಿ ತನ್ನಲ್ಲಿ ನಿಹಿತವಾದ ಜವಾಬ್ದಾರಿಗಳನ್ನು ನಿರ್ವಹಿಸಲು ಸಂಬಂಧಪಟ್ಟ ಪಂಚಾಯತ್ ಫಂಡಿನಿಂದ ಎರಡು ಲಕ್ಷಕ್ಕಿಂತ ಅಧಿಕವಲ್ಲದ ಮೊತ್ತವನ್ನು ಖರ್ಚುಮಾಡಬಹುದಾಗಿದೆ.

219ಎಸಿ. ಬೇರ್ಪಡಿಸಿದ ತ್ಯಾಜ್ಯವನ್ನು ಗ್ರಾಮಪಂಚಾಯತಿಗೆ ಅಥವಾ ಅಂಗೀಕೃತ ಏಜೆನ್ಸಿಗೆ ಹಸ್ತಾಂತರಿಸುವ ಜವಾಬ್ದಾರಿ.— (1) ಕಾರ್ಯದರ್ಶಿಯವರು ಸಾರ್ವಜನಿಕ ನೋಟೀಸು ಮೂಲಕ ನಿರ್ದೇಶಿಸಿದಂತೆ, ಬೇರ್ಪಡಿಸಿದ ತ್ಯಾಜ್ಯಗಳನ್ನು ಹಸ್ತಾಂತರಿಸುವುದಕ್ಕೆ ಅಥವಾ ನಿಶ್ಚಿತ ಸ್ಥಳದಲ್ಲಿ ನಿಕ್ಷೇಪಿಸುವುದಕ್ಕೆ ಅಥವಾ ಯೂಸರ್ ಫೀಸನ್ನು ಗ್ರಾಮಪಂಚಾಯತಿಗೆ ಅಥವಾ ಅಂಗೀಕೃತ ಏಜೆನ್ಸಿಗೆ ನೀಡುವುದಕ್ಕೆ ಎಲ್ಲಾ ಮನೆಗಳ ಹಾಗು ಯಾವುದೇ ಪ್ರದೇಶಗಳ ಹೋಟೆಲಿನ, ರೆಸ್ಟೋರೆಂಟ್‌ನ, ಕೈಗಾರಿಕೆಯ, ಆಸ್ಪತ್ರೆಯ ಅಥವಾ ಬೇರೆ ಯಾವುದಾದರೂ ಸಂಸ್ಥೆಯ ಮಾಲಿಕರಿಗೆ ಮತ್ತು ಅನುಭೋಗದಾರರಿಗೆ ಜವಾಬ್ದಾರಿಯಿರುವುದಾಗಿದೆ.

(2) (1)ನೇ ಉಪ-ವಿಭಾಗದ ಉಪಬಂಧಗಳನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿಯ ಮೇಲೆ, ಕಾರ್ಯದರ್ಶಿಯವರಿಗೆ ಸಾವಿರ ರೂಪಾಯಿಗಿಂತ ಕಡಿಮೆಯಲ್ಲದ ಮತ್ತು ಹತ್ತು ಸಾವಿರ ರೂಪಾಯಿಗಿಂತ ಅಧಿಕವಲ್ಲದ ಜುಲ್ಮಾನೆಯನ್ನು ಹೊರಿಸಬಹುದಾಗಿದೆ.

219ಎಡಿ. ಯೂಸರ್ ಫೀಸಿಗೆ ಸಂಬಂಧಿಸಿದ ಉಪಬಂಧಗಳು.—(1) ಪ್ರತಿಯೊಂದು ಗ್ರಾಮಪಂಚಾಯತ್ ತ್ಯಾಜ್ಯ ಬೇರ್ಪಡಿಸುವಿಕೆ, ಸಂಗ್ರಹಣೆ, ಸಾಗಣೆ, ಶೇಖರಣೆ, ಸಂಸ್ಕರಣೆ ಮತ್ತು ಅದರ ವಿಲೇವಾರಿ ಇತ್ಯಾದಿಗೆ ಸಂಬಂಧಿಸಿದ ಸೇವೆಗಳನ್ನು ನೀಡುವುದಕ್ಕೆ ಸಂಪೂರ್ಣವಾದ ಅಥವಾ ಭಾಗಶಃವಾದ ಖರ್ಚು ವಹಿಸುವುದಕ್ಕೆ ಪ್ರತಿಯೊಬ್ಬ ತ್ಯಾಜ್ಯ ಉತ್ಪಾದಕನೂ ನೀಡಬೇಕಾದ ಯೂಸರ್ ಫೀಸನ್ನು ನಿಶ್ಚಯಿಸತಕ್ಕದ್ದು ಮತ್ತು ಅದನ್ನು ನಿರ್ದಿಷ್ಟಪಡಿಸಿದ ರೀತಿಯಲ್ಲಿ ವಸೂಲು ಮಾಡತಕ್ಕದ್ದು:

ಆದರೆ, ಯೂಸರ್ ಫೀಸ್‌ಗೆ ಸರಕಾರವು ದರವನ್ನು ನಿಶ್ಚಯಿಸಿದ್ದಲ್ಲಿ, ಸರಕಾರವು ನಿಶ್ಚಯಿಸಿದ ದರಕ್ಕಿಂತ ಕಡಿಮೆ ದರವನ್ನು ಗ್ರಾಮಪಂಚಾಯತ್ ನಿಶ್ಚಯಿಸತಕ್ಕದ್ದಲ್ಲ.

This is a digitally signed Gazette.
Authenticity may be verified through https://compose.kerala.gov.in/

5

(2) ಪ್ರತಿಯೊಬ್ಬ ತ್ಯಾಜ್ಯ ಉತ್ಪಾದಕನೂ ಯೂಸರ್ ಫೀಸನ್ನು ಗ್ರಾಮಪಂಚಾಯತಿಗೆ ಅಲ್ಲದಿದ್ದಲ್ಲಿ ಯಾವುದಾದರೂ ಅಂಗೀಕೃತ ಏಜೆನ್ಸಿಗೆ ಪ್ರತಿ ತಿಂಗಳ ಕೊನೆಯ ದಿನಾಂಕಕ್ಕೆ ಮುಂಚಿತವಾಗಿ ಅಥವಾ ಗ್ರಾಮಪಂಚಾಯತ್ ತೀರ್ಮಾನಿಸಬಹುದಾದ ಅಂತಹ ಕಾಲಾವಧಿಯೊಳಗೆ ನೀಡತಕ್ಕದ್ದು.

(3) ಯಾವುದೇ ತ್ಯಾಜ್ಯ ಉತ್ಪಾದಕನು *(2)*ನೇ ಉಪ-ವಿಭಾಗ ಪ್ರಕಾರ ಉಪಬಂಧಿಸಿರುವ ಯೂಸರ್ ಫೀಸನ್ನು ಪಾವತಿಸಲು ವಿಫಲನಾದಲ್ಲಿ, ಅದನ್ನು ಪ್ರತಿ ತಿಂಗಳು ಐವತ್ತು ಶೇಕಡಾ ಜುಲ್ಮಾನೆಯೊಂದಿಗೆ ವಸೂಲು ಮಾಡತಕ್ಕದ್ದು:

ಆದರೆ, ನಿಶ್ಚಿತ ದಿನಾಂಕದಿಂದ ತೊಂಭತ್ತು ದಿನಗಳ ನಂತರವೂ ಯೂಸರ್ ಫೀಸನ್ನು ಪಾವತಿಸುವುದರಲ್ಲಿ ವಿಫಲನಾದಲ್ಲಿ ಮಾತ್ರ ಅಂತಹ ಜುಲ್ಮಾನೆಯನ್ನು ವಸೂಲು ಮಾಡತಕ್ಕದ್ದು.

(4) ಯೂಸರ್ ಫೀಸನ್ನು ಮತ್ತು ಜುಲ್ಮಾನೆಯನ್ನು *210*ನೇ ವಿಭಾಗದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಸಾರ್ವಜನಿಕ ತೆರಿಗೆ ಬಾಕಿ ಎಂಬಂತೆ ವಸೂಲು ಮಾಡತಕ್ಕದ್ದು.

(5) ಯೂಸರ್ ಫೀಸನ್ನು ಪಾವತಿಸಲು ನ್ಯೂನತೆಯೆಸಗುವ ವ್ಯಕ್ತಿಯ ವಿರುದ್ಧ ಕೈಗೊಳ್ಳಬಹುದಾದ ಇತರ ಯಾವುದೇ ಕ್ರಮಗಳಿಗೆ ಭಂಗಬರದಂತೆ ಯೂಸರ್ ಫೀಸನ್ನು ಪಾವತಿಸುವವರೆಗೆ ಆ ರೀತಿಯಲ್ಲಿ ನ್ಯೂನತೆಯೆಸಗುವ ವ್ಯಕ್ತಿಗೆ ಗ್ರಾಮಪಂಚಾಯತಿನಿಂದಿರುವ ಯಾವುದೇ ಸೇವೆಯನ್ನು ನೀಡಲು ಕಾರ್ಯದರ್ಶಿಯವರಿಗೆ ನಿರಾಕರಿಸಬಹುದಾಗಿದೆ.

(6) ಸರಕಾರಕ್ಕೆ ಅಥವಾ ಸರಕಾರವು ಕಾಲಾಕಾಲಗಳಲ್ಲಿ ಹೊರಡಿಸುವ ಮಾರ್ಗಸೂಚಿಗಳಿಗನುಸಾರವಾಗಿ ಗ್ರಾಮಪಂಚಾಯತಿಗೆ, ಯಾವುದೇ ತ್ಯಾಜ್ಯ ಉತ್ಪಾದಕನನ್ನು ಅಥವಾ ತ್ಯಾಜ್ಯ ಉತ್ಪಾದಕರ ವರ್ಗವನ್ನು ಅಲ್ಲದಿದ್ದಲ್ಲಿ ಜನವಾಸವಿಲ್ಲದ ಅಥವಾ ಖಾಲಿಯಾಗಿರುವ ಕಟ್ಟಡಗಳ ಮಾಲಿಕರನ್ನು ಅಥವಾ ಅನುಭೋಗದಾರರನ್ನು ಯೂಸರ್ ಫೀಸ್ ಪಾವತಿಸುವುದರಿಂದ ಸಂಪೂರ್ಣವಾಗಿ ಅಥವಾ ಭಾಗಶಃವಾಗಿ ಹೊರತುಪಡಿಸಬಹುದಾಗಿದೆ.".

7. 219ಬ ವಿಭಾಗದ ಬದಲಾಗಿ ಹೊಸ ವಿಭಾಗದ ಸೇರ್ಪಡೆ.—ಪ್ರಧಾನ ಅಧಿನಿಯಮದ 219ಬ ವಿಭಾಗದ ಬದಲಾಗಿ ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*219ಬ* ಘನತ್ಯಾಜ್ಯಗಳನ್ನು ಸಂಗ್ರಹಿಸುವುದಕ್ಕೆ ಮತ್ತು ನಿಕ್ಷೇಪಿಸುವುದಕ್ಕೆ ತ್ಯಾಜ್ಯ ಉತ್ಪಾದಕನಿಗಿರುವ ಜವಾಬ್ದಾರಿಗಳು.—*(1)* ಜೈವಿಕ ತ್ಯಾಜ್ಯಗಳು, ಅಜೈವಿಕ ತ್ಯಾಜ್ಯಗಳು ಮತ್ತು ಹಾನಿಕರವಾದ ಗೃಹ ತ್ಯಾಜ್ಯಗಳನ್ನು ಸಂಗ್ರಹಿಸುವುದಕ್ಕಾಗಿ ನಿಯಮಗಳಲ್ಲಿ ಅಥವಾ ಬೈಲಾಗಳಲ್ಲಿ ನಿಗದಿಪಡಿಸಿದ ಪ್ರಕಾರ ಅಲ್ಲದಿದ್ದಲ್ಲಿ ಕಾರ್ಯದರ್ಶಿಯವರು ನಿರ್ದಿಷ್ಟಪಡಿಸಿದಂತಹ ಗಾತ್ರದ ಮತ್ತು ಬಣ್ಣದಲ್ಲಿರುವ ಪ್ರತ್ಯೇಕ ಬಿನ್ನುಗಳನ್ನು ಅಥವಾ ಸಂಗ್ರಹಣೆಗಳನ್ನು ಸಜ್ಜುಗೊಳಿಸಬೇಕಾದುದು ಪ್ರತಿಯೊಬ್ಬ ತ್ಯಾಜ್ಯ ಉತ್ಪಾದಕನ ಕರ್ತವ್ಯವಾಗಿದೆ.

(2) ಅಂತಹ ಬಿನ್ನುಗಳನ್ನು ಅಲ್ಲದಿದ್ದಲ್ಲಿ ಸಂಗ್ರಹಣೆಗಳನ್ನು ಸದಾಕಾಲ ಸರಿಯಾದ ರೀತಿಯಲ್ಲಿ ಇಟ್ಟುಕೊಳ್ಳತಕ್ಕದ್ದು ಮತ್ತು ಕಾರ್ಯದರ್ಶಿಯವರು ಆಯಾಯ ಕಾಲದಲ್ಲಿ ಸಾರ್ವಜನಿಕ ನೋಟೀಸಿನಲ್ಲಿ ನಿರ್ದೇಶಿಸುವಷ್ಟು ಸಂಖ್ಯೆಯಲ್ಲಿ ಅಂತಹ ಸ್ಥಳಗಳಲ್ಲಿ ಸಜ್ಜುಗೊಳಿಸತಕ್ಕದ್ದು.

(3) ಗ್ರಾಮಪಂಚಾಯತ್ ನಿಯೋಜಿಸಿದಂತಹ ನೌಕರರಿಗೆ ಅಥವಾ ಗುತ್ತಿಗೆದಾರರಿಗೆ ಆ ರೀತಿಯ ತ್ಯಾಜ್ಯಗಳನ್ನು ಸುಲಭವಾಗಿ ಸಂಗ್ರಹಿಸಲು ಮತ್ತು ನೀಗಿಸಲು ಪ್ರತಿಯೊಬ್ಬ ತ್ಯಾಜ್ಯ ಉತ್ಪಾದಕನೂ ನಿಯಮಗಳಲ್ಲಿ ಹಾಗೂ ಬೈಲಾಗಳಲ್ಲಿ ನಿಗದಿಪಡಿಸಿದ ತ್ಯಾಜ್ಯಗಳನ್ನು ಬೇರ್ಪಡಿಸಿ ನಿಕ್ಷೇಪಿಸತಕ್ಕದ್ದು.

*(4) (3)*ನೇ ಉಪ-ವಿಭಾಗದ ಉಪಬಂಧಗಳನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿಯ ಮೇಲೆ, ಕಾರ್ಯದರ್ಶಿಯವರಿಗೆ ಸಾವಿರ ರೂಪಾಯಿಗಿಂತ ಕಡಿಮೆಯಲ್ಲದ ಮತ್ತು ಹತ್ತುಸಾವಿರ ರೂಪಾಯಿಗಿಂತ ಅಧಿಕವಲ್ಲದ ಜುಲ್ಮಾನೆಯನ್ನು ಹೊರಿಸಬಹುದಾಗಿದೆ.".

8. 219ಸಿ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 219ಸಿ ವಿಭಾಗದಲ್ಲಿ,—

(i) ಪಾರ್ಶ್ವ ಶೀರ್ಷಿಕೆಯ ಬದಲಾಗಿ ಈ ಕೆಳಗಿನ ಪಾರ್ಶ್ವ ಶೀರ್ಷಿಕೆಯನ್ನು ಸೇರಿಸತಕ್ಕದ್ದು, ಅದೇನೆಂದರೆ:—

"ತ್ಯಾಜ್ಯಗಳನ್ನು ನೀಗಿಸಲು ತ್ಯಾಜ್ಯ ಉತ್ಪಾದಕನೊಂದಿಗೆ ಅಥವಾ ಯಾವುದೇ ಆವರಣಗಳ ಮಾಲೀಕನೊಂದಿಗೆ ಅಥವಾ ನಿವಾಸಿಗನೊಂದಿಗೆ ಮಾಡಿದ ಒಪ್ಪಂದ";

(ii) ಅಸ್ತಿತ್ವದಲ್ಲಿರುವ ಉಪಬಂಧದಲ್ಲಿನ, "ಯಾವುದೇ ಆವರಣಗಳ ಮಾಲೀಕನೊಂದಿಗೆ ಅಥವಾ ನಿವಾಸಿಗನೊಂದಿಗೆ" ಎಂಬ ಪದಗಳಿಗೆ ಬದಲಾಗಿ "ತ್ಯಾಜ್ಯ ಉತ್ಪಾದಕನೊಂದಿಗೆ ಅಥವಾ ಯಾವುದೇ ಆವರಣಗಳ ಮಾಲೀಕನೊಂದಿಗೆ ಅಥವಾ ನಿವಾಸಿಗನೊಂದಿಗೆ" ಎಂಬ ಪದಗಳನ್ನು ಮತ್ತು "ಕಸ ಅಥವಾ ತ್ಯಾಜ್ಯವನ್ನು ನೀಗಿಸಲು" ಎಂಬ ಪದಗಳಿಗೆ ಬದಲಾಗಿ "ತ್ಯಾಜ್ಯಗಳನ್ನು ನೀಗಿಸಲು" ಎಂಬ ಪದಗಳನ್ನು ಸೇರಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

9. 219ಡಿ ವಿಭಾಗದ ಬದಲಾಗಿ ಹೊಸ ವಿಭಾಗದ ಸೇರ್ಪಡೆ.—ಪ್ರಧಾನ ಅಧಿನಿಯಮದ 219ಡಿ ವಿಭಾಗದ ಬದಲಾಗಿ ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*219ಡಿ. ಮನೆಬಾಗಿಲಿನ ತ್ಯಾಜ್ಯ ಸಂಗ್ರಹಣೆ.*—*(1)* ಪ್ರತಿಯೊಂದು ಗ್ರಾಮಪಂಚಾಯತ್, ಗ್ರಾಮಪಂಚಾಯತ್ ಪ್ರದೇಶದಲ್ಲಿರುವ ಪ್ರತಿ ಮನೆಗಳಿಂದಲೂ, ಜನವಾಸ ಕೇಂದ್ರಗಳಿಂದಲೂ, ವಾಣಿಜ್ಯ ಸಂಸ್ಥೆಗಳಿಂದಲೂ, ಇತರ ವಸತಿರಹಿತ ಪ್ರದೇಶಗಳಿಂದಲೂ ಮತ್ತು ಬಹುಅಂತಸ್ತು ಕಟ್ಟಡಗಳು, ವಾಣಿಜ್ಯ ಸಮುಚ್ಛಯಗಳು, ಮಳಿಗೆಗಳು, ಗೃಹ ಸಮುಚ್ಛಯಗಳು ಎಂಬಿವುಗಳ ವಿಷಯದಲ್ಲಿ ಪ್ರವೇಶ ದ್ವಾರದಿಂದಲೋ ಅಥವಾ ಕಾರ್ಯದರ್ಶಿಯವರು ಸಾರ್ವಜನಿಕ ನೋಟೀಸಿನಲ್ಲಿ ನಿರ್ದೇಶಿಸಿದ ಬೇರೆ ಯಾವುದಾದರೂ ಸ್ಥಳಗಳಿಂದಲೋ ಬೇರ್ಪಡಿಸಿದ ತ್ಯಾಜ್ಯಗಳನ್ನು ಮನೆ ಬಾಗಿಲಿನಿಂದ ಸಂಗ್ರಹಿಸುವುದಕ್ಕಿರುವ ವ್ಯವಸ್ಥೆಗಳನ್ನು ಏರ್ಪಡಿಸತಕ್ಕದ್ದು.

*(2) (1)*ನೇ ಉಪ-ವಿಭಾಗದ ಪ್ರಕಾರ ಸಂಗ್ರಹಿಸಿದ ಬೇರ್ಪಡಿಸಿದ ತ್ಯಾಜ್ಯಗಳನ್ನು ಸರಿಯಾಗಿ ಮುಚ್ಚಿಡದೆ ಸಂಸ್ಕರಣೆಗೋ ವಿಲೇವಾರಿಗೋ ಬೇಕಾಗಿ ಕೊಂಡುಹೋಗುವುದೋ ತಲುಪಿಸುವುದೋ ಮಾಡತಕ್ಕದ್ದಲ್ಲ.";

10. 219ಎಫ್ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 219ಎಫ್ ವಿಭಾಗದಲ್ಲಿ,—

*(i) (1)*ನೇ ಉಪ-ವಿಭಾಗದ ಬದಲಾಗಿ ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*(1)* ಘನ, ದ್ರವ, ಮಲಿನ ಜಲ ಅಲ್ಲದಿದ್ದರೆ ಫೀಕಲ್ ಸ್ಲಡ್ಜ್ ಸಂಸ್ಕರಣೆ ಪ್ಲ್ಯಾಂಟ್ ಇಲ್ಲದ ಮತ್ತು ಗ್ರಾಮಪಂಚಾಯತ್ ಪ್ರದೇಶದೊಳಗೆ ಅಥವಾ ಹೊರಗೆ ಖಾಲಿಯಾದ ಭೂಮಿ ಸ್ವಾಧೀನದಲ್ಲಿರುವ ಗ್ರಾಮಪಂಚಾಯತ್, ಅಂತಹ ಪ್ಲಾಂಟುಗಳನ್ನೋ ಸೌಕರ್ಯಗಳನ್ನೋ ಪ್ರಸ್ತುತ ಭೂಮಿಯಲ್ಲಿ ಸ್ಥಾಪಿಸುವುದಕ್ಕಿರುವ ಯೋಜನೆಗಳಿಗೆ ಅದ್ಯತೆ ನೀಡಿ ವಹಿಸಿಕೊಳ್ಳತಕ್ಕದ್ದಾಗಿದೆ.".

(ii) ಆ ರೀತಿಯಲ್ಲಿ ಬದಲಾಗಿ ಸೇರ್ಪಡೆಗೊಳಿಸಿದ *(1)*ನೇ ಉಪ-ವಿಭಾಗದ ನಂತರ, ಈ ಕೆಳಗಿನ ಉಪ-ವಿಭಾಗಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*(1ಎ)* ಪ್ರತಿಯೊಂದು ಗ್ರಾಮಪಂಚಾಯತ್ ತ್ಯಾಜ್ಯ ಸಂಸ್ಕರಣೆಗಾಗಿ ಗ್ರಾಮಪಂಚಾಯತ್ ಪ್ರದೇಶದೊಳಗೆಯೋ ಹೊರಗೆಯೋ ಯೋಗ್ಯವಾದ ಖಾಸಗಿ ಸ್ಥಳವನ್ನು ಕಂಡುಹಿಡಿಯತಕ್ಕದ್ದು ಮತ್ತು ಅಗತ್ಯವಿದ್ದಲ್ಲಿ *2013*ರ ದಿ ರೈಟ್ ಟು ಫೇರ್ ಕೋಂಪನ್ಸೇಷನ್ ಆಂಡ್ ಟ್ರಾನ್ಸ್‌ಪರೆನ್ಸಿ ಇನ್ ಲ್ಯಾಂಡ್ ಅಕ್ವಿಸಿಷನ್, ರೀಹಾಬಿಲಿಟೇಷನ್ ಆಂಡ್ ರೀಸೆಟ್ಲ್‌ಮೆಂಟ್ ಆಕ್ಟ್ *(2013*ರ *30*ನೇ ಕೇಂದ್ರ ಅಧಿನಿಯಮ*)* ಪ್ರಕಾರವೋ, ಭೂಮಿ ಬಿಟ್ಟುಕೊಡುವಿಕೆ ಪ್ರಕಾರವೋ, ಗುತ್ತಿಗೆ ಮೂಲಕವೋ, ಖಾಸಗಿ ಖರೀದಿಯ ಮೂಲಕವೋ ಸ್ಥಳವನ್ನು ಆರ್ಜಿಸತಕ್ಕದ್ದು.

(1ಬಿ) (1ಎ) ಉಪ-ವಿಭಾಗ ಪ್ರಕಾರ ಗ್ರಾಮಪಂಚಾಯತ್ ಆರ್ಜಿಸುವ ಭೂಮಿಯನ್ನು ಸರಕಾರದ ಪೂರ್ವಾನುಮತಿಯಿಲ್ಲದೆ ಬೇರೆ ಯಾವುದೇ ಅಗತ್ಯಗಳಿಗೆ ಉಪಯೋಗಿಸತಕ್ಕದ್ದಲ್ಲ.

(1ಸಿ) ತ್ಯಾಜ್ಯ ಸಂಸ್ಕರಣೆ ಚಟುವಟಿಕೆಗಳಿಗಾಗಿ ಖಾಲಿಯಾದ ಸ್ವಂತ ಭೂಮಿ ಅಥವಾ ತಮ್ಮಲ್ಲಿ ನಿಹಿತವಾದ ಭೂಮಿಯು ಲಭ್ಯವಿದ್ದಲ್ಲಿ ಅದನ್ನು ವಿನಿಯೋಗಿಸಲು ಪ್ರತಿಯೊಂದು ಗ್ರಾಮಪಂಚಾಯತ್ ಅದ್ಯತೆ ನೀಡತಕ್ಕದ್ದು.

(1ಡಿ) ತ್ಯಾಜ್ಯ ಸಂಸ್ಕರಣೆ ಚಟುವಟಿಕೆಗಳಿಗಾಗಿ ಮೊದಲು ಉಪಯೋಗಿಸಿದ್ದ ಆದರೆ ಈಗ ವಿವಿಧ ಕಾರಣಗಳಿಂದ ಉಪಯೋಗಿಸದ ಭೂಮಿಯಲ್ಲಿ, ತ್ಯಾಜ್ಯ ಸಂಸ್ಕರಣೆ ಚಟುವಟಿಕೆಗಳನ್ನು ಪುನರಾರಂಭಿಸಲು ಸಾಧ್ಯವಾದ ಎಲ್ಲಾ ಕ್ರಮಗಳನ್ನು ಗ್ರಾಮಪಂಚಾಯತ್ ಕೈಗೊಳ್ಳತಕ್ಕದ್ದು:

ಆದರೆ, ಸರಕಾರದ ಪೂರ್ವಾನುಮತಿಯಿಲ್ಲದೆ ಪ್ರಸ್ತುತ ಭೂಮಿಯನ್ನು ಬೇರೆ ಯಾವುದೇ ಅಗತ್ಯಕ್ಕೆ ಮೀಸಲಿಡುವುದೋ ಉಪಯೋಗಿಸುವುದೋ ಮಾಡತಕ್ಕದ್ದಲ್ಲ.";

*(iii) (2)*ನೇ ಉಪ-ವಿಭಾಗದಲ್ಲಿ "*(1)*ನೇ ಉಪ-ವಿಭಾಗದ ಪ್ರಕಾರ ಸ್ಥಳವನ್ನು ಅಧಿಸೂಚಿಸುವಾಗ" ಎಂಬ ಪದಗಳ, ಅಂಕೆಯ, ಚಿಹ್ನೆಯ ಮತ್ತು ಆವರಣದ ಬದಲಾಗಿ, "*(1ಎ)* ಉಪ-ವಿಭಾಗದ ಪ್ರಕಾರ ಭೂಮಿಯನ್ನು ಕಂಡುಹಿಡಿಯುವಾಗ" ಎಂಬ ಪದಗಳನ್ನು, ಅಂಕೆಯನ್ನು, ಅಕ್ಷರವನ್ನು ಮತ್ತು ಆವರಣವನ್ನು ಸೇರಿಸತಕ್ಕದ್ದು.

11. 219ಎಫ್ ವಿಭಾಗದ ನಂತರ ಹೊಸ ವಿಭಾಗಗಳ ಸೇರ್ಪಡೆ.—ಪ್ರಧಾನ ಅಧಿನಿಯಮದ 219ಎಫ್ ವಿಭಾಗದ ನಂತರ ಈ ಕೆಳಗಿನ ವಿಭಾಗಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*219ಎಫ್ಎ. ಸಂಯುಕ್ತ ತ್ಯಾಜ್ಯ ಸಂಸ್ಕರಣೆ ಯೋಜನೆಗಳ ಸ್ಥಾಪನೆ.*—ಗ್ರಾಮಪಂಚಾಯತಿಗೆ, ಅದು ಆ ರೀತಿ ತೀರ್ಮಾನಿಸುವುದು ಅಲ್ಲದಿದ್ದರೆ ಸರಕಾರವು ಆ ರೀತಿ ಅವಶ್ಯಪಡುವುದಾದಲ್ಲಿ, ಇತರ ಯಾವುದೇ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳೊಂದಿಗೆ ಸೇರಿಕೊಂಡು, ಅಂತಹ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳು ಅಂಗೀಕರಿಸಿದಂತಹ ಷರತ್ತುಗಳಿಗೆ ಮತ್ತು ನಿಬಂಧನೆಗಳಿಗನುಸರಿಸಿ ಇದಕ್ಕಾಗಿ ಸರಕಾರವು ಹೊರಡಿಸಬಹುದಾದ ಮಾರ್ಗನಿರ್ದೇಶಗಳಿಗೆ ವಿಧೇಯವಾಗಿ ಸಂಯುಕ್ತ ತ್ಯಾಜ್ಯ ಸಂಸ್ಕರಣೆ ಯೋಜನೆಗಳನ್ನು ಸ್ಥಾಪಿಸಬಹುದಾಗಿದೆ.

This is a digitally signed Gazette.
Authenticity may be verified through https://compose.kerala.gov.in/

7

219ಎಫ್‌ಬಿ. ಗ್ರಾಮಪಂಚಾಯತ್ ನಿರಂತರವಾಗಿ ತಪಾಸಣೆ ಮತ್ತು ಮೇಲ್ವಿಚಾರಣೆಗೆ ಏರ್ಪಾಟು ಮಾಡತಕ್ಕದ್ದು.—ಗ್ರಾಮಪಂಚಾಯತಿನ ತ್ಯಾಜ್ಯ ಸಂಸ್ಕರಣೆ ಚಟುವಟಿಕೆಗಳು ಮತ್ತು ಯೋಜನೆಗಳು ಅಗತ್ಯವಿರುವ ಮಾನದಂಡಗಳನ್ನು ಪಾಲಿಸುತಾ ಹಾಗೂ ಅಸ್ತಿತ್ವದಲ್ಲಿರುವ ಕಾನೂನುಗಳಿಗನುಸಾರವಾಗಿ ಆಗಿದೆ ಕಾರ್ಯಾಚರಿಸುತ್ತಿರುವುದೆಂದು ಮತ್ತು ಕಾರ್ಯಗತಗೊಳ್ಳುವುದೆಂದು ದೃಢಪಡಿಸುವುದಕ್ಕಾಗಿ ನಿರಂತರವಾದ ತಪಾಸಣೆ ಹಾಗೂ ಮೇಲ್ವಿಚಾರಣೆಗೆ ಅವಶ್ಯಕವಾದ ವ್ಯವಸ್ಥೆಗಳನ್ನು ಏರ್ಪಡಿಸಬೇಕಾದುದು ಗ್ರಾಮಪಂಚಾಯತಿನ ಜವಾಬ್ದಾರಿಯಾಗಿದೆ.

219ಎಫ್‌ಸಿ. ವ್ಯಕ್ತಿಗಳ ಜವಾಬ್ದಾರಿಗಳು ಮತ್ತು ಅಪರಾಧಗಳ ಕುರಿತು ವರದಿ ಮಾಡುವುದಕ್ಕಿರುವ ಪಾರಿತೋಷಕಗಳು.—*(1)* 219ನೇ ವಿಭಾಗದ ಮತ್ತು 219ಎ ಯಿಂದ 219ವೈ ವರೆಗಿನ ವಿಭಾಗಗಳಲ್ಲಿನ ಉಪಬಂಧಗಳ ಯಾವುದೇ ಉಲ್ಲಂಘನೆ ಅಥವಾ ಸಾರ್ವಜನಿಕ ಸ್ಥಳಗಳಲ್ಲಿಯೂ, ಜಲಾಶಯಗಳಲ್ಲಿಯೂ ತ್ಯಾಜ್ಯವನ್ನು ಎಸೆಯುವುದು, ಹಾಕುವುದು ಅಥವಾ ರಾಶಿಹಾಕುವುದು ಮುಂತಾದವುಗಳನ್ನು ಒಳಗೊಂಡ ತ್ಯಾಜ್ಯ ಸಂಸ್ಕರಣೆಗೆ ಸಂಬಂಧಿಸಿದ ಯಾವುದಾದರೂ ಅಪರಾಧಕ್ಕೆ ಸಂಬಂಧಿಸಿ ಮಾಹಿತಿಗಳನ್ನು ಯಾವುದೆ ವ್ಯಕ್ತಿಗೆ ಕಾರ್ಯದರ್ಶಿಯವರ ಸಮಕ್ಷದಲ್ಲಿ ವರದಿ ಮಾಡಬಹುದಾಗಿದೆ.

(2) ಗ್ರಾಮಪಂಚಾಯತಿಗೆ, ಸರಕಾರವು ಕಾಲಾಕಾಲಗಳಲ್ಲಿ ಹೊರಡಿಸುವ ಮಾರ್ಗನಿರ್ದೇಶಗಳಿಗೆ ವಿಧೇಯವಾಗಿ, *(1)*ನೇ ಉಪ-ವಿಭಾಗ ಪ್ರಕಾರದ ಉಲ್ಲಂಘನೆಗಳನ್ನು ಮತ್ತು ಅಪರಾಧಗಳನ್ನು ವರದಿಮಾಡುವ ಜನರಿಗೆ ಪಾರಿತೋಷಕ ನೀಡಬಹುದಾಗಿದೆ.

(3) ಇತರರಿಗೆ ದ್ರೋಹ ಅಥವಾ ನಷ್ಟವುಂಟಾಗುವ ರೀತಿಯಲ್ಲಿ ದುರುದ್ದೇಶದಿಂದ ಅಥವಾ ಉದ್ದೇಶಪೂರ್ವಕವಾಗಿ *(1)*ನೇ ಉಪ-ವಿಭಾಗದ ಪ್ರಕಾರ ತಪ್ಪಾದ ಒಂದು ಮಾಹಿತಿ ನೀಡುವ ಯಾವುದೇ ವ್ಯಕ್ತಿಯನ್ನು, ಅಪರಾಧ ನಿರ್ಣಯತಿಯ ಮೇಲೆ, ಹತ್ತು ಸಾವಿರ ರೂಪಾಯಿಯವರೆಗಿನ ಜುಲ್ಮಾನೆ ವಿಧಿಸಿ ಶಿಕ್ಷಿಸತಕ್ಕದ್ದು.

219ಎಫ್‌ಡಿ. ತ್ಯಾಜ್ಯ ಸಂಸ್ಕರಣೆ ಕೇಂದ್ರಗಳ ಸಮೀಪವಿರುವ ನಿವಾಸಿಗರಿಗೆ ಉಪಯುಕ್ತವಾದ ಉಪಬಂಧಗಳು.—*(1)* ಗ್ರಾಮಪಂಚಾಯತಿಗೆ, ಸರಕಾರವು ರಚಿಸುವ ನಿಯಮಗಳಿಗೆ ಅಥವಾ ಹೊರಡಿಸುವ ಮಾರ್ಗನಿರ್ದೇಶಗಳಿಗೆ ವಿಧೇಯವಾಗಿ, ಕೇಂದ್ರೀಕೃತ ತ್ಯಾಜ್ಯಸಂಸ್ಕರಣೆ ಕೇಂದ್ರಗಳು ಅಥವಾ ವಿಲೇವಾರಿ ಸ್ಥಳಗಳು ಮುಂತಾದವುಗಳ ಸಮೀಪ ವಾಸಿಸುವವರಿಗೆ ತೆರಿಗೆ ವಿನಾಯಿತಿ, ರಿಯಾಯಿತಿ ಅಥವಾ ಕಲ್ಯಾಣ ಯೋಜನೆಗಳನ್ನು ಒಳಗೊಂಡವುಗಳಲ್ಲಿ ಮಾತ್ರ ಸೀಮಿತವಾಗಿರಿಸದೆ ಇತರ ಪ್ರೋತ್ಸಾಹಗಳನ್ನು ನೀಡಬಹುದಾಗಿದೆ.

(2) ಗ್ರಾಮಪಂಚಾಯತಿಗೆ, ಕೇಂದೀಕೃತ ತ್ಯಾಜ್ಯ ಸಂಸ್ಕರಣೆ ಕೇಂದ್ರಗಳು ಅಥವಾ ವಿಲೇವಾರಿ ಸ್ಥಳಗಳ ಸಮೀಪ ವಾಸಿಸುವವರ ಕಲ್ಯಾಣಕ್ಕೆ ಮತ್ತು ಮನರಂಜನೆಗಾಗಿ ಪಾರ್ಕುಗಳು, ಆಟದ ಮೈದಾನಗಳು, ರೀಸೈಕ್ಲಿಂಗ್ ಸೌಕರ್ಯಗಳು, ಸ್ವಾಪ್‌ಶೋಪ್‌ಗಳು, ದೈಹಿಕ ತರಬೇತಿ ಸೌಕರ್ಯಗಳು ಮುಂತಾದ ಉಪಯುಕ್ತ ಮತ್ತು ಪ್ರಯೋಜನಕಾರಿ ವ್ಯವಸ್ಥೆಗಳನ್ನು ಏರ್ಪಡಿಸಬಹುದಾಗಿದೆ.".

12. 219 ಐ ವಿಭಾಗದ ಬದಲಾಗಿ ಹೊಸ ವಿಭಾಗದ ಸೇರ್ಪಡೆ.—ಪ್ರಧಾನ ಅಧಿನಿಯಮದ 219ಐ ವಿಭಾಗದ ಬದಲಾಗಿ, ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*219ಐ. ಅಂಗಡಿಗಳ ಮತ್ತು ವಾಣಿಜ್ಯ ಸಂಸ್ಥೆಗಳ ಪರಿಸರವನ್ನು ಶುಚಿಯಾಗಿರಿಸುವುದಕ್ಕಿರುವ ಜವಾಬ್ದಾರಿ.*—*(1)* ಪ್ರತಿಯೊಂದು ಅಂಗಡಿಯ ಮತ್ತು ವಾಣಿಜ್ಯ ಸಂಸ್ಥೆಯ ಪರಿಸರವನ್ನು ಶುಚಿಯಾಗಿರಿಸತಕ್ಕದ್ದು ಹಾಗೂ ಅದರ ಪರಿಸರದಲ್ಲಿ ತ್ಯಾಜ್ಯ ಎಸೆಯುವುದು, ರಾಶಿಹಾಕುವುದು ಮತ್ತು ಉರಿಸುವುದನ್ನು ಮಾಡದಿರುವುದು ಅಲ್ಲದಿದ್ದಲ್ಲಿ ಅದರ ಪರಿಸರದಲ್ಲಿ ಯಾವುದೇ ತ್ಯಾಜ್ಯವನ್ನು ಎಸೆಯಲೋ, ತ್ಯಾಜ್ಯವನ್ನು ರಾಶಿ ಹಾಕಲೋ, ಉರಿಸಲೋ ಗ್ರಾಹಕರಿಗೆ ಅನುಮತಿ ನೀಡದಿರುವುದು ಮಾಲೀಕರ ಮತ್ತು ಅನುಭೋಗದಾರರ ಜವಾಬ್ದಾರಿಯಾಗಿದೆ.

(2) *(1)*ನೇ ಉಪ-ವಿಭಾಗದ ಉಪಬಂಧಗಳನ್ನು ಯಾವುದೇ ವ್ಯಕ್ತಿಯು ಉಲ್ಲಂಘಿಸಿರುವನೆಂದು ಮನದಟ್ಟಾದಲ್ಲಿ, ಪ್ರಸ್ತುತ ಉಲ್ಲಂಘನೆಯ ಪ್ರಮಾಣ ಅಥವಾ ಗಂಭೀರ ಸ್ವರೂಪಕ್ಕೆ ಅನುಗುಣವಾಗಿ ಕಾರ್ಯದರ್ಶಿಯವರಿಗೆ ಅಥವಾ ಕಾರ್ಯದರ್ಶಿಯವರು ವಿಶೇಷವಾಗಿ ನಿಯೋಜಿಸಿದ ಅಧಿಕಾರಿಗೆ ಅಂತಹ ವ್ಯಕ್ತಿಯ ಮೇಲೆ ಐದು ಸಾವಿರ ರೂಪಾಯಿವರೆಗಿನ ಜುಲ್ಮಾನೆಯನ್ನು ಹೊರಿಸಬಹುದಾಗಿದೆ.

(3) *(2)*ನೇ ಉಪ-ವಿಭಾಗದ ಪ್ರಕಾರ ಹೊರಿಸಲ್ಪಟ್ಟ ಜುಲ್ಮಾನೆಯನ್ನು, ಪ್ರಸ್ತುತ ಜುಲ್ಮಾನೆಯನ್ನು ಹೊರಿಸಿದ ದಿನಾಂಕದಿಂದ ಹದಿನೈದು ದಿನದೊಳಗೆ ಪಾವತಿಸತಕ್ಕದ್ದು ಮತ್ತು ಆ ರೀತಿ ಪಾವತಿಸಲು ಲೋಪ ಉಂಟುಮಾಡುವುದಾದಲ್ಲಿ, ಕಾರ್ಯದರ್ಶಿಯವರು, ಆತನ ವಿರುದ್ಧ ಕೈಗೊಳ್ಳಬಹುದಾದ ಇತರ ಕ್ರಮಗಳಿಗೆ ಭಂಗವುಂಟಾಗದಂತೆ, ಕಾನೂನು ಕ್ರಮಗಳನ್ನು ಆರಂಭಿಸತಕ್ಕದ್ದಾಗಿದೆ.

ವಿವರಣೆ.—ಈ ವಿಭಾಗದ ಅಗತ್ಯಕ್ಕಾಗಿ, 'ಅಂಗಡಿಗಳು', 'ವಾಣಿಜ್ಯ ಸಂಸ್ಥೆ' ಎಂಬೀ ಪದಗಳಿಗೆ ಅನುಕ್ರಮವಾಗಿ *1960*ರ ಕೇರಳ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳು ಅಧಿನಿಯಮ *(1960*ರ *34)*ದಲ್ಲಿ ಅದಕ್ಕೆ ನೀಡಿರುವ ಅದೇ ಅರ್ಥಗಳು ಇರುವುದಾಗಿದೆ.".

13. 219 ಕೆ ವಿಭಾಗದ ಬದಲಾಗಿ ಹೊಸ ವಿಭಾಗದ ಸೇರ್ಪಡೆ.—ಪ್ರಧಾನ ಅಧಿನಿಯಮದ 219ಕೆ ವಿಭಾಗದ ಬದಲಾಗಿ ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

This is a digitally signed Gazette.
Authenticity may be verified through https://compose.kerala.gov.in/

"219ಕೆ. ಉಪಯೋಗಿಸಿದ ನೀರನ್ನು ಸಾರ್ವಜನಿಕ ಸ್ಥಳಗಳಿಗೋ ಜಲಾಶಯಗಳಿಗೋ ಹರಿಸುವುದನ್ನು ತಡೆಯುವಿಕೆ.—(1) ಯಾವುದೇ ವ್ಯಕ್ತಿಯೂ ಯಾವುದಾದರೂ ಸಿಂಕ್, ಚರಂಡಿ, ಹಟ್ಟಿ, ಹೋಟೆಲ್, ರೆಸ್ಟೋರೆಂಟ್, ಮನೆ, ಕೈಗಾರಿಕಾ ಸಂಸ್ಥೆ, ಆಸ್ಪತ್ರೆ ಅಲ್ಲದಿದ್ದಲ್ಲಿ ಇತರ ಸಂಸ್ಥೆಗಳು ಇತ್ಯಾದಿಗಳಿಂದಿರುವ ಹೊಲಸು ನೀರು, ಸಾರ್ವಜನಿಕ ಚರಂಡಿ, ರಸ್ತೆ, ಬೀದಿ, ಸಾರ್ವಜನಿಕ ಸ್ಥಳ, ಜಲಾಶಯ ಅಲ್ಲದಿದ್ದಲ್ಲಿ ಜಲಮಾರ್ಗಗಳಿಗೆ ಹರಿಸುವುದು ಹಾಗೂ ಹರಿಯಲು ಅನುಮತಿಸುವುದು ಅಲ್ಲದಿದ್ದಲ್ಲಿ ಅಂತಹ ಪರಿಸರಗಳಿಂದ ಆ ರೀತಿಯಲ್ಲಿ ಉಪಯೋಗಿಸಿದ ನೀರನ್ನು ಹರಿಸಲು ಅನುಮತಿಸುವುದು ಅಥವಾ ಅದಕ್ಕೆ ಕಾರಣವಾಗುವುದು ಮಾಡತಕ್ಕದ್ದಲ್ಲ.

(2) (1)ನೇ ಉಪ-ವಿಭಾಗದ ಉಪಬಂಧಗಳನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿಯ ಮೇಲೆ ಕಾರ್ಯದರ್ಶಿಯವರಿಗೆ ಐದು ಸಾವಿರಕ್ಕಿಂತ ಕಡಿಮೆಯಲ್ಲದ ಆದರೆ ಐವತ್ತು ಸಾವಿರ ರೂಪಾಯಿಗಿಂತ ಅಧಿಕವಲ್ಲದ ಜುಲ್ಮಾನೆಯನ್ನು ಹೊರಿಸಬಹುದಾಗಿದೆ.

(3) ಕಾರ್ಯದರ್ಶಿಯವರಿಗೆ, ಯಾವುದಾದರೂ ಸಾರ್ವಜನಿಕ ರಸ್ತೆಗೋ, ಚರಂಡಿಗೋ, ಬೀದಿಗೋ ಅಲ್ಲದಿದ್ದಲ್ಲಿ ಬೇರೆ ಯಾವುದಾದರೂ ಸಾರ್ವಜನಿಕ ಸ್ಥಳಗಳಿಗೋ ಅಥವಾ ಜಲಾಶಯಗಳಿಗೋ ಹೊಲಸು ನೀರನ್ನು ಹರಿದು ಬಿಡುವ ಯಾವುದೇ ಪೈಪ್, ಟ್ಯೂಬ್ ಅಥವಾ ಬೇರೆ ಯಾವುದೇ ಮಾರ್ಗವನ್ನು ಮುಚ್ಚಲು, ಬಂದು ಮಾಡಲು ಅಥವಾ ನೀಗಿಸಲು ನೋಟೀಸು ಮುಖೇನ ಅಂತಹ ಪರಿಸರದ ಮಾಲೀಕನೊಡನೆ ಅಥವಾ ಅನುಭೋಗದಾರನೊಡನೆ ನಿರ್ದೇಶಿಸಬಹುದಾಗಿದೆ.

(4) (3)ನೇ ಉಪ-ವಿಭಾಗ ಪ್ರಕಾರವಿರುವ ನಿರ್ದೇಶ ಲಭಿಸಿದ ಯಾವುದೇ ವ್ಯಕ್ತಿಯು ನಿರ್ದೇಶ ಲಭಿಸಿ ಏಳು ದಿನದೊಳಗೆ ಆ ರೀತಿಯ ನಿರ್ದೇಶಗಳನ್ನು ಪಾಲಿಸತಕ್ಕದ್ದು ಮತ್ತು ಆ ರೀತಿಯ ನಿರ್ದೇಶಗಳನ್ನು ಪಾಲಿಸುವುದರಲ್ಲಿ ಆತನು ಲೋಪವೆಸಗಿದ್ದಲ್ಲಿ, ಕಾರ್ಯದರ್ಶಿಯವರು, (2)ನೇ ಉಪ-ವಿಭಾಗದ ಪ್ರಕಾರ ಕೈಗೊಳ್ಳಬಹುದಾದ ಯಾವುದೇ ಕ್ರಮಗಳಿಗೆ ಭಂಗವುಂಟಾಗದಂತೆ, ಆ ರೀತಿಯ ಪೈಪ್, ಟ್ಯೂಬ್ ಅಲ್ಲದಿದ್ದಲ್ಲಿ ಇತರ ಮಾರ್ಗಗಳನ್ನು ಮುಚ್ಚುವುದೋ, ಬಂದುಮಾಡುವುದೋ ಅಲ್ಲದಿದ್ದಲ್ಲಿ ನೀಗಿಸುವುದೋ ಮಾಡತಕ್ಕದ್ದು ಮತ್ತು ಇದಕ್ಕಾಗಿ ಬೇಕಾಗುವ ಯಥಾರ್ಥ ಖರ್ಚನ್ನು ಆತನಿಂದ ವಸೂಲು ಮಾಡತಕ್ಕದ್ದು.".

14. 219 ಎನ್ ವಿಭಾಗದ ಬದಲಾಗಿ ಹೊಸ ವಿಭಾಗದ ಸೇರ್ಪಡೆ.—ಪ್ರಧಾನ ಅಧಿನಿಯಮದ 219ಎನ್ ವಿಭಾಗದ ಬದಲಾಗಿ ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"219ಎನ್. ಸಾರ್ವಜನಿಕ ಸ್ಥಳಗಳಿಗೋ ಖಾಸಗಿ ಸ್ಥಳಗಳಿಗೋ ತ್ಯಾಜ್ಯ ಎಸೆಯುವುದಕ್ಕಿರುವ ನಿಷೇಧ.—(1) ತ್ಯಾಜ್ಯವನ್ನು ಹಾಕುವುದಕ್ಕೆ ಉದ್ದೇಶಿಸಿದ ಸ್ಥಳಗಳ ಹೊರತಾದ ಬೀದಿಯಲ್ಲಿಯೋ, ಚರಂಡಿಯಲ್ಲಿಯೋ, ಸಾರ್ವಜನಿಕ ಸ್ಥಳದಲ್ಲಿಯೋ ಯಾವುದೇ ವ್ಯಕ್ತಿ ಯಾವುದಾದರೂ ತ್ಯಾಜ್ಯವನ್ನು ಎಸೆಯುವುದೋ, ಎಸೆದು ಮಲಿನಗೊಳಿಸುವುದೋ, ರಾಶಿಹಾಕುವುದೋ, ಉರಿಸುವುದೋ, ಹುಗಿದು ಹಾಕುವುದೋ ಅಥವಾ ಅಂತಹ ಕೆಲಸಗಳನ್ನು ಮಾಡುವುದಕ್ಕೆ ಕಾರಣವಾಗುವುದೋ ಮಾಡತಕ್ಕದ್ದಲ್ಲ.

(2) ನಿಗದಿಪಡಿಸಿದ ಪ್ರಕಾರ ಅಥವಾ ಕಾರ್ಯದರ್ಶಿಯವರು ಹೊರಡಿಸುವ ಮಾರ್ಗನಿರ್ದೇಶಗಳಿಗನುಸಾರವಾಗಿ ಅಲ್ಲದೆ ಯಾವುದೇ ವ್ಯಕ್ತಿಯು ಯಾವುದೇ ಖಾಸಗಿ ಸ್ಥಳಗಳಲ್ಲಿ ತ್ಯಾಜ್ಯವನ್ನು ಎಸೆಯುವುದೋ, ಎಸೆದು ಮಲಿನಗೊಳಿಸುವುದೋ, ರಾಶಿಹಾಕುವುದೋ, ಉರಿಸುವುದೋ, ಹುಗಿದು ಹಾಕುವುದೋ ಅಥವಾ ಅಂತಹ ಕೆಲಸಗಳನ್ನು ಮಾಡುವುದಕ್ಕೆ ಕಾರಣವಾಗುವುದೋ ಮಾಡತಕ್ಕದ್ದಲ್ಲ.

(3) (1)ನೇ ಉಪ-ವಿಭಾಗದ ಅಥವಾ (2)ನೇ ಉಪ-ವಿಭಾಗದ ಉಪಬಂಧಗಳನ್ನು ಯಾವುದೇ ವ್ಯಕ್ತಿಯು ಉಲ್ಲಂಘಿಸಿರುವನೆಂದು ಮನದಟ್ಟಾದಲ್ಲಿ, ಪ್ರಸ್ತುತ ಉಲ್ಲಂಘನೆಯ ಪ್ರಮಾಣ ಅಥವಾ ಗಂಭೀರ ಸ್ವರೂಪಕ್ಕೆ ಅನುಗುಣವಾಗಿ ಕಾರ್ಯದರ್ಶಿಯವರಿಗೆ ಅಥವಾ ಕಾರ್ಯದರ್ಶಿಯವರು ಈ ಅಗತ್ಯಕ್ಕಾಗಿ ವಿಶೇಷವಾಗಿ ನಿಯೋಜಿಸಿದ ಅಧಿಕಾರಿಗೆ ಅಂತಹ ವ್ಯಕ್ತಿಯ ಮೇಲೆ ತಕ್ಷಣವೇ ಐದುಸಾವಿರ ರೂಪಾಯಿಯವರೆಗಿನ ಜುಲ್ಮಾನೆಯನ್ನು ಹೊರಿಸಬಹುದಾಗಿದೆ.

(4) (3)ನೇ ಉಪ-ವಿಭಾಗದ ಪ್ರಕಾರ ಹೊರಿಸಲ್ಪಟ್ಟ ಜುಲ್ಮಾನೆಯನ್ನು ಅದನ್ನು ಹೊರಿಸಿದ ದಿನಾಂಕದಿಂದ ಹದಿನೈದು ದಿನದೊಳಗೆ ಪಾವತಿಸತಕ್ಕದ್ದು ಮತ್ತು ಆ ರೀತಿಯಲ್ಲಿ ಪಾವತಿಸುವುದರಲ್ಲಿ ಲೋಪ ಉಂಟುಮಾಡುವುದಾದಲ್ಲಿ ಕಾರ್ಯದರ್ಶಿಯವರು, ಆ ವ್ಯಕ್ತಿಯ ವಿರುದ್ಧ ಕೈಗೊಳ್ಳಬಹುದಾದ ಯಾವುದೇ ಕ್ರಮಗಳಿಗೆ ಭಂಗವುಂಟಾಗದಂತೆ ಕಾನೂನು ಕ್ರಮಗಳನ್ನು ಆರಂಭಿಸತಕ್ಕದ್ದು.

15. 219 ಎಸ್ ವಿಭಾಗದ ಬದಲಾಗಿ ಹೊಸ ವಿಭಾಗದ ಸೇರ್ಪಡೆ.—ಪ್ರಧಾನ ಅಧಿನಿಯಮದ 219ಎಸ್ ವಿಭಾಗದ ಬದಲಾಗಿ ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"219ಎಸ್. ತ್ಯಾಜ್ಯ, ಕಸ ಮತ್ತು ಮಲವಿಸರ್ಜನೆಗಳನ್ನು ಜಲಾಶಯಗಳಲ್ಲಿ ಹಾಗೂ ಜಲಮೂಲಗಳಲ್ಲಿ ನಿಕ್ಷೇಪಿಸುವುದಕ್ಕೆ ನಿಷೇಧ.—(1) ಯಾವುದೇ ವ್ಯಕ್ತಿಯು ಸಾರ್ವಜನಿಕ ಜಲಗಮನ ಮಾರ್ಗ, ಜಲಾಶಯ ಅಥವಾ ಜಲಮೂಲಗಳಲ್ಲಿ ತ್ಯಾಜ್ಯ, ಕಸ ಅಥವಾ ಮಲವಿಸರ್ಜನೆಗಳನ್ನು ಎಸೆಯುವುದು, ರಾಶಿಹಾಕುವುದು, ಅದಕ್ಕೆ ಹೊಲಸು ನೀರನ್ನು ಹರಿಸುವುದು ಅಥವಾ ಯಾವುದಾದರೂ ಶೌಚಾಲಯದಿಂದ

This is a digitally signed Gazette.
Authenticity may be verified through https://compose.kerala.gov.in/

ಅದಕ್ಕೆ ನೀರು ಹರಿಯಲು ಅನುಮತಿಸುವುದು ಅಲ್ಲದಿದ್ದಲ್ಲಿ ಹೊಲಸು ನೀರನ್ನು ಅದಕ್ಕೆ ಹರಿಯಲು ಅನುಮತಿಸುವುದು ಅಥವಾ ಬೇರೆ ಯಾವುದಾದರೂ ರೀತಿಯಲ್ಲಿ ಜಲವನ್ನು ಮಲಿನಗೊಳಿಸುವುದು ಅಥವಾ ಆ ರೀತಿಯ ಒಂದು ಚಟುವಟಿಕೆಯನ್ನು ಮಾಡುವುದಕ್ಕೆ ಯಾರನ್ನಾದರೂ ನಿಯಮಿಸುವುದು, ನಿಯೋಜಿಸುವುದು ಅಥವಾ ನಿರ್ಬಂಧಿಸುವುದು ಅಥವಾ ಪ್ರೇರೇಪಿಸುವುದು ಮಾಡತಕ್ಕದ್ದಲ್ಲ.

(2) (1)ನೇ ಉಪ-ವಿಭಾಗದ ಪ್ರಕಾರದ ಒಂದು ಅಪರಾಧವು ಸಂಜ್ಞೇಯ ಅಪರಾಧವಾಗಿರುವುದು ಮತ್ತು ಜಾಮೀನು ರಹಿತವಾಗಿರುವುದು.

(3) (1)ನೇ ಉಪ-ವಿಭಾಗದಲ್ಲಿ ಉಲ್ಲೇಖಿಸಿರುವ ಒಂದು ಅಪರಾಧವನ್ನು ಮಾಡುವ ಯಾವುದೇ ವ್ಯಕ್ತಿಯು, ಅಪರಾಧ ನಿರ್ಣಯತಿಯ ಮೇಲೆ ಹತ್ತು ಸಾವಿರ ರೂಪಾಯಿಗಿಂತ ಕಡಿಮೆಯಲ್ಲದ ಹಾಗೂ ಐವತ್ತು ಸಾವಿರ ರೂಪಾಯಿಗಿಂತ ಅಧಿಕವಲ್ಲದ ಜುಲ್ಮಾನೆ ಹಾಗು ಆರು ತಿಂಗಳಿಗಿಂತ ಕಡಿಮೆಯಲ್ಲದ ಹಾಗೂ ಒಂದು ವರ್ಷಕ್ಕಿಂತ ಮೀರದ ಕಾಲಕ್ಕೆ ಕಾರಾಗೃಹ ವಾಸಕ್ಕೆ ವಿಧಿಸಿ ಶಿಕ್ಷಿಸತಕ್ಕದ್ದು.".

16. 219ಟಿ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 219ಟಿ ವಿಭಾಗದಲ್ಲಿ, "219 ಎಸ್ ವಿಭಾಗದ ವ್ಯಾಪ್ತಿಯಲ್ಲಿ ಒಳಪಡದಿದ್ದಲ್ಲಿ" ಎಂಬ ಪದಗಳಿಗೆ, ಅಂಕೆಗಳಿಗೆ, ಅಕ್ಷರಗಳಿಗೆ ಮತ್ತು ಚಿಹ್ನೆಗೆ ಬದಲು "219ನೇ ವಿಭಾಗದಲ್ಲಿ ಮತ್ತು 219ಎ ಯಿಂದ 219ವೈ ವರೆಗಿನ ವಿಭಾಗಗಳಲ್ಲಿ ಶಿಕ್ಷೆಯನ್ನು ವಿಧಿಸದಿದ್ದಲ್ಲಿ" ಎಂಬ ಪದಗಳನ್ನು, ಅಂಕೆಗಳನ್ನು, ಅಕ್ಷರಗಳನ್ನು ಮತ್ತು ಚಿಹ್ನೆಯನ್ನು ಸೇರಿಸತಕ್ಕದ್ದು.

17. 219ಯು ವಿಭಾಗದ ಬದಲಾಗಿ ಹೊಸ ವಿಭಾಗದ ಸೇರ್ಪಡೆ.—ಪ್ರಧಾನ ಅಧಿನಿಯಮದ 219ಯು ವಿಭಾಗದ ಬದಲಾಗಿ ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"219ಯು. ತ್ಯಾಜ್ಯವನ್ನು ಅಥವಾ ಮಲವಿಸರ್ಜನೆಗಳನ್ನು ಸಾಗಿಸಲು ಉಪಯೋಗಿಸಿದ ವಾಹನದ ಸ್ವಾಧೀನಪಡಿಸುವಿಕೆ ಹಾಗೂ ಮುಟ್ಟುಗೋಲು ಹಾಕುವಿಕೆ.—(1) 219ನೇ ವಿಭಾಗದ ಮತ್ತು 219ಎ ಯಿಂದ 219ವೈ ವರೆಗಿನ ವಿಭಾಗಗಳ ಕೆಳಗಿನ ಒಂದು ಅಪರಾಧವನ್ನು ಮಾಡುವ ಉದ್ದೇಶದಿಂದಲೋ, ಸಜ್ಜೀಕರಣದಿಂದಲೋ ತ್ಯಾಜ್ಯವನ್ನೋ, ಮಲವಿಸರ್ಜನೆಗಳನ್ನೋ ಸಾರ್ವಜನಿಕ ಸ್ಥಳದ ಮುಖಾಂತರವೋ, ಸಾರ್ವಜನಿಕ ರಸ್ತೆಯ ಮುಖಾಂತರವೋ ಸಾಗಿಸುವುದೋ ಅಥವಾ ಆ ರೀತಿಯಲ್ಲಿ ನಿಕ್ಷೇಪಿಸುವುದಕ್ಕೆ ಬಳಸಿದ ಅನಂತರ ಹಿಂತಿರುಗಿ ಹೋಗುವಂತಹುದೋ ಎಂದು ನ್ಯಾಯಯುತವಾಗಿ ಅನುಮಾನಿಸಲು ಕಾರಣವಿರುವ ಒಂದು ವಾಹನವನ್ನು ಅಥವಾ ನೌಕೆಯನ್ನು, ಕಾರ್ಯದರ್ಶಿಯವರು ಅಥವಾ ಈ ಅಗತ್ಯಕ್ಕಾಗಿ ಕಾರ್ಯದರ್ಶಿಯವರು ಅಧಿಕೃತಗೊಳಿಸಿದ ಗ್ರಾಮಪಂಚಾಯತಿನ ಒಬ್ಬ ಉದ್ಯೋಗಸ್ಥ ಅಥವಾ ಸಬ್ ಇನ್ಸ್‌ಪೆಕ್ಟರರ ದರ್ಜೆಗಿಂತ ಕಡಿಮೆಯಲ್ಲದ ಒಬ್ಬ ಪೋಲೀಸು ಅಧಿಕಾರಿಯು ವಶಪಡಿಸಿಕೊಳ್ಳತಕ್ಕದ್ದು ಹಾಗು ಅಧಿಕಾರ ವ್ಯಾಪ್ತಿಯಿರುವ ಸಬ್ ಡಿವಿಷನಲ್ ಮೆಜಿಸ್ಟ್ರೇಟ್‌ರವರ ಸಮಕ್ಷದಲ್ಲಿ ಹಾಜರುಪಡಿಸತಕ್ಕದ್ದು.

(2) ವಿಚಾರಣೆಯ ನಂತರ, 219ನೇ ವಿಭಾಗದ ಮತ್ತು 219ಎ ಯಿಂದ 219ವೈ ವರೆಗಿನ ವಿಭಾಗಗಳ ಅಡಿಯಲ್ಲಿನ ಯಾವುದಾದರೂ ಅಪರಾಧಗಳನ್ನು ಮಾಡಲು ವಾಹನವನ್ನು ಅಥವಾ ನೌಕೆಯನ್ನು ಉಪಯೋಗಿಸಿರುವುದಾಗಿ ನಂಬಲು ಯುಕ್ತವಾದ ಕಾರಣವುಂಟೆಂದು ಸಬ್ ಡಿವಿಷನಲ್ ಮೆಜಿಸ್ಟ್ರೇಟ್‌ರವರಿಗೆ ಮನದಟ್ಟಾದಲ್ಲಿ ಆ ರೀತಿ ಸ್ವಾಧೀನಪಡಿಸಿದ ವಾಹನವನ್ನು ಅಥವಾ ನೌಕೆಯನ್ನು ಮುಟ್ಟುಗೋಲು ಹಾಕತಕ್ಕದ್ದು ಅಲ್ಲದಿದ್ದಲ್ಲಿ ಅದನ್ನು ಬಿಟ್ಟುಕೊಡತಕ್ಕದ್ದು.

(3) ವಾಹನದ ಅಥವಾ ನೌಕೆಯ ಮಾಲೀಕನಿಗೋ ಅಲ್ಲದಿದ್ದಲ್ಲಿ ಯಾರಿಂದ ಅದನ್ನು ಸ್ವಾಧೀನಪಡಿಸಿರುವುದು ಅವರಿಗೆ—

(i) ವಾಹನ ಅಥವಾ ನೌಕೆಯನ್ನು ಮುಟ್ಟುಗೋಲು ಹಾಕಲು ಕಾರಣವಾದ ವಿಷಯಗಳ ಕುರಿತು ಆ ವ್ಯಕ್ತಿಗೆ ಲಿಖಿತ ಮುಖೇನ ತಿಳಿಸುತಾ ಒಂದು ನೋಟೀಸು ನೀಡದೆಯೂ; ಹಾಗೂ

(ii) ಮುಟ್ಟುಗೋಲು ಹಾಕುವ ಕಾರಣದ ವಿರುದ್ಧವಾಗಿ, ನೋಟೀಸಿನಲ್ಲಿ ಸ್ಪಷ್ಟಪಡಿಸಿರುವ ಯುಕ್ತವಾದ ಸಮಯದೊಳಗೆ, ಆ ವ್ಯಕ್ತಿಗೆ ಹೇಳಲಿರುವುದನ್ನು ಹೇಳಲು ಯುಕ್ತವಾದ ಒಂದು ಅವಕಾಶ ನೀಡದೆಯೂ ಈ ವಿಭಾಗದ ಪ್ರಕಾರ ಯಾವುದಾದರೂ ವಾಹನವನ್ನು ಅಥವಾ ನೌಕೆಯನ್ನು ಮುಟ್ಟುಗೋಲು ಹಾಕುವುದಕ್ಕಿರುವ ಆದೇಶವನ್ನು ಜಾರಿಗೊಳಿಸತಕ್ಕದ್ದಲ್ಲ.

(4) ಸ್ವಾಧೀನಪಡಿಸಿದ ವಾಹನದಲ್ಲಿ ಅಥವಾ ನೌಕೆಯಲ್ಲಿ ತ್ಯಾಜ್ಯ, ಕಸ ಅಥವಾ ಮಲವಿಸರ್ಜನೆಗಳಿರುವ ಸಂದರ್ಭಗಳಲ್ಲಿ, ವಾಹನ ಅಥವಾ ನೌಕೆಯನ್ನು ಸ್ವಾಧೀನಪಡಿಸುವ ವ್ಯಕ್ತಿ, ಆ ವ್ಯಕ್ತಿಯು ಕಾರ್ಯದರ್ಶಿಯವರಲ್ಲದಿದ್ದಲ್ಲಿ, ಅಂತಹ ಸ್ವಾಧೀನಪಡಿಸುವಿಕೆಯನ್ನು ಕೂಡಲೇ ಕಾರ್ಯದರ್ಶಿಯವರಿಗೆ ತಿಳಿಸತಕ್ಕದ್ದು ಮತ್ತು 219ನೇ ವಿಭಾಗದ ಮತ್ತು 219ಎ ಯಿಂದ 219ವೈ ವರೆಗಿನ ವಿಭಾಗಗಳ ಅಡಿಯಲ್ಲಿ ಕೈಗೊಳ್ಳಬಹುದಾದ ಯಾವುದೇ ಕ್ರಮಗಳಿಗೆ ಭಂಗವುಂಟಾಗದಂತೆ, ವಾಹನದ ಅಥವಾ ನೌಕೆಯ ಮಾಲೀಕನ ಖರ್ಚಿನಲ್ಲಿ ತ್ಯಾಜ್ಯ, ಕಸ ಅಥವಾ ಮಲವಿಸರ್ಜನೆಗಳನ್ನು ನೀಗಿಸಲು ಕಾರ್ಯದರ್ಶಿಯವರು ಕ್ರಮ ಕೈಗೊಳ್ಳತಕ್ಕದ್ದು ಮತ್ತು ಈ ರೀತಿ ನೀಗಿಸುವುದಕ್ಕಿರುವ ಖರ್ಚನ್ನು ಮತ್ತು ಐದು ಸಾವಿರ ರೂಪಾಯಿಗಿಂತ ಅಧಿಕವಲ್ಲದ ಜುಲ್ಮಾನೆಯನ್ನು ಕಾರ್ಯದರ್ಶಿಯವರು ಮಾಲೀಕನಿಂದ ವಸೂಲುಮಾಡತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

(5) ವಾಹನ ಅಥವಾ ನೌಕೆಯನ್ನು ಮುಟ್ಟುಗೋಲು ಹಾಕುವ ವಿಷಯದಲ್ಲಿ ಅದನ್ನು ಏಲಂ ಮಾಡತಕ್ಕದ್ದು ಮತ್ತು ಆ ರೀತಿ ಲಭಿಸುವ ಮೊತ್ತವನ್ನು ತ್ಯಾಜ್ಯ ಸಂಸ್ಕರಣೆ ಫಂಡಿಗೆ ಜಮೆಮಾಡತಕ್ಕದ್ದು.".

18. 219 ಎಕ್ಸ್ ವಿಭಾಗದ ಬದಲಾಗಿ ಹೊಸ ವಿಭಾಗದ ಸೇರ್ಪಡೆ.—ಪ್ರಧಾನ ಅಧಿನಿಯಮದ 219ಎಕ್ಸ್ ವಿಭಾಗದ ಬದಲಾಗಿ ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*219ಎಕ್ಸ್. ತ್ಯಾಜ್ಯ ಸಂಸ್ಕರಣೆ ಫಂಡಿನ ರಚನೆ.*—*(1)* ಪ್ರತಿಯೊಂದು ಗ್ರಾಮಪಂಚಾಯತ್ "ತ್ಯಾಜ್ಯ ಸಂಸ್ಕರಣೆ ಫಂಡ್" ಎಂಬ ಹೆಸರಿನಲ್ಲಿ ಒಂದು ಫಂಡ್ ರೂಪೀಕರಿಸತಕ್ಕದ್ದಾಗಿದೆ ಮತ್ತು ಅದನ್ನು ಸರಕಾರವು ರಚಿಸುವ ಕಾನೂನುಗಳಿಗೆ ಅಥವಾ ಹೊರಡಿಸುವ ಮಾರ್ಗನಿರ್ದೇಶಗಳಿಗೆ ಅನುಸಾರವಾಗಿ ನಿರ್ವಹಿಸತಕ್ಕದ್ದಾಗಿದೆ.

(2) ತ್ಯಾಜ್ಯ ಸಂಸ್ಕರಣೆ ಫಂಡಿಗೆ ಈ ಕೆಳಗಿನವುಗಳನ್ನು ಜಮೆಮಾಡತಕ್ಕದ್ದಾಗಿದೆ, ಅದೇನೆಂದರೆ:—

(ಎ) ತ್ಯಾಜ್ಯ ಸಂಸ್ಕರಣೆಯ ಉಲ್ಲಂಘನೆಗೆ ಸಂಬಂಧಿಸಿದ ಜುಲ್ಮಾನೆಯಾಗಿಯೋ ದಂಡವಾಗಿಯೋ ವಸೂಲುಮಾಡಿದ ಮೊತ್ತ;

(ಬಿ) ತ್ಯಾಜ್ಯ ಸಂಸ್ಕರಣೆಯ ಚಟುವಟಿಕೆಗಳಿಗಾಗಿ ಕೋರ್ಪರೇಟ್ ಸೋಷ್ಯಲ್ ರೆಸ್ಪೋನ್ಸಿಬಿಲಿಟಿ (ಸಿ.ಎಸ್.ಆರ್.) ಫಂಡಿನಿಂದ ಲಭಿಸಿದ ಕೊಡುಗೆಗಳು;

(ಸಿ) ಈ ಅಗತ್ಯಕ್ಕಾಗಿ ಲಭಿಸಿದ ಪ್ರಾಯೋಜಕತ್ವ ಮೊತ್ತ ಅಥವಾ ಇತರ ಕೊಡುಗೆಗಳು;

(ಡಿ) ಸರಕಾರವು ನಿರ್ದೇಶಿಸುವ ಬೇರೆ ಯಾವುದಾದರೂ ಮೊತ್ತಗಳು.

(3) ಫಂಡನ್ನು ಈ ಕೆಳಗಿನ ಅಗತ್ಯಗಳಿಗಾಗಿ,—

(ಎ) ತ್ಯಾಜ್ಯಗಳ ಬೇರ್ಪಡಿಸುವಿಕೆ, ಸಂಗ್ರಹಣೆ, ಸಾಗಣೆ, ಪಾಲನೆ, ಸಂಸ್ಕರಣೆ ಮತ್ತು ನಿರ್ಮೂಲನೆ ಎಂಬಿವುಗಳನ್ನು ಒಳಗೊಂಡ, ಆದರೆ ಅದಕ್ಕೆ ಮಾತ್ರ ಸೀಮಿತಗೊಳಿಸದೆ, ಎಲ್ಲಾ ತ್ಯಾಜ್ಯ ಸಂಸ್ಕರಣೆ ಚಟುವಟಿಕೆಗಳಿಗೂ;

(ಬಿ) ದಕ್ಷವಾದ ತ್ಯಾಜ್ಯ ಸಂಸ್ಕರಣೆಗೆ ಅವಶ್ಯಕವಾದ ಉಪಕರಣಗಳನ್ನು ಖರೀದಿಸಲು ಮತ್ತು ಸ್ಥಾಪಿಸಲು;

(ಸಿ) ತ್ಯಾಜ್ಯ ಸಂಸ್ಕರಣೆಯಲ್ಲಿ ನಿರತರಾಗಿರುವ ನೌಕರರ ಕೌಶಲ್ಯ ಮತ್ತು ಜ್ಞಾನವನ್ನು ಹೆಚ್ಚಿಸುವುದಕ್ಕಾಗಿರುವ ತರಬೇತಿಗೆ ಹಾಗೂ ಕಾರ್ಯಕ್ಷಮತೆ ಅಭಿವೃದ್ಧಿ ಕಾರ್ಯಕ್ರಮಗಳಿಗೆ;

(ಡಿ) ಸರಕಾರವು ಅಂಗೀಕರಿಸಿದ ತ್ಯಾಜ್ಯ ಸಂಸ್ಕರಣೆಗೆ ಸಂಬಂಧಿಸಿದ ಇತರ ಯಾವುದೇ ಚಟುವಟಿಕೆಗಳಿಗೂ ಉಪಯೋಗಿಸತಕ್ಕದ್ದು.".

19. 219 ಎಕ್ಸ್ ವಿಭಾಗದ ನಂತರ ಹೊಸ ವಿಭಾಗದ ಸೇರ್ಪಡೆ.—ಪ್ರಧಾನ ಅಧಿನಿಯಮದ 219ಎಕ್ಸ್ ವಿಭಾಗದ ನಂತರ ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*219ವೈ. ಜುಲ್ಮಾನೆ ಹೊರಿಸುವುದಕ್ಕೆ ಸಂಬಂಧಿಸಿದ ಉಪಬಂಧಗಳು.*—*(1)* 219ಐ, 219ಎನ್ ಎಂಬೀ ವಿಭಾಗಗಳಲ್ಲಿ ನಿರ್ದಿಷ್ಟಪಡಿಸಿದ ಶಿಕ್ಷೆಗಳ ಹೊರತು 219ನೇ ವಿಭಾಗದ ಮತ್ತು 219ಐ ಯಿಂದ 219ಎಕ್ಸ್ ವರೆಗಿನ ವಿಭಾಗಗಳ ಕೆಳಗಿನ ಯಾವುದೇ ಜುಲ್ಮಾನೆಯನ್ನು—

(i) ಅದನ್ನು ಹೊರಿಸಲು ಕಾರಣವಾದ ವಿಷಯಗಳ ಕುರಿತು ಆತನಿಗೆ ಲಿಖಿತ ಮುಖೇನ ತಿಳಿಸುತಾ ಒಂದು ನೋಟೀಸನ್ನು ನೀಡದೆಯೂ; ಅದಲ್ಲದೆ

(ii) ಅದನ್ನು ಹೊರಿಸುವುದಕ್ಕಿರುವ ಕಾರಣದ ವಿರುದ್ಧ ನೋಟೀಸಿನಲ್ಲಿ ಸ್ಪಷ್ಟಪಡಿಸಿದ ಯುಕ್ತವಾದ ಸಮಯದೊಳಗೆ, ಆತನಿಗೆ ಹೇಳಲಿಕ್ಕಿರುವುದನ್ನು ಹೇಳಲು ಒಂದು ಅವಕಾಶವನ್ನು ನೀಡದೆಯೂ ಕಾರ್ಯದರ್ಶಿಯವರು ಹೊರಿಸತಕ್ಕದ್ದಲ್ಲ.

(2) *(1)*ನೇ ಉಪ-ವಿಭಾಗ ಪ್ರಕಾರ ಜುಲ್ಮಾನೆಯನ್ನು ನಿಶ್ಚಯಿಸುವ ವಿಷಯಗಳಲ್ಲಿ ಕಾರ್ಯದರ್ಶಿಯವರು ಅದರಲ್ಲಿ ಒಳಗೊಂಡಿರುವ ತ್ಯಾಜ್ಯದ ಗಾತ್ರ ಅಥವಾ ಪ್ರಮಾಣ, ಮನೆ, ಹೋಟೆಲ್, ಕೈಗಾರಿಕೆ, ಇತರ ಸಂಸ್ಥೆಗಳ ವಿಧ, ಗಾತ್ರ, ಸ್ಥಳ ಅಲ್ಲದೆ ಸರಕಾರವು ಇದಕ್ಕಾಗಿ ರಚಿಸಿದ ಅಥವಾ ಹೊರಡಿಸಿದ ಯಾವುದಾದರೂ ನಿಯಮಗಳನ್ನು ಅಲ್ಲದಿದ್ದಲ್ಲಿ ಮಾರ್ಗನಿರ್ದೇಶಗಳನ್ನು ಪರಿಗಣಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

11

(3) 219ನೇ ವಿಭಾಗದ ಮತ್ತು 219ಎ ಯಿಂದ 219ಡಬ್ಲ್ಯೂ ವರೆಗಿನ ವಿಭಾಗಗಳ ಕೆಳಗೆ ಹೊರಿಸುವ ಯಾವುದೇ ಜುಲ್ಮಾನೆಯನ್ನು 210ನೇ ವಿಭಾಗದಲ್ಲಿ ನಿರ್ದಿಷ್ಟಪಡಿಸಿದ ಪ್ರಕಾರ ಸಾರ್ವಜನಿಕ ತೆರಿಗೆಯ ಬಾಕಿ ಎಂಬಂತೆ ವಸೂಲು ಮಾಡತಕ್ಕದ್ದು.".

20. 254ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 254ನೇ ವಿಭಾಗದ (2)ನೇ ಉಪ-ವಿಭಾಗದಲ್ಲಿ (xxi)*ನೇ ಖಂಡದ ನಂತರ ಈ ಕೆಳಗಿನ ಖಂಡಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—*

"(xxiಎ) *219ನೇ ವಿಭಾಗದ ಮತ್ತು 219ಎ ಯಿಂದ 219ವೈ ವರೆಗಿನ ವಿಭಾಗಗಳಲ್ಲಿ ನಿಗದಿಪಡಿಸಿದ ತ್ಯಾಜ್ಯ ಸಂಸ್ಕರಣೆಗೆ ಸಂಬಂಧಿಸಿದ ವಿಷಯಗಳು;*

(xxiಬಿ) *1986ರ ಪರಿಸರ (ಸಂರಕ್ಷಣೆ) ಅಧಿನಿಯಮ (1986ರ 29ನೇ ಕೇಂದ್ರ ಅಧಿನಿಯಮ)ಕ್ಕೆ ಮತ್ತು ಅದರ ಅಡಿಯಲ್ಲಿ ರಚಿಸಿದ ನಿಯಮಗಳಿಗೆ ವಿಧೇಯವಾಗಿ ನಿರ್ಮಾಣ-ಕೆಡವುವಿಕೆ ತ್ಯಾಜ್ಯಗಳು, ಇ-ತ್ಯಾಜ್ಯಗಳು, ನೈರ್ಮಲ್ಯ ತ್ಯಾಜ್ಯಗಳು, ಅಪಘಾತಕಾರಿಯಾದ ಗೃಹತ್ಯಾಜ್ಯಗಳು, ಪ್ಲಾಸ್ಟಿಕ್ ತ್ಯಾಜ್ಯಗಳು ಮತ್ತು ದ್ರವತ್ಯಾಜ್ಯಗಳು ಎಂಬಿವುಗಳಿಗೆ ಸಂಬಂಧಿಸಿದ ವಿಷಯಗಳು.".*

21. 255ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 255ನೇ ವಿಭಾಗದಲ್ಲಿ, "ಸಾವಿರ ರೂಪಾಯಿಯವರೆಗೆ" ಎಂಬ ಪದಗಳಿಗೆ ಬದಲಾಗಿ "ಹತ್ತು ಸಾವಿರ ರೂಪಾಯಿಯವರೆಗೆ" ಎಂಬ ಪದಗಳನ್ನು ಮತ್ತು "ಐವತ್ತು ಸಾವಿರ ರೂಪಾಯಿಗಿಂತ" ಎಂಬ ಪದಗಳಿಗೆ ಬದಲಾಗಿ "ಇನ್ನೂರು ರೂಪಾಯಿಗಿಂತ" ಎಂಬ ಪದಗಳನ್ನು ಸೇರಿಸತಕ್ಕದ್ದು.

22. 256ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 256ನೇ ವಿಭಾಗದ (2)ನೇ ಉಪ-ವಿಭಾಗದಲ್ಲಿ "ಐನೂರು ರೂಪಾಯಿಗಿಂತ" ಎಂಬ ಪದಗಳಿಗೆ ಬದಲು "ಹತ್ತು ಸಾವಿರ ರೂಪಾಯಿಗಿಂತ" ಎಂಬ ಪದಗಳನ್ನು ಮತ್ತು "ಐವತ್ತು ರೂಪಾಯಿಗಿಂತ" ಎಂಬ ಪದಗಳಿಗೆ ಬದಲು "ಇನ್ನೂರು ರೂಪಾಯಿಗಿಂತ" ಎಂಬ ಪದಗಳನ್ನು ಸೇರಿಸತಕ್ಕದ್ದು.

23. 276ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 276ನೇ ವಿಭಾಗದಲ್ಲಿ,—

*(*i*) (1)ನೇ ಉಪ-ವಿಭಾಗದಲ್ಲಿ "235 ಐ" ಎಂಬ ಅಂಕೆಯ ಮತ್ತು ಅಕ್ಷರದ ಮೊದಲು "219 ಎಸಿ, 219ಬಿ, 219ಐ, 219ಕೆ, 219ಎನ್" ಎಂಬ ಅಂಕೆಗಳನ್ನು, ಅಕ್ಷರಗಳನ್ನು ಮತ್ತು ಚಿಹ್ನೆಗಳನ್ನು ಸೇರಿಸತಕ್ಕದ್ದು;*

*(*ii*) (4)ನೇ ಉಪ-ವಿಭಾಗದಲ್ಲಿ "235 ಐ" ಎಂಬ ಅಂಕೆಯ ಮತ್ತು ಅಕ್ಷರದ ಮೊದಲು "219ಎಸಿ, 219ಬಿ, 219ಐ, 219ಕೆ, 219ಎನ್" ಎಂಬ ಅಂಕೆಗಳನ್ನು, ಅಕ್ಷರಗಳನ್ನು ಮತ್ತು ಚಿಹ್ನೆಗಳನ್ನು ಸೇರಿಸತಕ್ಕದ್ದು;*

24. 6ನೇ ಅನುಸೂಚಿಯ ತಿದ್ದುಪಡಿ.—ಪ್ರಧಾನ ಅಧಿನಿಯಮದ 6ನೇ ಅನುಸೂಚಿಯಲ್ಲಿ (1)ನೇ ಕಾಲಂನ 209 ಸಿ ಎಂಬ ನಮೂದುಗಳ ನಂತರ ಈ ಕೆಳಗಿನ ನಮೂದುಗಳನ್ನು ಅನುಕ್ರಮವಾಗಿ (1), (3) ಮತ್ತು (4)ನೇ ಕಾಲಂಗಳಲ್ಲಿ ಸೇರಿಸತಕ್ಕದ್ದು, ಅದೇನೆಂದರೆ:—

"219ಐ	ಅಂಗಡಿಗಳ ಮತ್ತು ವಾಣಿಜ್ಯ ಸಂಸ್ಥೆಗಳ ಪರಿಸರವನ್ನು ಶುಚಿಯಾಗಿ ಇಡುವುದಕ್ಕಿರುವ ಜವಾಬ್ದಾರಿ	ಹತ್ತು ಸಾವಿರ ರೂಪಾಯಿ
219ಎಂ	ತ್ಯಾಜ್ಯವನ್ನು ಮತ್ತು ಇತರವುಗಳನ್ನು ನೀಗಿಸಲು ಮುಚ್ಚದ ಯಾವುದಾದರೂ ವಾಹನವನ್ನು ಉಪಯೋಗಿಸುವುದು	ಐದು ಸಾವಿರ ರೂಪಾಯಿ
219ಎನ್	ಸಾರ್ವಜನಿಕ ಸ್ಥಳಗಳಲ್ಲಿ ಅಥವಾ ಖಾಸಗಿ ಸ್ಥಳಗಳಲ್ಲಿ ತ್ಯಾಜ್ಯವನ್ನು ಎಸೆಯುವುದು	ಹತ್ತು ಸಾವಿರ ರೂಪಾಯಿ".

25. ರದ್ದತಿ ಮತ್ತು ರಕ್ಷಣೆ.—(1) 2023ರ ಕೇರಳ ಪಂಚಾಯತ್ ರಾಜ್ ಅಧಿನಿಯಮ (ತಿದ್ದುಪಡಿ) ಅಧ್ಯಾದೇಶ (2023ರ 4)ವು ಈ ಮೂಲಕ ರದ್ದುಗೊಂಡಿರುವುದು.

(2) ಆ ರೀತಿ ರದ್ದುಗೊಳಿಸಿದ್ದರೂ ಪ್ರಸ್ತುತ ಅಧ್ಯಾದೇಶದ ಪ್ರಕಾರ ತಿದ್ದುಪಡಿ ಮಾಡಿದಂತಹ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವು, ಈ ಅಧಿನಿಯಮದ ಪ್ರಕಾರ ತಿದ್ದುಪಡಿ ಮಾಡಿದಂತಹ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಸಿ) ಇಲಾಖೆ

ಅಧಿಸೂಚನೆ

ನಂಬ್ರ 64/ಲೆಗ್. ಸಿ1/2023/ಕಾನೂನು. ತಿರುವನಂತಪುರಂ, 2024 ಮಾರ್ಚ್ 2, 1199 ಕುಂಭ 18/ 1945 ಫಾಲ್ಗುಣ 12.

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2024 ಮಾರ್ಚ್ 1ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಸಿ. ವಿಜಯಲಕ್ಷ್ಮಿ,
ವಿಶೇಷ ಕಾರ್ಯದರ್ಶಿ (ಕಾನೂನು).

2024ರ 6ನೇ ಅಧಿನಿಯಮ

2024ರ ಕೇರಳ ಮುನಿಸಿಪಾಲಿಟಿ (ತಿದ್ದುಪಡಿ) ಅಧಿನಿಯಮ

1994ರ ಕೇರಳ ಮುನಿಸಿಪಾಲಿಟಿ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ.—1994ರ ಕೇರಳ ಮುನಿಸಿಪಾಲಿಟಿ ಅಧಿನಿಯಮವನ್ನು ಇನ್ನು ಮುಂದಿನ ಅಗತ್ಯಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು:—

1. ಸಂಕ್ಷಿಪ್ತ ನಾಮ ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2024ರ ಕೇರಳ ಮುನಿಸಿಪಾಲಿಟಿ (ತಿದ್ದುಪಡಿ) ಅಧಿನಿಯಮವೆಂದು ಕರೆಯಬಹುದು.

(2) ಈ ಅಧಿನಿಯಮದ 25ನೇ ವಿಭಾಗದ (i), (vi) ಐಟಮ್‌ಗಳು ಕೂಡಲೇ ಜಾರಿಗೆ ಬರುವುದಾಗಿದ್ದು ಉಳಿದ ವಿಭಾಗಗಳು 2023 ಡಿಸೆಂಬರ್ 9ನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. 58ನೇ ವಿಭಾಗದ ತಿದ್ದುಪಡಿ.—1994ರ ಕೇರಳ ಮುನಿಸಿಪಾಲಿಟಿ ಅಧಿನಿಯಮ (1994ರ 20)ದ (ಇನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲ್ಪಡುವುದು) 58ನೇ ವಿಭಾಗದ (1)ನೇ ಉಪ-ವಿಭಾಗದಲ್ಲಿ "ಕಲ್ಯಾಣ ಕಾರ್ಯಕ್ರಮಗಳು" ಎಂಬ ಪದದ ಮತ್ತು ಚಿಹ್ನೆಯ ನಂತರ "ತ್ಯಾಜ್ಯ ಸಂಸ್ಕರಣೆ" ಎಂಬ ಪದ ಮತ್ತು ಚಿಹ್ನೆಯನ್ನು ಸೇರಿಸತಕ್ಕದ್ದು.

G. 15/2025/GPC.

This is a digitally signed Gazette.
Authenticity may be verified through https://compose.kerala.gov.in/

3. XVIಎ ಎಂಬ ಅಧ್ಯಾಯದ ಸೇರ್ಪಡೆ.—ಪ್ರಧಾನ ಅಧಿನಿಯಮದ 325ನೇ ವಿಭಾಗದ ನಂತರ ಮತ್ತು "ತ್ಯಾಜ್ಯಗಳ ನಿರ್ವಹಣೆ" ಎಂಬ ಶೀರ್ಷಿಕೆಯ ಮೇಲೆ "ಅಧ್ಯಾಯ XVIಎ" ಎಂದು ಸೇರಿಸತಕ್ಕದ್ದು.

4. 325ಎ ಎಂಬ ಹೊಸ ವಿಭಾಗದ ಸೇರ್ಪಡೆ.—ಪ್ರಧಾನ ಅಧಿನಿಯಮದಲ್ಲಿ, "ಅಧ್ಯಾಯ XVIಎ ತ್ಯಾಜ್ಯಗಳ ನಿರ್ವಹಣೆ" ಎಂಬ ಶೀರ್ಷಿಕೆಯ ನಂತರ ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"325ಎ. ವ್ಯಾಖ್ಯಾನ.—ಈ ಅಧ್ಯಾಯದ ಮತ್ತು 58ನೇ ವಿಭಾಗದ ಅಗತ್ಯಕ್ಕಾಗಿ "ತ್ಯಾಜ್ಯ ಸಂಸ್ಕರಣೆ" ಎಂದರೆ ಘನ ತ್ಯಾಜ್ಯಗಳು ಒಳಗೊಂಡ ತ್ಯಾಜ್ಯಗಳ ಬೇರ್ಪಡಿಸುವಿಕೆ, ಸಂಗ್ರಹಣೆ, ಸಾಗಣೆ, ಶೇಖರಣೆ, ಸಂಸ್ಕರಣೆ ಅಥವಾ ವಿಲೇವಾರಿ ಎಂದು ಅರ್ಥವಾಗುವುದಾಗಿದೆ.

ವಿವರಣೆ:—ಈ ಅಧ್ಯಾಯದಲ್ಲಿ ಉಪಯೋಗಿಸಿರುವಂತಹ ಆದರೆ ವ್ಯಾಖ್ಯಾನಿಸದಂತಹ, ಆದರೆ 1986ರ ಪರಿಸರ (ಸಂರಕ್ಷಣೆ) ಅಧಿನಿಯಮ (1986ರ 29ನೇ ಕೇಂದ್ರ ಅಧಿನಿಯಮ)ದಲ್ಲಿ ಮತ್ತು ಅದರ ಅಡಿಯಲ್ಲಿ ರಚಿಸಿರುವ ನಿಯಮಗಳಲ್ಲಿ ವ್ಯಾಖ್ಯಾನಿಸಿರುವ ಪದಗಳಿಗೆ ಮತ್ತು ಪ್ರಯೋಗಗಳಿಗೆ ಪ್ರಸ್ತುತ ಅಧಿನಿಯಮದಲ್ಲಿ ಮತ್ತು ನಿಯಮಗಳಲ್ಲಿ ಅದಕ್ಕೆ ಅನುಕ್ರಮವಾಗಿ ನೀಡಿರುವ ಅದೇ ಅರ್ಥವಿರುವುದಾಗಿದೆ.".

5. 326ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 326ನೇ ವಿಭಾಗದಲ್ಲಿ,—

(i) (1ಎ) ಉಪ-ವಿಭಾಗಕ್ಕೆ ಬದಲಾಗಿ ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(1ಎ) ಈ ಅಧ್ಯಾಯದಲ್ಲಿ ಮತ್ತು ಈ ಅಧಿನಿಯಮದ ಅಡಿಯಲ್ಲಿನ ನಿಯಮಗಳಲ್ಲಿ, ಮತ್ತು 1986ರ ಪರಿಸರ (ಸಂರಕ್ಷಣೆ) ಅಧಿನಿಯಮ (1986ರ 29ನೇ ಕೇಂದ್ರ ಅಧಿನಿಯಮ) ಮತ್ತು ಅದರ ಅಡಿಯಲ್ಲಿ ರಚಿಸಿರುವ ನಿಯಮಗಳಲ್ಲಿ ಉಪಬಂಧಿಸಿದ ತ್ಯಾಜ್ಯಸಂಸ್ಕರಣೆಗೆ ಸಂಬಂಧಪಟ್ಟ ಮುನಿಸಿಪಾಲಿಟಿಯ ಎಲ್ಲಾ ಕರ್ತವ್ಯಗಳು, ಜವಾಬ್ದಾರಿಗಳು ಮತ್ತು ಪ್ರಕಾರ್ಯಗಳು ಕೌನ್ಸಿಲಿನಲ್ಲಿ ಸ್ಥಾಪಿತವಾಗಿರುವುದೂ ಮತ್ತು ಕೌನ್ಸಿಲ್ ಅದರ ಕರ್ತವ್ಯಗಳನ್ನು, ಜವಾಬ್ದಾರಿಗಳನ್ನು ಮತ್ತು ಪ್ರಕಾರ್ಯಗಳನ್ನು ಕಾರ್ಯದರ್ಶಿಯವರ ಮುಖಾಂತರ ನಿರ್ವಹಿಸತಕ್ಕದ್ದು.";

(ii) ಆ ರೀತಿ ಬದಲಾಗಿ ಸೇರಿಸಿದ (1ಎ) ಉಪ-ವಿಭಾಗದ ನಂತರ ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(1ಎಎ) (1ಎ) ಉಪ-ವಿಭಾಗ ಪ್ರಕಾರದ ಮುನಿಸಿಪಾಲಿಟಿಯ ಕರ್ತವ್ಯಗಳನ್ನು, ಜವಾಬ್ದಾರಿಗಳನ್ನು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸುವುದು ಕಾರ್ಯದರ್ಶಿಯವರ ಹೊಣೆಗಾರಿಕೆಯಾಗಿರುವುದಾಗಿದೆ ಮತ್ತು ಕಾರ್ಯದರ್ಶಿಯವರಿಗೆ ಅದನ್ನು ಲಿಖಿತ ಆದೇಶ ಮುಖೇನ ತ್ಯಾಜ್ಯ ಸಂಸ್ಕರಣೆ, ಸಾರ್ವಜನಿಕಾರೋಗ್ಯ, ನೈರ್ಮಲ್ಯ, ಇಂಜಿನಿಯರಿಂಗ್ ಎಂಬಿವುಗಳ ಹೊಣೆಗಾರಿಕೆಯಿರುವ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಅಲ್ಲದಿದ್ದರೆ ಮುನಿಸಿಪಾಲಿಟಿಯ ಬೇರೆ ಯಾವುದಾದರೂ ಅಧಿಕಾರಿಗಳಿಗೆ ಅಥವಾ ನೌಕರರಿಗೆ, ಬೀದಿಗಳ ಅಥವಾ ಪ್ರದೇಶಗಳ ಕೆಲಸದ ರೀತಿಯ ತಳಹದಿಯಲ್ಲಿ ವಹಿಸಿಕೊಡಬಹುದಾಗಿದೆ ಹಾಗೂ ಅಂತಹ ಕರ್ತವ್ಯಗಳನ್ನು, ಜವಾಬ್ದಾರಿಗಳನ್ನು ಮತ್ತು ಪ್ರಕಾರ್ಯಗಳನ್ನು ಅವರು ಸರಿಯಾಗಿ ನಿರ್ವಹಿಸುತ್ತಿರುವರೆಂದು ಖಾತ್ರಿಪಡಿಸತಕ್ಕದ್ದು.";

(iii) (3)ನೇ ಉಪ-ವಿಭಾಗಕ್ಕೆ ಬದಾಗಿ ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(3) ಮುನಿಸಿಪಾಲಿಟಿಗೆ, ನೇರವಾಗಿಯೋ, ಅಲ್ಲದಿದ್ದರೆ ಯಾವುದಾದರೂ ವ್ಯಕ್ತಿಯ ಮುಖಾಂತರವೋ, ಏಜನ್ಸಿ ಮುಖಾಂತರವೋ, ಕರಾರು ಆಧಾರದಲ್ಲಿಯೋ, ಅಲ್ಲದೆಯೋ ಈ ಅಧಿನಿಯಮದಲ್ಲಿ ಅಥವಾ ಅದರ ಅಡಿಯಲ್ಲಿನ ನಿಯಮಗಳಲ್ಲಿ ಅಲ್ಲದಿದ್ದರೆ 1986ರ ಪರಿಸರ (ಸಂರಕ್ಷಣೆ) ಅಧಿನಿಯಮ (1986ರ 29ನೇ ಕೇಂದ್ರ ಅಧಿನಿಯಮ)ದ ಅಥವಾ ಅದರ ಅಡಿಯಲ್ಲಿನ ನಿಯಮಗಳಲ್ಲಿ ಇರುವ ತ್ಯಾಜ್ಯ ಸಂಸ್ಕರಣೆ ಚಟುವಟಿಕೆಗಳು ಸಂಪೂರ್ಣವಾಗಿ ಅಥವಾ ಭಾಗಶಃವಾಗಿ ಮಾಡುವುದಕ್ಕೆ ವ್ಯವಸ್ಥೆಗಳನ್ನು ಏರ್ಪಡಿಸಬಹುದಾಗಿದೆ.".

6. 326ನೇ ವಿಭಾಗದ ನಂತರ ಹೊಸ ವಿಭಾಗಗಳ ಸೇರ್ಪಡೆ.—ಪ್ರಧಾನ ಅಧಿನಿಯಮದ 326ನೇ ವಿಭಾಗದ ನಂತರ ಈ ಕೆಳಗಿನ ವಿಭಾಗಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"326ಎ. ಸರಕಾರದ ನಿರ್ದೇಶಗಳನ್ನು ಕೌನ್ಸಿಲ್ ಜಾರಿಗೊಳಿಸತಕ್ಕದ್ದೆಂದು.—(1) ಈ ಅಧಿನಿಯಮದ ಅಡಿಯಲ್ಲಿ ಅಲ್ಲದಿದ್ದರೆ 1986ರ ಪರಿಸರ (ಸಂರಕ್ಷಣೆ) ಅಧಿನಿಯಮ (1986ರ 29ನೇ ಕೇಂದ್ರ ಅಧಿನಿಯಮ)ದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳಲ್ಲಿ ಘನತ್ಯಾಜ್ಯ ಸಂಸ್ಕರಣೆಗೆ ಸಂಬಂಧಿಸಿ ಸರಕಾರವು ಜಾರಿಗೊಳಿಸುವ ನಿರ್ದೇಶಗಳನ್ನು ಜಾರಿಗೊಳಿಸಬೇಕಾದುದು ಕೌನ್ಸಿಲಿನ ಜವಬ್ದಾರಿಯಾಗಿರುವುದು.

This is a digitally signed Gazette.
Authenticity may be verified through https://compose.kerala.gov.in/

(2) (1)ನೇ ಉಪ-ವಿಭಾಗದಲ್ಲಿ ಉಲ್ಲೇಖಿಸಿರುವ ನಿರ್ದೇಶಗಳಿಗೆ ಸಂಬಂಧಿಸಿ ತಯಾರಿಸಿದ ಅಜೆಂಡವನ್ನು ಕೌನ್ಸಿಲಿನ ನಿಕಟಾನಂತರದ ಸಭೆಯಲ್ಲಿ ಮಂಡಿಸಲಾಗುವುದೆಂದು ಚೇರ್‌ಪರ್ಸನ್ ಖಾತ್ರಿಪಡಿಸತಕ್ಕದ್ದು ಮತ್ತು ಕೌನ್ಸಿಲ್ ಅಂತಹ ಅಜೆಂಡಾದ ಮೇಲೆ ನಿರ್ಧಾರ ಕೈಗೊಳ್ಳತಕ್ಕದ್ದಾಗಿದೆ.

(3) (1)ನೇ ಉಪ-ವಿಭಾಗ ಪ್ರಕಾರವಿರುವ ಯಾವುದಾದರೂ ನಿರ್ದೇಶಗಳು ಲಭಿಸಿ ಆ ರೀತಿಯ ನಿರ್ದೇಶಗಳಿಗನುಸಾರವಾಗಿ ಒಂದು ತಿಂಗಳಿನೊಳಗೆ, ಕೌನ್ಸಿಲ್ ನಿರ್ಧಾರ ಕೈಗೊಳ್ಳುವುದರಲ್ಲಿ ವಿಫಲವಾಗುವ ಸಂದರ್ಭಗಳಲ್ಲಿ, ಅಂತಹ ನಿರ್ದೇಶಗಳನ್ನು ಜಾರಿಗೊಳಿಸುವುದಕ್ಕಿರುವ ಅನುಮತಿಯನ್ನು ಕೌನ್ಸಿಲ್ ಅಂಗೀಕರಿಸಿರುವುದಾಗಿಯೋ ನೀಡಿರುವುದಾಗಿಯೋ ಭಾವಿಸತಕ್ಕದ್ದು.

(4) (3)ನೇ ಉಪ-ವಿಭಾಗ ಪ್ರಕಾರವಿರುವ ಅಂಗೀಕಾರ ನೀಡಿರುವುದಾಗಿ ಭಾವಿಸಲ್ಪಡುವುದು ಒಳಗೊಂಡು ಆ ರೀತಿಯ ನಿರ್ಧಾರಗಳನ್ನು ಜಾರಿಗೊಳಿಸುವುದಕ್ಕೆ ಕಾರ್ಯದರ್ಶಿಯವರು ತುರ್ತಾಗಿ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಆ ರೀತಿಯ ನಿರ್ಧಾರವನ್ನು ಜಾರಿಗೊಳಿಸುವುದರಲ್ಲಿ ಕಾರ್ಯದರ್ಶಿಯವರಿಗೋ ಬೇರೆ ಯಾವುದಾದರೂ ಜವಾಬ್ದಾರರಾದ ಅಧಿಕಾರಿಗೋ ವೈಫಲ್ಯ ಅಥವಾ ನ್ಯೂನತೆ ಉಂಟಾಗಿದ್ದಲ್ಲಿ ಅದನ್ನು ಕರ್ತವ್ಯ ಲೋಪವೆಂದು ಪರಿಗಣಿಸಿ ಕಾರ್ಯದರ್ಶಿಯವರ ಮೇಲೆ ಅಲ್ಲದಿದ್ದರೆ ಅಂತಹ ಅಧಿಕಾರಿಯ ಮೇಲೆ ಸರಕಾರಕ್ಕೆ ಶಿಸ್ತುಕ್ರಮವನ್ನು ಕೈಗೊಳ್ಳಬಹುದಾಗಿದೆ.

(5) (1)ನೇ ಉಪ-ವಿಭಾಗ ಪ್ರಕಾರವಿರುವ ಸರಕಾರದ ನಿರ್ದೇಶಗಳನ್ನು ಪಾಲಿಸುವುದರಲ್ಲಿ ಕೌನ್ಸಿಲ್ ಲೋಪವೆಂಟುಮಾಡಿದ್ದಲ್ಲಿ, ಕೌನ್ಸಿಲ್‌ನ ವಿರುದ್ಧವಾಗಿ ಕೈಗೊಳ್ಳಬಹುದಾದ ಇತರ ಕ್ರಮಗಳಿಗೆ ಭಂಗಬರದ ರೀತಿಯಲ್ಲಿ, ಸರಕಾರಕ್ಕೆ ಅಂತಹ ಲೋಪಕ್ಕೆ ಕೌನ್ಸಿಲಿನ ಮೇಲೆ ಜುಲ್ಮಾನೆಯನ್ನು ಹೊರಿಸಬಹುದಾಗಿದೆ:

ಆದರೆ, ಆ ರೀತಿಯಲ್ಲಿ ಜುಲ್ಮಾನೆಯನ್ನು ಹೊರಿಸುವುದಕ್ಕಿಂತ ಮೊದಲು ಕೌನ್ಸಿಲಿಗೆ ಹೇಳಲಿರುವುದನ್ನು ಹೇಳಲು ಯುಕ್ತ ಅವಕಾಶವನ್ನು ನೀಡತಕ್ಕದ್ದಾಗಿದೆ.

326ಬಿ. ತ್ಯಾಜ್ಯ ಸಂಸ್ಕರಣೆಯಲ್ಲಿ ಕಾರ್ಯದರ್ಶಿಯವರ ಜವಾಬ್ದಾರಿಗಳು.—(1) ಈ ಅಧ್ಯಾಯದ ಉಪಬಂಧಗಳನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿಯ ವಿರುದ್ಧವಾಗಿ ಕಾರ್ಯದರ್ಶಿಯವರಿಗೆ ಕಾನೂನುಕ್ರಮಗಳನ್ನು ಆರಂಭಿಸಬಹುದಾಗಿದೆ, ಆದರೆ ಈ ಅಧಿನಿಯಮಕ್ಕೆ ಅನುಸಾರವಾಗಿಯೋ ಅದರ ಅಡಿಯಲ್ಲಿನ ನಿಯಮಗಳಿಗನುಸಾರವಾಗಿಯೋ ರಾಜಿ ಮಾಡಬಹುದಾದ ಅಪರಾಧಗಳನ್ನು ರಾಜಿಮಾಡಬಹುದಾಗಿದೆ.

(2) ತ್ಯಾಜ್ಯ ಸಂಸ್ಕರಣೆಗೆ ಸಂಬಂಧಿಸಿ ಈ ಅಧ್ಯಾಯದ ಅಡಿಯಲ್ಲಿನ ಅಥವಾ ತತ್ಕಾಲದಲ್ಲಿ ಪ್ರಾಬಲ್ಯದಲ್ಲಿರುವ ಬೇರೆ ಯಾವುದಾದರೂ ಕಾನೂನುಗಳಿಗನುಸಾರವಾಗಿ ಇರುವ ಜವಾಬ್ದಾರಿಗಳನ್ನು ದಕ್ಷವಾಗಿ ನಿರ್ವಹಿಸುವುದಕ್ಕಿರುವ ಎಲ್ಲಾ ಅಧಿಕಾರಗಳು ಕಾರ್ಯದರ್ಶಿಯವರಿಗೆ ಇರುವುದಾಗಿದೆ.

(3) ಕಾರ್ಯದರ್ಶಿಯವರಿಗೆ, ತುರ್ತುಸಂದರ್ಭಗಳಲ್ಲಿ, ಚೇರ್‌ಪರ್ಸನ್‌ಗೆ ತಿಳಿಸಿದ ನಂತರ, ತ್ಯಾಜ್ಯ ಸಂಸ್ಕರಣೆಗೆ ಸಂಬಂಧಿಸಿ ಈ ಅಧ್ಯಾಯದಲ್ಲಿ ಅಥವಾ ತತ್ಕಾಲದಲ್ಲಿ ಪ್ರಾಬಲ್ಯದಲ್ಲಿರುವ ಬೇರೆ ಯಾವುದಾದರೂ ಕಾನೂನುಗಳಿಗನುಸಾರವಾಗಿ ತನ್ನಲ್ಲಿ ನಿಹಿತವಾದ ಜವಾಬ್ದಾರಿಗಳನ್ನು ನಿರ್ವಹಿಸಲು ಸಂಬಂಧಪಟ್ಟ ಮುನಿಸಿಪಲ್ ಫಂಡಿನಿಂದ ಎರಡು ಲಕ್ಷಕ್ಕಿಂತ ಅಧಿಕವಲ್ಲದ ಮೊತ್ತವನ್ನು ವೆಚ್ಚಮಾಡಬಹುದಾಗಿದೆ.

326ಸಿ. ಬೇರ್ಪಡಿಸಿದ ತ್ಯಾಜ್ಯವನ್ನು ಮುನಿಸಿಪಾಲಿಟಿಗೆ ಅಥವಾ ಅಂಗೀಕೃತ ಏಜೆನ್ಸಿಗೆ ಹಸ್ತಾಂತರಿಸುವ ಜವಾಬ್ದಾರಿ.—(1) ಕಾರ್ಯದರ್ಶಿಯವರು, ಸಾರ್ವಜನಿಕ ನೋಟೀಸು ಮೂಲಕ ನಿರ್ದೇಶಿಸಿದಂತೆ, ಬೇರ್ಪಡಿಸಿದ ತ್ಯಾಜ್ಯಗಳನ್ನು ಹಸ್ತಾಂತರಿಸುವುದಕ್ಕೆ ಅಥವಾ ನಿಶ್ಚಿತ ಸ್ಥಳದಲ್ಲಿ ನಿಕ್ಷೇಪಿಸುವುದಕ್ಕೆ ಯೂಸರ್ ಫೀಸನ್ನು ಮುನಿಸಿಪಾಲಿಟಿಗೆ ಅಥವಾ ಅಂಗೀಕೃತ ಏಜೆನ್ಸಿಗೆ ನೀಡುವುದಕ್ಕೆ ಎಲ್ಲಾ ಮನೆಗಳ ಹಾಗು ಯಾವುದೇ ಪರಿಸರದ ಹೋಟಲಿನ, ರೆಸ್ಟೋರೆಂಟ್, ಕೈಗಾರಿಕೆಯ ಅಥವಾ ಬೇರೆ ಯಾವುದಾದರೂ ಸಂಸ್ಥೆ ಮುಂತಾದವುಗಳ ಮಾಲಿಕರಿಗೆ ಮತ್ತು ಅನುಭೋಗದಾರರಿಗೆ ಜವಾಬ್ದಾರಿಯಿರುವುದಾಗಿದೆ.

(2) (1)ನೇ ಉಪ-ವಿಭಾಗದ ಉಪಬಂಧಗಳನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿಯ ಮೇಲೆ ಕಾರ್ಯದರ್ಶಿಯವರಿಗೆ ಸಾವಿರ ರೂಪಾಯಿಗಿಂತ ಕಡಿಮೆಯಲ್ಲದ ಮತ್ತು ಹತ್ತು ಸಾವಿರ ರೂಪಾಯಿಗಿಂತ ಅಧಿಕವಲ್ಲದ ಜುಲ್ಮಾನೆಯನ್ನು ಹೊರಿಸಬಹುದಾಗಿದೆ.

326ಡಿ. ಯೂಸರ್ ಫೀಸಿಗೆ ಸಂಬಂಧಿಸಿದ ಉಪಬಂಧಗಳು.—(1) ಪ್ರತಿಯೊಂದು ಮುನಿಸಿಪಾಲಿಟಿಯೂ ತ್ಯಾಜ್ಯ ಬೇರ್ಪಡಿಸುವಿಕೆ, ಸಂಗ್ರಹಣೆ, ಸಾಗಣೆ, ಶೇಖರಣೆ, ಸಂಸ್ಕರಣೆ ಮತ್ತು ಅದರ ಹಸ್ತಾಂತರಕ್ಕೆ ಇತ್ಯಾದಿಗೆ ಸಂಬಂಧಿಸಿದ ಸೇವೆಗಳನ್ನು ನೀಡುವುದರ ಸಂಪೂರ್ಣವಾದ ಅಥವಾ ಭಾಗಶಃವಾದ ಖರ್ಚುವಹಿಸುವುದಕ್ಕೆ ಪ್ರತಿಯೊಬ್ಬ ತ್ಯಾಜ್ಯ ಉತ್ಪಾದಕನೂ ನೀಡಬೇಕಾದ ಯೂಸರ್ ಫೀಸ್ ನಿಶ್ಚಯಿಸತಕ್ಕದ್ದು ಮತ್ತು ಅದನ್ನು ನಿಶ್ಚಯಿಸಿದ ರೀತಿಯಲ್ಲಿ ವಸೂಲುಮಾಡತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

ಆದರೆ, ಯೂಸರ್ ಫೀಸ್‌ಗೆ ಸರಕಾರವು ದರವನ್ನು ನಿಶ್ಚಯಿಸಿದ್ದಲ್ಲಿ, ಸರಕಾರವು ನಿಶ್ಚಯಿಸಿದ ದರಕ್ಕಿಂತ ಕಡಿಮೆ ದರವನ್ನು ಕೌನ್ಸಿಲ್ ನಿಶ್ಚಯಿಸತಕ್ಕದ್ದಲ್ಲ.

(2) ಪ್ರತಿಯೊಬ್ಬ ತ್ಯಾಜ್ಯ ಉತ್ಪಾದಕನೂ ಯೂಸರ್ ಫೀಸನ್ನು ಮುನಿಸಿಪಾಲಿಟಿಗೆ ಅಲ್ಲದಿದ್ದರೆ ಯಾವುದಾದರೂ ಅಂಗೀಕೃತ ಏಜೆನ್ಸಿಗೆ ಪ್ರತಿ ತಿಂಗಳ ಕೊನೆಯ ದಿನಾಂಕಕ್ಕೆ ಮುಂಚಿತವಾಗಿ ಅಥವಾ ಮುನಿಸಿಪಾಲಿಟಿ ತೀರ್ಮಾನಿಸಬಹುದಾದ ಅಂತಹ ಕಾಲಾವಧಿಯೊಳಗೆ ನೀಡತಕ್ಕದ್ದು.

(3) ಯಾವುದಾದರೂ ತ್ಯಾಜ್ಯ ಉತ್ಪಾದಕನು (2)ನೇ ಉಪ-ವಿಭಾಗ ಪ್ರಕಾರ ಉಪಬಂಧಿಸಿರುವ ಯೂಸರ್ ಫೀಸನ್ನು ಪಾವತಿಸಲು ವಿಫಲನಾದಲ್ಲಿ ಅದನ್ನು ಪ್ರತಿತಿಂಗಳು ಐವತ್ತು ಶೇಕಡ ಜುಲ್ಮಾನೆಯೊಂದಿಗೆ ವಸೂಲು ಮಾಡತಕ್ಕದ್ದು:

ಆದರೆ, ನಿಶ್ಚಿತ ದಿನಾಂಕದ ನಂತರ ತ್ತೊಂಭತ್ತು ದಿನಗಳ ನಂತರವೂ ಯೂಸರ್ ಫೀಸ್ ಪಾವತಿಸುವುದರಲ್ಲಿ ವಿಫಲನಾದಲ್ಲಿ ಮಾತ್ರ ಅಂತಹ ಜುಲ್ಮಾನೆಯನ್ನು ವಸೂಲುಮಾಡತಕ್ಕದ್ದು.

(4) ಯೂಸರ್ ಫೀಸನ್ನು ಮತ್ತು ಜುಲ್ಮಾನೆಯನ್ನು 538ಬ ವಿಭಾಗದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಸಾರ್ವಜನಿಕ ತೆರಿಗೆ ಬಾಕಿ ಎಂಬಂತೆ ವಸೂಲು ಮಾಡತಕ್ಕದ್ದು.

(5) ಯೂಸರ್ ಫೀಸನ್ನು ಪಾವತಿಸಲು ನ್ಯೂನತೆವೆಸಗುವ ವ್ಯಕ್ತಿಯ ವಿರುದ್ಧ ಕೈಗೊಳ್ಳಬಹುದಾದ ಇತರ ಯಾವುದೇ ಕ್ರಮಗಳಿಗೆ ಭಂಗಬರದಂತೆ, ಯೂಸರ್ ಪೀಸ್‌ನ್ನು ಪಾವತಿಸುವವರೆಗೆ ಆ ರೀತಿಯಲ್ಲಿ ಕರ್ತವ್ಯ ಲೋಪವುಂಟುಮಾಡಿದ ವ್ಯಕ್ತಿಗೆ ಮುನಿಸಿಪಾಲಿಟಿಯಿಂದಿರುವ ಯಾವುದೇ ಸೇವೆಯನ್ನು ನೀಡಲು ಕಾರ್ಯದರ್ಶಿಯವರಿಗೆ ನಿರಾಕರಿಸಬಹುದಾಗಿದೆ.

(6) ಸರಕಾರಕ್ಕೆ ಅಥವಾ, ಕಾಲಾಕಾಲಗಳಲ್ಲಿ ಸರಕಾರವು ಹೊರಡಿಸುವ ಮಾರ್ಗಸೂಚಿಗಳಿಗನುಸಾರವಾಗಿ ಮುನಿಸಿಪಾಲಿಟಿಗೆ, ಯಾವುದಾದರೂ ತ್ಯಾಜ್ಯ ಉತ್ಪಾದಕನನ್ನು ಅಥವಾ ತ್ಯಾಜ್ಯ ಉತ್ಪಾದಕರ ವರ್ಗವನ್ನು ಅಲ್ಲದಿದ್ದರೆ ಜನವಾಸವಿಲ್ಲದ ಅಥವಾ ಖಾಲಿಯಾಗಿರುವ ಕಟ್ಟಡಗಳ ಮಾಲಿಕರನ್ನು ಅಥವಾ ಅನುಭೋಗದಾರರನ್ನು ಯೂಸರ್ ಫೀಸ್ ಪಾವತಿಸುವುದರಿಂದ ಸಂಪೂರ್ಣವಾಗಿಯೋ ಭಾಗಶಃವಾಗಿಯೋ ಹೊರತುಪಡಿಸಬಹುದಾಗಿದೆ.".

7. 327ನೇ ವಿಭಾಗದ ಬದಲಾಗಿ ಹೊಸ ವಿಭಾಗದ ಸೇರ್ಪಡೆ.—ಪ್ರಧಾನ ಅಧಿನಿಯಮದ *327ನೇ ವಿಭಾಗದ ಬದಲಾಗಿ ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:*—

"*327. ಘನತ್ಯಾಜ್ಯಗಳನ್ನು ಸಂಗ್ರಹಿಸುವುದಕ್ಕೆ ಮತ್ತು ನಿಕ್ಷೇಪಿಸುವುದಕ್ಕೆ ತ್ಯಾಜ್ಯ ಉತ್ಪಾದಕನಿಗಿರುವ ಜವಾಬ್ದಾರಿಗಳು.*—*(1) ಜೈವಿಕ ತ್ಯಾಜ್ಯಗಳು, ಅಜೈವಿಕ ತ್ಯಾಜ್ಯಗಳು ಮತ್ತು ಹಾನಿಕರವಾದ ಗೃಹ ತ್ಯಾಜ್ಯಗಳನ್ನು ಸಂಗ್ರಹಿಸುವುದಕ್ಕಾಗಿ ನಿಯಮಗಳಲ್ಲಿ ಅಥವಾ ಬೈಲಾಗಳಲ್ಲಿ ನಿಗದಿಪಡಿಸಿದ ಪ್ರಕಾರ ಅಲ್ಲದಿದ್ದಲ್ಲಿ ಕಾರ್ಯದರ್ಶಿಯವರು ನಿರ್ದಿಷ್ಟಪಡಿಸಿದಂತಹ ಗಾತ್ರದ ಮತ್ತು ಬಣ್ಣದಲ್ಲಿರುವ ಪ್ರತ್ಯೇಕ ಬಿನ್ನುಗಳನ್ನು ಅಥವಾ ಸಂಗ್ರಹಣೆಗಳನ್ನು ಸಜ್ಜೀಕರಿಸಬೇಕಾದುದು ಪ್ರತಿಯೊಬ್ಬ ತ್ಯಾಜ್ಯ ಉತ್ಪಾದಕನ ಕರ್ತವ್ಯವಾಗಿದೆ.*

(2) ಅಂತಹ ಬಿನ್ನುಗಳನ್ನು ಅಲ್ಲದಿದ್ದರೆ ಸಂಗ್ರಹಣೆಗಳನ್ನು ಸದಾಕಾಲ ಸರಿಯಾದ ರೀತಿಯಲ್ಲಿ ಕಾಯ್ದುಕೊಳ್ಳತಕ್ಕದ್ದು ಮತ್ತು ಕಾರ್ಯದರ್ಶಿಯವರು ಆಯಾಯ ಕಾಲದಲ್ಲಿ ಸಾರ್ವಜನಿಕ ನೋಟೀಸಿನಲ್ಲಿ ನಿರ್ದೇಶಿಸುವ ಸಂಖ್ಯೆಯಲ್ಲಿ ಅಂತಹ ಸ್ಥಳಗಳಲ್ಲಿ ಸಜ್ಜೀಕರಿಸತಕ್ಕದ್ದು.

(3) ಮುನಿಸಿಪಾಲಿಟಿ ನಿಯೋಜಿಸಿದಂತಹ ನೌಕರರಿಗೆ ಅಥವಾ ಗುತ್ತಿಗೆದಾರರಿಗೆ ಆ ರೀತಿಯ ತ್ಯಾಜ್ಯಗಳನ್ನು ಸುಲಭವಾಗಿ ಸಂಗ್ರಹಿಸಲು ಮತ್ತು ತೊಲಗಿಸಲು ಪ್ರತಿಯೊಬ್ಬ ತ್ಯಾಜ್ಯ ಉತ್ಪಾದಕನೂ ನಿಯಮಗಳಲ್ಲಿ ಹಾಗೂ ಬೈಲಾಗಳಲ್ಲಿ ನಿಗದಿಪಡಿಸಿದ ಪ್ರಕಾರ ತ್ಯಾಜ್ಯಗಳನ್ನು ಬೇರ್ಪಡಿಸಿ ನಿಕ್ಷೇಪಿಸತಕ್ಕದ್ದು.

(4) (3)ನೇ ಉಪ-ವಿಭಾಗದ ಉಪಬಂಧಗಳನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿಯ ಮೇಲೆ ಕಾರ್ಯದರ್ಶಿಯವರಿಗೆ ಸಾವಿರ ರೂಪಾಯಿಗಿಂತ ಕಡಿಮೆಯಲ್ಲದ ಮತ್ತು ಹತ್ತುಸಾವಿರ ರೂಪಾಯಿಗಿಂತ ಅಧಿಕವಲ್ಲದ ಜುಲ್ಮಾನೆಯನ್ನು ಹೊರಿಸಬಹುದಾಗಿದೆ.".

8. 328ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ *328ನೇ ವಿಭಾಗದಲ್ಲಿ,*—

(i) *ಪಾರ್ಶ್ವ ಶೀರ್ಷಿಕೆಯ ಬದಲಾಗಿ ಈ ಕೆಳಗಿನ ಪಾರ್ಶ್ವ ಶೀರ್ಷಿಕೆಯನ್ನು ಸೇರಿಸತಕ್ಕದ್ದು, ಅದೇನೆಂದರೆ:*—

"*ತ್ಯಾಜ್ಯಗಳನ್ನು ತೊಲಗಿಸಲು ತ್ಯಾಜ್ಯ ಉತ್ಪಾದಕನೊಂದಿಗೆ ಅಥವಾ ಮಾಲೀಕನೊಂದಿಗೆ ಅಥವಾ ನಿವಾಸಿಗನೊಂದಿಗೆ ಮಾಡಿದ ಒಪ್ಪಂದ*";

(ii) *ಆಸ್ತಿತ್ವದಲ್ಲಿರುವ ಉಪಬಂಧದಲ್ಲಿನ* "*ಯಾವುದೇ ಆವರಣಗಳ ಮಾಲೀಕನೊಂದಿಗೆ ಅಥವಾ ನಿವಾಸಿಗನೊಂದಿಗೆ*" *ಎಂಬ ಪದಗಳಿಗೆ ಬದಲಾಗಿ* "*ತ್ಯಾಜ್ಯ ಉತ್ಪಾದಕನೊಂದಿಗೆ ಅಲ್ಲದಿದ್ದರೆ ಯಾವುದಾದರೂ ಆವರಣಗಳ ಮಾಲೀಕನೊಂದಿಗೆ ಅಥವಾ ನಿವಾಸಿಗನೊಂದಿಗೆ*" *ಎಂಬ ಪದಗಳನ್ನು ಮತ್ತು* "*ಕಸ ಅಥವಾ ತ್ಯಾಜ್ಯವನ್ನು ತೊಲಗಿಸಲು*" *ಎಂಬ ಪದಗಳಿಗೆ ಬದಲಾಗಿ* "*ತ್ಯಾಜ್ಯಗಳನ್ನು ತೊಲಗಿಸಲು*" *ಎಂಬ ಪದಗಳನ್ನು ಸೇರಿಸತಕ್ಕದ್ದು.*

This is a digitally signed Gazette.
Authenticity may be verified through https://compose.kerala.gov.in/

9. 329ನೇ ವಿಭಾಗಕ್ಕೆ ಬದಲಾಗಿ ಹೊಸ ವಿಭಾಗದ ಸೇರ್ಪಡೆ.—ಪ್ರಧಾನ ಅಧಿನಿಯಮದ *329ನೇ* ವಿಭಾಗದ ಬದಲಾಗಿ ಈ ಕೆಳಗಿನ ವಿಭಾವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*329. ಮನೆಬಾಗಿಲಿನ ತ್ಯಾಜ್ಯ ಸಂಗ್ರಹಣೆ*—*(1)* ಪ್ರತಿಯೊಂದು ಮುನಿಸಿಪಾಲಿಟಿಯೂ ಮುನಿಸಿಪಲ್ ಪ್ರದೇಶದಲ್ಲಿರುವ ಪ್ರತಿ ಮನೆಗಳಿಂದಲೂ, ಜನವಾಸ ಕೇಂದ್ರಗಳಿಂದಲೂ, ವಾಣಿಜ್ಯ ಸಂಸ್ಥೆಗಳಿಂದಲೂ, ಇತರ ವಸತಿ ರಹಿತ ಪ್ರದೇಶಗಳಿಂದಲೂ, ಮತ್ತು ಬಹುಅಂತಸ್ತು ಕಟ್ಟಡಗಳು, ವಾಣಿಜ್ಯ ಸಮುಚ್ಚಯಗಳು, ಮಳಿಗೆಗಳು, ಗೃಹ ಸಮುಚ್ಚಯಗಳು ಎಂಬಿವುಗಳ ವಿಷಯದಲ್ಲಿ ಪ್ರವೇಶ ದ್ವಾರದಿಂದಲೋ ಅಥವಾ ಕಾರ್ಯದರ್ಶಿಯವರು ಸಾರ್ವಜನಿಕ ನೋಟೀಸಿನಲ್ಲಿ ನಿರ್ದೇಶಿಸಿದ ಬೇರೆ ಯಾವುದಾದರೂ ಸ್ಥಳಗಳಿಂದಲೋ ಬೇರ್ಪಡಿಸಿದ ತ್ಯಾಜ್ಯಗಳನ್ನು ಮನೆಬಾಗಿಲಿನಿಂದಿರುವ ಸಂಗ್ರಹಣೆಗಿರುವ ವ್ಯವಸ್ಥೆಗಳನ್ನು ಏರ್ಪಡಿಸತಕ್ಕದ್ದು.

*(2) (1)*ನೇ ಉಪ-ವಿಭಾಗದ ಪ್ರಕಾರ ಸಂಗ್ರಹಿಸಿದ ಬೇರ್ಪಡಿಸಿದ ತ್ಯಾಜ್ಯಗಳನ್ನು ಸರಿಯಾಗಿ ಮುಚ್ಚಿಡದೆ ಸಂಸ್ಕರಣೆಗೋ ವೀಲೆವಾರಿಗೋ ಬೇಕಾಗಿ ಕೊಂಡುಹೋಗುವುದೋ ತಲುಪಿಸುವುದೋ ಮಾಡತಕ್ಕದ್ದಲ್ಲ."*.*

10. 331ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ *331ನೇ* ವಿಭಾಗದಲ್ಲಿ,—

(i) *(1)*ನೇ ಉಪ-ವಿಭಾಗದ ಬದಲಾಗಿ ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*(1)* ಘನ, ದ್ರವ, ಮಲಿನ ಜಲ ಅಲ್ಲದಿದ್ದರೆ ಫೀಕಲ್ ಸ್ಲಡ್ಜ್ ಸಂಸ್ಕರಣೆ ಪ್ಲ್ಯಾಂಟ್ ಇಲ್ಲದ ಮತ್ತು ಮುನಿಸಿಪಲ್ ಪ್ರದೇಶದೊಳಗೆ ಅಥವಾ ಹೊರಗೆ ಖಾಲಿಯಾದ ಭೂಮಿ ಸ್ವಾಧೀನದಲ್ಲಿರುವ ಮುನಿಸಿಪಾಲಿಟಿಗೆ, ಅಂತಹ ಪ್ಲಾಂಟುಗಳನ್ನೋ ಸೌಕರ್ಯಗಳನ್ನೋ ಪ್ರಸ್ತುತ ಭೂಮಿಯಲ್ಲಿ ಸ್ಥಾಪಿಸುವುದಕ್ಕಿರುವ ಯೋಜನೆಗಳಿಗೆ ಆದ್ಯತೆ ನೀಡಿ ವಹಿಸಿಕೊಳ್ಳತಕ್ಕದ್ದಾಗಿದೆ.";

(ii) ಆ ರೀತಿಯಲ್ಲಿ ಬದಲಾಗಿ ಸೇರ್ಪಡೆಗೊಳಿಸಿದ *(1)*ನೇ ಉಪ-ವಿಭಾಗದ ನಂತರ ಈ ಕೆಳಗಿನ ಉಪ-ವಿಭಾಗಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*(1ಎ)* ಪ್ರತಿಯೊಂದು ಮುನಿಸಿಪಾಲಿಟಿಯು ತ್ಯಾಜ್ಯ ಸಂಸ್ಕರಣೆಗಾಗಿ ಮುನಿಸಿಪಲ್ ಪ್ರದೇಶದೊಳಗೆಯೋ ಹೊರಗೆಯೋ ಯೋಗ್ಯವಾದ ಖಾಸಗಿ ಸ್ಥಳವನ್ನು ಕಂಡುಹಿಡಿಯಬೇಕಾಗಿದ್ದು ಮತ್ತು ಅಗತ್ಯವಿದ್ದಲ್ಲಿ 2013ರ ದಿ ರೈಟ್ ಟು ಫೇರ್ ಕೋಂಪನ್ಸೇಷನ್ ಆಂಡ್ ಟ್ರಾನ್ಸ್‌ಪರೆನ್ಸಿ ಇನ್ ಲಾಂಡ್ ಅಕ್ವಿಸಿಷನ್, ರೀಹಾಬಿಲಿಟೇಷನ್ ಆಂಡ್ ರೀಸೆಟಲ್‌ಮೆಂಟ್ ಆಕ್ಟ್ (2013ರ 30ನೇ ಕೇಂದ್ರ ಆಕ್ಟ್) ಪ್ರಕಾರವೋ, ಭೂಮಿ ಬಿಟ್ಟುಕೊಡುವಿಕೆ ಪ್ರಕಾರವೋ, ಗುತ್ತಿಗೆ ಮೂಲಕವೋ, ಖಾಸಗಿ ಖರೀದಿಯ ಮೂಲಕವೋ ಸ್ಥಳವನ್ನು ಆರ್ಜಿಸತಕ್ಕದ್ದು.

(1ಬಿ) (1ಎ) ಉಪ-ವಿಭಾಗದ ಪ್ರಕಾರ ಮುನಿಸಿಪಾಲಿಟಿ ಆರ್ಜಿಸುವ ಭೂಮಿಯನ್ನು ಸರಕಾರದ ಪೂರ್ವ ಅನುಮತಿಯಿಲ್ಲದೆ ಬೇರೆ ಯಾವುದಾದರೂ ಅಗತ್ಯಗಳಿಗೆ ಉಪಯೋಗಿಸತಕ್ಕದ್ದಲ್ಲ.

(1ಸಿ) ತ್ಯಾಜ್ಯ ಸಂಸ್ಕರಣೆ ಚಟುವಟಿಕೆಗಳಿಗಾಗಿ ಖಾಲಿಯಾದ ಸ್ವಂತ ಭೂಮಿ ಅಥವಾ ತಮ್ಮಲ್ಲಿ ನಿಹಿತವಾದ ಭೂಮಿ ಲಭ್ಯವಿದ್ದಲ್ಲಿ ಅದನ್ನು ವಿನಿಯೋಗಿಸಲು ಪ್ರತಿಯೊಂದು ಮುನಿಸಿಪಾಲಿಟಿಯೂ ಆದ್ಯತೆ ನೀಡತಕ್ಕದ್ದು.

(1ಡಿ) ತ್ಯಾಜ್ಯ ಸಂಸ್ಕರಣೆ ಚಟುವಟಿಕೆಗಳಿಗಾಗಿ ಮೊದಲು ಉಪಯೋಗಿಸಿದ್ದ ಆದರೆ ಈಗ ವಿವಿಧ ಕಾರಣಗಳಿಂದ ಉಪಯೋಗಿಸದ ಭೂಮಿಯಲ್ಲಿ ತ್ಯಾಜ್ಯ ಸಂಸ್ಕರಣೆ ಚಟುವಟಿಕೆಗಳನ್ನು ಪುನರಾರಂಭಿಸಲು ಸಾಧ್ಯವಾದ ಎಲ್ಲಾ ಕ್ರಮಗಳನ್ನು ಮುನಿಸಿಪಾಲಿಟಿಯು ಕೈಗೊಳ್ಳತಕ್ಕದ್ದು:

ಆದರೆ, ಸರಕಾರದ ಪೂರ್ವ ಅನುಮತಿಯಿಲ್ಲದೆ ಪ್ರಸ್ತುತ ಭೂಮಿಯನ್ನು ಬೇರೆ ಯಾವುದೇ ಅಗತ್ಯಕ್ಕೂ ಮೀಸಲಿಡುವುದೋ, ಉಪಯೋಗಿಸುವುದೋ ಮಾಡತಕ್ಕದ್ದಲ್ಲ.";

(iii) *(2)*ನೇ ಉಪ-ವಿಭಾಗದಲ್ಲಿ "*(1)*ನೇ ಉಪ-ವಿಭಾಗದ ಪ್ರಕಾರ ಸ್ಥಳ ಅಧಿಸೂಚಿಸುವಾಗ" ಎಂಬ ಆವರಣ, ಅಂಕೆ, ಚಿಹ್ನೆ ಮತ್ತು ಪದಗಳ ಬದಲಾಗಿ "*(1ಎ)* ಉಪ-ವಿಭಾಗದ ಪ್ರಕಾರ ಭೂಮಿಯನ್ನು ಕಂಡುಹಿಡಿಯುವಾಗ" ಎಂಬ ಆವರಣ, ಅಂಕೆ, ಅಕ್ಷರ ಮತ್ತು ಪದಗಳನ್ನು ಸೇರಿಸತಕ್ಕದ್ದು.

11. 332ನೇ ವಿಭಾಗದ ನಂತರ ಹೊಸ ವಿಭಾಗಗಳ ಸೇರ್ಪಡೆ.—ಪ್ರಧಾನ ಅಧಿನಿಯಮದ *332ನೇ* ವಿಭಾಗದ ನಂತರ ಈ ಕೆಳಗಿನ ವಿಭಾಗಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*332ಎ. ಸಂಯುಕ್ತ ತ್ಯಾಜ್ಯ ಸಂಸ್ಕರಣೆ ಯೋಜನೆಗಳ ಸ್ಥಾಪನೆ.*—ಮುನಿಸಿಪಾಲಿಟಿಗೆ, ಕೌನ್ಸಿಲ್ ಆ ರೀತಿ ತೀರ್ಮಾನಿಸುವುದು ಅಲ್ಲದಿದ್ದರೆ ಸರಕಾರವು ಆ ರೀತಿ ಅವಶ್ಯಪಡುವುದಾದಲ್ಲಿ, ಇತರ ಯಾವುದಾದರೂ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳೊಂದಿಗೆ ಸೇರಿಕೊಂಡು, ಅಂತಹ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳು ಅಂಗೀಕರಿಸಿದಂತಹ ಷರತ್ತುಗಳಿಗೆ ಮತ್ತು ನಿಬಂಧನೆಗಳಿಗನುಸರಿಸಿ ಸರಕಾರವು ಇದಕ್ಕಾಗಿ ಹೊರಡಿಸಬಹುದಾದ ಮಾರ್ಗ ನಿರ್ದೇಶಗಳಿಗೆ ವಿಧೇಯವಾಗಿ ಸಂಯುಕ್ತ ತ್ಯಾಜ್ಯ ಸಂಸ್ಕರಣೆ ಯೋಜನೆಗಳನ್ನು ಸ್ಥಾಪಿಸಬಹುದಾಗಿದೆ.

This is a digitally signed Gazette.
Authenticity may be verified through https://compose.kerala.gov.in/

6

332ಬ. ಮುನಿಸಿಪಾಲಿಟಿಯು ನಿರಂತರವಾಗಿ ತಪಾಸಣೆಗೆ ಮತ್ತು ಮೇಲ್ವಿಚಾರಣೆಗೆ ಏರ್ಪಾಟು ಮಾಡತಕ್ಕದ್ದೆಂದು.—ಮುನಿಸಿಪಾಲಿಟಿಯ ತ್ಯಾಜ್ಯ ಸಂಸ್ಕರಣೆ ಚಟುವಟಿಕೆಗಳು ಮತ್ತು ಯೋಜನೆಗಳು ಅಗತ್ಯವಿರುವ ಮಾನದಂಡಗಳನ್ನು ಪಾಲಿಸುತಾ ಹಾಗೂ ಅಸ್ತಿತ್ವದಲ್ಲಿರುವ ಕಾನೂನುಗಳಿಗನುಸಾರವಾಗಿ ಆಗಿದೆ ಕಾರ್ಯಾಚರಿಸುತ್ತಿರುವುದೆಂದು ಮತ್ತು ಕಾರ್ಯಗತಗೊಳ್ಳುವುದೆಂದು ದೃಢಪಡಿಸುವುದಕ್ಕಾಗಿ ನಿರಂತರವಾದ ತಪಾಸಣೆ ಹಾಗೂ ಮೇಲ್ವಿಚಾರಣೆ ನಡೆಸುವುದಕ್ಕೆ ಅವಶ್ಯಕವಾದ ವ್ಯವಸ್ಥೆಗಳನ್ನು ಏರ್ಪಡಿಸಬೇಕಾದುದು ಮುನಿಸಿಪಾಲಿಟಿಯ ಜವಾಬ್ದಾರಿಯಾಗಿದೆ.

332ಸಿ. ವ್ಯಕ್ತಿಗಳ ಜವಾಬ್ದಾರಿಗಳು ಮತ್ತು ಅಪರಾಧಗಳ ಕುರಿತು ವರದಿ ಮಾಡುವುದಕ್ಕಿರುವ ಪಾರಿತೋಷಕಗಳು.—*(1)* ಈ ಅಧ್ಯಾಯದ ಉಪಬಂಧಗಳ ಯಾವುದಾದರೂ ಉಲ್ಲಂಘನೆ ಅಥವಾ ಸಾರ್ವಜನಿಕ ಸ್ಥಳಗಳಲ್ಲಿಯೂ, ಜಲಾಶಯಗಳಲ್ಲಿಯೂ ತ್ಯಾಜ್ಯವನ್ನು ಎಸೆಯುವುದು, ಹಾಕುವುದು ಅಥವಾ ರಾಶಿ ಹಾಕುವುದು ಮುಂತಾದವು ಒಳಗೊಂಡ ತ್ಯಾಜ್ಯ ಸಂಸ್ಕರಣೆಗೆ ಸಂಬಂಧಿಸಿದ ಯಾವುದಾದರೂ ಅಪರಾಧಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಯಾವುದೇ ವ್ಯಕ್ತಿಗೆ ಕಾರ್ಯದರ್ಶಿಯವರ ಸಮಕ್ಷದಲ್ಲಿ ವರದಿ ಮಾಡಬಹುದಾಗಿದೆ.

(2) ಮುನಿಸಿಪಾಲಿಟಿಗೆ, ಸರಕಾರವು ಕಾಲಕಾಲಗಳಲ್ಲಿ ಹೊರಡಿಸುವ ಮಾರ್ಗನಿರ್ದೇಶಗಳಿಗೆ ವಿಧೇಯವಾಗಿ, *(1)*ನೇ ಉಪ-ವಿಭಾಗದ ಪ್ರಕಾರ ಉಲ್ಲಂಘನೆಗಳನ್ನು ಮತ್ತು ಅಪರಾಧಗಳನ್ನು ವರದಿ ಮಾಡುವ ಜನರಿಗೆ ಪಾರಿತೋಷಕ ನೀಡಬಹುದಾಗಿದೆ.

(3) ಇತರರಿಗೆ ದ್ರೋಹ ಅಥವಾ ನಷ್ಟವುಂಟಾಗುವ ರೀತಿಯಲ್ಲಿ ದುರುದ್ದೇಶದಿಂದ ಅಥವಾ ಉದ್ದೇಶಪೂರ್ವಕವಾಗಿ *(1)*ನೇ ಉಪ-ವಿಭಾಗದ ಪ್ರಕಾರ ತಪ್ಪಾದ ಒಂದು ಮಾಹಿತಿ ನೀಡುವ ಯಾವುದೇ ವ್ಯಕ್ತಿಯನ್ನು ಅಪರಾಧ ನಿರ್ಣಯತಿಯ ಮೇಲೆ ಹತ್ತು ಸಾವಿರ ವರೆಗಿನ ಜುಲ್ಮಾನೆ ವಿಧಿಸಿ ಶಿಕ್ಷಿಸತಕ್ಕದ್ದು.

332ಡಿ. ತ್ಯಾಜ್ಯ ಸಂಸ್ಕರಣೆ ಕೇಂದ್ರಗಳ ಸಮೀಪವಿರುವ ನಿವಾಸಿಗರಿಗೆ ಉಪಯುಕ್ತವಾದ ಉಪಬಂಧಗಳು.—*(1)* ಮುನಿಸಿಪಾಲಿಟಿಗೆ, ಸರಕಾರವು ರಚಿಸುವ ನಿಯಮಗಳಿಗೆ ಅಥವಾ ಹೊರಡಿಸುವ ಮಾರ್ಗನಿರ್ದೇಶಗಳಿಗೆ ವಿಧೇಯವಾಗಿ, ಕೇಂದ್ರೀಕೃತ ತ್ಯಾಜ್ಯ ಸಂಸ್ಕರಣೆ ಕೇಂದ್ರಗಳು ಅಥವಾ ವಿಲೇವಾರಿ ಸ್ಥಳಗಳು ಮುಂತಾದವುಗಳ ಸಮೀಪ ವಾಸಿಸುವವರಿಗೆ ತೆರಿಗೆ ವಿನಾಯಿತಿ, ರಿಯಾಯಿತಿ ಅಥವಾ ಕಲ್ಯಾಣ ಯೋಜನೆಗಳನ್ನು ಒಳಗೊಂಡವುಗಳಲ್ಲಿ ಮಾತ್ರ ಸೀಮಿತವಾಗಿರಿಸದೆ ಇತರ ಪ್ರೋತ್ಸಾಹಗಳನ್ನು ನೀಡಬಹುದಾಗಿದೆ.

(2) ಮುನಿಸಿಪಾಲಿಟಿಗೆ, ಕೇಂದ್ರೀಕೃತ ತ್ಯಾಜ್ಯ ಸಂಸ್ಕರಣೆ ಕೇಂದ್ರಗಳು ಅಥವಾ ವಿಲೇವಾರಿ ಸ್ಥಳಗಳ ಹತ್ತಿರ ವಾಸಿಸುವವರ ಕಲ್ಯಾಣಕ್ಕೆ ಮತ್ತು ಮನರಂಜನೆಗಾಗಿ ಪಾರ್ಕುಗಳು, ಆಟದ ಮೈದಾನಗಳು, ರೀಸೈಕ್ಲಿಂಗ್ ಸೌಕರ್ಯಗಳು, ಸ್ವಾಪ್‌ಶೋಪ್‌ಗಳು, ದೈಹಿಕ ತರಬೇತಿ ಸೌಕರ್ಯಗಳು ಮುಂತಾದ ಅನುಕೂಲಕರವಾದ ಮತ್ತು ಪ್ರಯೋಜನಕರವಾದ ವ್ಯವಸ್ಥೆಗಳನ್ನು ಏರ್ಪಡಿಸಬಹುದಾಗಿದೆ.".

12. 333ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ *333*ನೇ ವಿಭಾಗದಲ್ಲಿ ಅಸ್ತಿತ್ವದಲ್ಲಿರುವ ಉಪಬಂಧವನ್ನು ಅದರ *(1)*ನೇ ಉಪ-ವಿಭಾಗವಾಗಿ ಅಂಕಿತಗೊಳಿಸತಕ್ಕದ್ದು ಹಾಗೂ ಆ ರೀತಿಯಲ್ಲಿ ಅಂಕಿತಗೊಳಿಸಿದ *(1)*ನೇ ಉಪ-ವಿಭಾಗದ ನಂತರ ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*(2)* ಯಾವುದೇ ವ್ಯಕ್ತಿಯು ಕನಿಷ್ಠ ಮೂರು ಕೆಲಸದ ದಿನಗಳಿಗಿಂತ ಮುಂಚಿತವಾದರೂ ಮುನಿಸಿಪಾಲಿಟಿಗೆ ತಿಳಿಸದೆ, ಅನುಮತಿಯಿಲ್ಲದ ಯಾವುದಾದರೂ ಸ್ಥಳದಲ್ಲಿ ನೂರಕ್ಕಿಂತ ಹೆಚ್ಚು ಜನರ ಒಂದು ಕಾರ್ಯಕ್ರಮ ಅಥವಾ ಒಕ್ಕೂಟವನ್ನು ಸಂಘಟಿಸತಕ್ಕದ್ದಲ್ಲ ಮತ್ತು ಅಂತಹ ವ್ಯಕ್ತಿ ಅಥವಾ ಅಂತಹ ಕಾರ್ಯಕ್ರಮದ ಸಂಯೋಜಕನು ಮೂಲದಲ್ಲಿಯೇ ತ್ಯಾಜ್ಯವನ್ನು ಬೇರ್ಪಡಿಸಲಾಗುತ್ತಿದೆ ಎಂದು ಖಾತ್ರಿಪಡಿಸತಕ್ಕದ್ದು ಮತ್ತು ಮುನಿಸಿಪಾಲಿಟಿಯು ನಿಗದಿಪಡಿಸುವ ಶುಲ್ಕವನ್ನು ನೀಡಿ ಮುನಿಸಿಪಾಲಿಟಿಯು ನಿಯೋಜಿಸಿದ ತ್ಯಾಜ್ಯ ಸಂಗ್ರಹದಾರರಿಗೆ ಅಥವಾ ಏಜೆನ್ಸಿಗಳಿಗೆ ಅದನ್ನು ಹಸ್ತಾಂತರಿಸತಕ್ಕದ್ದು:

ಆದರೆ, ಅಂತಹ ಶುಲ್ಕಗಳು ತ್ಯಾಜ್ಯ ಸಂಸ್ಕರಣೆಗಿರುವ ಯಥಾರ್ಥ ಖರ್ಚಿಗಿಂತ ಕಡಿಮೆ ದರ ಆಗಿರತಕ್ಕದ್ದಲ್ಲ ಮತ್ತು ಅದನ್ನು ಮುನಿಸಿಪಾಲಿಟಿ ನಿರ್ದೇಶಿಸಿದ ಪ್ರಕಾರ ಮುಂಗಡವಾಗಿ ಪಾವತಿಸತಕ್ಕದ್ದು.".

13. 334ಸಿ ವಿಭಾಗದ ಬದಲಾಗಿ ಹೊಸ ವಿಭಾಗದ ಸೇರ್ಪಡೆ.—ಪ್ರಧಾನ ಅಧಿನಿಯಮದ *334*ಸಿ ವಿಭಾಗದ ಬದಲಾಗಿ ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*334ಸಿ. ತ್ಯಾಜ್ಯ ಸಂಸ್ಕರಣೆ ಫಂಡಿನ ರಚನೆ.*—*(1)* ಪ್ರತಿಯೊಂದು ಮುನಿಸಿಪಾಲಿಟಿಯು "ತ್ಯಾಜ್ಯ ಸಂಸ್ಕರಣೆ ಫಂಡ್" ಎಂಬ ಹೆಸರಿನಲ್ಲಿ ಒಂದು ಫಂಡ್ ರೂಪೀಕರಿಸತಕ್ಕದ್ದಾಗಿದೆ, ಮತ್ತು ಅದನ್ನು ಸರಕಾರವು ರಚಿಸುವ ಕಾನೂನುಗಳಿಗೆ ಅಥವಾ ಹೊರಡಿಸುವ ಮಾರ್ಗನಿರ್ದೇಶಗಳಿಗೆ ಅನುಸಾರವಾಗಿ ನಿರ್ವಹಿಸತಕ್ಕದ್ದಾಗಿದೆ.

(2) ತ್ಯಾಜ್ಯ ಸಂಸ್ಕರಣೆ ಫಂಡಿಗೆ ಈ ಕೆಳಗಿನವುಗಳನ್ನು ಜಮೆ ಮಾಡತಕ್ಕದ್ದಾಗಿದೆ, ಅದೇನೆಂದರೆ:—

(ಎ) ತ್ಯಾಜ್ಯ ಸಂಸ್ಕರಣೆಯ ಉಲ್ಲಂಘನೆಗೆ ಸಂಬಂಧಿಸಿದ ಜುಲ್ಮಾನೆಯಾಗಿಯೋ ದಂಡವಾಗಿಯೋ ವಸೂಲುಮಾಡಿದ ಮೊತ್ತ;

This is a digitally signed Gazette.
Authenticity may be verified through https://compose.kerala.gov.in/

(ಬ) ತ್ಯಾಜ್ಯ ಸಂಸ್ಕರಣೆ ಚಟುವಟಿಕೆಗಳಿಗಾಗಿ ಕೋರ್ಪರೇಟ್ ಸೋಷ್ಯಲ್ ರೆಸ್ಪೋನ್ಸಿಬಿಲಿಟಿ (ಸಿ.ಎಸ್.ಆರ್.) ಫಂಡಿನಿಂದ ಲಭಿಸಿದ ಕೊಡುಗೆ;

(ಸಿ) ಈ ಅಗತ್ಯಕ್ಕಾಗಿ ಲಭಿಸಿದ ಪ್ರಾಯೋಜಕತ್ವ ಮೊತ್ತ ಮತ್ತು ಇತರ ಕೊಡುಗೆಗಳು;

(ಡಿ) ಸರಕಾರವು ನಿರ್ದೇಶಿಸುವ ಬೇರೆ ಯಾವುದಾದರೂ ಮೊತ್ತಗಳು.

(3) ಫಂಡ್‌ನ್ನು ಈ ಕೆಳಗಿನ ಅಗತ್ಯಗಳಿಗಾಗಿ,—

(ಎ) ತ್ಯಾಜಗಳ ಬೇರ್ಪಡಿಸುವಿಕೆ, ಸಂಗ್ರಹಣೆ, ಸಾಗಣೆ, ಪಾಲನೆ, ಸಂಸ್ಕರಣೆ ಮತ್ತು ನಿರ್ಮೂಲನೆಗೆ ಎಂಬಿವುಗಳನ್ನು ಒಳಗೊಂಡ, ಆದರೆ ಅದಕ್ಕೆ ಮಾತ್ರ ಸೀಮಿತಗೊಳಿಸದೆ ಎಲ್ಲಾ ತ್ಯಾಜ್ಯ ಸಂಸ್ಕರಣೆ ಚಟುವಟಿಕೆಗಳಿಗೂ;

(ಬ) ದಕ್ಷವಾದ ತ್ಯಾಜ್ಯಸಂಸ್ಕರಣೆಗೆ ಅವಶ್ಯಕವಾದ ಉಪಕರಣಗಳನ್ನು ಖರೀದಿಸಲು ಮತ್ತು ಸ್ಥಾಪಿಸಲು;

(ಸಿ) ತ್ಯಾಜ್ಯ ಸಂಸ್ಕರಣೆಯಲ್ಲಿ ನಿರತರಾಗಿರುವ ನೌಕರರ ಕೌಶಲ್ಯ ಮತ್ತು ಜ್ಞಾನವನ್ನು ಹೆಚ್ಚಿಸುವುದಕ್ಕಾಗಿರುವ ತರಬೇತಿಗೆ ಹಾಗೂ ಕಾರ್ಯಕ್ಷಮತೆ ಅಭಿವೃದ್ಧಿ ಕಾರ್ಯಕ್ರಮಗಳಿಗೆ;

(ಡಿ) ಸರಕಾರವು ಅಂಗೀಕರಿಸಿದ ತ್ಯಾಜ್ಯ ಸಂಸ್ಕರಣೆಗೆ ಸಂಬಂಧಿಸಿದ ಇತರ ಯಾವುದೇ ಚಟುವಟಿಕೆಗಳಿಗೂ

ಉಪಯೋಗಿಸತಕ್ಕದ್ದು.''.

14. 335ನೇ ವಿಭಾಗದ ಬದಲಾಗಿ ಹೊಸ ವಿಭಾಗದ ಸೇರ್ಪಡೆ.—ಪ್ರಧಾನ ಅಧಿನಿಯಮದ 335ನೇ ವಿಭಾಗದ ಬದಲಾಗಿ ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

''335. ಅಂಗಡಿಗಳ ಮತ್ತು ವಾಣಿಜ್ಯ ಸಂಸ್ಥೆಗಳ ಪರಿಸರವನ್ನು ಶುಚಿಯಾಗಿರಿಸುವುದಕ್ಕಿರುವ ಜವಾಬ್ದಾರಿ.—(1) ಪ್ರತಿಯೊಂದು ಅಂಗಡಿಯ ಮತ್ತು ವಾಣಿಜ್ಯ ಸಂಸ್ಥೆಯ ಪರಿಸರವನ್ನು ಶುಚಿಯಾಗಿರಿಸತಕ್ಕದ್ದು ಹಾಗೂ ಅದರ ಪರಿಸರದಲ್ಲಿ ತ್ಯಾಜ್ಯ ಎಸೆಯುವುದು, ರಾಶಿ ಹಾಕುವುದು ಮತ್ತು ಉರಿಸುವುದು ಮಾಡದಿರುವುದು ಅಲ್ಲದಿದ್ದರೆ ಅದರ ಪರಿಸರದಲ್ಲಿ ಯಾವುದೇ ತ್ಯಾಜ್ಯವನ್ನು ಎಸೆಯಲೋ, ರಾಶಿ ಹಾಕಲೋ, ಉರಿಸಲೋ ಗ್ರಾಹಕರಿಗೆ ಅನುಮತಿ ನೀಡದಿರುವುದು ಮಾಲೀಕರ ಮತ್ತು ಅನುಭೋಗದಾರರ ಜವಾಬ್ದಾರಿಯಾಗಿದೆ.

(2) (1)ನೇ ಉಪ-ವಿಭಾಗದ ಉಪಬಂಧಗಳನ್ನು ಯಾವುದೇ ವ್ಯಕ್ತಿಯು ಉಲ್ಲಂಘಿಸಿರುವನೆಂದು ಮನದಟ್ಟಾದಲ್ಲಿ, ಪ್ರಸ್ತುತ ಉಲ್ಲಂಘನೆಯ ವ್ಯಾಪ್ತಿಗೆ, ತೀವ್ರತೆಗೆ ಅಥವಾ ಸ್ವರೂಪಕ್ಕೆ ಅನುಸರಿಸಿ ಕಾರ್ಯದರ್ಶಿಯವರಿಗೆ ಅಥವಾ ಕಾರ್ಯದರ್ಶಿಯವರು ವಿಶೇಷವಾಗಿ ನಿಯೋಜಿಸಿದ ಅಧಿಕಾರಿಗೆ ಅಂತಹ ವ್ಯಕ್ತಿಯ ಮೇಲೆ ಐದುಸಾವಿರ ರೂಪಾಯಿ ವರೆಗಿನ ಜುಲ್ಮಾನೆಯನ್ನು ಹೊರಿಸಬಹುದಾಗಿದೆ.

(3) (2)ನೇ ಉಪ-ವಿಭಾಗದ ಪ್ರಕಾರ ಹೊರಿಸಲ್ಪಟ್ಟ ಜುಲ್ಮಾನೆಯನ್ನು ಅದನ್ನು ಹೊರಿಸಿದ ದಿನಾಂಕದಿಂದ ಹದಿನೈದು ದಿನದೊಳಗೆ ಪಾವತಿಸತಕ್ಕದ್ದು ಮತ್ತು ಆ ರೀತಿ ಪಾವತಿಸಲು ಲೋಪ ಉಂಟುಮಾಡುವುದಾದಲ್ಲಿ, ಕಾರ್ಯದರ್ಶಿಯವರು ಆತನ ವಿರುದ್ಧ ಕೈಗೊಳ್ಳಬಹುದಾದ ಇತರ ಕ್ರಮಗಳಿಗೆ ಭಂಗವುಂಟಾಗದಂತೆ, ಕಾನೂನು ಕ್ರಮಗಳನ್ನು ಆರಂಭಿಸತಕ್ಕದ್ದಾಗಿದೆ.

ವಿವರಣೆ:—ಈ ವಿಭಾಗದ ಅಗತ್ಯಕ್ಕಾಗಿ, 'ಅಂಗಡಿಗಳು', 'ವಾಣಿಜ್ಯ ಸಂಸ್ಥೆ' ಎಂಬೀ ಪದಗಳಿಗೆ ಅನುಕ್ರಮವಾಗಿ 1960ರ ಕೇರಳ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳು ಅಧಿನಿಯಮ (1960ರ 34)ದಲ್ಲಿ ಅದಕ್ಕೆ ನೀಡಿರುವ ಅದೇ ಅರ್ಥಗಳು ಇರುವುದಾಗಿದೆ.''.

15. 337ನೇ ವಿಭಾಗದ ಬದಲಾಗಿ ಹೊಸ ವಿಭಾಗದ ಸೇರ್ಪಡೆ.—ಪ್ರಧಾನ ಅಧಿನಿಯಮದ 337ನೇ ವಿಭಾಗದ ಬದಲಾಗಿ ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

''337. ಉಪಯೋಗಿಸಿದ ನೀರನ್ನು ಸಾರ್ವಜನಿಕ ಸ್ಥಳಗಳಿಗೋ ಜಲಾಶಯಗಳಿಗೋ ಹರಿಸುವುದನ್ನು ತಡೆಯುವಿಕೆ.—(1) ಯಾವುದೇ ವ್ಯಕ್ತಿಯೂ ಯಾವುದಾದರೂ ಸಿಂಕ್, ಚರಂಡಿ, ಹಟ್ಟಿ, ಹೋಟೆಲ್, ರೆಸ್ಟೋರೆಂಟ್, ಮನೆ, ಕೈಗಾರಿಕಾ ಸಂಸ್ಥೆ, ಆಸ್ಪತ್ರೆ ಅಲ್ಲದಿದ್ದರೆ ಇತರ ಸಂಸ್ಥೆಗಳು ಇತ್ಯಾದಿಗಳಿಂದಿರುವ ಹೊಲಸು ನೀರು, ಸಾರ್ವಜನಿಕ ಚರಂಡಿ, ರಸ್ತೆ, ಬೀದಿ, ಸಾರ್ವಜನಿಕ ಸ್ಥಳ, ಜಲಾಶಯ ಅಲ್ಲದಿದ್ದರೆ ಜಲಮೂಲಗಳಿಗೆ ಹರಿಸುವುದು ಹಾಗೂ ಹರಿಯಲು ಅನುಮತಿಸುವುದು ಅಲ್ಲದಿದ್ದರೆ ಅಂತಹ ಪರಿಸರಗಳಿಂದ ಆ ರೀತಿಯಲ್ಲಿ ಉಪಯೋಗಿಸಿದ ನೀರನ್ನು ಹರಿಸಲು ಅನುಮತಿಸುವುದು ಅಥವಾ ಅದಕ್ಕೆ ಕಾರಣವಾಗುವುದು ಮಾಡತಕ್ಕದ್ದಲ್ಲ.

(2) (1)ನೇ ಉಪ-ವಿಭಾಗದ ಉಪಬಂಧಗಳನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿಯ ಮೇಲೆ ಕಾರ್ಯದರ್ಶಿಯವರಿಗೆ ಐದುಸಾವಿರಕ್ಕಿಂತ ಕಡಿಮೆಯಲ್ಲದ ಆದರೆ ಐವತ್ತು ಸಾವಿರ ರೂಪಾಯಿಗಿಂತ ಹೆಚ್ಚಾಗದ ಜುಲ್ಮಾನೆಯನ್ನು ಹೊರಿಸಬಹುದಾಗಿದೆ.

This is a digitally signed Gazette.
Authenticity may be verified through https://compose.kerala.gov.in/

8

(3) ಕಾರ್ಯದರ್ಶಿಯವರಿಗೆ, ಯಾವುದಾದರೂ ಸಾರ್ವಜನಿಕ ರಸ್ತೆಗೋ, ಚರಂಡಿಗೋ, ಬೀದಿಗೋ ಅಲ್ಲದಿದ್ದರೆ ಬೇರೆ ಯಾವುದಾದರೂ ಸಾರ್ವಜನಿಕ ಸ್ಥಳಗಳಿಗೋ ಅಥವಾ ಜಲಾಶಯಗಳಿಗೋ ಹೊಲಸು ನೀರನ್ನು ಹರಿದು ಬಿಡುವ ಯಾವುದೇ ಪೈಪ್, ಟ್ಯೂಬ್ ಅಥವಾ ಬೇರೆ ಯಾವುದೇ ಮಾರ್ಗವನ್ನು ಮುಚ್ಚಲು, ಬಂದು ಮಾಡಲು ಅಥವಾ ತೊಲಗಿಸಲು ನೋಟೀಸು ಮುಖೇನ ಅಂತಹ ಪರಿಸರದ ಮಾಲಿಕನೊಡನೆ ಅಥವಾ ಅನುಭೋಗದಾರನೊಡನೆ ನಿರ್ದೇಶಿಸಬಹುದಾಗಿದೆ.

(4) (3)ನೇ ಉಪ-ವಿಭಾಗ ಪ್ರಕಾರವಿರುವ ನಿರ್ದೇಶ ಲಭಿಸಿದ ಯಾವುದೇ ವ್ಯಕ್ತಿಯೂ ನಿರ್ದೇಶ ಲಭಿಸಿ ಏಳು ದಿನದೊಳಗೆ ಆ ರೀತಿಯ ನಿರ್ದೇಶಗಳನ್ನು ಪಾಲಿಸತಕ್ಕದ್ದು ಮತ್ತು ಆ ರೀತಿಯ ನಿರ್ದೇಶಗಳನ್ನು ಪಾಲಿಸುವುದರಲ್ಲಿ ಆತನು ಲೋಪವೆಸಗಿದ್ದಲ್ಲಿ, ಕಾರ್ಯದರ್ಶಿಯವರು, (2)ನೇ ಉಪ-ವಿಭಾಗದ ಪ್ರಕಾರ ಕೈಗೊಳ್ಳಬಹುದಾದ ಯಾವುದೇ ಕ್ರಮಗಳಿಗೆ ಭಂಗವುಂಟಾಗದಂತೆ, ಆ ರೀತಿಯ ಪೈಪ್, ಟ್ಯೂಬ್ ಅಲ್ಲದಿದ್ದರೆ ಇತರ ಮಾರ್ಗಗಳನ್ನು ಮುಚ್ಚುವುದೋ, ಬಂದುಮಾಡುವುದೋ ಅಲ್ಲದಿದ್ದರೆ ನೀಗಿಸುವುದೋ ಮಾಡತಕ್ಕದ್ದು ಮತ್ತು ಇದಕ್ಕಾಗಿ ಬೇಕಾಗುವ ನಿಜವಾದ ಖರ್ಚನ್ನು ಆತನಿಂದ ವಸೂಲುಮಾಡತಕ್ಕದ್ದು.".

16. 340ನೇ ವಿಭಾಗದ ಬದಲಾಗಿ ಹೊಸ ವಿಭಾಗದ ಸೇರ್ಪಡೆ.—ಪ್ರಧಾನ ಅಧಿನಿಯಮದ 340ನೇ ವಿಭಾಗದ ಬದಲಾಗಿ ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"340. ಸಾರ್ವಜನಿಕ ಸ್ಥಳಗಳಿಗೋ ಖಾಸಗಿ ಸ್ಥಳಗಳಿಗೋ ತ್ಯಾಜ್ಯ ಎಸೆಯುವುದಕ್ಕಿರುವ ನಿಷೇಧ.—(1) ತ್ಯಾಜ್ಯವನ್ನು ಹಾಕುವುದಕ್ಕೆ ಉದ್ದೇಶಿಸಿದ ಸ್ಥಳಗಳ ಹೊರತಾದ ಬೀದಿಯಲ್ಲಿಯೋ, ಚರಂಡಿಯಲ್ಲಿಯೋ, ಸಾರ್ವಜನಿಕ ಸ್ಥಳದಲ್ಲಿಯೋ ಯಾವುದೇ ವ್ಯಕ್ತಿ ಯಾವುದಾದರೂ ತ್ಯಾಜ್ಯವನ್ನು ಎಸೆಯುವುದೋ, ಎಸೆದು ಮಲಿನಗೊಳಿಸುವುದೋ, ರಾಶಿಹಾಕುವುದೋ, ಉರಿಸುವುದೋ, ಹುಗಿದು ಹಾಕುವುದೋ ಅಥವಾ ಆ ರೀತಿಯ ಕೆಲಸಗಳನ್ನು ಮಾಡುವುದಕ್ಕೆ ಕಾರಣವಾಗುವುದೋ ಮಾಡತಕ್ಕದ್ದಲ್ಲ.

(2) ನಿಗದಿಪಡಿಸಿದ ಪ್ರಕಾರ ಅಥವಾ ಕಾರ್ಯದರ್ಶಿಯವರು ಹೊರಡಿಸುವ ಮಾರ್ಗ ನಿರ್ದೇಶಗಳಿಗನುಸಾರವಾಗಿಯೋ ಅಲ್ಲದೆ ಯಾವುದೇ ವ್ಯಕ್ತಿಯೂ ಯಾವುದೇ ಖಾಸಗಿ ಸ್ಥಳಗಳಲ್ಲಿ ತ್ಯಾಜ್ಯವನ್ನು ಎಸೆಯುವುದೋ, ಎಸೆದು ಮಲಿನಗೊಳಿಸುವುದೋ, ರಾಶಿ ಹಾಕುವುದೋ, ಉರಿಸುವುದೋ, ಹುಗಿದು ಹಾಕುವುದೋ ಅಥವಾ ಅಂತಹ ಕೆಲಸಗಳನ್ನು ಮಾಡುವುದಕ್ಕೆ ಕಾರಣವಾಗುವುದೋ ಮಾಡತಕ್ಕದ್ದಲ್ಲ.

(3) (1)ನೇ ಉಪ-ವಿಭಾಗದ ಅಥವಾ (2)ನೇ ಉಪ-ವಿಭಾಗದ ಉಪಬಂಧಗಳನ್ನು ಯಾವುದೇ ವ್ಯಕ್ತಿಯು ಉಲ್ಲಂಘಿಸಿರುವನೆಂದು ಮನದಟ್ಟಾದಲ್ಲಿ, ಪ್ರಸ್ತುತ ಉಲ್ಲಂಘನೆಯ ವ್ಯಾಪ್ತಿಗೆ, ತೀವ್ರತೆಗೆ ಅಥವಾ ಸ್ವರೂಪಕ್ಕೆ ಅನುಸರಿಸಿ ಕಾರ್ಯದರ್ಶಿಯವರಿಗೆ ಅಥವಾ ಕಾರ್ಯದರ್ಶಿಯವರು ಈ ಅಗತ್ಯಕ್ಕಾಗಿ ವಿಶೇಷವಾಗಿ ನಿಯೋಜಿಸಿದ ಅಧಿಕಾರಿಗೆ ಆ ರೀತಿಯ ವ್ಯಕ್ತಿಯ ಮೇಲೆ ತಕ್ಷಣವೇ ಐದುಸಾವಿರ ರೂಪಾಯಿ ವರೆಗಿನ ಜುಲ್ಮಾನೆ ಹೊರಿಸಬಹುದಾಗಿದೆ.

(4) (3)ನೇ ಉಪ-ವಿಭಾಗದ ಪ್ರಕಾರ ಹೊರಿಸಲ್ಪಟ್ಟ ಜುಲ್ಮಾನೆ ಅದನ್ನು ಹೊರಿಸಿದ ದಿನಾಂಕದಿಂದ ಹದಿನೈದು ದಿನದೊಳಗೆ ಪಾವತಿಸತಕ್ಕದ್ದು ಮತ್ತು ಆ ರೀತಿಯಲ್ಲಿ ಪಾವತಿಸುವುದರಲ್ಲಿ ಲೋಪ ಉಂಟುಮಾಡುವುದಾದಲ್ಲಿ ಕಾರ್ಯದರ್ಶಿಯವರು ಆ ವ್ಯಕ್ತಿಗೆದುರಾಗಿ ಕೈಗೊಳ್ಳಬಹುದಾದ ಯಾವುದೇ ಕ್ರಮಗಳಿಗೆ ಭಂಗವುಂಟಾಗದಂತೆ ಕಾನೂನು ಕ್ರಮಗಳನ್ನು ಆರಂಭಿಸತಕ್ಕದ್ದು.".

17. 340ಎ ವಿಭಾಗದ ಬದಲಾಗಿ ಹೊಸ ವಿಭಾಗದ ಸೇರ್ಪಡೆ.—ಪ್ರಧಾನ ಅಧಿನಿಯಮದ 340ಎ ವಿಭಾಗಕ್ಕೆ ಬದಲಾಗಿ ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"340ಎ. ತ್ಯಾಜ್ಯ, ಕಸ ಮತ್ತು ಮಲವಿಸರ್ಜನೆಗಳನ್ನು ಜಲಾಶಯಗಳಲ್ಲಿ ಹಾಗೂ ಜಲಮೂಲಗಳಲ್ಲಿ ನಿಕ್ಷೇಪಿಸುವುದಕ್ಕೆ ನಿಷೇಧ.—(1) ಯಾವುದೇ ವ್ಯಕ್ತಿಯೂ ಸಾರ್ವಜನಿಕ ಜಲಧಾರೆ, ಜಲಾಶಯ ಅಥವಾ ಜಲಮೂಲಗಳಲ್ಲಿ ತ್ಯಾಜ್ಯ, ಕಸ ಅಥವಾ ಮಲವಿಸರ್ಜನೆಗಳನ್ನು ಎಸೆಯುವುದು, ರಾಶಿಹಾಕುವುದು, ಅದಕ್ಕೆ ಹೊಲಸು ನೀರನ್ನು ಹರಿಸುವುದು, ಅಥವಾ ಯಾವುದಾದರೂ ಶೌಚಾಲಯದಿಂದ ಅದಕ್ಕೆ ನೀರು ಹರಿಯಲು ಅನುಮತಿಸುವುದು, ಅಲ್ಲದಿದ್ದರೆ ಹೊಲಸು ನೀರನ್ನು ಅದಕ್ಕೆ ಹರಿಯಲು ಅನುಮತಿಸುವುದು, ಅಥವಾ ಬೇರೆ ಯಾವುದಾದರೂ ರೀತಿಯಲ್ಲಿ ಜಲವನ್ನು ಮಲಿನಗೊಳಿಸುವುದು ಅಥವಾ, ಆ ರೀತಿಯ ಒಂದು ಪ್ರವೃತ್ತಿಯನ್ನು ಮಾಡುವುದಕ್ಕೆ ಯಾರನ್ನಾದರೂ ನಿಯಮಿಸುವುದು, ನಿಯೋಜಿಸುವುದು ನಿರ್ಬಂಧಿಸುವುದು ಅಥವಾ ಪ್ರೇರಿಪಿಸುವುದು ಮಾಡತಕ್ಕದಲ್ಲ.

(2) (1)ನೇ ಉಪ-ವಿಭಾಗ ಪ್ರಕಾರದ ಒಂದು ಅಪರಾಧವು ಸಂಜ್ಞೇಯ ಅಪರಾಧವಾಗಿದ್ದು ಮತ್ತು ಜಾಮೀನು ರಹಿತವಾದುದಾಗಿರುವುದು.

(3) (1)ನೇ ಉಪ-ವಿಭಾಗದಲ್ಲಿ ಉಲ್ಲೇಖಿಸಿರುವ ಒಂದು ಅಪರಾಧವನ್ನು ಮಾಡುವ ಯಾವುದೇ ವ್ಯಕ್ತಿಯು ಅಪರಾಧ ನಿರ್ಣಯತಿಯ ಮೇಲೆ ಹತ್ತು ಸಾವಿರ ರೂಪಾಯಿಗಿಂತ ಕಡಿಮೆಯಲ್ಲದ ಹಾಗೂ ಐವತ್ತು ಸಾವಿರ ರೂಪಾಯಿಗಿಂತ ಮೀರದ ಜುಲ್ಮಾನೆ ಮತ್ತು ಆರು ತಿಂಗಳಿಗಿಂತ ಕಡಿಮೆಯಲ್ಲದ ಹಾಗೂ ಒಂದು ವರ್ಷಕ್ಕಿಂತ ಮೀರದ ಕಾಲಕ್ಕೆ ಕಾರಾಗೃಹ ವಾಸ ವಿಧಿಸಿ ಶಿಕ್ಷಿಸತಕ್ಕದ್ದು.".

This is a digitally signed Gazette.
Authenticity may be verified through https://compose.kerala.gov.in/

18. 340ಬ ವಿಭಾಗದ ಬದಲಾಗಿ ಹೊಸ ವಿಭಾಗದ ಸೇರ್ಪಡೆ.—ಪ್ರಧಾನ ಅಧಿನಿಯಮದ 340ಬ ವಿಭಾಗಕ್ಕೆ ಬದಲಾಗಿ ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*340ಬ. ತ್ಯಾಜ್ಯವನ್ನು ಅಥವಾ ಮಲವಿಸರ್ಜನೆಗಳನ್ನು ಸಾಗಿಸಲು ಉಪಯೋಗಿಸಿದ ವಾಹನದ ಸ್ವಾಧೀನಪಡಿಸುವಿಕೆ ಹಾಗೂ ಮುಟ್ಟುಗೋಲು ಹಾಕುವಿಕೆ.*—(1) ಈ ಅಧ್ಯಾಯದ ಕೆಳಗಿನ ಒಂದು ಅಪರಾಧವನ್ನು ಮಾಡುವ ಉದ್ದೇಶದಿಂದಲೋ, ಸಜ್ಜೀಕರಣದಿಂದಲೋ ತ್ಯಾಜ್ಯವನ್ನೋ, ಮಲವಿಸರ್ಜನೆಗಳನ್ನೋ ಸಾರ್ವಜನಿಕ ಸ್ಥಳದ ಮುಖಾಂತರವೋ, ಸಾರ್ವಜನಿಕ ರಸ್ತೆಯ ಮುಖಾಂತರವೋ ಸಾಗಿಸುವುದೋ ಆ ರೀತಿಯಲ್ಲಿ ನಿಕ್ಷೇಪಿಸುವುದಕ್ಕೆ ಬಳಸಿದ ಅನಂತರ ಹಿಂತಿರುಗಿ ಹೋಗುವಂತದೆಂದೋ ನ್ಯಾಯಯುತವಾಗಿ ಅನುಮಾನಿಸಲು ಕಾರಣವಿರುವ ಒಂದು ವಾಹನವನ್ನು ಅಥವಾ ನೌಕೆಯನ್ನು, ಕಾರ್ಯದರ್ಶಿಯವರು ಅಥವಾ ಈ ಅಗತ್ಯಕ್ಕಾಗಿ ಕಾರ್ಯದರ್ಶಿಯವರು ಅಧಿಕೃತಗೊಳಿಸಿದ ಮುನಿಸಿಪಾಲಿಟಿಯ ಒಬ್ಬ ಉದ್ಯೋಗಸ್ಥನೋ, ಸಬ್ ಇನ್ಸ್‌ಪೆಕ್ಟರರ ದರ್ಜೆಗಿಂತ ಕಡಿಮೆಯಲ್ಲದ ಒಬ್ಬ ಪೋಲೀಸು ಅಧಿಕಾರಿಯೋ ವಶಪಡಿಸಿಕೊಳ್ಳತಕ್ಕದ್ದು ಹಾಗು ಅಧಿಕಾರ ವ್ಯಾಪ್ತಿಯಿರುವ ಸಬ್ ಡಿವಿಷನಲ್ ಮೆಜಿಸ್ಟ್ರೇಟ್‌ರವರ ಸಮಕ್ಷದಲ್ಲಿ ಹಾಜರುಪಡಿಸತಕ್ಕದ್ದು.

(2) ವಿಚಾರಣೆಯ ನಂತರ, ಈ ಅಧ್ಯಾಯದ ಕೆಳಗಿನ ಯಾವುದಾದರೂ ಅಪರಾಧಗಳನ್ನು ಮಾಡಲು ವಾಹನ ಅಥವಾ ನೌಕೆಯನ್ನು ಉಪಯೋಗಿಸಿರುವುದಾಗಿ ನಂಬಲು ನ್ಯಾಯಯುತವಾದ ಕಾರಣವುಂಟೆಂದು ಸಬ್ ಡಿವಿಷನಲ್ ಮೆಜಿಸ್ಟ್ರೇಟ್‌ರವರಿಗೆ ಮನದಟ್ಟಾದಲ್ಲಿ ಆ ರೀತಿ ಸ್ವಾಧೀನಪಡಿಸಿದ ವಾಹನ ಅಥವಾ ನೌಕೆಯನ್ನು ಮುಟ್ಟುಗೋಲು ಹಾಕತಕ್ಕದ್ದು, ಅಲ್ಲದಿದ್ದಲ್ಲಿ ಅದನ್ನು ಬಿಟ್ಟುಕೊಡತಕ್ಕದ್ದು.

(3) ವಾಹನದ ಅಥವಾ ನೌಕೆಯ ಮಾಲೀಕನಿಗೋ ಅಲ್ಲದಿದ್ದರೆ ಯಾರಿಂದ ಅದನ್ನು ಸ್ವಾಧೀನಪಡಿಸಿರುವುದು ಅವರಿಗೆ.—

(i) ವಾಹನ ಅಥವಾ ನೌಕೆಯನ್ನು ಮುಟ್ಟುಗೋಲು ಹಾಕಲು ಕಾರಣವಾದ ವಿಷಯಗಳ ಕುರಿತು ಆ ವ್ಯಕ್ತಿಗೆ ಲಿಖಿತ ಮುಖೇನ ಮಾಹಿತಿ ತಿಳಿಸುತಾ ಒಂದು ನೋಟೀಸು ನೀಡದೆಯೂ; ಹಾಗೂ

(ii) ಮುಟ್ಟುಗೋಲು ಹಾಕುವುದರ ಕಾರಣಕ್ಕೆದುರಾಗಿ, ನೋಟೀಸಿನಲ್ಲಿ ಸ್ಪಷ್ಟಪಡಿಸಿರುವ ಯುಕ್ತವಾದ ಸಮಯದೊಳಗೆ, ಆ ವ್ಯಕ್ತಿಗೆ ಹೇಳಲಿರುವುದನ್ನು ಹೇಳಲು ಯುಕ್ತವಾದ ಒಂದು ಅವಕಾಶ ನೀಡದೆಯೂ

ಈ ವಿಭಾಗದ ಪ್ರಕಾರ ಯಾವುದಾದರೂ ವಾಹನವನ್ನು ಅಥವಾ ನೌಕೆಯನ್ನು ಮುಟ್ಟುಗೋಲು ಹಾಕುವುದಕ್ಕಿರುವ ಆದೇಶವನನು ಜಾರಿಗೊಳಿಸತಕ್ಕದ್ದಲ್ಲ.

(4) ಸ್ವಾಧೀನಪಡಿಸಿದ ವಾಹನದಲ್ಲಿ ಅಥವಾ ನೌಕೆಯಲ್ಲಿ ತ್ಯಾಜ್ಯ, ಕಸ ಅಥವಾ ಮಲವಿಸರ್ಜನೆಗಳಿರುವ ಸಂದರ್ಭಗಳಲ್ಲಿ, ವಾಹನ ಅಥವಾ ನೌಕೆಯನ್ನು ಸ್ವಾಧೀನಪಡಿಸುವ ವ್ಯಕ್ತಿ, ಆ ವ್ಯಕ್ತಿಯು ಕಾರ್ಯದರ್ಶಿಯವರಲ್ಲದಿದ್ದಲ್ಲಿ, ಅಂತಹ ಸ್ವಾಧೀನಪಡಿಸುವಿಕೆಯನ್ನು ಕೂಡಲೇ ಕಾರ್ಯದರ್ಶಿಯವರಿಗೆ ತಿಳಿಸತಕ್ಕದ್ದು, ಮತ್ತು ಈ ಅಧ್ಯಾಯದ ಕೆಳಗೆ ಕೈಗೊಳ್ಳಬಹುದಾದ ಯಾವುದೇ ಕ್ರಮಗಳಿಗೆ ಭಂಗವುಂಟಾಗದಂತೆ, ವಾಹನದ ಅಥವಾ ನೌಕೆಯ ಮಾಲೀಕನ ಖರ್ಚಿನಲ್ಲಿ ತ್ಯಾಜ್ಯ, ಕಸ ಅಥವಾ ಮಲವಿಸರ್ಜನೆಗಳನ್ನು ನಿರ್ಮೂಲನೆ ಮಾಡಲು ಕಾರ್ಯದರ್ಶಿಯವರು ಕ್ರಮ ಕೈಗೊಳ್ಳತಕ್ಕದ್ದು ಮತ್ತು ಈ ರೀತಿ ನಿರ್ಮೂಲನೆ ಮಾಡುವುದಕ್ಕಿರುವ ಖರ್ಚನ್ನು ಮತ್ತು ಐದು ಸಾವಿರ ರೂಪಾಯಿಗಿಂತ ಮೀರದ ಜುಲ್ಮಾನೆಯನ್ನು ಕಾರ್ಯದರ್ಶಿಯವರು ಮಾಲೀಕನಿಂದ ವಸೂಲುಮಾಡತಕ್ಕದ್ದು.

(5) ವಾಹನ ಅಥವಾ ನೌಕೆಯನ್ನು ಮುಟ್ಟುಗೋಲು ಹಾಕುವ ವಿಷಯದಲ್ಲಿ ಅದನ್ನು ಏಲಂ ಮಾಡತಕ್ಕದ್ದು ಮತ್ತು ಆ ರೀತಿ ಲಭಿಸುವ ಮೊತ್ತವನ್ನು ತ್ಯಾಜ್ಯ ಸಂಸ್ಕರಣೆ ಫಂಡಿಗೆ ಜಮೆಮಾಡತಕ್ಕದ್ದು.".

19. 345ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 345ನೇ ವಿಭಾಗದಲ್ಲಿ, "ಆತನು, 340ಎ ವಿಭಾಗದ ವ್ಯಾಪ್ತಿಯಲ್ಲಿ ಒಳಪಡದಿದ್ದರೆ" ಎಂಬ ಪದಗಳ, ಚಿಹ್ನೆ, ಅಂಕೆ ಮತ್ತು ಅಕ್ಷರದ ಬದಲು "ಆತನಿಗೆ, ಈ ಅಧ್ಯಾಯದಲ್ಲಿ ಬೇರೆಯೆಲ್ಲಿಯೂ ಶಿಕ್ಷೆ ನೀಡಿರದಿದ್ದಲ್ಲಿ" ಎಂಬ ಪದಗಳನ್ನು ಮತ್ತು ಚಿಹ್ನೆಯನ್ನು ಸೇರಿಸತಕ್ಕದ್ದು.

20. 345ಎ ಎಂಬ ಹೊಸ ವಿಭಾಗದ ಸೇರ್ಪಡೆ.—ಪ್ರಧಾನ ಅಧಿನಿಯಮದ 345ನೇ ವಿಭಾಗದ ನಂತರ ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*345ಎ. ಜುಲ್ಮಾನೆ ಹೊರಿಸುವುದಕ್ಕೆ ಸಂಬಂಧಿಸಿದ ಉಪಬಂಧಗಳು.*—(1) 340ನೇ ವಿಭಾಗದಲ್ಲಿ ಮತ್ತು 340ಎ ವಿಭಾಗದಲ್ಲಿ ನಿರ್ದಿಷ್ಟಪಡಿಸಿದ ಶಿಕ್ಷೆಗಳು ಹೊರತು ಈ ಅಧ್ಯಾಯದ ಕೆಳಗಿನ ಯಾವುದೇ ಜುಲ್ಮಾನೆಯನ್ನು,—

(i) ಅದನ್ನು ಹೊರಿಸಲು ಕಾರಣವಾದ ವಿಷಯಗಳ ಕುರಿತು ಆತನಿಗೆ ಲಿಖಿತ ಮುಖೇನ ತಿಳಿಸುತಾ ಒಂದು ನೋಟೀಸನ್ನು ನೀಡದೆಯೂ; ಅದಲ್ಲದೆ

This is a digitally signed Gazette.
Authenticity may be verified through https://compose.kerala.gov.in/

(ii) ಅದನ್ನು ಹೊರಿಸುವುದಕ್ಕಿರುವ ಕಾರಣದ ವಿರುದ್ಧ ನೋಟೀಸಿನಲ್ಲಿ ಸ್ಪಷ್ಟಪಡಿಸಿದ ಯುಕ್ತವಾದ ಸಮಯದೊಳಗೆ, ಆತನಿಗೆ ಹೇಳಲಿಕ್ಕಿರುವುದನ್ನು ಹೇಳಲು ಒಂದು ಅವಕಾಶವನ್ನು ನೀಡದೆಯೂ ಕಾರ್ಯದರ್ಶಿಯವರು ಹೊರಿಸತಕ್ಕದ್ದಲ್ಲ.

(2) (1)ನೇ ಉಪ-ವಿಭಾಗದ ಪ್ರಕಾರ ಜುಲ್ಮಾನೆಯನ್ನು ನಿಶ್ಚಯಿಸುವ ವಿಷಯದಲ್ಲಿ ಕಾರ್ಯದರ್ಶಿಯವರು ಅದರಲ್ಲಿ ಒಳಗೊಂಡಿರುವ ತ್ಯಾಜ್ಯದ ಗಾತ್ರ ಅಥವಾ ಪ್ರಮಾಣ, ಮನೆ, ಹೋಟೆಲ್, ಕೈಗಾರಿಕೆ, ಇತರ ಸಂಸ್ಥೆಗಳ ವಿಧ, ಗಾತ್ರ, ಸ್ಥಳ ಅಲ್ಲದೆ ಸರಕಾರವು ಇದಕ್ಕಾಗಿ ರಚಿಸಿದ ಅಥವಾ ಹೊರಡಿಸಿದ ಯಾವುದಾದರೂ ನಿಯಮಗಳನ್ನು ಅಲ್ಲದಿದ್ದರೆ ಮಾರ್ಗನಿರ್ದೇಶಗಳನ್ನು ಪರಿಗಣಿಸತಕ್ಕದ್ದು.

(3) ಈ ಅಧ್ಯಾಯದ ಕೆಳಗೆ ಹೊರಿಸುವ ಯಾವುದೇ ಜುಲ್ಮಾನೆಯನ್ನು 538ಬ ವಿಭಾಗದಲ್ಲಿ ನಿರ್ದಿಷ್ಟಪಡಿಸಿದ ಪ್ರಕಾರ ಸಾರ್ವಜನಿಕ ತೆರಿಗೆಯ ಬಾಕಿ ಎಂಬಂತೆ ವಸೂಲು ಮಾಡತಕ್ಕದ್ದು.".

21. 509ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 509ನೇ ವಿಭಾಗದಲ್ಲಿ,—

(i) (1)ನೇ ಉಪ-ವಿಭಾಗದಲ್ಲಿ "390" ಎಂಬ ಅಂಕೆಯ ಮೊದಲು "326ಸಿ, 327, 335, 337, 340," ಎಂಬ ಅಂಕೆಗಳನ್ನು, ಅಕ್ಷರ ಮತ್ತು ಚಿಹ್ನೆಗಳನ್ನು ಸೇರಿಸತಕ್ಕದ್ದು;

(ii) (6)ನೇ ಉಪ-ವಿಭಾಗದಲ್ಲಿ "390" ಎಂಬ ಅಂಕೆಯ ಮೊದಲು "326ಸಿ, 327, 335, 337, 340" ಎಂಬ ಅಂಕೆಗಳನ್ನು, ಅಕ್ಷರ ಮತ್ತು ಚಿಹ್ನೆಗಳನ್ನು ಸೇರಿಸತಕ್ಕದ್ದು;

(iii) (7)ನೇ ಉಪ-ವಿಭಾಗದಲ್ಲಿ "390" ಎಂಬ ಅಂಕೆಯ ಮೊದಲು "326ಸಿ, 327, 335, 337, 340" ಎಂಬ ಅಂಕೆಗಳನ್ನು, ಅಕ್ಷರ ಮತ್ತು ಚಿಹ್ನೆಗಳನ್ನು ಸೇರಿಸತಕ್ಕದ್ದು;

22. 565ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 565ನೇ ವಿಭಾಗದಲ್ಲಿ,—

(i) (2)ನೇ ಉಪ-ವಿಭಾಗದಲ್ಲಿ (ಯು) ಖಂಡದ ನಂತರ ಈ ಕೆಳಗಿನ ಖಂಡಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ವಿ) ಅಧ್ಯಾಯ XVIಎ ಯಲ್ಲಿ ಸ್ಪಷ್ಟಪಡಿಸಿದ ತ್ಯಾಜ್ಯ ಸಂಸ್ಕರಣೆಗೆ ಸಂಬಂಧಿಸಿದ ವಿಷಯಗಳು;

(ಡಬ್ಲ್ಯೂ) 1986ರ ಪರಿಸರ (ಸಂರಕ್ಷಣೆ) ಅಧಿನಿಯಮ (1986ರ 29ನೇ ಕೇಂದ್ರ ಅಧಿನಿಯಮ)ಕ್ಕೆ ಮತ್ತು ಅದರ ಅಡಿಯಲ್ಲಿ ರಚಿಸಿದ ನಿಯಮಗಳಿಗೆ ವಿಧೇಯವಾಗಿ ನಿರ್ಮಾಣ-ಕೆಡುವುವಿಕೆ ತ್ಯಾಜ್ಯಗಳು, ಇ-ತ್ಯಾಜ್ಯಗಳು, ನೈರ್ಮಲ್ಯ ತ್ಯಾಜ್ಯಗಳು, ಹಾನಿಕರವಾದ ಗೃಹ ತ್ಯಾಜ್ಯಗಳು, ಪ್ಲಾಸ್ಟಿಕ್ ತ್ಯಾಜ್ಯಗಳು, ದ್ರವ ತ್ಯಾಜ್ಯಗಳು ಎಂಬಿವುಗಳಿಗೆ ಸಂಬಂಧಿಸಿದ ವಿಷಯಗಳು.";

(ii) (4)ನೇ ಉಪ-ವಿಭಾಗದಲ್ಲಿ "ಐನೂರು ರೂಪಾಯಿವರೆಗೆ" ಎಂಬ ಪದಗಳಿಗೆ ಬದಲಾಗಿ "ಹತ್ತು ಸಾವಿರ ರೂಪಾಯಿವರೆಗೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

23. 570ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 570ನೇ ವಿಭಾಗದಲ್ಲಿ,—

(i) (ಎ) ಖಂಡದಲ್ಲಿ "ಐನೂರು ರೂಪಾಯಿವರೆಗೆ" ಎಂಬ ಪದಗಳಿಗೆ ಬದಲು "ಹತ್ತು ಸಾವಿರ ರೂಪಾಯಿವರೆಗೆ" ಎಂಬ ಪದಗಳನ್ನು ಮತ್ತು "ಐವತ್ತು ರೂಪಾಯಿವರೆಗೆ" ಎಂಬ ಪದಗಳಿಗೆ ಬದಲು "ಇನ್ನೂರು ರೂಪಾಯಿವರೆಗೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) (ಬಿ) ಖಂಡದಲ್ಲಿ "ಐವತ್ತು ರೂಪಾಯಿವರೆಗೆ" ಎಂಬ ಪದಗಳ ಬದಲು "ಇನ್ನೂರು ರೂಪಾಯಿವರೆಗೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

24. 572ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 572ನೇ ವಿಭಾಗ, (1)ನೇ ಉಪ-ವಿಭಾಗದಲ್ಲಿ, "ಸರಕಾರ" ಎಂಬ ಪದದ ನಂತರ "ಅಲ್ಲದಿದ್ದರೆ ಸರಕಾರ ಅಧಿಕೃತಗೊಳಿಸಿದ ಅಧಿಕಾರಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

25. ನಾಲ್ಕನೇ ಅನುಸೂಚಿಯ ತಿದ್ದುಪಡಿ.—ಪ್ರಧಾನ ಅಧಿನಿಯಮದ ನಾಲ್ಕನೇ ಅನುಸೂಚಿಯಲ್ಲಿ "ಸಾಮಾನ್ಯ ಶಿಕ್ಷೆಗಳು" ಎಂಬ ಶೀರ್ಷಿಕೆಯ ಕೆಳಗೆ (1)ನೇ ಕಾಲಂನಲ್ಲಿ,—

(i) 253ನೇ ವಿಭಾಗದ ಎದುರು (3)ನೇ ಕಾಲಂನಲ್ಲಿ, "ಕಾರ್ಮಿಕರ ಮತ್ತು ಇತರ ಲಿಸ್ಟ್ ಸಲ್ಲಿಸುವುದಕ್ಕೆ ನ್ಯೂನತೆ ಉಂಟುಮಾಡುವುದಕ್ಕೆ" ಎಂಬ ಪದಗಳಿಗೆ ಬದಲಾಗಿ "ಸಂಸ್ಥೆಗಳು ಇತ್ಯಾದಿಗಳ ಹೆಸರು ನೀಡುವುದರಲ್ಲಿ ನ್ಯೂನತೆ ಉಂಟುಮಾಡುವುದಕ್ಕೆ" ಎಂಬ ಪದಗಳನ್ನು ಸೇರಿಸತಕ್ಕದ್ದು;

This is a digitally signed Gazette.
Authenticity may be verified through https://compose.kerala.gov.in/

11

(ii) *335ನೇ ವಿಭಾಗದ ಎದುರು,—*

(ಎ) (3)ನೇ ಕಾಲಂನಲ್ಲಿ "ಮೃಗಶವಗಳು, ಕಸಗಳು ಮತ್ತು ತ್ಯಾಜ್ಯಗಳನ್ನು ಅನುಚಿತವಾದ ರೀತಿಯಲ್ಲಿ ವಿಲೇವಾರಿ ಮಾಡುವುದು" ಎಂಬ ಪದಗಳಿಗೆ ಬದಲು "ಅಂಗಡಿಗಳ ಮತ್ತು ವಾಣಿಜ್ಯ ಸಂಸ್ಥೆಗಳ ಪರಿಸರವನ್ನು ಶುಚಿಯಾಗಿ ಕಾದಿರಿಸಲಿರುವ ಜವಾಬ್ದಾರಿ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) (4)ನೇ ಕಾಲಂನಲ್ಲಿ "ಐನೂರು ರೂಪಾಯಿ" ಎಂಬ ಪದಗಳ ಬದಲು "ಹತ್ತು ಸಾವಿರ ರೂಪಾಯಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

(iii) *337 ವಿಭಾಗ ಮತ್ತು ಅದರ ಎದುರಿಗಿರುವ (3), (4) ಎಂಬೀ ಕಾಲಂಗಳ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು;*

(iv) *339ನೇ ವಿಭಾಗದ ಎದುರು (4)ನೇ ಕಾಲಂನಲ್ಲಿ "ಇನ್ನೂರ ಐವತ್ತು ರೂಪಾಯಿ" ಎಂಬ ಪದಗಳ ಬದಲು "ಐದು ಸಾವಿರ ರೂಪಾಯಿ" ಎಂಬ ಪದಗಳನ್ನು ಸೇರಿಸತಕ್ಕದ್ದು;*

(v) *340ನೇ ವಿಭಾಗದ ಎದುರು (4)ನೇ ಕಾಲಂನಲ್ಲಿ "ಎರಡು ಸಾವಿರ ರೂಪಾಯಿ" ಎಂಬ ಪದಗಳ ಬದಲು "ಹತ್ತು ಸಾವಿರ ರೂಪಾಯಿ" ಎಂಬ ಪದಗಳನ್ನು ಸೇರಿಸತಕ್ಕದ್ದು;*

(vi) *492ನೇ ವಿಭಾಗದ ಎದುರು (2)ನೇ ಕಾಲಂನಲ್ಲಿ "2" ಎಂಬ ಅಂಕೆಯ ಬದಲು "12" ಎಂಬ ಅಂಕೆಯನ್ನು ಸೇರಿಸತಕ್ಕದ್ದು;*

26. ರದ್ದತಿ ಮತ್ತು ರಕ್ಷಣೆ.—(1) 2023ರ ಕೇರಳ ಮುನಿಸಿಪಾಲಿಟಿ (ತಿದ್ದುಪಡಿ) ಅಧ್ಯಾದೇಶ (2023ರ 3)ವು ಈ ಮೂಲಕ ರದ್ದುಗೊಂಡಿರುವುದು.

(2) ಅಂತಹ ರದ್ದತಿಯಲ್ಲಿ ಏನೇ ಒಳಗೊಂಡಿದ್ದರೂ, ಪ್ರಸ್ತುತ ಅಧ್ಯಾದೇಶದ ಪ್ರಕಾರ ತಿದ್ದುಪಡಿಮಾಡಲ್ಪಟ್ಟ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವು ಈ ಅಧಿನಿಯಮದ ಪ್ರಕಾರ ತಿದ್ದುಪಡಿ ಮಾಡಲ್ಪಟ್ಟ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಸಿ) ಇಲಾಖೆ

ಅಧಿಸೂಚನೆ

ನಂಬ್ರ 18/ಲೆಗ್. ಸಿ3/2024/ಕಾನೂನು. ತಿರುವನಂತಪುರಂ, 2024 ಜುಲೈ 9, 1199 ಮಿಥುನ 25/ 1946 ಆಷಾಢ 18.

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2024 ಜುಲೈ 8ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಕೆ. ಜಿ. ಸನಲ್ ಕುಮಾರ್,
ಕಾನೂನು ಕಾರ್ಯದರ್ಶಿ.

2024ರ 15ನೇ ಅಧಿನಿಯಮ

2024ರ ಕೇರಳ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ಅಧಿನಿಯಮ

1994ರ ಕೇರಳ ಪಂಚಾಯತ್ ರಾಜ್ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ.—1994ರ ಕೇರಳ ಪಂಚಾಯತ್ ರಾಜ್ ಅಧಿನಿಯಮವನ್ನು ಇನ್ನು ಮುಂದಿನ ಅಗತ್ಯಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2024ರ ಕೇರಳ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ಅಧಿನಿಯಮವೆಂದು ಕರೆಯಬಹುದು.

(2) ಇದು ಕೂಡಲೇ ಜಾರಿಗೆ ಬರುವುದಾಗಿದೆ.

2. 6ನೇ ವಿಭಾಗದ ತಿದ್ದುಪಡಿ.—1994ರ ಕೇರಳ ಪಂಚಾಯತ್ ರಾಜ್ ಅಧಿನಿಯಮ (1994ರ 13)ದ 6ನೇ ವಿಭಾಗದ (3)ನೇ ಉಪ-ವಿಭಾಗದಲ್ಲಿ,—

(i) (ಎ) ಖಂಡದಲ್ಲಿ, "ಹದಿಮೂರಕ್ಕಿಂತ ಕಡಿಮೆ ಅಥವಾ ಇಪ್ಪತ್ತಮೂರಕ್ಕಿಂತ ಅಧಿಕ" ಎಂಬ ಪದಗಳಿಗೆ ಬದಲು, "ಹದಿನಾಲ್ಕಕ್ಕಿಂತ ಕಡಿಮೆ ಅಥವಾ ಇಪ್ಪತ್ತನಾಲ್ಕಕ್ಕಿಂತ ಅಧಿಕ" ಎಂಬ ಪದಗಳನ್ನು ಸೇರಿಸತಕ್ಕದ್ದು;

This is a digitally signed Gazette.
Authenticity may be verified through https://compose.kerala.gov.in/

2

(ii) *(ಬ) ಖಂಡದಲ್ಲಿ,* "*ಹದಿಮೂರಕ್ಕಿಂತ ಕಡಿಮೆ ಅಥವಾ ಇಪ್ಪತ್ತಮೂರಕ್ಕಿಂತ ಅಧಿಕ*" *ಎಂಬ ಪದಗಳಿಗೆ ಬದಲು,* "*ಹದಿನಾಲ್ಕಕ್ಕಿಂತ ಕಡಿಮೆ ಅಥವಾ ಇಪ್ಪತ್ತನಾಲ್ಕಕ್ಕಿಂತ ಅಧಿಕ*" *ಎಂಬ ಪದಗಳನ್ನು ಸೇರಿಸತಕ್ಕದ್ದು;*

(iii) *(ಸಿ) ಖಂಡದಲ್ಲಿ,* "*ಹದಿನಾರಕ್ಕಿಂತ ಕಡಿಮೆ ಅಥವಾ ಮೂವತ್ತೆರಡಕ್ಕಿಂತ ಅಧಿಕ*" *ಎಂಬ ಪದಗಳಿಗೆ ಬದಲು,* "*ಹದಿನೇಳಕ್ಕಿಂತ ಕಡಿಮೆ ಅಥವಾ ಮೂವತ್ತಮೂರಕ್ಕಿಂತ ಅಧಿಕ*" *ಎಂಬ ಪದಗಳನ್ನು ಸೇರಿಸತಕ್ಕದ್ದು.*

———————

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಎ) ಇಲಾಖೆ

ಅಧಿಸೂಚನೆ

ನಂಬ್ರ 53/ಲೆಗ್. ಎ1/2024/ಕಾನೂನು. ತಿರುವನಂತಪುರಂ, 2024 ಜುಲೈ 30, 1199 ಕರ್ಕಟಕ 15/ 1946 ಶ್ರಾವಣ 8.

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2024 ಜುಲೈ 27ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಕೆ. ಜಿ. ಸನಲ್ ಕುಮಾರ್,
ಕಾನೂನು ಕಾರ್ಯದರ್ಶಿ.

2024ರ 19ನೇ ಅಧಿನಿಯಮ

2024ರ ಕೇರಳ ಧನವಿನಿಯೋಗ (2ನೇ ನಂಬ್ರ) ಅಧಿನಿಯಮ

2024 ಏಪ್ರಿಲ್ ಒಂದನೇ ದಿನಾಂಕದಂದು ಆರಂಭಿಸುವ ಆರ್ಥಿಕ ವರ್ಷದ ಸೇವೆಗಳಿಗಾಗಿ ಕೇರಳ ರಾಜ್ಯ ಸಂಚಿತ ನಿಧಿಯಿಂದ ಕೆಲವು ಮೊತ್ತಗಳನ್ನು ಹಿಂತೆಗೆಯುವುದಕ್ಕೆ ಅಧಿಕೃತಗೊಳಿಸುವುದಕ್ಕಾಗಿ ಒಂದು ಅಧಿನಿಯಮ

ಪೀಠಿಕೆ.—2024 ಏಪ್ರಿಲ್ ಒಂದನೇ ದಿನಾಂಕದಂದು ಆರಂಭಿಸುವ ಆರ್ಥಿಕ ವರ್ಷದ ಸೇವೆಗಳಿಗಾಗಿ ಕೇರಳ ರಾಜ್ಯ ಸಂಚಿತ ನಿಧಿಯಿಂದ ಕೆಲವು ಮೊತ್ತಗಳನ್ನು ಹಿಂತೆಗೆಯುವುದಕ್ಕೆ ಅಧಿಕೃತಗೊಳಿಸುವುದು ಅಗತ್ಯವಾದುದರಿಂದ;

ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗಿದೆ:—

1. ಸಣ್ಣ ಹೆಸರು.—ಈ ಅಧಿನಿಯಮವನ್ನು 2024ರ ಕೇರಳ ಧನವಿನಿಯೋಗ (2ನೇ ನಂಬ್ರ) ಅಧಿನಿಯಮ ಎಂದು ಕರೆಯಬಹುದು.

2. 2024 ಏಪ್ರಿಲ್ ಒಂದನೇ ದಿನಾಂಕದಂದು ಆರಂಭಿಸುವ ಆರ್ಥಿಕ ವರ್ಷಕ್ಕೆ ಕೇರಳ ರಾಜ್ಯ ಸಂಚಿತ ನಿಧಿಯಿಂದ 257197,02,65,000 ರೂಪಾಯಿ ಹಿಂತೆಗೆಯುವಿಕೆ.—2024 ಏಪ್ರಿಲ್ ಒಂದನೇ ದಿನಾಂಕದಂದು ಆರಂಭಿಸುವ ಆರ್ಥಿಕ ವರ್ಷದಲ್ಲಿ, ಅನುಸೂಚಿಯ (2)ನೇ ಕಾಲಂನಲ್ಲಿ ಹೇಳಿರುವ ಸೇವೆಗಳಿಗೆ ಹಾಗೂ ಉದ್ದೇಶಗಳಿಗೆ ಸಂಬಂಧಿಸಿ ಉಂಟಾಗುವ ವಿವಿಧ ಖರ್ಚುಗಳನ್ನು ಭರಿಸುವುದಕ್ಕಾಗಿ, ಅನುಸೂಚಿಯ (3)ನೇ ಕಾಲಂನಲ್ಲಿ ಹೇಳಿರುವುದನ್ನು ಮೀರದ ಹಾಗೂ ಒಟ್ಟು ಎರಡು ಲಕ್ಷದ

This is a digitally signed Gazette.
Authenticity may be verified through https://compose.kerala.gov.in/

2

ಐವತ್ತೇಳು ಸಾವಿರದ ನೂರ ತೊಂಭತ್ತೇಳು ಕೋಟಿ ಎರಡು ಲಕ್ಷದ ಆರುವತ್ತೈದು ಸಾವಿರ ರೂಪಾಯಿ (ಇದರಲ್ಲಿ 2024ರ ಕೇರಳ ಧನವಿನಿಯೋಗ (ಲೇಖಾನುದಾನ) ಅಧಿನಿಯಮದ (2024ರ 1) 2ನೇ ವಿಭಾಗದಲ್ಲಿ ಹೇಳಲಾದ ಎಂಬತ್ತೈದು ಸಾವಿರದ ಏಳು ನೂರ ಮುವತ್ತೆರಡು ಕೋಟಿ ಮೂವತ್ತನಾಲ್ಕು ಲಕ್ಷದ ಇಪ್ಪತ್ತೊಂದು ಸಾವಿರ ರೂಪಾಯಿಯೂ ಒಳಪಡುವುದು) ಗಳಷ್ಟಾಗುವ ಮೊತ್ತಗಳನ್ನು ಕೇರಳ ರಾಜ್ಯ ಸಂಚಿತ ನಿಧಿಯಿಂದ ನೀಡಬಹುದಾಗಿದೆ ಹಾಗೂ ವಿನಿಯೋಗಿಸಬಹುದಾಗಿದೆ.

3. ಧನವಿನಿಯೋಗ.—~~ಈ~~ ಅಧಿನಿಯಮದ ಪ್ರಕಾರ ಕೇರಳ ರಾಜ್ಯ ಸಂಚಿತ ನಿಧಿಯಿಂದ ನೀಡುವುದಕ್ಕೆ ಹಾಗೂ ವಿನಿಯೋಗಿಸುವುದಕ್ಕೆ ಅಧಿಕೃತಗೊಳಿಸಿರುವ ಮೊತ್ತಗಳನ್ನು ಪ್ರಸ್ತುತ ವರ್ಷಕ್ಕೆ ಸಂಬಂಧಿಸಿ ಅನುಸೂಚಿಯಲ್ಲಿ ಹೇಳಿರುವ ಸೇವೆಗಳಿಗೆ ಹಾಗೂ ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

3

ಅನುಸೂಚಿ

(2 ಮತ್ತು 3ನೇ ವಿಭಾಗಗಳನ್ನು ನೋಡಿರಿ)

(1)		(2)		(3)		
				ಮೀರಬಾರದ ಮೊತ್ತಗಳು		
ಕ್ರಮ ನಂಬ್ರ	ಧನ ಬೇಡಿಕೆ	ಸೇವೆಗಳು ಮತ್ತು ಉದ್ದೇಶಗಳು		ವಿಧಾನ ಸಭೆ ಮತ ನೀಡಿದ್ದು (₹)	ಸಂಚಿತ ನಿಧಿಯ ಮೇಲೆ ಹೊರಿಸಿದ್ದು (₹)	ಒಟ್ಟು (₹)
1.	I	**ರಾಜ್ಯ ವಿಧಾನಸಭೆ**	**ಕಂದಾಯ**	**137,02,19,000**	**77,06,000**	**137,79,25,000**
2.	II	**ರಾಜ್ಯದ ಆಡಳಿತ ಮುಖ್ಯಸ್ಥರು, ಸಚಿವರುಗಳು ಹಾಗೂ ಪ್ರಧಾನ ಕಚೇರಿ ಸಿಬ್ಬಂದಿಗಳು**	**ಕಂದಾಯ**	**619,79,06,000**	**236,66,77,000**	**856,45,83,000**
3.	III	**ನ್ಯಾಯಪರಿಪಾಲನೆ**	**ಕಂದಾಯ**	**1078,70,97,000**	**197,42,43,000**	**1276,13,40,000**
4.	IV	**ಚುನಾವಣೆಗಳು**	**ಕಂದಾಯ**	**195,65,16,000**	**1,000**	**195,65,17,000**
5.	V	**ಸರಕು ಸೇವಾ ತೆರಿಗೆ, ಕೃಷಿ ಆದಾಯ ತೆರಿಗೆ ಮತ್ತು ಮಾರಾಟ ತೆರಿಗೆ**	**ಕಂದಾಯ**	**410,93,16,000**	**65,00,000**	**411,58,16,000**
6.	VI	**ಭೂ ತೆರಿಗೆ**	**ಕಂದಾಯ**	**820,53,16,000**	**1,45,000**	**820,54,61,000**
7.	VII	**ಸ್ಟಾಂಪುಗಳು ಹಾಗೂ ನೋಂದಣಿ**	**ಕಂದಾಯ**	**317,91,35,000**	**..**	**317,91,35,000**
8.	VIII	*ಅಬಕಾರಿ*	*ಕಂದಾಯ*	*371,60,25,000*	*5,00,000*	*371,65,25,000*
9.	IX	*ವಾಹನ ತೆರಿಗೆಗಳು*	*ಕಂದಾಯ*	*225,98,63,000*	*..*	*225,98,63,000*
10.		*ಸಾಲ ಬಾಧ್ಯತೆಗಳು*	*ಕಂದಾಯ*	*..*	*28814,23,99,000*	*28814,23,99,000*
11.	X	*ಖಜಾನೆಗಳು, ಲೆಕ್ಕಪತ್ರಗಳು*	*ಕಂದಾಯ*	*375,65,70,000*	*..*	*375,65,70,000*
12.	XI	*ಜಿಲ್ಲಾಡಳಿತ ಹಾಗೂ ವಿವಿಧೋದ್ದೇಶಗಳು*	*ಕಂದಾಯ*	*909,96,03,000*	*1,58,80,000*	*911,54,83,000*
13.	XII	*ಪೋಲೀಸು*	*ಕಂದಾಯ*	*4779,62,90,000*	*9,03,44,000*	*4788,66,34,000*
			ಬಂಡವಾಳ	*54,29,02,000*	*..*	*54,29,02,000*
14.	XIII	*ಜೈಲುಗಳು*	*ಕಂದಾಯ*	*207,90,56,000*	*..*	*207,90,56,000*
15.	XIV	*ಸ್ಟೇಷನರಿ, ಮುದ್ರಣ ಹಾಗೂ ಇತರ ಆಡಳಿತಾತ್ಮಕ ಸೇವೆಗಳು*	*ಕಂದಾಯ*	*638,07,34,000*	*1,000*	*638,07,35,000*
			ಬಂಡವಾಳ	*8,48,00,000*	*..*	*8,48,00,000*
16.	XV	*ಸಾರ್ವಜನಿಕ ಕಾಮಗಾರಿ*	*ಕಂದಾಯ*	*1983,61,64,000*	*2,91,47,000*	*1986,53,11,000*
			ಬಂಡವಾಳ	*3039,66,95,000*	*40,50,01,000*	*3080,16,96,000*
17.	XVI	*ಪಿಂಚಣಿ ಹಾಗೂ ವಿವಿಧೋದ್ದೇಶ*	*ಕಂದಾಯ*	*41384,69,08,000*	*9,58,74,000*	*41394,27,82,000*

This is a digitally signed Gazette.
Authenticity may be verified through https://compose.kerala.gov.in/

4

(1)	(2)		(3)		
18.	XVII ಶಿಕ್ಷಣ, ಕ್ರೀಡೆ, ಕಲೆ ಹಾಗೂ ಸಂಸ್ಕೃತಿ	ಕಂದಾಯ	24036,65,70,000	21,00,000	24036,86,70,000
		ಬಂಡವಾಳ	444,64,02,000	..	444,64,02,000
19.	XVIII ವೈದ್ಯಕೀಯ ಹಾಗೂ ಸಾರ್ವಜನಿಕ ಆರೋಗ್ಯ	ಕಂದಾಯ	9418,71,20,000	6,83,000	9418,78,03,000
		ಬಂಡವಾಳ	248,40,07,000	2,000	248,40,09,000
20.	XIX ಕುಟುಂಬ ಕಲ್ಯಾಣ	ಕಂದಾಯ	424,48,97,000	1,000	424,48,98,000
21.	XX ನೀರು ಸರಬರಾಜು ಹಾಗೂ ಶುಚೀಕರಣ	ಕಂದಾಯ	442,39,97,000	..	442,39,97,000
		ಬಂಡವಾಳ	868,31,00,000	..	868,31,00,000
22.	XXI ಗೃಹ ನಿರ್ಮಾಣ	ಕಂದಾಯ	76,95,36,000	15,00,000	77,10,36,000
		ಬಂಡವಾಳ	54,69,01,000	..	54,69,01,000
23.	XXII ನಗರಾಭಿವೃದ್ಧಿ	ಕಂದಾಯ	1524,56,34,000	1,000	1524,56,35,000
		ಬಂಡವಾಳ	196,00,02,000	..	196,00,02,000
24.	XXIII ವಾರ್ತಾಪ್ರಸಾರ ಹಾಗೂ ಪ್ರಚಾರ	ಕಂದಾಯ	106,73,36,000	..	106,73,36,000
		ಬಂಡವಾಳ	2,10,00,000	..	2,10,00,000
25.	XXIV ಕಾರ್ಮಿಕತೆ, ಕಾರ್ಮಿಕ ಕಲ್ಯಾಣ ಹಾಗೂ ಅನಿವಾಸಿ ಕಲ್ಯಾಣ	ಕಂದಾಯ	1050,76,08,000	..	1050,76,08,000
		ಬಂಡವಾಳ	189,00,02,000	..	189,00,02,000
26.	XXV ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ ಇತರ ಹಿಂದುಳಿದ ವರ್ಗಗಳು/ ಅಲ್ಪಸಂಖ್ಯಾತರ ವಿಭಾಗಗಳು ಮೊದಲಾದವರ ಕಲ್ಯಾಣ	ಕಂದಾಯ	2354,82,19,000	2,000	2354,82,21,000
		ಬಂಡವಾಳ	929,40,20,000	1,000	929,40,21,000
27.	XXVI ಪ್ರಕೃತಿ ವಿಕೋಪದಿಂದುಂಟಾದ ನಷ್ಟ ಪರಿಹಾರಕ್ಕೆ	ಕಂದಾಯ	1617,03,19,000	..	1617,03,19,000
28.	XXVII ಸಹಕಾರ	ಕಂದಾಯ	463,82,97,000	..	463,82,97,000
		ಬಂಡವಾಳ	86,86,00,000	..	86,86,00,000
29.	XXVIII ವಿವಿಧ ಆರ್ಥಿಕ ಸೇವೆಗಳು	ಕಂದಾಯ	245,78,45,000	..	245,78,45,000
		ಬಂಡವಾಳ	4608,09,11,000	..	4608,09,11,000
30.	XXIX ಕೃಷಿ	ಕಂದಾಯ	3023,06,02,000	5,50,000	3023,11,52,000
		ಬಂಡವಾಳ	379,38,48,000	2,000	379,38,50,000

This is a digitally signed Gazette.
Authenticity may be verified through https://compose.kerala.gov.in/

5

(1)	(2)		(3)		
31.	XXX ಆಹಾರ	ಕಂದಾಯ	1895,88,93,000	1,000	1895,88,94,000
		ಬಂಡವಾಳ	37,32,00,000	..	37,32,00,000
32.	XXXII ಪೈನುಗಾರಿಕೆ	ಕಂದಾಯ	168,13,59,000	..	168,13,59,000
		ಬಂಡವಾಳ	30,70,00,000	..	30,70,00,000
33.	XXXIII ಮೀನುಗಾರಿಕೆ	ಕಂದಾಯ	418,82,07,000	..	418,82,07,000
		ಬಂಡವಾಳ	250,22,00,000	1,000	250,22,01,000
34.	XXXIV ಅರಣ್ಯ	ಕಂದಾಯ	746,27,89,000	3,02,000	746,30,91,000
		ಬಂಡವಾಳ	95,80,02,000	..	95,80,02,000
35.	XXXV ಪಂಚಾಯತು	ಕಂದಾಯ	608,96,04,000	..	608,96,04,000
		ಬಂಡವಾಳ	545,10,01,000	1,000	545,10,02,000
36.	XXXVI ಗ್ರಾಮಾಭಿವೃದ್ಧಿ	ಕಂದಾಯ	4877,85,05,000	1,000	4877,85,06,000
		ಬಂಡವಾಳ	1457,40,00,000	..	1457,40,00,000
37.	XXXVII ಕೈಗಾರಿಕೆಗಳು	ಕಂದಾಯ	795,38,36,000	..	795,38,36,000
		ಬಂಡವಾಳ	1162,86,03,000	1,000	1162,86,04,000
38.	XXXVIII ನೀರಾವರಿ	ಕಂದಾಯ	444,29,29,000	2,29,000	444,31,58,000
		ಬಂಡವಾಳ	422,78,87,000	94,16,000	423,73,03,000
39.	XXXIX ವಿದ್ಯುಚ್ಛಕ್ತಿ ಯೋಜನೆಗಳು	ಕಂದಾಯ	95,20,66,000	..	95,20,66,000
		ಬಂಡವಾಳ	19,80,00,000	..	19,80,00,000
40.	XL ಬಂದರುಗಳು	ಕಂದಾಯ	73,10,51,000	..	73,10,51,000
		ಬಂಡವಾಳ	65,19,00,000	..	65,19,00,000
41.	XLI ಸಾರಿಗೆ	ಕಂದಾಯ	102,60,38,000	65,61,78,000	168,22,16,000
		ಬಂಡವಾಳ	1672,28,91,000	1,000	1672,28,92,000
42.	XLII ಪ್ರವಾಸೋದ್ಯಮ	ಕಂದಾಯ	233,96,20,000	..	233,96,20,000
		ಬಂಡವಾಳ	187,31,00,000	..	187,31,00,000
43.	XLIII ನಷ್ಟ ಪರಿಹಾರ ಹಾಗೂ ಹಕ್ಕು ವರ್ಗಾವಣೆ	ಕಂದಾಯ	15205,46,19,000	..	15205,46,19,000
44.	ಸಾರ್ವಜನಿಕ ಸಾಲ ಮರುಪಾವತಿ	ಬಂಡವಾಳ	..	71058,29,95,000	71058,29,95,000
45.	XLV ವಿವಿಧ ಸಾಲಗಳು ಹಾಗೂ ಮುಂಗಡಗಳು	ಬಂಡವಾಳ	666,61,92,000	..	666,61,92,000
46.	XLVI ಸಾಮಾಜಿಕ ಭದ್ರತೆ ಹಾಗೂ ಕಲ್ಯಾಣ	ಕಂದಾಯ	13115,91,31,000	..	13115,91,31,000
		ಬಂಡವಾಳ	41,60,83,000	..	41,60,83,000
	ಒಟ್ಟು		***156758,18,79,000***	***100438,83,86,000***	***257197,02,65,000***

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಐ) ಇಲಾಖೆ

ಅಧಿಸೂಚನೆ

2023 ನವೆಂಬರ್ 14,

ನಂಬ್ರ 6218/ಲೆಗ್. ಐ2/2020/ಕಾನೂನು. ತಿರುವನಂತಪುರಂ, 1199 ತುಲಾ 28/

1945 ಕಾರ್ತಿಕ 23.

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2024 ನವೆಂಬರ್ 12ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಸಿ. ವಿಜಯಲಕ್ಷ್ಮಿ,

ವಿಶೇಷ ಕಾರ್ಯದರ್ಶಿ (ಕಾನೂನು).

2023ರ 27ನೇ ಅಧಿನಿಯಮ

2023ರ ಕೇರಳ ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣ (ನಿರ್ಮಾಣ, ಸಂಗ್ರಹಣೆ ವಿತರಣೆ, ಮಾರಾಟದ ನಿಯಂತ್ರಣ ಮತ್ತು ಗುಣಮಟ್ಟ ಖಾತ್ರಿಪಡಿಸುವಿಕೆ) ಅಧಿನಿಯಮ

ಕೇರಳ ರಾಜ್ಯದಲ್ಲಿ ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣ ಎಂಬಿವುಗಳ ನಿರ್ಮಾಣ, ಸಂಗ್ರಹಣೆ, ವಿತರಣೆ ಮತ್ತು ಮಾರಾಟ ಎಂಬಿವುಗಳನ್ನು ನಿಯಂತ್ರಿಸುವುದಕ್ಕೆ ಮತ್ತು ಸುರಕ್ಷಿತ ಮತ್ತು ಗುಣಮಟ್ಟವಿರುವ ಮೇವನ್ನು ಖಾತ್ರಿಪಡಿಸುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ.—ಕೇರಳ ರಾಜ್ಯದಲ್ಲಿ ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣ ಎಂಬಿವುಗಳ ನಿರ್ಮಾಣ, ಸಂಗ್ರಹಣೆ, ವಿತರಣೆ ಮತ್ತು ಮಾರಾಟವನ್ನು ನಿಯಂತ್ರಿಸುವುದು ಅತ್ಯಗತ್ಯವಾಗಿರುವುದರಿಂದಲೂ, ರಾಜ್ಯದ ಜಾನುವಾರುಗಳಿಗೆ ಮತ್ತು ಕೋಳಿ ವರ್ಗಕ್ಕೆ ಸುರಕ್ಷಿತ ಮತ್ತು ಗುಣಮಟ್ಟವಿರುವ ಮೇವಿನ ಲಭ್ಯತೆಯನ್ನು ಖಾತ್ರಿಪಡಿಸಬೇಕಾಗಿರುವುದರಿಂದಲೂ ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣ ಎಂಬಿವುಗಳಲ್ಲಿನ ಕಲಬೆರಕೆ ಮತ್ತು ಮಿಸ್ ಬ್ರಾಂಡಿಂಗ್ ಅನ್ನು ತಡೆಗಟ್ಟಬೇಕಾಗಿರುವುದರಿಂದಲೂ ಅದಕ್ಕೆ ಸಂಬಂಧಪಟ್ಟ ಅಥವಾ ಆನುಷಂಗಿಕವಾದ ವಿಷಯಗಳಿಗೆ ಬೇಕಾಗಿ ಉಪಬಂಧಿಸುವುದು ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ಎಪ್ಪತ್ತನಾಲ್ಕನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2023ರ ಕೇರಳ ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣ (ನಿರ್ಮಾಣ, ಸಂಗ್ರಹಣೆ, ವಿತರಣೆ, ಮಾರಾಟದ ನಿಯಂತ್ರಣ ಮತ್ತು ಗುಣಮಟ್ಟ ಖಾತ್ರಿಪಡಿಸುವಿಕೆ) ಅಧಿನಿಯಮ ಎಂದು ಕರೆಯಬಹುದು.

(2) ಇದು 2021 ಫೆಬ್ರವರಿ 18ನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

G. 18/2025/GPC.

This is a digitally signed Gazette.
Authenticity may be verified through https://compose.kerala.gov.in/

2

2. ನಿರ್ವಚನಗಳು.—ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸದ ಹೊರತು,—

(ಎ) "*ಸಂಯೋಜಕ*" *ಎಂದರೆ ಜಾನುವಾರುಗಳ ಮತ್ತು ಕೋಳಿ ವರ್ಗದ ಶಕ್ತಿಯನ್ನು ಹೆಚ್ಚಿಸುವುದಕ್ಕಾಗಿ ಮೂಲ ಆಹಾರ ಮಿಶ್ರಣದಲ್ಲಿ ಅಥವಾ ಅದರ ಭಾಗಗಳಿಗೆ ಸೇರಿಸುವ ಒಂದು ಪೌಷ್ಟಿಕ ಅಥವಾ ಪೌಷ್ಟಿಕೇತರ ಐಟಮ್ ಅಥವಾ ಐಟಮ್‌ಗಳ ಸಂಯೋಜನೆ ಎಂದರ್ಥ;*

(ಬಿ) ಜಾನುವಾರು ಮೇವು, ಕೋಳಿ ವರ್ಗ ಆಹಾರ, ಸಂಯುಕ್ತ ಆಹಾರ ಮತ್ತು ಖನಿಜ ಮಿಶ್ರಣ ಎಂಬಿವುಗಳಿಗೆ ಸಂಬಂಧಿಸಿದಂತೆ "*ಕಲಬೆರಕೆ*" *ಎಂದರೆ ಯಾವುದೇ ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣ ಎಂಬಿವುಗಳು,—*

(i) *ಅದರ ಸ್ವರೂಪ, ವಸ್ತು ಅಥವಾ ರೆಗ್ಯುಲೇಶನ್ ಪ್ರಕಾರ ನಿರ್ಧರಿಸಿದ ಗುಣಮಟ್ಟದ ಮಾನದಂಡಗಳು ಎಂಬಿವುಗಳು ಲೇಬಲಿಂಗ್‌ಗೆ ಸಂಬಂಧಿಸಿದ ಘೋಷಣೆಗೆ ಅನುಗುಣವಾಗಿಲ್ಲ; ಅಥವಾ*

(ii) *ಜಾನುವಾರುಗಳ ಅಥವಾ ಕೋಳಿ ವರ್ಗದ ಸೇವನೆಗೆ ಅಸುರಕ್ಷಿತವಾದ ಅಥವಾ ಗುಣಮಟ್ಟ ರಹಿತವಾದ ಬಾಹ್ಯವಸ್ತುಗಳು ಅದರಲ್ಲಿ ಒಳಗೊಂಡಿದೆ; ಅಥವಾ*

(iii) *ಜಾನುವಾರುಗಳಿಗೆ ಮತ್ತು ಕೋಳಿ ವರ್ಗಕ್ಕೆ ಹಾನಿಕಾರಕವಾದ ರೀತಿಯಲ್ಲಿ ರೋಗಕಾರಕ ಸೂಕ್ಷ್ಮಾಣುಗಳು, ಕೀಟಗಳು ಅಥವಾ ಮೂಷಿಕ ವರ್ಗದ ಪ್ರಾಣಿಗಳು ಎಂಬಿವುಗಳಿಂದ ಮುತ್ತಿಕೊಂಡಿರುವುದೋ ಅವುಗಳಿಂದ ನಾಶವಾಗಿರುವುದೋ ಅಥವಾ ಹಾಳಾಗಿರುವುದೋ ಆಗಿರುವುದು ಎಂದರ್ಥ;*

(ಸಿ) "*ಅಂಗೀಕೃತ ಏಜೆಂಟ್*" *ಎಂದರೆ ಜಾನುವಾರು ಮೇವು, ಕೋಳಿ ವರ್ಗ ಆಹಾರ, ಖನಿಜ ಮಿಶ್ರಣ ಎಂಬಿವುಗಳ ಸಂಗ್ರಹಣೆ, ವಿತರಣೆ, ಮಾರಾಟಕ್ಕಿರುವ ಸಾಗಾಟ, ಮಾರಾಟ ಎಂಬಿವುಗಳನ್ನು ಅದರ ನಿರ್ಮಾಣಗಾರರೊಂದಿಗಿನ ಕರಾರಿನ ಅಥವಾ ಒಪ್ಪಂದದ ತಳಹದಿಯಲ್ಲಿ ನಡೆಸುವ ಕಾನೂನಿನ ಪ್ರಕಾರ ಲೈಸೆನ್ಸ್ ಇರುವ ಯಾವುದೇ ವ್ಯಕ್ತಿ ಎಂದರ್ಥ;*

(ಡಿ) "*ಅಧಿಕೃತ ಅಧಿಕಾರಿ*" *ಎಂದರೆ ಈ ಅಧಿನಿಯಮದ ಉದ್ದೇಶಗಳಿಗಾಗಿ ಸರಕಾರವು ಅಧಿಕೃತಗೊಳಿಸಿದ ಒಬ್ಬ ಅಧಿಕಾರಿ ಎಂದರ್ಥ;*

(ಇ) "*ಸಂಯುಕ್ತ ಆಹಾರ*" *ಎಂದರೆ ಜಾನುವಾರುಗಳಿಗೆ ಮತ್ತು ಕೋಳಿವರ್ಗಕ್ಕೆ ಅದರ ಪ್ರಾಯ, ಬೆಳವಣಿಗೆ, ಉತ್ಪಾದನೆ ಮತ್ತು ಸಂತಾನೋತ್ಪತ್ತಿ ಎಂಬಿವುಗಳಿಗೆ ಅನುಗುಣವಾಗಿ ಆಹಾರವಾಗಿ ನೀಡುವುದಕ್ಕಾಗಿ, ರೆಗ್ಯುಲೇಶನ್ ಪ್ರಕಾರ ನಿರ್ಧರಿಸಿದ ಮಾನದಂಡಗಳಿಗೆ ಅನುಗುಣವಾಗಿ ಸಿದ್ಧಪಡಿಸಿದ ಮೇವು ಎಂದರ್ಥ;*

(ಎಫ್) "*ಸಾಂದ್ರೀಕೃತ ಆಹಾರ*" *ಎಂದರೆ, ಹದಿನೆಂಟು ಶೇಕಡಾಕ್ಕಿಂತ ಕಡಿಮೆ ನಾರಿನ ಅಂಶವನ್ನು ಹೊಂದಿರುವ ಹೆಚ್ಚಿನ ಪೋಷಕಾಂಶಗಳ ಸಾಂದ್ರತೆಯೊಂದಿಗಿನ ಮೇವು ಎಂದರ್ಥ;*

(ಜಿ) "*ಮಾಲಿನ್ಯಕಾರಕ ವಸ್ತು*" *ಎಂದರೆ ಮೇವಿನಲ್ಲಿ ಬೆರೆಸಿರುವುದೋ ಅಲ್ಲದಿರುವುದೋ ಆದ, ಆದರೆ ಉತ್ಪಾದನೆ (ಬೆಳೆ ಸಂರಕ್ಷಣೆಗಾಗಿ ನಡೆಸುವ ಕಾರ್ಯಾಚರಣೆಗಳನ್ನು ಒಳಗೊಂಡು) ನಿರ್ಮಾಣ, ಸಂಸ್ಕರಣೆ, ಪ್ಯಾಕಿಂಗ್, ಸಾಗಣೆ ಮತ್ತು ಸಂಗ್ರಹಣೆ ಎಂಬಿವುಗಳ ಪರಿಣಾಮವಾಗಿ ಬಾಹ್ಯ ಪರಿಸರದ ಪ್ರಭಾವದಿಂದ ಮೇವಿನಲ್ಲಿ ಕಂಡುಬರುವ ಯಾವುದೇ ವಸ್ತು ಎಂದರ್ಥ;*

(ಎಚ್) "*ಡೀಲರ್*" *ಎಂದರೆ ಜಾನುವಾರು ಮೇವು, ಕೋಳಿ ವರ್ಗ ಆಹಾರ ಅಥವಾ ಖನಿಜ ಮಿಶ್ರಣ ಎಂಬಿವುಗಳನ್ನು ರೆಗ್ಯುಲೇಶನ್ ಪ್ರಕಾರ ನಿರ್ಧರಿಸಿದ ಅತೀ ಕಡಿಮೆ ಪ್ರಮಾಣಕ್ಕೆ ಒಳಪಟ್ಟು, ಮಾರಾಟ ಅಥವಾ ವಿತರಣೆ ಅಥವಾ ಮಾರಾಟ ಮತ್ತು ವಿತರಣೆಯಲ್ಲಿ ತೊಡಗಿರುವ ಒಬ್ಬ ವ್ಯಕ್ತಿ, ವ್ಯಕ್ತಿಗಳ ಒಂದು ಸಂಘ, ಒಂದು ಸಮಾಜ, ಒಂದು ವ್ಯವಹಾರ ಸಂಸ್ಥೆ ಅಥವಾ ಒಂದು ಏಜೆನ್ಸಿ ಎಂದರ್ಥ ಮತ್ತು ಅದರಲ್ಲಿ ಮೇಲೆ ಹೇಳಿದ ವ್ಯಾಪಾರವನ್ನು ನಡೆಸಲು ಜವಾಬ್ದಾರರಾಗಿರುವ ನಿರ್ದೇಶಕ ಅಥವಾ ಮಾಲಿಕ ಅಥವಾ ಮ್ಯಾನೇಜರ್, ಯಾವುದೇ ಹೆಸರಿನಿಂದ ಕರೆಯಲ್ಪಟ್ಟರೂ, ಒಳಗೊಂಡಿರುವರು;*

(ಐ) "*ಮೇವು*" *ಎಂದರೆ ಜಾನುವಾರುಗಳ ಅಥವಾ ಕೋಳಿ ವರ್ಗದವುಗಳ ಆಹಾರ ರೀತಿಯಲ್ಲಿ ಪೋಷಕಾಂಶಗಳನ್ನು ನೀಡುವ ಮತ್ತು ಸುರಕ್ಷಿತ ಹಾಗೂ ಖಾದ್ಯವಾದ ಒಂದು ವಸ್ತು ಎಂದರ್ಥ;*

(ಜೆ) "*ಮೇವಿನ ಘಟಕಗಳು*" *ಎಂದರೆ ಜಾನುವಾರುಗಳ ಮತ್ತು ಕೋಳಿ ವರ್ಗಗಳ ಆಹಾರದಲ್ಲಿ ಒಳಪಡುವ ಅಥವಾ ಜಾನುವಾರುಗಳಿಗೆ ಮತ್ತು ಕೋಳಿವರ್ಗಗಳಿಗೆ ಪ್ರತ್ಯಕ್ಷವಾಗಿ ಆಹಾರವಾಗಿ ನೀಡುವ ರೆಗ್ಯುಲೇಶನ್ ಪ್ರಕಾರ ನಿರ್ಧರಿಸಿದ ಪೋಷಕಾಂಶಭರಿತ ವಸ್ತು ಎಂದರ್ಥ;*

(ಕೆ) "*ಫೀಡ್ ಮಿಲ್*" *ಎಂದರೆ ಜಾನುವಾರು ಮೇವು, ಕೋಳಿ ವರ್ಗ ಆಹಾರ ಅಥವಾ ಖನಿಜ ಮಿಶ್ರಣ ಎಂಬಿವುಗಳನ್ನು ನಿರ್ಮಿಸುವುದಕ್ಕಿರುವ ಸ್ವಯಂ ಚಾಲಿತ ಅಥವಾ ಅರೆ ಸ್ವಯಂ ಚಾಲಿತ ಪ್ಲಾಂಟ್ ಎಂದರ್ಥ;*

This is a digitally signed Gazette.
Authenticity may be verified through https://compose.kerala.gov.in/

(എൽ) "ഫീഡ് സേഫ്റ്റി അഷ്യൂറൻസ് ഓഫീസർ" *എന്നതു ഈ അധിനിയമത്തിന്റെ 10-ാം വിഭാഗത്തിന്റെ* (iii)*-ാം ഉപവകുപ്പ് പ്രകാരം സർക്കാർ നിയോഗിച്ച ഒരു അധികാരി എന്നർത്ഥം;*

(എം) "ഫീഡ് സേഫ്റ്റി എൻഫോഴ്സ്മെന്റ് ഓഫീസർ" *എന്നതു ഈ അധിനിയമത്തിന്റെ 10-ാം വിഭാഗത്തിന്റെ* (ii)*-ാം ഉപവകുപ്പ് പ്രകാരം സർക്കാർ നിയോഗിച്ച ഒരു ജില്ലാതല അധികാരി എന്നർത്ഥം;*

(എൻ) "മേവു പദാർത്ഥം" *എന്നതു ജീവജാലങ്ങളുടെയും കോഴി വർഗ്ഗത്തിന്റെയും പോഷണത്തിനായുള്ള പ്രകൃതിദത്തമായ ഏതൊരു മേവു ഘടകമോ അല്ലെങ്കിൽ ഏതൊരു വസ്തുവെന്നും അതിന്റെ ഉപോൽപ്പന്നങ്ങളുടെയും സംസ്കരിച്ച രൂപങ്ങളുടെയും പരിഗണിക്കുന്നതും, അധികൃത ഗസറ്റിലെ അധിസൂചനയുടെ അടിസ്ഥാനത്തിൽ, ഈ അധിനിയമത്തിന്റെ ഉദ്ദേശ്യങ്ങൾക്കായി, പോഷിപ്പിക്കുന്ന മേവു പദാർത്ഥം, ജീവജാലങ്ങളുടെ മേവു, കോഴി വർഗ്ഗ ആഹാരം അല്ലെങ്കിൽ ധാതു മിശ്രിതം എന്നിവയിൽ ഉൾപ്പെടുന്നതുമാണ്;*

(ഒ) "മേവു വിശകലനം" *എന്നതു മേവിനുള്ളിലെ ഘടകങ്ങളുടെ പോഷകമൂല്യത്തിന്റെ നിർണ്ണയത്തിലൂടെ ഗുണനിലവാരം വിശകലനം ചെയ്യുന്നതിനെ എന്നർത്ഥം;*

(പി) "സർക്കാർ" *എന്നതു കേരള സർക്കാർ എന്നർത്ഥം;*

(ക്യൂ) "ലൈസൻസിംഗ് അതോറിറ്റി" *എന്നതു ഈ അധിനിയമത്തിന്റെ 10-ാം വിഭാഗത്തിന്റെ* (i)*-ാം ഉപവകുപ്പ് പ്രകാരം സർക്കാർ നിയോഗിച്ച ഒരു അധികാരി എന്നർത്ഥം;*

(ആർ) "ജീവജാലങ്ങൾ" *എന്നതു മുട്ട, മാംസം, തുകൽ, ചർമ്മം അല്ലെങ്കിൽ കമ്പിളി തുടങ്ങിയവയുടെ നിർമ്മാണത്തിനായി ഒരു കൃഷിയിടത്തിൽ വളർത്തുന്ന എല്ലാ പ്രാണികളെയും എന്നർത്ഥം;*

(എസ്) "നിർമ്മാതാവ്" *എന്നതു ജീവജാലങ്ങൾക്കുള്ള മേവു, കോഴി വർഗ്ഗ ആഹാരം, ധാതു മിശ്രിതം എന്നിവയിൽ ഏതെങ്കിലും ഒന്നോ എല്ലാമോ ഒരു വ്യക്തി തന്റെ ഉടമസ്ഥതയിലുള്ളതോ അല്ലെങ്കിൽ തന്റെയോ അവരുടെയോ കൂട്ടുടമസ്ഥതയിലുള്ളതോ ആയ ഫീഡ് മില്ലിലോ അല്ലെങ്കിൽ തന്റെയോ അവരുടെയോ ഉടമസ്ഥതയിലല്ലാത്ത ഒരു ഫീഡ് മില്ലിലോ നിർമ്മിക്കുന്നതിനായി ഏർപ്പെടുത്തിയിരിക്കുന്ന ഏതെങ്കിലും വ്യക്തി അല്ലെങ്കിൽ വ്യക്തികൾ, കമ്പനികൾ, സ്ഥാപനങ്ങൾ, സംഘടനകൾ എന്നർത്ഥം;*

(ടി) "ധാതു മിശ്രിതം" *എന്നതു ജീവജാലങ്ങൾക്കും കോഴി വർഗ്ഗത്തിനും പൂരക ആഹാരമായി നൽകാവുന്നതും കലർപ്പില്ലാത്തതും ദുർഗന്ധമില്ലാത്തതുമായ പ്രധാന അല്ലെങ്കിൽ ചെറിയ അളവിൽ മാത്രം ആവശ്യമുള്ള ധാതുക്കളുടെ ഏതു രൂപത്തിലുള്ള മിശ്രിതം എന്നർത്ഥം;*

(യു) "മിസ്ബ്രാൻഡഡ്" *എന്നതു ഒരു ഉൽപ്പന്നത്തെ അടയാളപ്പെടുത്തുന്ന ലേബൽ, ബ്രാൻഡ്, ടാഗ്, നോട്ടീസ് അല്ലെങ്കിൽ പരസ്യം എന്നിവയിൽ ഏതെങ്കിലും രീതിയിൽ തെറ്റായ വിവരം നൽകുന്നതോ അല്ലെങ്കിൽ അതിലുൾപ്പെട്ട ഉൽപ്പന്നത്തെക്കുറിച്ചു തെറ്റിദ്ധരിപ്പിക്കുന്നതോ അല്ലെങ്കിൽ ഒരു നിർമ്മാതാവിന്റെ ഉൽപ്പന്നമായിരിക്കുമ്പോൾ അതിനെ മറ്റൊരു നിർമ്മാതാവിന്റെ ഉൽപ്പന്നമായി തെറ്റായി അവതരിപ്പിക്കുന്നതോ എന്നർത്ഥം;*

(വി) "എള്ള് (എള്ളെണ്ണ)" *എന്നതു എള്ളിൽ നിന്നും എള്ളെണ്ണ, പിണ്ണാക്ക് അല്ലെങ്കിൽ മറ്റു ഉൽപ്പന്നങ്ങൾ വേർതിരിച്ചെടുത്തതിനു ശേഷം ലഭിക്കുന്ന പദാർത്ഥം എന്നർത്ഥം;*

(ഡബ്ല്യു) "എള്ളെണ്ണ മില്ല്" *എന്നതു എള്ളിൽ നിന്നും എള്ളെണ്ണ വേർതിരിച്ചെടുക്കുന്നതിനായി യന്ത്രങ്ങൾ സ്ഥാപിച്ചതിനു ശേഷം ലഭിക്കുന്ന പദാർത്ഥം എന്നർത്ഥം;*

(എക്സ്) "കോഴി വർഗ്ഗം" *എന്നതു കോഴി, താറാവ്, ഗിനിക്കോഴി, കാട, ടർക്കി, പ്രാവ് എന്നിവയെ ഉൾക്കൊള്ളുന്നു എന്നർത്ഥം;*

(വൈ) "നിഗദിപ്പിച്ചിരിക്കുന്നു" *എന്നതു ഈ അധിനിയമത്തിന്റെ കീഴിൽ ഉണ്ടാക്കിയ ചട്ടങ്ങൾ പ്രകാരം നിഗദിപ്പിച്ചിരിക്കുന്നു എന്നർത്ഥം;*

(സെഡ്) "റെഗുലേഷൻ" *എന്നതു ഈ അധിനിയമത്തിന്റെ 38-ാം വിഭാഗം പ്രകാരം പുറപ്പെടുവിക്കുന്ന റെഗുലേഷനുകൾ എന്നർത്ഥം;*

This is a digitally signed Gazette.
Authenticity may be verified through https://compose.kerala.gov.in/

4

(ಎಎ) "ನಾರಿನ ಮೇವು" *ಎಂದರೆ ಹದಿನೆಂಟು ಶೇಕಡಾಕ್ಕಿಂತ ಹೆಚ್ಚು ನಾರಿನ ಅಂಶವಿರುವ ಮೇವು ಪದಾರ್ಥ ಎಂದರ್ಥ;*

(ಎಬಿ) "ಮಾರಾಟ" *ಎಂದರೆ ಜಾನುವಾರು ಮೇವು, ಕೋಳಿ ವರ್ಗ ಆಹಾರ ಅಥವಾ ಖನಿಜ ಮಿಶ್ರಣ ಎಂಬಿವುಗಳಿಗೆ ಸಂಬಂಧಿಸಿದಂತೆ ಹಣವನ್ನು ಪಾವತಿಸಿದ ಅಥವಾ ಭಾಗಶಃವಾಗಿ ಹಣವನ್ನು ಪಾವತಿಸಿದ ಅಥವಾ ಭರವಸೆ ನೀಡಿದ ಅಥವಾ ಭಾಗಶಃವಾಗಿ ಭರವಸೆ ನೀಡಿದುದಕ್ಕೆ ಬದಲಾಗಿ, ಮೌಖಿಕವಾದ ಅಥವಾ ಲಿಖಿತ ಮುಖೇನವಿರುವ ಮೌಲಿಕತ್ವದ ವರ್ಗಾವಣೆ ಎಂದರ್ಥ;*

(ಎಸಿ) "ಸ್ಟೇಟ್ ಫೀಡ್ ಕ್ವಾಲಿಟಿ ಕನ್ಸಲ್ಟೇಟಿವ್ ಕಮಿಟಿ" *ಎಂದರೆ ಈ ಅಧಿನಿಯಮದ 26ನೇ ವಿಭಾಗ ಪ್ರಕಾರ ರಚಿಸಲಾದ ಕಮಿಟಿ ಎಂದರ್ಥ;*

(ಎಡಿ) "ಗುಮಮಟ್ಟವಿಲ್ಲದವು" *ಎಂದರೆ ರೆಗ್ಯುಲೇಶನ್ ಪ್ರಕಾರ ನಿಗದಿಪಡಿಸಿದ ಗುಮಮಟ್ಟವಿಲ್ಲದವು ಎಂದರ್ಥ;*

(ಎಇ) "ಟೋಟಲ್ ಮಿಕ್ಸ್ಡ್‌ರೇಶನ್ *(ಟಿ.ಎಂ.ಆರ್)* ಅಥವಾ *ಸಂಪೂರ್ಣ ಮಿಶ್ರ ಮೇವು*" *ಎಂದರೆ ಸಾಂದ್ರೀಕೃತ ಮೇವು ಮತ್ತು ನಾರಿನ ಮೇವು ಪದಾರ್ಥಗಳನ್ನು ಸಮತೋಲಿತ ಪ್ರಮಾಣದಲ್ಲಿ ಲೆಕ್ಕ ಹಾಕಿ ಯಂತ್ರದ ನೆರವಿನೊಂದಿಗೆ ಅಥವಾ ಅಲ್ಲದೆ ಸಂಯೋಜಿಸಿ ನಿರ್ಮಿಸುವ ಮೇವು ಎಂದರ್ಥ;*

(ಎಎಫ್) "ಅನ್ಯಾಯದ ವ್ಯಾಪಾರ ಸಂಪ್ರದಾಯಗಳು" *ಎಂಬುವುದಕ್ಕೆ 2019ರ ಬಳಕೆದಾರರ ಸಂರಕ್ಷಣೆ ಅಧಿನಿಯಮ (2019ರ 35ನೇ ನಂಬ್ರ ಕೇಂದ್ರ ಅಧಿನಿಯಮ)ದ 2ನೇ ವಿಭಾಗದ (47)ನೇ ಉಪ-ವಿಭಾಗದಲ್ಲಿ ಅದಕ್ಕೆ ನೀಡಿರುವ ಅದೇ ಅರ್ಥವನ್ನು ಹೊಂದಿರುವುದಾಗಿದೆ.*

3. ಜಾನುವಾರು ಮೇವು/ಕೋಳಿ ವರ್ಗ ಆಹಾರದಲ್ಲಿ ಬಳಸಬೇಕಾದ/ನಿಷೇಧಿಸಬೇಕಾದ ಮೇವು ಪದಾರ್ಥಗಳು ಅಥವಾ ಮೇವಿನ ಘಟಕಗಳು.—(1) ಜಾನುವಾರುಗಳಿಗೆ ಮತ್ತು ಕೋಳಿ ವರ್ಗಗಳಿಗೆ ಅಗತ್ಯವಾದ ಸಂಯುಕ್ತ ಆಹಾರದ ನಿರ್ಮಾಣಕ್ಕಾಗಿ ಬಳಸಬೇಕಾದ ಮೇವು ಘಟಕಗಳಲ್ಲಿ ಈ ಕೆಳಗಿನವುಗಳನ್ನು ಒಳಗೊಳ್ಳಿಸಬಹುದಾಗಿದೆ, ಅದೇನೆಂದರೆ:—

(i) "ನಾರಿನ ಮೇವು"*: ಹಸಿಹುಲ್ಲು, ಸೈಲೇಜ್, ಒಣಹುಲ್ಲು, ಒಣಗಿಸಿ ಜೋಪಾನವಾಗಿರಿಸಿದ ಹಸಿಹುಲ್ಲು, ಸಂಸ್ಕರಿಸಿದ ಅಥವಾ ಸಂಸ್ಕರಿಸದ ಒಣಹುಲ್ಲು ಮತ್ತು ಬೆಳೆ ಉಳಿಕೆಗಳೂ ಒಳಗೊಂಡಂತೆ ಒಣ ಅಥವಾ ಹಸಿ ಸಸ್ಯ ಉತ್ಪನ್ನಗಳು;*

(ii) *ಸಾಂದ್ರೀಕೃತ ಆಹಾರಗಳು ಮತ್ತು ಕೋಳಿ ವರ್ಗ ಆಹಾರ ಘಟಕಗಳು;*

(ಎ) ಪ್ರಮುಖ ಘಟಕಗಳು,—

(i) *ರೆಗ್ಯುಲೇಶನ್ ಪ್ರಕಾರ ನಿಗದಿಪಡಿಸಿದ ಧಾನ್ಯಗಳು, ಕಿರುಧಾನ್ಯಗಳು ಮತ್ತು ಗೆಡ್ಡೆಗೆಣಸುಗಳು;*

(ii) *ಜಾನುವಾರುಗಳ ಮತ್ತು ಕೋಳಿವರ್ಗಗಳ ಬಳಕೆಗೆ ರೆಗ್ಯುಲೇಶನ್ ಪ್ರಕಾರ ನಿರ್ಧರಿಸಿದ ಸುರಕ್ಷಿತವಾದ ಹಿಂಡಿಗಳು, ಆಯಿಲ್ ಮೀಲ್, ದ್ವಿದಳ ಧಾನ್ಯಗಳಂತಹ ಸಸ್ಯ-ಸಸಾರಜನಕ ಮೂಲಗಳು, ಸಸಾರಜನಕ ಸಮೃದ್ಧವಾದ ಕೃಷಿ-ಕೈಗಾರಿಕಾ ಉತ್ಪನ್ನಗಳು;*

(iii) *ಮೇಲುಕು ಹಾಕುವ ಪ್ರಾಣಿಗಳ ಮೇವನ್ನು ಹೊರತುಪಡಿಸಿರುವ, ರೆಗ್ಯುಲೇಶನ್ ಪ್ರಕಾರ ನಿರ್ಧರಿಸಿದ ಜಂತು ಸಸಾರಜನಕ ಮೂಲಗಳು;*

(iv) *ಜಾನುವಾರುಗಳಿಗೆ ಮತ್ತು ಕೋಳಿವರ್ಗಗಳಿಗೆ ಹಾನಿಕಾರಕವಲ್ಲದ, ರೆಗ್ಯುಲೇಶನ್ ಪ್ರಕಾರ ನಿರ್ಧರಿಸಿದ ಕೈಗಾರಿಕಾ ಮತ್ತು ಕೃಷಿ ಉತ್ಪನ್ನಗಳು ಅಥವಾ ಉಪ-ಉತ್ಪನ್ನಗಳು.*

(ಬಿ) ಸೂಕ್ಷ್ಮ ಪೋಷಕಾಂಶಗಳು ಅಥವಾ ಪೂರಕ ಪದಾರ್ಥಗಳು, ಸಂಯೋಜಕಗಳು.

(2) ಜಾನುವಾರುಗಳಿಗಿರುವ ಸಂಯುಕ್ತ ಆಹಾರದ ನಿರ್ಮಾಣದಲ್ಲಿ ಭತ್ತದ ಹೊಟ್ಟು, ಕ್ಯಾಸ್ಟರ್ ಹೊಟ್ಟು ಅಥವಾ ಸತ್ವ ತೆಗೆಯದ ಹಿಟ್ಟು, ಜಟ್ರೋಫಾ ಕೇಕ್ ಅಥವಾ ಸತ್ವ ತೆಗೆಯದ ಹಿಟ್ಟು, ಮರದ ಪುಡಿ, ನಿಷೇಧಿತ ಜಂತು ಮೂಲದ ಘಟಕಗಳು ಎಂಬಿವುಗಳ ಬಳಕೆಯನ್ನು ನಿಷೇಧಿಸಲಾಗಿದೆ.

(3) ಎಳೆಯ ಮೆಲುಕು ಹಾಕುವ ಪ್ರಾಣಿಗಳಿಗೆ ಅಗತ್ಯವಾದ ಮೇವಿನ ನಿರ್ಮಾಣದಲ್ಲಿ ಯೂರಿಯಾ ಅಥವಾ ಅಮೋನಿಯಂ ಲವಣಗಳನ್ನು ಹೆಚ್ಚಿಸುವ ಸಂಸಾರಜನಕವಲ್ಲದ ಸಾರಜನಕ ಸಂಯುಕ್ತಗಳನ್ನು (ಅಮಿನೋ ಆಮ್ಲಗಳನ್ನು ಹೊರತುಪಡಿಸಿ) ನಿಷೇಧಿಸಲಾಗಿದೆ. ಹಾಗಿದ್ದರೂ, ಬೆಳೆದ ಜಾನುವಾರುಗಳಿಗಾಗಿರುವ ಮೇವಿನಲ್ಲಿ ಒಂದು ಶೇಕಡಾಕ್ಕಿಂತ ಅಧಿಕವಲ್ಲದ ಯೂರಿಯಾವನ್ನು ಸೇರಿಸಬಹುದಾಗಿದೆ.

This is a digitally signed Gazette.
Authenticity may be verified through https://compose.kerala.gov.in/

5

(4) (1), (2), ಮತ್ತು *(3)*ನೇ ಉಪ-ವಿಭಾಗಗಳಲ್ಲಿ ಒಳಗೊಳ್ಳಿಸಿದವುಗಳಲ್ಲದ ಜಾನುವಾರುಗಳಿಗೆ ಮತ್ತು ಕೋಳಿವರ್ಗಗಳಿಗೆ ಬೇಕಾಗಿರುವ ಸಂಯುಕ್ತ ಆಹಾರದ ನಿರ್ಮಾಣದಲ್ಲಿ ಬಳಸಬೇಕಾದ ಮತ್ತು ಬಳಸಬಾರದ ಘಟಕಗಳನ್ನು ಸರಕಾರಕ್ಕೆ, ಕಾಲಾಕಾಲಕ್ಕೆ, ಅಧಿಕೃತ ಗಜೆಟಿನಲ್ಲಿ ಅಧಿಸೂಚನೆ ಮುಖೇನ, ಘೋಷಿಸಬಹುದಾಗಿದೆ.

4. ಖನಿಜ ಮಿಶ್ರಣದ ನಿರ್ಮಾಣದಲ್ಲಿ ಬಳಸಬೇಕಾದ ಮತ್ತು ಬಳಸಬಾರದ ಘಟಕಗಳು.—*(1)* ಖನಿಜ ಮಿಶ್ರಣವನ್ನು ನಿರ್ಮಿಸುವುದಕ್ಕಿರುವ ಲವಣರೂಪದ ಘಟಕಗಳು ರೆಗ್ಯುಲೇಶನ್ ಪ್ರಕಾರ ನಿರ್ಧರಿಸಿದ ಗುಣಮಟ್ಟದ್ದಾಗಿರತಕ್ಕದ್ದು.

(2) ಜಾನುವಾರುಗಳಿಗಾಗಿರುವ ಖನಿಜ ಮಿಶ್ರಣದಲ್ಲಿ ನಿಷೇಧಿಸಲ್ಪಟ್ಟ ಜಂತು ಮೂಲ ಘಟಕಗಳು, ಮಾರ್ಬಲ್ ಪುಡಿ, ಡೋಲೋಮೈಟ್ ಪುಡಿ, ಫೆರಿಕ್ ಆಕ್ಸೈಡ್, ಕ್ಯುಪ್ರಿಕ್ ಆಕ್ಸೈಡ್, ಮ್ಯಾಂಗನೀಸ್ ಡೈ ಆಕ್ಸೈಡ್, ಸಂಸ್ಕರಿಸದ ರಾಕ್ ಫೋಸ್ಫೇಟ್‌ನಂತಹ ಇತರ ಘಟಕಗಳು ಒಳಗೊಳ್ಳತಕ್ಕದ್ದಲ್ಲ.

(3) (1) ಮತ್ತು *(2)*ನೇ ಉಪ-ವಿಭಾಗಗಳಲ್ಲಿ ಉಲ್ಲೇಖಿಸಿದವುಗಳಲ್ಲದೆ, ಜಾನುವಾರುಗಳಿಗೆ ಮತ್ತು ಕೋಳಿವರ್ಗಗಳಿಗೆ ಅಗತ್ಯವಾದ ಖನಿಜ ಮಿಶ್ರಣವನ್ನು ನಿರ್ಮಿಸುವಾಗ ಬಳಸಬೇಕಾದ ಅಥವಾ ಬಳಸಬಾರದ ಯಾವುದೇ ಘಟಕಗಳನ್ನು ಸರಕಾರಕ್ಕೆ, ಅಧಿಕೃತ ಗಜೆಟಿನಲ್ಲಿ ಅಧಿಸೂಚನೆ ಮುಖೇನ, ಘೋಷಿಸಬಹುದಾಗಿದೆ.

5. ನಿರ್ಮಾಣ, ಸಂಗ್ರಹಣೆ, ವಿತರಣೆ, ಮಾರಾಟ ಎಂಬಿವುಗಳಿಗಿರುವ ಲೈಸೆನ್ಸ್.—*(1)* ನಿಗದಿಪಡಿಸಿದ ಪ್ರಕಾರದ ಷರತ್ತುಗಳನ್ನು ಪಾಲಿಸುತಾ ಮತ್ತು ಅಂತಹ ಶುಲ್ಕವನ್ನು ಪಾವತಿಸುತಾ ಮತ್ತು ಅಂತಹ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸುತಾ ಈ ಅಧಿನಿಯಮದ ಅಡಿಯಲ್ಲಿ ಪಡೆಯುವ ಸಿಂಧುವಾದ ಒಂದು ಲೈಸೆನ್ಸ್ ಸ್ವಾಧೀನದಲ್ಲಿಲ್ಲದಿರುವ ಯಾವುದೇ ವ್ಯಕ್ತಿ, ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣ ಎಂಬಿವುಗಳನ್ನು ನಿರ್ಮಿಸುವುದೋ, ಸಂಗ್ರಹಿಸುವುದೋ, ವಿತರಣೆ ಮಾಡುವುದೋ ಮಾರಾಟ ಮಾಡುವುದೋ ಮಾಡತಕ್ಕದ್ದಲ್ಲ.

ಆದರೆ, ಒಂದು ಅಥವಾ ಅದಕ್ಕಿಂತ ಹೆಚ್ಚು ಮೇವು ಐಟಮ್‌ಗಳಿಗೆ ಏಕ ಲೈಸನ್ಸನ್ನು ಮತ್ತು ಪ್ರತ್ಯೇಕ ಫೀಡ್‌ಮಿಲ್‌ಗಳಿಗೆ ಪ್ರತ್ಯೇಕ ಲೈಸೆನ್ಸ್‌ಗಳನ್ನು ಪಡಿದಿರತಕ್ಕದ್ದು.

ವಿವರಣೆ:—ರಾಜ್ಯದ ಹೊರಗೆ ಉತ್ಪಾದಿಸುವುದೋ, ನಿರ್ಮಿಸುವುದೋ ಆದ ಜಾನುವಾರು ಮೇವು, ಕೋಳಿ ವರ್ಗ ಆಹಾರ, ಖನಿಜ ಮಿಶ್ರಣ ಎಂಬಿವುಗಳ ರಾಜ್ಯದೊಳಗಿನ ಸಂಗ್ರಹಣೆಯನ್ನೋ, ವಿತರಣೆಯನ್ನೋ, ಮಾರಾಟವನ್ನೋ, ನಡೆಸುವ ಯಾವುದೇ ವ್ಯಕ್ತಿ, *(1)*ನೇ ಉಪ-ವಿಭಾಗ ಪ್ರಕಾರದ ಲೈಸೆನ್ಸನ್ನು ಪಡೆಯತಕ್ಕದ್ದು.

(2) ನಿಗದಿಪಡಿಸಿದ ನಮೂನೆಯಲ್ಲಿ ಲೈಸೆನ್ಸ್‌ಗಾಗಿರುವ ಒಂದು ಅರ್ಜಿಯು ಲಭಿಸುವಾಗ ಲೈಸೆನ್ಸಿಂಗ್ ಅಥಾರಿಟಿಗೆ ಲೈಸೆನ್ಸನ್ನು ಅನುಮತಿಸುವುದೋ ಅರ್ಜಿದಾರನ ಅಹವಾಲನ್ನು ಆಲಿಸುವುದಕ್ಕಿರುವ ಯುಕ್ತವಾದ ಒಂದು ಅವಕಾಶವನ್ನು ನೀಡಿದ ನಂತರ ಕಾರಣಗಳನ್ನು ಲಿಖಿತ ಮುಖೇನ ದಾಖಲಿಸುತಾ ಅರ್ಜಿಯನ್ನು ತಿರಸ್ಕರಿಸುವುದೋ ಮಾಡಬಹುದಾಗಿದೆ. ಅರ್ಜಿಯನ್ನು ತಿರಸ್ಕರಿಸುವ ವಿಷಯದಲ್ಲಿ ತಿರಸ್ಕಾರಕ್ಕೆ ಸಂಬಂಧಿಸಿದ ಸೂಚನೆಯ ಒಂದು ಪ್ರತಿಯನ್ನು ಅರ್ಜಿದಾರನಿಗೆ ಅರ್ಜಿಯನ್ನು ತಿರಸ್ಕರಿಸಿದ ದಿನಾಂಕದಿಂದ ಹದಿನೈದು ದಿವಸಗಳೊಳಗೆ ಅರ್ಜಿದಾರನಿಗೆ ಲಭ್ಯಗೊಳಿಸತಕ್ಕದ್ದು. ಲೈಸನ್ಸ್‌ಗಿರುವ ಅರ್ಜಿಯ ಮೇಲಿನ ಅರ್ಜಿ ಲಭಿಸಿದ ದಿನಾಂಕದಿಂದ ಎರಡು ತಿಂಗಳೊಳಗಾಗಿ ಲೈಸೆನ್ಸ್ ಅಥಾರಿಟಿಯು ತೀರ್ಮಾನವನ್ನು ಕೈಗೊಳ್ಳತಕ್ಕದ್ದು.

*(3) (2)*ನೇ ಉಪ-ವಿಭಾಗ ಪ್ರಕಾರ ನೀಡುವ ಲೈಸೆನ್ಸ್ ನಿಗದಿಪಡಿಸಿದ ನಮೂನೆಯಲ್ಲೂ ಅಂತಹ ಷರತ್ತುಗಳಿಗೆ ವಿಧೇಯವಾಗಿಯೂ ಆಗಿರತಕ್ಕದ್ದು.

(4) ಲೈಸನ್ಸ್‌ಗಾಗಿರುವ ಅರ್ಜಿಯನ್ನು ತಿರಸ್ಕರಿಸಿದುದಕ್ಕೆ ಸಂಬಂಧಿಸಿದ ಸೂಚನೆ ಲಭಿಸಿದ್ದಲ್ಲಿ ಹದಿನೈದು ದಿವಸಗಳೊಳಗೆ ಅರ್ಜಿದಾರನಿಗೆ ಸ್ಟೇಟ್ ಫೀಡ್ ಕ್ವಾಲಿಟಿ ಕನ್ಸಲ್ಟೇಟಿವ್ ಕಮಿಟಿಯ ಸಮಕ್ಷ ಅಪೀಲು ಸಲ್ಲಿಸಬಹುದಾಗಿದೆ ಮತ್ತು ಅದನ್ನು ಮೂವತ್ತು ದಿವಸಗಳೊಳಗೆ ಇತ್ಯರ್ಥಗೊಳಿಸತಕ್ಕದ್ದು.

(5) ನಿರ್ಮಾಪಕ ಅಥವಾ ಅಂಗೀಕೃತ ಏಜೆಂಟ್ ಅಥವಾ ಡೀಲರ್ ಇತ್ಯಾದಿಯವರು ಮೇವು ಸುರಕ್ಷೆಗೆ ಸಂಬಂಧಿಸಿದ ನಿಗದಿಪಡಿಸಿದ ಪ್ರಕಾರದ ಸಮಾನ್ಯ ತತ್ವಗಳನ್ನು ಪಾಲಿಸತಕ್ಕದ್ದು.

(6) ಮೇವಿನ ಜಾಹೀರಾತಿನ ಮೇಲಿನ ನಿಯಂತ್ರಣಗಳು ಮತ್ತು ಅನ್ಯಾಯದ ವ್ಯಾಪಾರ ಸಂಪ್ರದಾಯಗಳ ಮೇಲಿನ ನಿಷೇಧವು ನಿಗದಿಪಡಿಸಿದ ಪ್ರಕಾರ ಆಗಿರುವುದಾಗಿದೆ.

This is a digitally signed Gazette.
Authenticity may be verified through https://compose.kerala.gov.in/

(7) ನಿರ್ಮಾಪಕರು, ಅಂಗೀಕೃತ ಏಜೆಂಟರುಗಳು, ಡೀಲರ್‌ಗಳು ಎಂಬವರುಗಳ ಹೊಣೆಗಾರಿಕೆಗಳು, ಕರ್ತವ್ಯಗಳು ಮತ್ತು ಜವಾಬ್ದಾರಿಗಳು ಮತ್ತು ಮಾರುಕಟ್ಟೆಯಿಂದ ಮೇವನ್ನು ವಾಪಾಸು ಕರೆಸುವ ಪ್ರಕ್ರಿಯೆಗಳು ನಿಗದಿಪಡಿಸಿದ ಪ್ರಕಾರ ಆಗಿರತಕ್ಕದ್ದು.

6. ಲೈಸೆನ್ಸ್‌ನ ನವೀಕರಣ.—ಈ ಅಧಿನಿಯಮದ 5ನೇ ವಿಭಾಗ ಪ್ರಕಾರ ನೀಡಿರುವ ಲೈಸೆನ್ಸ್‌ಗೆ ಐದು ವರ್ಷದ ಕಾಲಾವಧಿಯವರೆಗೆ ಸಿಂಧುತ್ವವಿರುವುದಾಗಿದೆ ಮತ್ತು ನಿಗದಿಪಡಿಸಿದ ಶುಲ್ಕವನ್ನು ಪಾವತಿಸಿ ಅರ್ಜಿಸಲ್ಲಿಸುವ ಮೇರೆಗೆ ನವೀಕರಿಸಬಹುದಾಗಿದೆ. ಲೈಸೆನ್ಸಿಂಗ್ ಅಥಾರಿಟಿಯು ಲೈಸೆನ್ಸನ್ನು ಅಮಾನತ್ತುಗೊಳಿಸುವುದೋ ರದ್ದುಗೊಳಿಸುವುದೋ ಮಾಡದಿದ್ದಲ್ಲಿ ಲೈಸೆನ್ಸ್‌ನ ಕಾಲಾವಧಿಯು ಮುಕ್ತಾಯವಾಗುವುದಕ್ಕಿಂತ ಅರವತ್ತು ದಿವಸಗಳ ಮೊದಲು, ನಿಗದಿಪಡಿಸಿದ ರೀತಿಯಲ್ಲಿ ನವೀಕರಣಕ್ಕಾಗಿ ಅರ್ಜಿಯನ್ನು ನೀಡತಕ್ಕದ್ದು ಹಾಗೂ ಲೈಸೆನ್ಸನ್ನು ಅನುಮತಿಸುತಾ ಅಥವಾ ತಿರಸ್ಕರಿಸುತಾ ತೀರ್ಮಾನವನ್ನು ಕೈಗೊಳ್ಳತಕ್ಕದ್ದು.

7. ಪ್ಯಾಕಿಂಗ್ ಮತ್ತು ಲೇಬಲಿಂಗ್.—ಹಸಿ ಹುಲ್ಲು ಮತ್ತು ಒಣ ಹುಲ್ಲು ಅಲ್ಲದ ಯಾವುದೇ ಮೇವು ಪದಾರ್ಥ, ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣವನ್ನು ರೆಗ್ಯುಲೇಶನ್ ಪ್ರಕಾರ ನಿರ್ಧರಿಸಿದ ರೀತಿಯಲ್ಲಿ ಪ್ಯಾಕ್ ಮಾಡದ, ಬ್ರ್ಯಾಂಡ್ ಮಾಡದ ಮತ್ತು ಲೇಬಲ್ ಮಾಡದ ಹೊರತು ಮಾರಾಟ ಮಾಡುವುದೋ ವಿತರಣೆ ಮಾಡುವುದೋ ಮಾಡತಕ್ಕದ್ದಲ್ಲ.

8. ಗುಣಮಟ್ಟ ನಿಯಂತ್ರಣ.—(1) ಎಲ್ಲಾ ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣವು ರೆಗ್ಯುಲೇಶನ್ ಪ್ರಕಾರ ನಿರ್ಧರಿಸಿದ ಗುಣಮಟ್ಟಗಳಿಗೆ ಮತ್ತು ವಿಶೇಷತೆಗಳಿಗೆ ಅನುಗುಣವಾಗಿರತಕ್ಕದ್ದು.

(2) ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣ ಎಂಬವುಗಳ ನಿರ್ಮಾಪಕನು ಅಂತಹ ಮೇವಿನ ಅಥವಾ ಖನಿಜ ಮಿಶ್ರಣದ ಬ್ಯಾಗ್ ಅಥವಾ ಪ್ಯಾಕಿಂಗ್‌ನ ಲೇಬಲ್‌ನಲ್ಲಿ ರೆಗ್ಯುಲೇಶನ್ ಪ್ರಕಾರ ನಿರ್ಧರಿಸಿದ ವಿಶದಾಂಶಗಳನ್ನು ಸ್ಪಷ್ಟವಾಗಿ ಓದಬಲ್ಲ ರೀತಿಯಲ್ಲಿ ಒಳಗೊಳ್ಳಿಸಲಾಗಿದೆಯೆಂದು ಖಾತ್ರಿಪಡಿಸತಕ್ಕದ್ದು.

9. ಗುಣಮಟ್ಟವಿಲ್ಲದ, ಕಲಬೆರಕೆಯಾದ ಅಥವಾ ಮಿಸ್‌ಬ್ರ್ಯಾಂಡೆಡ್ ಆದ ಮೇವು ಮತ್ತು ಖನಿಜ ಮಿಶ್ರಣವನ್ನು ನಿರ್ಮಿಸುವುದಕ್ಕೆ, ಸಂಗ್ರಹಿಸುವುದಕ್ಕೆ ಮತ್ತು ಮಾರಾಟ ಮಾಡುವುದಕ್ಕೆ ಇರುವ ನಿಷೇಧ.—ಯಾವುದೇ ವ್ಯಕ್ತಿಯು ಈ ಅಧಿನಿಯಮದ ಯಾವುದೇ ಉಪಬಂಧಗಳಿಗೆ ಅಥವಾ ಅದರ ಕೆಳಗೆ ರಚಿಸಿದ ನಿಯಮಗಳಿಗೆ, ರೆಗ್ಯುಲೇಶನ್‌ಗಳಿಗೆ ವಿರುದ್ಧವಾಗಿ, ಗುಮಮಟ್ಟವಿಲ್ಲದ, ಕಲಬೆರೆಕೆಯಾದ ಮತ್ತು ಮಿಸ್‌ಬ್ರ್ಯಾಂಡೆಡ್ ಆದ ಯಾವುದೇ ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣ ಎಂಬವುಗಳನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸಿದ್ಧಪಡಿಸುವುದೋ, ನಿರ್ಮಿಸುವುದೋ, ಬಳಕೆಗೋ ಅಥವಾ ಮಾರಾಟಕ್ಕಾಗಿಯೋ ಜೋಪಾನವಾಗಿಡುವುದೋ ಸಂಗ್ರಹಿಸುವುದೋ ಮಾರುವುದೋ ಮಾರಾಟಕ್ಕಾಗಿ ಭರವಸೆ ನೀಡುವುದೋ ಮಾಡತಕ್ಕದ್ದಲ್ಲ.

10. ಉಪಬಂಧಗಳ ಜಾರಿಗೊಳಿಸುವಿಕೆಗಿರುವ ಅಧಿಕಾರಿಗಳು.—ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವುದಕ್ಕಾಗಿ ಸರಕಾರವು ಈ ಕೆಳಗಿನ ಅಧಿಕಾರಿಗಳನ್ನು ನೇಮಿಸತಕ್ಕದ್ದು, ಅದೇನೆಂದರೆ:—

(i) *ಲೈಸೆನ್ಸಿಂಗ್ ಅಥಾರಿಟಿ.—(ಎ) ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣ ಎಂಬವುಗಳ ನಿರ್ಮಾಣ ಮತ್ತು ಮಾರಾಟಕ್ಕಾಗಿ ಲೈಸೆನ್ಸಿಂಗ್ ಅಥಾರಿಟಿಯಾಗಿ ಮೃಗಸಂರಕ್ಷಣೆ ಇಲಾಖೆಯ ಅಡೀಷನಲ್ ಡೈರೆಕ್ಟರ್‌ರವರ ದರ್ಜೆಗಿಂತ ಕಡಿಮೆಯಲ್ಲದ ಒಬ್ಬ ಅಧಿಕಾರಿಯನ್ನು ಅಥವಾ ಕ್ಷೀರಾಭಿವೃದ್ಧಿ ಇಲಾಖೆಯ ಜಾಯಿಂಟ್ ಡೈರೆಕ್ಟರ್‌ರವರ ದರ್ಜೆಗಿಂತ ಕಡಿಮೆಯಲ್ಲದ ಒಬ್ಬ ಅಧಿಕಾರಿಯನ್ನು, ಸರಕಾರವು, ಅಧಿಕೃತ ಗಜೆಟ್‌ನಲ್ಲಿ ಅಧಿಸೂಚನೆಯ ಮೂಲಕ ನೇಮಿಸತಕ್ಕದ್ದು.*

(ಬಿ) ಲೈಸೆನ್ಸಿಂಗ್ ಅಥಾರಿಟಿಯು, ಗಜೆಟ್‌ನಲ್ಲಿ ಅಧಿಸೂಚನೆಯ ಪ್ರಕಾರ ನಿರ್ದಿಷ್ಟಪಡಿಸಿದ ಸ್ಥಳದಲ್ಲಿ, ಅಧಿಕಾರಗಳನ್ನು ವಿನಿಯೋಗಿಸುವುದನ್ನು ಮತ್ತು ನಿಗದಿಪಡಿಸಿದ ಕರ್ತವ್ಯಗಳನ್ನು ನಿರ್ವಹಿಸುವುದನ್ನು ಮಾಡತಕ್ಕದ್ದು.

(ii) *ಫೀಡ್ ಸೇಫ್ಟಿ ಎನ್‌ಫೋರ್ಸ್‌ಮೆಂಟ್ ಅಧಿಕಾರಿ.—(ಎ) ಈ ಅಧಿನಿಯಮದ ಮತ್ತು ಅದರ ಕೆಳಗೆ ರಚಿಸಿದ ನಿಯಮಗಳಲ್ಲಿ ಉಪಬಂಧಿಸಿರುವ ಅಧಿಕಾರಗಳನ್ನು ವಿನಿಯೋಗಿಸುವ ಮತ್ತು ಕರ್ತವ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ, ಮೃಗಸಂರಕ್ಷಣೆ ಇಲಾಖೆಯ ಅಥವಾ ಕ್ಷೀರಾಭಿವೃದ್ಧಿ ಇಲಾಖೆಯ ಡೆಪ್ಯೂಟಿ ಡೈರೆಕ್ಟರ್‌ರವರ ದರ್ಜೆಗಿಂತ ಕಡಿಮೆಯಲ್ಲದ ಒಬ್ಬ ಜಿಲ್ಲಾ ಮಟ್ಟದ ಅಧಿಕಾರಿಯನ್ನು ಪ್ರತಿಯೊಂದು ಜಿಲ್ಲೆಯಲ್ಲೂ ಫೀಡ್ ಸೇಫ್ಟಿ ಎನ್‌ಫೋರ್ಸ್‌ಮೆಂಟ್ ಅಧಿಕಾರಿಯಾಗಿ ಸರಕಾರವು, ಅಧಿಕೃತ ಗಜೆಟಿನಲ್ಲಿ ಅಧಿಸೂಚನೆ ಮುಖೇನ, ನಿಯೋಜಿಸತಕ್ಕದ್ದು.*

(ಬಿ) ಫೀಡ್ ಸೇಫ್ಟಿ ಎನ್‌ಫೋರ್ಸ್‌ಮೆಂಟ್ ಅಧಿಕಾರಿಯವರಿಗೆ ಅಥವಾ ಆತನ ಅಧಿಕೃತ ಪ್ರತಿನಿಧಿಗೆ, ಆತನ ಅಧಿಕಾರ ವ್ಯಾಪ್ತಿಯೊಳಗೆ ಈ ಅಧಿನಿಯಮದ ಕೆಳಗೆ, ಫೀಡ್ ಸೇಫ್ಟಿ ಎನ್‌ಫೋರ್ಸ್‌ಮೆಂಟ್ ಅಧಿಕಾರಿಯವರಿಗಿರುವ ನಿಗದಿಪಡಿಸಿದ ಪ್ರಕಾರದ ಅಧಿಕಾರಗಳನ್ನು ವಿನಿಯೋಗಿಸುವುದು ಮತ್ತು ಕರ್ತವ್ಯಗಳನ್ನು ನಿರ್ವಹಿಸುವುದು ಮಾಡಬಹುದಾಗಿದೆ.

This is a digitally signed Gazette.
Authenticity may be verified through https://compose.kerala.gov.in/

7

(iii) ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿ.—(ಎ) ಈ ಅಧಿನಿಯಮದಲ್ಲಿ ಮತ್ತು ಅದರ ಕೆಳಗೆ ರಚಿಸಿದ ನಿಯಮಗಳಲ್ಲಿ ಉಪಬಂಧಿಸಿರುವ ಅಧಿಕಾರಗಳನ್ನು ವಿನಿಯೋಗಿಸುವ ಮತ್ತು ಕರ್ತವ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ, ಮೃಗಸಂರಕ್ಷಣೆ ಇಲಾಖೆಯ ವೆಟರ್ನರಿ ಸರ್ಜನ್‌ನ ದರ್ಜೆಗಿಂತ ಕಡಿಮೆಯಿಲ್ಲದ ಒಬ್ಬ ಅಧಿಕಾರಿಯನ್ನು ಅಥವಾ ಕ್ಷೀರಾಭಿವೃದ್ಧಿ ಇಲಾಖೆಯ ಡೈರಿ ಎಕ್ಸ್‌ಟೆನ್‌ಶನ್ ಅಧಿಕಾರಿಯ ದರ್ಜೆಗಿಂತ ಕಡಿಮೆಯಿಲ್ಲದ ಒಬ್ಬ ಅಧಿಕಾರಿಯನ್ನು ಆತನಿಗೆ ವಹಿಸಿಕೊಡುವ ಸ್ಥಳೀಯ ಪ್ರದೇಶಗಳಲ್ಲಿ, ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಯಾಗಿ ಸರಕಾರವು ಅಧಿಕೃತ ಗಜೆಟಿನಲ್ಲಿ ಅಧಿಸೂಚನೆ ಮುಖೇನ, ನಿಯೋಜಿಸತಕ್ಕದ್ದು;

(ಬಿ) ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಯವರಿಗೆ ಅಥವಾ ಆತನ ಅಧಿಕೃತ ಪ್ರತಿನಿಧಿಗೆ, ಆತನ ಅಧಿಕಾರ ವ್ಯಾಪ್ತಿಯೊಳಗೆ ಈ ಅಧಿನಿಯಮದ ಕೆಳಗೆ, ಫೀಡ್‌ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಯವರಿಗಿರುವ ಅಧಿಕಾರಗಳನ್ನು ನಿಗದಿಪಡಿಸಿದ ಪ್ರಕಾರ ವಿನಿಯೋಗಿಸುವುದು ಮತ್ತು ಕರ್ತವ್ಯಗಳನ್ನು ನಿರ್ವಹಿಸುವುದು ಮಾಡಬಹುದಾಗಿದೆ;

(ಸಿ) ಫೀಡ್ ಸೇಫ್ಟಿ ಎನ್‌ಫೋರ್ಸ್‌ಮೆಂಟ್ ಅಧಿಕಾರಿಯವರು, ಲೈಸನ್ಸಿಂಗ್ ಅಥಾರಿಟಿಯ ಮತ್ತು ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಯವರು, ಫೀಡ್ ಸೇಫ್ಟಿ ಎನ್‌ಫೋರ್ಸ್‌ಮೆಂಟ್ ಅಧಿಕಾರಿಯವರ ಆಡಳಿತಾತ್ಮಕ ನಿಯಂತ್ರಣೆಯಲ್ಲಿರುವರು;

(ಡಿ) ಯಾವುದೇ ಯುಕ್ತ ಕಾರಣಗಳಿಂದ ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಯವರಿಗೆ ಆತನ ಅಧಿಕಾರಗಳನ್ನು ವಿನಿಯೋಗಿಸಲು ಅಥವಾ ಕರ್ತವ್ಯಗಳನ್ನು ನಿರ್ವಹಿಸಲು ಸಾಧ್ಯವಾಗದಿದ್ದಲ್ಲಿ, ಫೀಡ್ ಸೇಫ್ಟೀ ಎನ್‌ಫೋರ್ಸ್‌ಮೆಂಟ್ ಅಧಿಕಾರಿಯವರು, ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಯವರಿಗೆ ನೀಡಲಾದ ಅದೇ ಅಧಿಕಾರಗಳನ್ನು ವಿನಿಯೋಗಿಸತಕ್ಕದ್ದು ಮತ್ತು ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿದ ಅದೇ ಪ್ರಕ್ರಿಯೆಗಳನ್ನು ಪಾಲಿಸತಕ್ಕದ್ದಾಗಿದೆ.

11. ಲೈಸೆನ್ಸಿಂಗ್ ಅಥಾರಿಟಿಯ ಅಧಿಕಾರಗಳು.—(1) ನಿಗದಿಪಡಿಸಿದಂತಹ ಅವಶ್ಯಕವಾದ ದಾಖಲೆಗಳೊಂದಿಗೆ, ಶುಲ್ಕದೊಂದಿಗೆ ಮತ್ತು ನಮೂನೆಯಲ್ಲಿ ಒಂದು ಅರ್ಜಿಯು ಲಭಿಸುವ ಮೇರೆಗೆ, ಲೈಸೆನ್ಸಿಂಗ್ ಅಥಾರಿಟಿಯು ನಿಗದಿಪಡಿಸಿದ ರೀತಿಯಲ್ಲಿ ಐದು ವರ್ಷಗಳ ಕಾಲಾವಧಿಗೆ ಲೈಸೆನ್ಸನ್ನು ನೀಡುವುದೋ, ನವೀಕರಿಸುವುದೋ ಮಾಡಬಹುದಾಗಿದೆ.

(2) ಲೈಸೆನ್ಸ್ ಲಭಿಸುವುದಕ್ಕೆ ಅಥವಾ ನವೀಕರಿಸುವುದಕ್ಕೆ ಲಭಿಸಿದ ಅರ್ಜಿಗೆ ಸಂಬಂಧಿಸಿ, ಅರ್ಜಿದಾರನೋ ಲೈಸೆನ್ಸುದಾರನೋ ತಪ್ಪಾದ ಅಥವಾ ವಿಷಯ ವಿವರಗಳಿಗೆ ಸಂಬಂಧಿಸಿದಂತೆ ತಪ್ಪಾದ ಹೇಳಿಕೆಯನ್ನು ನೀಡಿರುವರೆಂದೋ ಯಾವ ನಿಯಮಗಳಿಗೆ ಅಥವಾ ಉಪಬಂಧಗಳಿಗೆ ವಿಧೇಯವಾಗಿ ಆಗಿದೆಯೊ ಲೈಸೆನ್ಸನ್ನು ನೀಡಿರುವುದು, ಅದರ ಉಲ್ಲಂಘನೆಯನ್ನು ಮಾಡಿರುವರೆಂದೋ ಲೈಸೆನ್ಸಿಂಗ್ ಅಥಾರಿಟಿಗೆ ನಂಬಲು ಕಾರಣವಿದ್ದಲ್ಲಿ, ಆತನಿಗೆ ಯುಕ್ತವೆಂದು ತೋರುವ ಅಂತಹ ತನಿಖೆಯನ್ನು ನಡೆಸಿದ ನಂತರ, ಆದೇಶ ಮುಖೇನ, ಆಯಾಯ ವಿಷಯದಂತೆ, ಅರ್ಜಿಯನ್ನು ತಿರಸ್ಕರಿಸಬಹುದಾಗಿದೆ.

(3) ಈ ಅಧಿನಿಯಮದ ಅಥವಾ ಅದರ ಕೆಳಗೆ ರಚಿಸಿದ ಯಾವುದೇ ನಿಯಮಗಳ ಯಾವುದೇ ಉಪಬಂಧಗಳನ್ನು ಲೈಸೆನ್ಸ್‌ದಾರನು ಉಲ್ಲಂಘಿಸುವುದಾದಲ್ಲಿ, ಈ ಅಧಿನಿಯಮದ ಪ್ರಕಾರ ನೀಡಲಾದ ಲೈಸೆನ್ಸನ್ನು ಅಮಾನತ್ತುಗೊಳಿಸುವ ಅಥವಾ ರದ್ದುಗೊಳಿಸುವ ಅಧಿಕಾರಗಳು ಲೈಸೆನ್ಸಿಂಗ್ ಅಥಾರಿಟಿಗೆ ಇರುವುದಾಗಿದೆ. ಅಮಾನತ್ತನ್ನು ವಿಸ್ತರಿಸಬೇಕಾದ ಸನ್ನಿವೇಶದಲ್ಲಿ ಲೈಸೆನ್ಸ್‌ದಾರನನ್ನು ಆಲಿಸುವುದಕ್ಕಿರುವ ಯುಕ್ತವಾದ ಒಂದು ಅವಕಾಶವನ್ನು ನೀಡತಕ್ಕದ್ದು.

(4) ಈ ಅಧಿನಿಯಮದ ಅಥವಾ ಅದರ ಕೆಳಗೆ ರಚಿಸಿದ ಯಾವುದೇ ನಿಯಮಗಳ ಯಾವುದೇ ಉಪಬಂಧಗಳನ್ನು ಲೈಸೆನ್ಸ್‌ದಾರನು ಉಲ್ಲಂಘಿಸುವುದಾದಲ್ಲಿ, 19ನೇ ವಿಭಾಗ ಪ್ರಕಾರದ ತನಿಖೆಯನ್ನು ನಡೆಸಲು ಮತ್ತು 20ನೇ ವಿಭಾಗದ (1)ನೇ ಉಪ-ವಿಭಾಗದಲ್ಲಿನ (ಎ) ಖಂಡ ಪ್ರಕಾರ ಅಥವಾ (ಬಿ) ಖಂಡ ಪ್ರಕಾರ ಆಯಾಯ ವಿಷಯದಂತೆ ದಂಡವನ್ನು ವಿಧಿಸಲು ಮತ್ತು (ಸಿ) ಖಂಡ ಪ್ರಕಾರ ಲೈಸೆನ್ಸ್ ಅನ್ನು ರದ್ದುಗೊಳಿಸುವುದಕ್ಕಿರುವ ಅಧಿಕಾರಗಳು ಲೈಸೆನ್ಸಿಂಗ್ ಅಥಾರಿಟಿಗೆ ಇರುವುದಾಗಿದೆ.

(5) ಲೈಸೆನ್ಸ್‌ದಾರ ಅಥವಾ ಆತನು ಅಧಿಕೃತಗೊಳಿಸಿದ ವ್ಯಕ್ತಿಗೆ ಅಹವಾಲನ್ನು ಆಲಿಸಲು ಯುಕ್ತವಾದ ಒಂದು ಅವಕಾಶವನ್ನು ನೀಡದೆ ಲೈಸೆನ್ಸನ್ನು ರದ್ದುಗೊಳಿಸುವಂತಹ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

12. ಫೀಡ್ ಸೇಫ್ಟಿ ಎನ್‌ಫೋರ್ಸ್‌ಮೆಂಟ್ ಅಧಿಕಾರಿಯವರ ಅಧಿಕಾರಗಳು.—(1) ಈ ಅಧಿನಿಯಮದ ಅಥವಾ ಅದರ ಕೆಳಗೆ ರಚಿಸಿದ ನಿಯಮಗಳ ಅಥವಾ ರೆಗ್ಯುಲೇಷನ್‌ಗಳ ಉಪಬಂಧಗಳ ಗಂಭೀರವಾದ ಉಲ್ಲಂಘನೆಗೆ ಸಂಬಂಧಿಸಿದಂತೆ, ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಯವರಿಂದ ಮಾಹಿತಿ ಲಭಿಸುವಾಗ, ವಿಷಯ ವಿವರಗಳಿಗೆ ಸಂಬಂಧಿಸಿದ ರುಜುವಾತನ್ನು ಸಂರಕ್ಷಿಸಲು ಅಥವಾ ಸಂಗ್ರಹಿಸಲು ಅಥವಾ

This is a digitally signed Gazette.
Authenticity may be verified through https://compose.kerala.gov.in/

ಪ್ರಕರಣವನ್ನು ಸರಿಯಾದ ರೀತಿಯಲ್ಲಿ ಸಂರಕ್ಷಿಸುವುದಕ್ಕಿರುವ ಉದ್ದೇಶಕ್ಕಾಗಿ, ಎಪ್ಪತ್ತೆರಡು ಗಂಟೆಗಳಿಗಿಂತ ಮೀರದ ಸಮಯದವರೆಗೆ, ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣ ಎಂಬಿವುಗಳ ಸಿದ್ಧಪಡಿಸುವಿಕೆ, ನಿರ್ಮಾಣ ಅಥವಾ ಉತ್ಪಾದನೆ, ಪ್ಯಾಕಿಂಗ್, ಸಂಗ್ರಹಣೆ, ಮಾರಾಟ ಎಂಬಿವುಗಳಿಗಾಗಿ ಲೈಸೆನ್ಸ್‌ದಾರ ಬಳಸುವ ಸ್ಥಳಗಳನ್ನು ಅಥವಾ ಅದರ ಭಾಗವನ್ನು ಸೀಲ್ ಮಾಡಲು ಅಥವಾ ವಶಪಡಿಸಿಕೊಳ್ಳಲು, ಫೀಡ್ ಸೇಫ್ಟಿ ಎನ್‌ಫೋರ್ಸ್‌ಮೆಂಟ್ ಅಧಿಕಾರಿಯವರು, ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಯವರಿಗೆ ನಿರ್ದೇಶವನ್ನು ನೀಡತಕ್ಕದ್ದು.

(2) ಈ ಅಧಿನಿಯಮದ 16ನೇ ವಿಭಾಗದ (ಬ) ಖಂಡದ ಅಡಿಯಲ್ಲಿ, ಪರಿಶೀಲನೆಗಾಗಿ ಸಂಗ್ರಹಿಸಿದ ಜಾನುವಾರು ಮೇವು, ಕೋಳಿ ವರ್ಗ ಆಹಾರ ಅಥವಾ ಖನಿಜ ಮಿಶ್ರಣ ಎಂಬಿವುಗಳ ಸ್ಯಾಂಪಲ್‌ಗಳ ಪಾಲಕರು ಫೀಡ್ ಸೇಫ್ಟಿ ಎನ್‌ಫೋರ್ಸ್‌ಮೆಂಟ್ ಅಧಿಕಾರಿಯವರು ಆಗಿರುವರು.

(3) ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸುವ ಅಪರಾಧಗಳ ವಿರುದ್ಧ, ಆಯಾಯ ವಿಷಯದಂತೆ, ಗಂಭೀರವಾದ ಉಲ್ಲಂಘನೆ, ಪುನರಾವರ್ತಿತ ಉಲ್ಲಂಘನೆ ಎಂಬುದಾಗಿ ಕೈಗೊಳ್ಳಬೇಕಾದ ಕ್ರಮಗಳನ್ನು ಪ್ರಾರಂಭಿಸುವುದಕ್ಕಿರುವ ಶಿಫಾರಸನ್ನು ನೀಡಬೇಕಾದ ಹೊಣೆಗಾರಿಕೆಯು ಫೀಡ್ ಸೇಫ್ಟಿ ಎನ್‌ಫೋರ್ಸ್‌ಮೆಂಟ್ ಅಧಿಕಾರಿಯವರದ್ದು ಆಗಿರುವುದಾಗಿದೆ.

13. ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಯವರ ಅಧಿಕಾರಗಳು.—(1) ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಯವರಿಗೆ ಜಾನುವಾರು ಮೇವು, ಕೋಳಿ ವರ್ಗ ಆಹಾರ ಅಥವಾ ಖನಿಜ ಮಿಶ್ರಣ ಎಂಬಿವುಗಳ ಸಿದ್ಧಪಡಿಸುವಿಕೆ, ನಿರ್ಮಾಣ, ಪ್ಯಾಕಿಂಗ್, ಸಂಗ್ರಹಣೆ, ಮಾರಾಟ ಎಂಬಿವುಗಳಿಗಾಗಿ ಬಳಸುವ ಯಾವುದೇ ಸ್ಥಳಗಳಲ್ಲಿ ಅಥವಾ ಮೇವು ಸಾಗಾಟ ಮಾಡುವ ವಾಹನಗಳಲ್ಲಿ ಪೂರ್ವಭಾವಿಯಾಗಿ ಸೂಚನೆ ನೀಡದೆ,—

(i) ಸ್ಯಾಂಪಲ್ ಸಂಗ್ರಹಣೆ; ಅಥವಾ

(ii) ಈ ಅಧಿನಿಯಮದ ಅಥವಾ ಅದರ ಕೆಳಗೆ ರಚಿಸಿದ ನಿಯಮಗಳ ಅಥವಾ ರೆಗ್ಯುಲೇಷನುಗಳ ಯಾವುದೇ ಉಪಬಂಧಗಳು ಉಲ್ಲಂಘಿಸಲ್ಪಟ್ಟಿದೆಯೇ ಎಂಬ ಸಾಮಾನ್ಯ ಪರಿಶೀಲನೆ, ಜಾನುವಾರು ಮೇವು, ಕೋಳಿ ವರ್ಗ ಆಹಾರ ಅಥವಾ ಖನಿಜ ಮಿಶ್ರಣ ಎಂಬಿವುಗಳ ಪರಿಶೀಲನೆ,

ಎಂಬೀ ಉದ್ದೇಶಗಳಿಗಾಗಿ ಪ್ರವೇಶಿಸಬಹುದಾಗಿದೆ.

(2) ಈ ಅಧಿನಿಯಮದ ಅಥವಾ ಅದರ ಕೆಳಗೆ ರಚಿಸಿದ ನಿಯಮಗಳ ಅಥವಾ ರೆಗ್ಯುಲೇಷನುಗಳ ಯಾವುದೇ ಉಪಬಂಧಗಳು ಗಂಭೀರವಾಗಿ ಉಲ್ಲಂಘಿಸಲ್ಪಟ್ಟಿದೆಯೆಂದು ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಯವರಿಗೆ ಮನವರಿಕೆಯಾದ್ದಲ್ಲಿ, ಅದನ್ನು ಫೀಡ್ ಸೇಫ್ಟಿ ಎನ್‌ಫೋರ್ಸ್‌ಮೆಂಟ್ ಅಧಿಕಾರಿಯವರಿಗೆ ಲಿಖಿತ ಮುಖೇನ ತಿಳಿಸತಕ್ಕದ್ದು ಮತ್ತು ಫೀಡ್ ಸೇಫ್ಟಿ ಎನ್‌ಫೋರ್ಸ್‌ಮೆಂಟ್ ಅಧಿಕಾರಿಯವರಿಂದ ನಿರ್ದೇಶವನ್ನು ಸ್ವೀಕರಿಸಿದ ನಂತರ, ವಿಷಯ ವಿವರಗಳಿಗೆ ಸಂಬಂಧಿಸಿದ ರುಜುವಾತುಗಳನ್ನು ಸಂರಕ್ಷಿಸಲು ಅಥವಾ ಪ್ರಕರಣವನ್ನು ಸರಿಯಾದ ರೀತಿಯಲ್ಲಿ ಸಂರಕ್ಷಿಸುವುದಕ್ಕಿರುವ ಉದ್ದೇಶಕ್ಕಾಗಿ ಎಪ್ಪತ್ತೆರಡು ಗಂಟೆಗಳಿಗಿಂತ ಮೀರದ ಸಮಯದವರೆಗೆ, ಸ್ಥಳಗಳನ್ನು ಅಥವಾ ಅದರ ಭಾಗವನ್ನು ಸೀಲ್ ಮಾಡುವುದೋ ಅಥವಾ ಹಿಂತೆಗೆಯುವುದೋ ಮಾಡಬಹುದಾಗಿದೆ.

(3) ಗುಣಮಟ್ಟದ ಕುರಿತು ಒಂದು ದೂರು ಲಭಿಸಿದ್ದಲ್ಲಿ, ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಯವರು, ಇಪ್ಪತ್ತ ನಾಲ್ಕು ಗಂಟೆಯೊಳಗೆ ನಿಗದಿಪಡಿಸಿದ ಪ್ರಕ್ರಿಯೆಯನ್ನು ಪಾಲಿಸುತಾ, ಜಾನುವಾರು ಮೇವು, ಕೋಳಿ ವರ್ಗ ಆಹಾರ ಅಥವಾ ಖನಿಜ ಮಿಶ್ರಣ ಎಂಬಿವುಗಳ ಅದೇ ವರ್ಗದ ಸ್ಯಾಂಪಲ್‌ಗಳನ್ನು ಪಿರ್ಯಾದುದಾರನಿಂದ ಅಥವಾ ಕೃಷಿಕರಿಂದ ಮತ್ತು ಅಂಗೀಕೃತ ಏಜೆಂಟ್/ಡೀಲರ್/ನಿರ್ಮಾಪಕನಿಂದ ಪಡೆಯತಕ್ಕದ್ದು.

(4) ಅಂತಹ ಯಾವುದೇ ಜಾನುವಾರು ಮೇವು, ಕೋಳಿ ವರ್ಗ ಆಹಾರ ಅಥವಾ ಖನಿಜ ಮಿಶ್ರಣ ಎಂಬಿವುಗಳ ಪರಿಶೋಧನೆಯಲ್ಲಿ, ಉದ್ದೇಶಿಸಿರುವ ಗುಣಮಟ್ಟವಿಲ್ಲವೆಂದೋ ಕಲಬೆರೆಕೆಯಾದುದೆಂದೋ ಗುಣಮಟ್ಟ ಕಡಿಮೆಯಾಗಿರುವುದೆಂದೋ ಈ ಅಧಿನಿಯಮದ ಅಥವಾ ಅದರ ಕೆಳಗೆ ರಚಿಸಿದ ನಿಯಮಗಳ ಅಥವಾ ರೆಗ್ಯುಲೇಷನುಗಳ ಯಾವುದೇ ಉಪಬಂಧಗಳ ಉಲ್ಲಂಘನೆಯುಂಟಾಗಿದೆಯೆಂದೋ ಪತ್ತೆಹಚ್ಚಿದಲ್ಲಿ, ನಿರ್ಮಾಪಕನ ಅಥವಾ ಮಾರಾಟಗಾರನ ವಿರುದ್ಧ ಈ ಅಧಿನಿಯಮದ 18ನೇ ವಿಭಾಗ ಪ್ರಕಾರ ಮುಟ್ಟುಗೋಲು ಹಾಕುವುದಕ್ಕೆ ಅಥವಾ ವಿಲೇವಾರಿ ಮಾಡುವುದಕ್ಕಿರುವ ಕ್ರಮಗಳನ್ನು ಸ್ವೀಕರಿಸತಕ್ಕದ್ದು ಮತ್ತು ಅಂತಹ ಉಪಬಂಧಗಳ ಉಲ್ಲಂಘನೆಗೆ ಸಂಬಂಧಿಸಿದ ಒಂದು ಅಂತಿಮ ವರದಿಯನ್ನು ಮುಂದಿನ ಕ್ರಮಗಳಿಗಾಗಿ ಫೀಡ್ ಸೇಫ್ಟಿ ಎನ್‌ಫೋರ್ಸ್‌ಮೆಂಟ್ ಅಧಿಕಾರಿಯವರಿಗೆ ಸಲ್ಲಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

9

(5) ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಯವರು ಕನಿಷ್ಠ ಆರು ತಿಂಗಳಿಗೊಮ್ಮೆ ಅಥವಾ ಅಗತ್ಯವಿದ್ದಾಗ ತನ್ನ ಅಧಿಕಾರ ವ್ಯಾಪ್ತಿಯಲ್ಲಿರುವ ನಿರ್ಮಾಣ, ಸಂಗ್ರಹಣೆ, ಸಾಗಾಟ ಅಥವಾ ಮಾರಾಟ ಸೌಲಭ್ಯಗಳ ಸಾಮಾನ್ಯ ತಪಾಸಣೆಯನ್ನು ನಡೆಸತಕ್ಕದ್ದು. ಮೇವು ಅಥವಾ ಖನಿಜ ಮಿಶ್ರಣದ ನಿರ್ಮಾಪಕ ಅಥವಾ ವಿತರಣೆಗಾರ ಅಥವಾ ದಾಸ್ತಾನುದಾರ ಅಥವಾ ಡೀಲರ್ ಎಂಬವರುಗಳಿಂದ ಇದಕ್ಕಾಗಿ ತಪಾಸಣಾ ದರಗಳನ್ನು ವಸೂಲಿ ಮಾಡತಕ್ಕದ್ದಲ್ಲ.

(6) ಆ ರೀತಿಯಲ್ಲಿ ಪರಿಶೋಧಿಸಲ್ಪಟ್ಟ ಜಾನುವಾರು ಮೇವು, ಕೋಳಿ ವರ್ಗ ಆಹಾರ, ಖನಿಜ ಮಿಶ್ರಣ ಎಂಬವುಗಳು ಜಾನುವಾರುಗಳಿಗೆ ಮತ್ತು ಕೋಳಿ ವರ್ಗಗಳಿಗೆ ತಕ್ಷಣದ ಆರೋಗ್ಯ ಸಮಸ್ಯೆಗಳನ್ನು ಉಂಟುಮಾಡಬಹುದೆಂದೂ ವಶಪಡಿಸಿಕೊಳ್ಳುವಿಕೆಯು ಅಗತ್ಯವೆಂದೂ ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಯವರಿಗೆ ಪರಿಶೋಧನೆಯಲ್ಲಿ ಮನವರಿಕೆಯಾಗುವುದಾದಲ್ಲಿ, ಅಂತಹ ಜಾನುವಾರು ಮೇವು, ಕೋಳಿ ವರ್ಗ ಆಹಾರ ಅಥವಾ ಖನಿಜ ಮಿಶ್ರಣವನ್ನು ಸರಕಾರಿ ಅಂಗೀಕೃತ ಪ್ರಾಥಮಿಕ ಪರಿಶೋಧನಾ ಲ್ಯಾಬೋರೇಟರಿಯಲ್ಲಿ ಕ್ಷಿಪ್ರ ಪರಿಶೋಧನೆಗೆ ಒಳಪಡಿಸತಕ್ಕದ್ದು. ಅಂತಹ ಸ್ಯಾಂಪಲ್ ತಕ್ಷಣದ ಆರೋಗ್ಯ ಸಮಸ್ಯೆಗಳನ್ನು ಉಂಟುಮಾಡುತ್ತಿರುವುದೆಂದು ಸಾಬೀತಾದಲ್ಲಿ ಪರಿಶೋಧನೆಗಳ ವೆಚ್ಚವನ್ನು ಲೈಸೆನ್ಸುದಾರನು ವಹಿಸತಕ್ಕದ್ದು.

(7) ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಯವರ ಅಥವಾ ಅಧಿಕೃತ ಅಧಿಕಾರಿಯ ಅಭಿಪ್ರಾಯದಲ್ಲಿ, ವಶಪಡಿಸಿಕೊಂಡ ಉತ್ಪನ್ನವು ತ್ವರಿತವಾಗಿ ಮತ್ತು ನೈಸರ್ಗಿಕವಾಗಿ ಕೊಳೆಯುವಿಕೆಗೆ ವಿಧೇಯವಾಗುವುದರಿಂದಾಗಿ ನಾಶಗೊಳಿಸುವುದು ಅಗತ್ಯವಾಗಿದ್ದಲ್ಲಿ, ಅಂತಹ ಅಧಿಕಾರಿಯು ಅದರ ನಂತರ ತಕ್ಷಣ ಅಥವಾ ಯಾವುದೇ ಸನ್ನಿವೇಶದಲ್ಲೂ 17ನೇ ವಿಭಾಗ ಪ್ರಕಾರದ ವರದಿಯು ಲಭಿಸಿದ ಒಂದು ತಿಂಗಳೊಳಗೆ, ಲೈಸನ್ಸಿಂಗ್ ಅಥಾರಿಟಿಯ ಸಮಕ್ಷ ಅಂತಹ ಅಧಿಕಾರಿಯಿಂದಲೇ ಉತ್ಪನ್ನವನ್ನು ವಿಲೇವಾರಿ ಮಾಡಲು ಅನುಮತಿಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು ಮತ್ತು ಅಂತಹ ಅನುಮತಿಯು ಲಭಿಸಿದ್ದಲ್ಲಿ, ಅಂತಹ ಅಧಿಕಾರಿಯವರಿಗೆ ಸ್ವತಃ ಉತ್ಪನ್ನವನ್ನು ವಿಲೇವಾರಿ ಮಾಡಬಹುದಾಗಿದೆ ಮತ್ತು ಆ ರೀತಿಯಲ್ಲಿ ಲಭಿಸುವ ಮೊತ್ತವನ್ನು ಟ್ರಷರಿಯಲ್ಲಿ ನಿಗದಿಪಡಿಸಿದಂತಹ ಹೆಡ್ ಆಫ್ ಅಕೌಂಟಿಗೆ ಜಮೆ ಮಾಡತಕ್ಕದ್ದು ಮತ್ತು ಫೀಡ್ ಸೇಫ್ಟಿ ಎನ್‌ಫೋರ್ಸ್‌ಮೆಂಟ್ ಅಧಿಕಾರಿಯವರ ಸೂಚನೆಯ ಪ್ರಕಾರ ಅಂತಹ ವಿಲೇವಾರಿ, ಜಮೆಮಾಡುವಿಕೆ ಎಂಬವುಗಳಿಗೆ ಸಂಬಂಧಿಸಿದಂತೆ, ಆಯಾಯ ವಿಷಯದಂತೆ, ಲೈಸೆನ್ಸಿಂಗ್ ಅಥಾರಿಟಿಗೆ ವರದಿಯನ್ನು ಸಲ್ಲಿಸತಕ್ಕದ್ದು ಮತ್ತು ಲೈಸೆನ್ಸಿಂಗ್ ಅಥಾರಿಟಿಯು ಪ್ರಕರಣವನ್ನು ಇತ್ಯರ್ಥಗೊಳಿಸುವುದಕ್ಕಿರುವ ಕ್ರಮವನ್ನು ಕೈಗೊಳ್ಳತಕ್ಕದ್ದು.

(8) ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣ ಎಂಬವುಗಳ ತ್ವರಿತ ವಿಲೇವಾರಿಗಾಗಿ, ಯುಕ್ತವಾದ ಆದೇಶಗಳು ಲಭಿಸುವುದಕ್ಕಾಗಿ ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿ ಅಥವಾ ಅಧಿಕೃತ ಅಧಿಕಾರಿಯವರು ಫೀಡ್ ಸೇಫ್ಟಿ ಎನ್‌ಫೋರ್ಸ್‌ಮೆಂಟ್ ಅಧಿಕಾರಿಯವರ ಮುಖೇನ ಲೈಸೆನ್ಸಿಂಗ್ ಅಥಾರಿಟಿಗೆ ತಕ್ಷಣ ಒಂದು ವರದಿಯನ್ನು ಸಲ್ಲಿಸತಕ್ಕದ್ದು.

(9) ಪ್ರಾಥಮಿಕ ಪರಿಶೋಧನಾ ಲ್ಯಾಬೋರೇಟರಿಯಿಂದಿರುವ ಮೇವಿನ ಪರಿಶೋಧನಾ ವರದಿಯ ಸೂಕ್ಷ್ಮಪರಿತೀಲನೆಯನ್ನು ನಡೆಸಿದ ನಂತರ, 19ನೇ ವಿಭಾಗದ ಅಥವಾ 22ನೇ ವಿಭಾಗದ ಅಡಿಯಲ್ಲಿ ನಿರ್ವಹಿಸಬೇಕಾದಂತಹ ಯಾವುದೇ ಅಪರಾಧವನ್ನು ಮಾಡಿದ್ದಲ್ಲಿ, ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಯವರು, ಲೈಸೆನ್ಸಿಂಗ್ ಅಥಾರಿಟಿಗೆ ಮತ್ತು ಫೀಡ್ ಸೇಫ್ಟಿ ಎನ್‌ಫೋರ್ಸ್‌ಮೆಂಟ್ ಅಧಿಕಾರಿಯವರಿಗೆ ಸೂಚನೆಯನ್ನು ನೀಡುತಾ ಮುಂದಿನ ಕ್ರಮಗಳನ್ನು ಸ್ವೀಕರಿಸತಕ್ಕದ್ದು.

(10) ಶೋಧನೆ, ವಶಪಡಿಸಿಕೊಳ್ಳುವಿಕೆ, ತನಿಖೆ ಮತ್ತು ಕಾನೂನು ಕ್ರಮಗಳನ್ನು ಪ್ರಾರಂಭಿಸುವುದಕ್ಕಿರುವ ಪ್ರಕ್ರಿಯೆ ಎಂಬವುಗಳು ನಿಗದಿಪಡಿಸಿದ ರೀತಿಯಲ್ಲಿ ಆಗಿರತಕ್ಕದ್ದು.

14. ಪರಿಶೋಧನಾ ಲ್ಯಾಬೋರೇಟರಿಗಳು.—ಈ ಅಧಿನಿಯಮದ ಪ್ರಕಾರ ಸಂಗ್ರಹಿಸಿದ ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣ ಎಂಬವುಗಳ ಸ್ಯಾಂಪಲ್‌ಗಳನ್ನು ಪರಿಶೋಧಿಸುವ ಉದ್ದೇಶಕ್ಕಾಗಿ, ಕೇಂದ್ರ ಅಥವಾ ರಾಜ್ಯ ಸರಕಾರ ಅಥವಾ ಇತರ ಯಾವುದೇ ಏಜೆನ್ಸಿಗಳಿಂದ ಸ್ಥಾಪಿಸಲ್ಪಟ್ಟ ಮತ್ತು ನ್ಯಾಶನಲ್ ಅಕ್ರೆಡಿಟೇಶನ್ ಬೋರ್ಡ್ ಫಾರ್ ಟೆಸ್ಟಿಂಗ್ ಆಂಡ್ ಕ್ಯಾಲಿಬ್ರೇಶನ್ ಲ್ಯಾಬೋರೇಟರಿಗಳು ಅಂಗೀಕರಿಸಿದ ಮತ್ತು ಸರಕಾರ ಅಂಗೀಕರಿಸಿದ ಯಾವುದೇ ಲ್ಯಾಬೋರೇಟರಿಯನ್ನು ಸರಕಾರಕ್ಕೆ, ಅಧಿಕೃತ ಗಜೆಟ್‌ನಲ್ಲಿ ಅಧಿಸೂಚನೆ ಮುಖೇನ, ಪ್ರಾಥಮಿಕ ಪರಿಶೋಧನಾ ಲ್ಯಾಬೋರೇಟರಿಯಾಗಿ ಮತ್ತು ರೆಫರಲ್ ಲ್ಯಾಬೋರೇಟರಿಯಾಗಿ ಅಂಗೀಕರಿಸಬಹುದಾಗಿದೆ.

15. ಸ್ಯಾಂಪ್‌ಲಿಂಗ್‌ನ ಪ್ರಕ್ರಿಯೆಗಳು.—*(1)* ಪರಿಶೋಧನೆಯನ್ನು ನಡೆಸುವುದಕ್ಕಿರುವ ಉದ್ದೇಶದ ಕುರಿತು ಸಂಬಂಧಪಟ್ಟ ವ್ಯಕ್ತಿಗೆ ಲಿಖಿತ ಮುಖೇನ ಸೂಚನೆಯನ್ನು ನೀಡಿದ ನಂತರ, ಒಬ್ಬ ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಯವರಿಗೆ ನಿರ್ಮಿಸಲ್ಪಟ್ಟ, ಸಂಗ್ರಹಿಸಲ್ಪಟ್ಟ, ಸಾಗಣೆ ಮಾಡಿದ ಅಥವಾ ಮಾರಾಟ ಮಾಡಲು ಭರವಸೆ ನೀಡಿದ ಅಥವಾ ಫೀಡ್ ಮಿಲ್‌ನಲ್ಲಿ ಜೋಪಾನವಾಗಿರಿಸಿದ ಅಥವಾ ತೆಗೆದುಕೊಂಡು ಹೋಗುವ ಅಥವಾ ಅಂಗೀಕೃತ ಏಜೆಂಟ್ ಅಥವಾ ಡೀಲರ್ ಸ್ವಾಧೀನದಲ್ಲಿರಿಸಿರುವ ಯಾವುದೇ ಜಾನುವಾರು ಮೇವು, ಕೋಳಿ ವರ್ಗ ಆಹಾರ ಅಥವಾ ಖನಿಜ ಮಿಶ್ರಣ ಎಂಬವುಗಳ ಸ್ಯಾಂಪಲನ್ನು ಪರಿಶೋಧನೆಯ ಅಗತ್ಯಕ್ಕಾಗಿ ಯಾವುದೇ ಸಮಯದಲ್ಲೂ ನಿಗದಿಪಡಿಸಿದ ರೀತಿಯಲ್ಲಿ ಸಂಗ್ರಹಿಸಬಹುದಾಗಿದೆ.

This is a digitally signed Gazette.
Authenticity may be verified through https://compose.kerala.gov.in/

10

(2) ಪರಿಶೋಧನೆಗಾಗಿ ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣ ಎಂಬಿವುಗಳ ಸ್ಯಾಂಪಲ್‌ಗಳನ್ನು ಸಂಗ್ರಹಿಸುವಾಗ, ಇಬ್ಬರು ಸಾಕ್ಷಿಗಳ ಸಮಕ್ಷದಲ್ಲಿ ಸ್ಯಾಂಪಲನ್ನು ಐದು ಭಾಗಗಳಾಗಿ ವಿಂಗಡಿಸಿ ಗುರುತು ಮಾಡತಕ್ಕದ್ದು ಮತ್ತು ತುಂಬಿಟ್ಟಿರುವ ಪದಾರ್ಥಗಳ ನೈಸರ್ಗಿಕ ಗುಣ ಮತ್ತು ಸ್ವರೂಪದಲ್ಲಿ ಬದಲಾವಣೆಯುಂಟಾಗುತ್ತಿಲ್ಲವೆಂಬುವುದನ್ನು ಖಾತ್ರಿಪಡಿಸುವುದಕ್ಕಾಗಿ, ಗಾಳಿ ಹೋಗದ ಕಂಟೇನರ್‌ನಲ್ಲಿ ಬಿಗಿಯಾಗಿ ಮುಚ್ಚಿ ಮೊಹರು ಹಾಕತಕ್ಕದ್ದು ಮತ್ತು ಅದರ ಮೇಲೆ ಸ್ಯಾಂಪಲನ್ನು ಸ್ವೀಕರಿಸಿದ ದಿನಾಂಕ ಮತ್ತು ಸಮಯವನ್ನು ನಮೂದಿಸುತಾ, ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಯವರ ಮತ್ತು ಯಾರಿಂದ ಸ್ಯಾಂಪಲನ್ನು ತೆಗೆದುಕೊಂಡಿರುವುದೋ ಆತನ ಮತ್ತು ಸಾಕ್ಷಿಗಳ ಸಹಿ ಅಥವಾ ಹೆಬ್ಬೆಟ್ಟಿನ ಗುರುತು ಅಥವಾ ಎರಡನ್ನೂ ಸೇರಿ ಮುದ್ರಿಸತಕ್ಕದ್ದು.

(3) (1)ನೇ ಉಪ-ವಿಭಾಗದ ಉದ್ದೇಶಕ್ಕಾಗಿ ಮತ್ತು ಜಾನುವಾರು ಮೇವು, ಕೋಳಿ ವರ್ಗ ಆಹಾರ ಅಥವಾ ಖನಿಜ ಮಿಶ್ರಣ ಎಂಬಿವುಗಳ ಸ್ಯಾಂಪಲನ್ನು ಅಗತ್ಯವಿರುವಷ್ಟು ಪ್ರಮಾಣದಲ್ಲಿ ಮತ್ತು ಪ್ಯಾಕಿಂಗ್‌ನಲ್ಲಿ ಸಂಗ್ರಹಿಸುವುದರಿಂದ ಯಾವುದೇ ವ್ಯಕ್ತಿಯು, ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಯವರಿಗೆ ಅಡ್ಡಿಮಾಡತಕ್ಕದ್ದಲ್ಲ. ಆದರೆ ಯಾರಿಂದ ಆಗಿದೆಯೋ ಸ್ಯಾಂಪಲನ್ನು ತೆಗೆದಿರುವುದು ಆತನು ಸಹಿ ಅಥವಾ ಹೆಬ್ಬೆಟ್ಟಿನ ಗುರುತನ್ನು ಮುದ್ರಿಸಲು ನಿರಾಕರಿಸುವುದಾದಲ್ಲಿ, ಆತನ ಸಹಿಗೆ ಅಥವಾ ಹೆಬ್ಬೆಟ್ಟಿನ ಗುರುತಿಗೆ ಬದಲಾಗಿ ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಯವರು ಇಬ್ಬರು ಸಾಕ್ಷಿಗಳನ್ನು ಕರೆಸತಕ್ಕದ್ದು ಮತ್ತು ಅವರ ಸಹಿ ಅಥವಾ ಹೆಬ್ಬೆಟ್ಟಿನ ಗುರುತನ್ನು ತೆಗೆಯತಕ್ಕದ್ದು.

(4) ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಯವರಿಗೆ ಅಥವಾ ಸರಕಾರ ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅಧಿಕೃತಗೊಳಿಸಲ್ಪಟ್ಟ ಇತರ ಯಾವುದೇ ಅಧಿಕಾರಿಗೆ ಆತನಿಗೆ ಯುಕ್ತವೆಂದು ತೋರುವುದಾದಲ್ಲಿ ಸಮಂಜಸವಾದ ಯಾವುದೇ ಸಮಯದಲ್ಲಿ ಈ ಅಧಿನಿಯಮದ ಅಥವಾ ಅದರ ಕೆಳಗೆ ರಚಿಸಿದ ನಿಯಮಗಳ ಅಥವಾ ರೆಗ್ಯುಲೇಶನುಗಳ ಉಪಬಂಧಗಳ ಉಲ್ಲಂಘನೆ ಆಗಿದೆಯೇ ಎಂದು ಪರಿಶೀಲಿಸಲು ಅಥವಾ ಈ ಅಧಿನಿಯಮದ ಕೆಳಗೆ ನೀಡಲಾಗಿರುವ ಲೈಸೆನ್ಸ್‌ನ ನಿಬಂಧನೆಗಳ ಉಲ್ಲಂಘನೆ ಆಗಿದೆಯೇ ಎಂದು ಪರಿಶೋಧಿಸುವುದಕ್ಕಾಗಿ, ಜಾನುವಾರು ಮೇವು, ಕೋಳಿ ವರ್ಗ ಆಹಾರ ಅಥವಾ ಖನಿಜ ಮಿಶ್ರಣವನ್ನು ನಿರ್ಮಿಸಿದ, ಸಂಗ್ರಹಿಸಿದ ಅಥವಾ ಮಾರಾಟ ಮಾಡಿದ ಯಾವುದೇ ಸಂಸ್ಥೆ ಮತ್ತು ಸಾಗಾಟ ಮಾಡಿದ ವಾಹನದಲ್ಲಿ ಪ್ರವೇಶಿಸಬಹುದಾಗಿದೆ. ಯಾವುದೇ ವ್ಯಕ್ತಿ (3)ನೇ ಉಪ-ವಿಭಾಗದ ಉಪಬಂಧಗಳನ್ನು ಉಲ್ಲಂಘಿಸಿದ್ದಲ್ಲಿ ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಯವರಿಗೆ ಅಂತಹ ವ್ಯಕ್ತಿಗೆ ಲಿಖಿತ ಮುಖೇನ ಸೂಚನೆಯನ್ನು ನೀಡಿದ ನಂತರ ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣ ಎಂಬಿವುಗಳನ್ನು ವಶಪಡಿಸಿಕೊಳ್ಳಬಹುದಾಗಿದೆ. ವಶಪಡಿಸಿಕೊಳ್ಳುವಿಕೆ ಮಹಸರ್‌ನಲ್ಲಿ ಮುಟ್ಟುಗೋಲು ಹಾಕುವುದಕ್ಕಿರುವ ಕಾರಣಗಳನ್ನು ಮತ್ತು ಮುಟ್ಟುಗೋಲು ಹಾಕಿದ ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣ ಎಂಬಿವುಗಳ ಸ್ವರೂಪ ಅಳತೆ ಮತ್ತು ವಶಪಡಿಸಿಕೊಂಡ ದಿನಾಂಕ, ಸಮಯ ಮತ್ತು ಸ್ಥಳ ಎಂಬಿವುಗಳನ್ನು ತೋರಿಸತಕ್ಕದ್ದು. ಮಹಸರ್‌ನಲ್ಲಿ ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣ ಎಂಬಿವುಗಳ ಎಲ್ಲಾ ಮಾಹಿತಿಗಳನ್ನು ಒಳಗೊಳ್ಳಿಸತಕ್ಕದ್ದು ಮತ್ತು ಮಹಸರ್‌ನ ಮೂರು ಪ್ರತಿಗಳನ್ನು ಸಿದ್ಧಪಡಿಸತಕ್ಕದ್ದು. ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಯವರು ಮತ್ತು ಯಾರ ಸ್ವಾಧೀನದಿಂದ ಅಥವಾ ನಿಯಂತ್ರಣದಿಂದ ಆಗಿದೆ ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣ ಎಂಬಿವುಗಳನ್ನು ಮುಟ್ಟುಗೋಲು ಹಾಕಿರುವುದು ಆತನು ಮಹಸರ್‌ನಲ್ಲಿ ಸಹಿ ಹಾಕತಕ್ಕದ್ದು ಅಥವಾ ಹೆಬ್ಬೆಟ್ಟಿನ ಗುರುತನ್ನು ಮುದ್ರಿಸತಕ್ಕದ್ದು ಮತ್ತು ಮಹಸರ್‌ನ ಒಂದು ಪ್ರತಿಯನ್ನು ಅಂತಹ ವ್ಯಕ್ತಿಗೆ ನೀಡಿರತಕ್ಕದ್ದು. ಅಂತಹ ವ್ಯಕ್ತಿ ಆತನ ಸಹಿಹಾಕಲು ಅಥವಾ ಹೆಬ್ಬೆಟ್ಟಿನ ಗುರುತನ್ನು ಮುದ್ರಿಸಲು ನಿರಾಕರಿಸುವುದಾದಲ್ಲಿ ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಯವರು ಅದರ ಬದಲು ಇಬ್ಬರು ಸಾಕ್ಷಿಗಳನ್ನು ಕರೆಸಿ ಅವರ ಸಹಿ ಅಥವಾ ಹೆಬ್ಬೆಟ್ಟಿನ ಗುರುತನ್ನು ಮುದ್ರಿಸತಕ್ಕದ್ದು.

(5) ಒಬ್ಬ ಅಂಗೀಕೃತ ಏಜೆಂಟ್ ಅಥವಾ ಡೀಲರ್ ಅಥವಾ ಸಾಗಾಟ ಮಾಡುವ ವ್ಯಕ್ತಿ ಎಂಬಿವರುಗಳ ಸ್ವಾಧೀನದಲ್ಲಿರುವ ದಾಸ್ತಾನಿನಿಂದ, (1)ನೇ ಉಪ-ವಿಭಾಗದ ಅಡಿಯಲ್ಲಿ ಅಗತ್ಯವಿರುವ ಸ್ಯಾಂಪಲನ್ನು ತೆಗೆಯುವಾಗ, ಅಂಗೀಕೃತ ಏಜೆಂಟ್ ಅಥವಾ ಡಿಲರ್ ಅಥವಾ ಸಾಗಾಟ ಮಾಡುವ ವ್ಯಕ್ತಿ ಎಂಬಿವರು ಯಾರಿಗೆ ಬೇಕಾಗಿ ಆಗಿದೆಯೋ ಅಂತಹ ದಾಸ್ತಾನನ್ನು ಸ್ವಾಧೀನದಲ್ಲಿರಿಸುವುದು ಆತನ ಹೆಸರು ಮತ್ತು ಇತರ ವಿವರಗಳನ್ನು ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಯವರು ಕೋರುವ ಮೇರೆಗೆ ನೀಡಲು ಹೊಣೆಗಾರರಾಗಿರುವರು.

(6) ಸ್ವಂತ ಜಾನುವಾರುಗಳಿಗಾಗಿ ಅಥವಾ ಕೋಳಿ ವರ್ಗಗಳಿಗೆ ಬೇಕಾಗಿ ಫೀಡ್ ಮಿಲ್‌ನಿಂದ ಅಥವಾ ಅಂಗೀಕೃತ ಏಜೆಂಟ್‌ನಿಂದ ಅಥವಾ ಡೀಲರ್‌ನಿಂದ ಜಾನುವಾರು ಮೇವು, ಕೋಳಿ ವರ್ಗ ಆಹಾರ ಅಥವಾ ಖನಿಜ ಮಿಶ್ರಣ ಎಂಬಿವುಗಳನ್ನು ಖರೀದಿಸಿದ ಯಾವುದೇ ವ್ಯಕ್ತಿಗೆ, ಉತ್ಪನ್ನವನ್ನು ಖರೀದಿಸಿದುದರ ವೌಚರ್ ಅಥವಾ ಕ್ಯಾಷ್ ಮೆಮೋ ಸ್ವಾಧೀನದಲ್ಲಿದ್ದಲ್ಲಿ, ಆತನ ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣ ಎಂಬಿವುಗಳ ಸ್ಯಾಂಪಲ್‌ಗಳನ್ನು ಅಂಗೀಕೃತ ಲ್ಯಾಬೋರೇಟರಿಯಿಂದ ಪರಿಶೋಧಿಸಿ ಲಭಿಸುವುದಕ್ಕಾಗಿ ನಿಗದಿಪಡಿಸಿದ ನಮೂನೆಯಲ್ಲಿ, ಸಂಬಂಧಪಟ್ಟ ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಯವರಿಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಸ್ಯಾಂಪಲ್‌ಗಳನ್ನು ಪರಿಶೋಧಿಸುವುದಕ್ಕಿರುವ ವೆಚ್ಚವನ್ನು, ಸರಕಾರ ಅಂಗೀಕರಿಸಿದ ದರಕ್ಕೆ ಅನುಗುಣವಾಗಿ, ಅರ್ಜಿಯನ್ನು ಸಲ್ಲಿಸುವ ವ್ಯಕ್ತಿಯು ಪಾವತಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

11

16. ಸ್ಯಾಂಪಲ್‌ನ ಪರಿಶೋಧನೆ.—ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಯವರು:—

(ಎ) ಯಾರಿಂದ ಆಗಿದೆಯೋ ಸ್ಯಾಂಪಲನ್ನು ತೆಗೆದಿರುವುದು, ಆ ವ್ಯಕ್ತಿಗೆ ಮೇವಿನ ಮೊಹರು ಹಾಕಿದ ಒಂದು ಸ್ಯಾಂಪಲನ್ನು ಹಸ್ತಾಂತರಿಸತಕ್ಕದ್ದು;

(ಬಿ) ಸುರಕ್ಷಿತವಾಗಿ ಜೋಪಾನವಾಗಿರಿಸುವುದಕ್ಕಾಗಿ ಮೊಹರು ಹಾಕಿದ ಎರಡು ಮೇವಿನ ಮೇವಿನ ಸ್ಯಾಂಪಲ್‌ಗಳನ್ನು ಫೀಡ್ ಸೇಫ್ಟಿ ಎನ್‌ಫೋರ್ಸ್‌ಮೆಂಟ್ ಅಧಿಕಾರಿಯವರಿಗೆ ಹಸ್ತಾಂತರಿಸತಕ್ಕದ್ದು;

(ಸಿ) ಮೇವಿನ ಮೊಹರು ಹಾಕಿದ ಎರಡು ಸ್ಯಾಂಪಲ್‌ಗಳನ್ನು ಸ್ಯಾಂಪಲನ್ನು ಸಂಗ್ರಹಿಸಿದ ದಿನಾಂಕದಿಂದ ಮೂರು ದಿವಸಗಳೊಳಗೆ, ಫೀಡ್ ಸೇಫ್ಟಿ ಎನ್‌ಫೋರ್ಸ್‌ಮೆಂಟ್ ಅಧಿಕಾರಿಯವರಿಗೆ ಸೂಚನೆಯನ್ನು ನೀಡುತಾ, ಅಂಗೀಕೃತ ಪ್ರಾಥಮಿಕ ಪರಿಶೋಧನಾ ಲ್ಯಾಬೋರೇಟರಿಯಲ್ಲಿ ಪರಿಶೋಧನೆಗಾಗಿ ಸಲ್ಲಿಸತಕ್ಕದ್ದು.

(ಡಿ) ಸ್ಯಾಂಪಲನ್ನು ಪರಿಶೋಧಿಸುವುದಕ್ಕಿರುವ ವೆಚ್ಚವನ್ನು ಸರಕಾರ ಅಂಗೀಕರಿಸಿದ ದರಕ್ಕೆ ಅನುಗುಣವಾಗಿ ಪರಿಶೋಧನಾ ಲ್ಯಾಬೋರೇಟರಿಗಳಿಗೆ ನಿಗದಿಪಡಿಸಿದ ಪ್ರಕಾರ ನೀಡತಕ್ಕದ್ದು ಮತ್ತು ಪರಿಶೋಧನೆಯ ಫಲಿತಾಂಶವಾಗಿ ಅಂತಹ ಸ್ಯಾಂಪಲ್ ಗುಣಮಟ್ಟ ಇಲ್ಲದವೆಂದು ಪತ್ತೆಹಚ್ಚುವುದಾದಲ್ಲಿ ಪರಿಶೋಧನೆಗೆ ಸಂಬಂಧಿಸಿದಂತೆ ಉಂಟಾಗುವ ವೆಚ್ಚಗಳನ್ನು ಹೊಣೆಗಾರರಾದ ವ್ಯಕ್ತಿ ಅಥವಾ ವ್ಯಕ್ತಿಗಳಿಂದ ವಸೂಲಿಮಾಡತಕ್ಕದ್ದು.

17. ಪರಿಶೋಧನೆಯ ವರದಿ.—*(1)* ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಯವರಿಂದ ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣ ಎಂಬಿವುಗಳ ಯಾವುದೇ ಸ್ಯಾಂಪಲ್ ಲಭಿಸುವಾಗ, ಅಂಗೀಕೃತ ಪ್ರಾಥಮಿಕ ಪರಿಶೋಧನಾ ಲ್ಯಾಬೋರೇಟರಿಯಲ್ಲಿ ಪರಿಶೋಧಿಸತಕ್ಕದ್ದು ಮತ್ತು ನಿಗದಿಪಡಿಸಿದ ನಮೂನೆಯಲ್ಲಿ ಅಂತಹ ಪರಿಶೋಧನೆಯ ಫಲಿತಾಂಶವನ್ನು ತೋರಿಸುವ ಒಂದು ವರದಿಯನ್ನು ಆದಷ್ಟು ಬೇಗನೆ, ಗರಿಷ್ಟ ಇಪ್ಪತ್ತೊಂದು ದಿವಸವನ್ನು ಮೀರದ ಸಮಯದೊಳಗೆ, ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಯವರಿಗೆ ಹಸ್ತಾಂತರಿಸುವುದೋ ಕಳುಹಿಸುವುದೋ ಮಾಡತಕ್ಕದ್ದು.

(2) ಯಾವುದೇ ವ್ಯಕ್ತಿಯು ಪರಿಶೋಧನಾ ವರದಿಯ ಪ್ರತಿಗಳನ್ನು ಯಾವುದೇ ಸ್ಥಳದಲ್ಲಿ ಪ್ರದರ್ಶಿಸುವುದೋ ಜಾಹೀರಾತಿನ ಅಗತ್ಯಗಳಿಗಾಗಿ ಬಳಸುವುದೋ ಮಾಡತಕ್ಕದ್ದಲ್ಲ.

18. ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಯವರ ಮುಖೇನ ಮುಟ್ಟುಗೋಲು ಹಾಕುವಿಕೆ ಮತ್ತು ವಿಲೇವಾರಿ.—ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣ ಎಂಬಿವುಗಳ ಲೈಸೆನ್ಸ್ ಇಲ್ಲದ ಅಥವಾ ಕಲಬೆರಕೆಯಾದ ಅಥವಾ ಗುಣಮಟ್ಟವಿಲ್ಲದ ಅಥವಾ ಮಿಸ್ ಬ್ರ್ಯಾಂಡೆಡ್ ಆದ ನಿರ್ಮಾಣ, ಸಂಗ್ರಹಣೆ, ವಿತರಣೆ ಮಾರಾಟವನ್ನು ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಯವರು ಅಥವಾ ಅಧಿಕೃತ ಅಧಿಕಾರಿಯವರು ಪತ್ತೆಹಚ್ಚುವುದಾದಲ್ಲಿ ಆದಷ್ಟು ಬೇಗನೆ ಅಂತಹ ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣ ಎಂಬಿವುಗಳನ್ನು ಮುಟ್ಟುಗೋಲು ಹಾಕತಕ್ಕದ್ದು ಮತ್ತು ಫೀಡ್ ಸೇಫ್ಟಿ ಎನ್‌ಫೋರ್ಸ್‌ಮೆಂಟ್ ಅಧಿಕಾರಿಯವರಿಗೆ ತಿಳಿಸಿದ ನಂತರ ನಿಗದಿಪಡಿಸಿದ ವಿಧಾನದಲ್ಲಿ ವಿಲೇವಾರಿ ಮಾಡತಕ್ಕದ್ದು ಮತ್ತು ಅದಕ್ಕೆ ತಗಲುವ ವೆಚ್ಚವನ್ನು, ಆಯಾಯ ವಿಷಯದಂತೆ, ಯಾರಿಂದ ಆಗಿದೆಯೋ ಆ ರೀತಿಯಲ್ಲಿ ಮುಟ್ಟುಗೋಲು ಹಾಕಿರುವುದು, ಆತನಿಂದ ಅಥವಾ ಲೈಸೆನ್ಸುದಾರನಿಂದ ವಸೂಲಿ ಮಾಡತಕ್ಕದ್ದು.

19. ಲೈಸೆನ್ಸಿಂಗ್ ಅಥಾರಿಟಿಯ ತನಿಖಾ ಪ್ರಕ್ರಿಯೆ.—*(1)* ಯಾವುದೇ ವ್ಯಕ್ತಿಯು ಈ ಅಧಿನಿಯಮದ ಅಥವಾ ಅದರ ಕೆಳಗೆ ರಚಿಸಿದ ನಿಯಮಗಳ ಅಥವಾ ರೇಗ್ಯುಲೇಶನುಗಳ ಯಾವುದೇ ಉಪಬಂಧಗಳನ್ನು ಉಲ್ಲಂಘಿಸುವುದಾದಲ್ಲಿ, ಆ ವಿಷಯದಲ್ಲಿ ಆತನಿಗೆ ಹೇಳುವುದನ್ನು ಹೇಳಲು ಯುಕ್ತವಾದ ಒಂದು ಅವಕಾಶವನ್ನು ನೀಡುತಾ ಲೈಸೆನ್ಸಿಂಗ್ ಅಥಾರಿಟಿ ತನಿಖೆ ನಡೆಸತಕ್ಕದ್ದು ಮತ್ತು ಅಂತಹ ತನಿಖೆಯಲ್ಲಿ, ಆತನು ಈ ಅಧಿನಿಯಮದ ಅಥವಾ ಅದರ ಕೆಳಗೆ ರಚಿಸಿದ ನಿಯಮಗಳ ಅಥವಾ ರೆಗ್ಯುಲೇಶನುಗಳ ಉಪಬಂಧಗಳನ್ನು ಉಲ್ಲಂಘಿಸಿರುವುದಾಗಿ ಮನವರಿಕೆಯಾಗುವುದಾದಲ್ಲಿ, ಲೈಸೆನ್ಸಿಂಗ್ ಅಥಾರಿಟಿ ಆತನಿಗೆ ಯುಕ್ತವೆಂದು ತೋರುವ ಮತ್ತು 20ನೇ ವಿಭಾಗದಲ್ಲಿ ಉಪಬಂಧಿಸಿದಂತಹ ಅಂತಹ ದಂಡವನ್ನು ಆದೇಶದ ಮೂಲಕ ವಿಧಿಸತಕ್ಕದ್ದಾಗಿದೆ.

This is a digitally signed Gazette.
Authenticity may be verified through https://compose.kerala.gov.in/

12

(2) ಒಂದು ಉಲ್ಲಂಘನೆಗೆ ಸಂಬಂಧಿಸಿದಂತೆ (1)ನೇ ಉಪ-ವಿಭಾಗ ಪ್ರಕಾರ ಲೈಸೆನ್ಸಿಂಗ್ ಅಥಾರಿಟಿಯು ತನಿಖೆಯನ್ನು ನಡೆಸುವಾಗ ಆತನಿಗೆ 1908ರ ದಿವಾಣಿ ಪ್ರಕ್ರಿಯಾ ಸಂಹಿತೆ (1908ರ 5ನೇ ಕೇಂದ್ರ ಅಧಿನಿಯಮ)ಯ ಪ್ರಕಾರ ಒಂದು ಸಿವಿಲ್ ಪ್ರಕರಣದ ವಿಚಾರಣೆಯನ್ನು ಮಾಡುವಾಗ ಒಂದು ಸಿವಿಲ್ ನ್ಯಾಯಾಲಯದಲ್ಲಿ ನಿಹಿತಗೊಂಡಿರುವ ಅದೇ ಅಧಿಕಾರಗಳು ಈ ಕೆಳಗಿನ ವಿಷಯಗಳಿಗೆ ಸಂಬಂಧಿಸಿದಂತೆ ಇರುವುದಾಗಿದೆ, ಅದೇನೆಂದರೆ:—

(ಎ) ಯಾವುದೇ ಸಾಕ್ಷಿಯನ್ನು ಸಮನ್ ಮಾಡುವುದಕ್ಕೆ ಮತ್ತು ಪ್ರಮಾಣವಚನದ ಮೇಲೆ ಆತನನ್ನು ವಿಚಾರಣೆ ಮಾಡುವುದಕ್ಕೆ;

(ಬಿ) ಯಾವುದೇ ದಾಖಲೆಗಳನ್ನು ಕಂಡುಹಿಡಿಯುವುದಕ್ಕೆ, ಹಾಜರುಪಡಿಸಲು ಅವಶ್ಯಪಡುವುದಕ್ಕೆ; ಮತ್ತು

(ಸಿ) ಶಪಥಪತ್ರದ ಮೇಲೆ ಸಾಕ್ಷ್ಯ ಪಡೆಯುವುದಕ್ಕೆ.

20. ದಂಡ.—(1) ಈ ಅಧಿನಿಯಮದ 19ನೇ ವಿಭಾಗದ ಅಡಿಯಲ್ಲಿನ ಒಂದು ತನಿಖೆಯಲ್ಲಿ, ಒಬ್ಬ ವ್ಯಕ್ತಿಯು ಈ ಅಧಿನಿಯಮದ ಅಥವಾ ಅದರ ಕೆಳಗೆ ರಚಿಸಿದ ನಿಯಮಗಳ ಅಥವಾ ರೆಗ್ಯುಲೇಶನುಗಳ ಯಾವುದೇ ಉಪಬಂಧಗಳನ್ನು ಉಲ್ಲಂಘಿಸಿರುವುದಾಗಿ ಲೈಸೆನ್ಸಿಂಗ್ ಅಥಾರಿಟಿಯು ಪತ್ತೆಹಚ್ಚುವುದಾದಲ್ಲಿ ನಿಗದಿಪಡಿಸಿದ ಪ್ರಕಾರದ ಅಪರಾಧದ ಸ್ವರೂಪ ಅಥವಾ ವರ್ಗೀಕರಣದ ತಳಹದಿಯಲ್ಲಿ,—

(ಎ) ಪ್ರಥಮ ಬಾರಿಯ ಉಲ್ಲಂಘನೆಗೆ, ಅರವತ್ತು ದಿವಸಕ್ಕಿಂತ ಕಡಿಮೆಯಲ್ಲದ ಮತ್ತು ಆರು ತಿಂಗಳ ಕಾಲಾವಧಿಯವರೆಗೆ ಆತನ ಲೈಸೆನ್ಸನ್ನು ಅಮಾನತ್ತು ಮಾಡುವುದೋ ಅಥವಾ ಇಪ್ಪತ್ತೈದು ಸಾವಿರ ರೂಪಾಯಿಗಿಂತ ಕಡಿಮೆಯಲ್ಲದ ಆದರೆ ಐವತ್ತು ಸಾವಿರ ರೂಪಾಯಿವರೆಗಿನ ದಂಡಕ್ಕೆ ಅಥವಾ ಅವೆರಡೂ ಸೇರಿ; ಮತ್ತು

(ಬಿ) ಎರಡನೇ ಬಾರಿಯ ಉಲ್ಲಂಘನೆಗೆ, ಆರು ತಿಂಗಳಿಗಿಂತ ಕಡಿಮೆಯಲ್ಲದ ಮತ್ತು ಒಂದು ವರ್ಷದ ವರೆಗಿನ ಕಾಲಾವಧಿಯವರೆಗೆ ಆತನ ಲೈಸೆನ್ಸನ್ನು ಅಮಾನತ್ತು ಮಾಡುವುದೋ ಅಥವಾ ಐವತ್ತು ಸಾವಿರ ರೂಪಾಯಿಗಿಂತ ಕಡಿಮೆಯಲ್ಲದ ಆದರೆ ಎರಡು ಲಕ್ಷ ರೂಪಾಯಿಯವರೆಗಿನ ದಂಡಕ್ಕೆ ಅಥವಾ ಅವೆರಡೂ ಸೇರಿ ಆತನು ಶಿಕ್ಷಿಸಲ್ಪಡುವನು;

(ಸಿ) ಮೂರನೇ ಬಾರಿ ಉಲ್ಲಂಘನೆ ಉಂಟಾಗುವುದಾದಲ್ಲಿ ಅಥವಾ ಜಾನುವಾರುಗಳಿಗೆ ಅಥವಾ ಕೋಳಿ ವರ್ಗಕ್ಕೆ ತೀವ್ರಗಾಯ, ಉತ್ಪಾದಕತೆಗೆ ಧಕ್ಕೆ ಉಂಟಾಗುವುದು ಅಥವಾ ಮರಣ ಸಂಭವಿಸುವ ಸನ್ನಿವೇಶದಲ್ಲಿ ಐದು ವರ್ಷದವರೆಗೆ ಲೈಸನ್ಸನ್ನು ರದ್ದುಗೊಳಿಸುವುದಕ್ಕಿರುವ ಅಧಿಕಾರ ಲೈಸೆನ್ಸಿಂಗ್ ಅಥಾರಿಟಿಗೆ ಇರುವುದಾಗಿದೆ.

(2) ಲೈಸೆನ್ಸಿಂಗ್ ಅಥಾರಿಟಿಗೆ, ತ್ವರಿತವಾಗಿ ಮತ್ತು ನೈಸರ್ಗಿಕವಾಗಿ ಕೊಳೆಯುವಿಕೆಗೆ ವಿಧೇಯವಾಗುವ ವಶಪಡಿಸಿಕೊಂಡ ಯಾವುದೇ ಮೇವು ಪದಾರ್ಥ, ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣವನ್ನು ವಿಲೇವಾರಿ ಮಾಡಲು ನಿರ್ದೇಶವನ್ನು ನೀಡಬಹುದಾಗಿದೆ.

21. ಅಪೀಲು.—(1) 20ನೇ ವಿಭಾಗದ (1)ನೇ ಉಪ-ವಿಭಾಗದ (ಎ), (ಬಿ), (ಸಿ) ಖಂಡಗಳ ಅಡಿಯಲ್ಲಿ ದಂಡವನ್ನು ವಿಧಿಸಿದುದರಿಂದ ಸಂಕಟ ಅನುಭವಿಸುವ ಯಾವುದೇ ವ್ಯಕ್ತಿಗೆ, ಅಂತಹ ಆದೇಶವನ್ನು ಹೊರಡಿಸಿದ ಮೂವತ್ತು ದಿವಸಗಳೊಳಗೆ, ಸ್ಟೇಟ್ ಫೀಡ್ ಕ್ವಾಲಿಟಿ ಕನ್ಸಲ್ಟೇಟಿವ್ ಕಮಿಟಿಯ ಸಮಕ್ಷದಲ್ಲಿ ಅಪೀಲನ್ನು ಸಲ್ಲಿಸಬಹುದಾಗಿದೆ.

(2) (1)ನೇ ಉಪ-ವಿಭಾಗ ಪ್ರಕಾರ ಸಲ್ಲಿಸಲ್ಪಡುವ ಒಂದು ಅಪೀಲನ್ನು, ಸಂಬಂಧಪಟ್ಟ ಕಕ್ಷಿಗಳಿಗೆ ಹೇಳುವುದನ್ನು ಹೇಳಲು ಯುಕ್ತವಾದ ಒಂದು ಅವಕಾಶವನ್ನು ನೀಡಿದ ನಂತರ, ಅಪೀಲು ಲಭಿಸಿದ ದಿನಾಂಕದಿಂದ ಅರವತ್ತು ದಿವಸಗಳೊಳಗೆ ಇತ್ಯರ್ಥಗೊಳಿಸತಕ್ಕದ್ದು.

22. ನ್ಯಾಯಾಲಯದ ಮುಖೇನ ವಿಚಾರಣೆ ಮಾಡಬೇಕಾದ ಅಪರಾಧಗಳು.—(1) ಸ್ಟೇಟ್ ಫೀಡ್ ಕ್ವಾಲಿಟಿ ಕನ್ಸಲ್ಟೇಟಿವ್ ಕಮಿಟಿ ಪರಿಶೋಧಿಸಿ ಶಿಫಾರಸು ಮಾಡಿದ ಮತ್ತು ಎರಡು ಅಂಗೀಕೃತ ಪರಿಶೋಧನಾ ಲ್ಯಾಬೋರೇಟರಿಗಳಿಂದಿರುವ ಪರಿಶೋಧನಾ ವರದಿಯ ಮುಖೇನ ಸಾಬೀತಾಗಿರುವ ಮೂರನೆಯ ಅಥವಾ ಅದರ ನಂತರ ಮುಂದುವರಿಯುವ ಉಲ್ಲಂಘನೆಗಳಿಗೆ ಮತ್ತು ಗುರುತರವಾದ ಉಲ್ಲಂಘನೆಗಳಿಗೆ ಜಾನುವಾರು ವರ್ಗಗಳ ಮತ್ತು ಕೋಳಿ ವರ್ಗಕ್ಕೊಳಪಡುವವುಗಳ ಮರಣಕ್ಕೆ ಅಥವಾ ತೀವ್ರ ಗಾಯ, ಉತ್ಪಾದಕತೆಗೆ ಧಕ್ಕೆ ಉಂಟುಮಾಡುವುದು ಎಂಬಿವುಗಳಿಗೆ ಆರು ತಿಂಗಳಿಗಿಂತ ಕಡಿಮೆಯಲ್ಲದ ಮತ್ತು ಒಂದು ವರ್ಷದವರೆಗಿನ ಜೈಲು ಶಿಕ್ಷೆ ಮತ್ತು ಹತ್ತು ಲಕ್ಷ ರೂಪಾಯಿಯವರೆಗಿನ ದಂಡವನ್ನು ವಿಧಿಸಿ ನ್ಯಾಯಾಲಯದ ಮುಖೇನ ಶಿಕ್ಷಿಸಲ್ಪಡುವನು.

ಆದರೆ, ಎರಡು ಲ್ಯಾಬೋರೇಟರಿಗಳ ಪರಿಶೋಧನಾ ಫಲಿತಾಂಶಗಳಲ್ಲಿ ವೈರುಧ್ಯವಿದ್ದಲ್ಲಿ ಸ್ಟೇಟ್ ಫೀಡ್ ಕ್ವಾಲಿಟಿ ಕನ್ಸಲ್ಟೇಟಿವ್ ಕಮಿಟಿ ರೆಫರಲ್ ಲ್ಯಾಬ್‌ನ ಪರಿಶೋಧನೆಗಾಗಿ ಸ್ಯಾಂಪಲ್ ಅನ್ನು ಕಳುಹಿಸಿಕೊಡತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

13

(2) ಈ ಅಧಿನಿಯಮದ ಅಡಿಯಲ್ಲಿ ಒಂದು ಅಪರಾಧವನ್ನು ಮಾಡಿರುವುದಾಗಿ ನ್ಯಾಯಾಲಯಕ್ಕೆ ಮನವರಿಕೆಯಾದಲ್ಲಿ, ಆ ಅಪರಾಧದ ವಿಚಾರಣೆ ಮಾಡುವ ನ್ಯಾಯಾಲಯಕ್ಕೆ, ಅಂತಹ ಕಾರ್ಯದಲ್ಲಿ ಒಳಗೊಂಡ ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕುವುದಕ್ಕೆ ನಿರ್ದೇಶಿಸಬಹುದಾಗಿದೆ ಮತ್ತು ಅದಕ್ಕನುಗುಣವಾಗಿ ಇತ್ಯರ್ಥಗೊಳಿಸತಕ್ಕದ್ದಾಗಿದೆ.

(3) ನ್ಯಾಯಾಲಯಕ್ಕೆ, ತ್ವರಿತವಾಗಿ ಮತ್ತು ನೈಸರ್ಗಿಕವಾಗಿ ಕೊಳೆಯುವಿಕೆಗೆ ವಿಧೇಯವಾಗುವ ವಶಪಡಿಸಿಕೊಂಡ ಯಾವುದೇ ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣವನ್ನು ಕ್ಷಿಪ್ರವಾಗಿ ತೊಲಗಿಸಲು ನಿರ್ದೇಶವನ್ನು ನೀಡಬಹುದಾಗಿದೆ.

(4) (1)ನೇ ಉಪ-ವಿಭಾಗದಲ್ಲಿ ನಿಗದಿಪಡಿಸಿದ ದಂಡದ ಜೊತೆಗೆ ಜಾನುವಾರುಗಳ ಅಥವಾ ಕೋಳಿ ವರ್ಗದ ಮರಣ ಅಥವಾ ತೀವ್ರ ಗಾಯ ಅಥವಾ ಉತ್ಪಾದಕತೆಗೆ ಧಕ್ಕೆ ಉಂಟುಮಾಡುವ ಸನ್ನಿವೇಶದಲ್ಲಿ, ಹೊಣೆಗಾರನಾದ ವ್ಯಕ್ತಿಯಿಂದ, ಜಾನುವಾರುಗಳ ಅಥವಾ ಕೋಳಿ ವರ್ಗದ ಮಾಲಿಕನಿಗೆ ಅಥವಾ ಉತ್ತರಾಧಿಕಾರಿಗಳಿಗೆ ಸರಕಾರ ಕಾಲಾಕಾಲಗಳಲ್ಲಿ ಜಾನುವಾರುಗಳಿಗೆ ಅಥವಾ ಕೋಳಿ ವರ್ಗಕ್ಕೆ ನಿರ್ಧರಿಸುವ ಮೊತ್ತವನ್ನು ತಳಹದಿಯನ್ನಾಗಿಸಿ ಅಪರಾಧದ ವಿಚಾರಣೆ ನಡೆಸುವ ನ್ಯಾಯಾಲಯವು ತೀರ್ಮಾನಿಸುವ ನಷ್ಟಪರಿಹಾರವನ್ನು ನೀಡಲು ತಪ್ಪಿತಸ್ಥನಾದ ವ್ಯಕ್ತಿಯು ಹೊಣೆಗಾರನಾಗಿರುವುದಾಗಿದೆ.

ತಪ್ಪಿತಸ್ಥನು (4)ನೇ ಉಪ-ವಿಭಾಗ ಪ್ರಕಾರ ನಷ್ಟಪರಿಹಾರವನ್ನು ನೀಡದಿದ್ದಲ್ಲಿ ಪ್ರಸ್ತುತ ಮೊತ್ತವನ್ನು ಆತನಿಂದ ಭೂಮಿಯ ಮೇಲಿನ ತೆರಿಗೆ ಬಾಕಿ ಎಂಬಂತೆ ವಸೂಲಿ ಮಾಡಬಹುದಾಗಿದೆ.

23. ಅಪರಾಧದ ಸಂಜ್ಞಾನ.—(1) ಯಾವುದೇ ನ್ಯಾಯಾಲಯವು ಸ್ಟೇಟ್ ಫೀಡ್ ಕ್ವಾಲಿಟಿ ಕನ್ಸಲ್ಟೇಟಿವ್ ಕಮಿಟಿಯ ಶಿಫಾರಸಿನ ತಳಹದಿಯಲ್ಲಿ ಫೀಡ್ ಸೇಫ್ಟಿ ಎನ್‌ಫೋರ್ಸ್‌ಮೆಂಟ್ ಅಧಿಕಾರಿಯವರು ನೀಡಿದ ಲಿಖಿತ ಮುಖೇನದ ದೂರಿನ ಹೊರತಾಗಿ ಈ ಅಧಿನಿಯಮದ ಕೆಳಗೆ ಶಿಕ್ಷಾರ್ಹವಾದ ಅಪರಾಧದ ಮೇಲೆ ಕ್ರಮ ಕೈಗೊಳ್ಳತಕ್ಕದ್ದಲ್ಲ.

(2) ಈ ಅಧಿನಿಯಮದ ಕೆಳಗೆ ಶಿಕ್ಷಾರ್ಹವಾದ ಒಂದು ಅಪರಾಧವನ್ನು ಪ್ರಥಮ ದರ್ಜೆಯ ನ್ಯಾಯಾಂಗ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಸಮಕ್ಷ ವಿಚಾರಣೆಯನ್ನು ನಡೆಸತಕ್ಕದ್ದು.

24. ಕಂಪೆನಿಗಳು, ಸಂಸ್ಥೆಗಳು, ಸ್ಥಾಪನೆಗಳು, ಸಂಘಗಳು ಎಂಬಿವುಗಳು ಮಾಡುವ ಅಪರಾಧಗಳು.—(1) ಒಂದು ಕಂಪೆನಿ ಅಥವಾ ಸಂಸ್ಥೆ ಅಥವಾ ಸ್ಥಾಪನೆಯು ಅಥವಾ ಸಂಘವು ಈ ಅಧಿನಿಯಮದ ಅಡಿಯಲ್ಲಿನ ಒಂದು ಅಪರಾಧವನ್ನು ಮಾಡುವಾಗ, ಆ ಅಪರಾಧವನ್ನು ಮಾಡುವ ಸಮಯದಲ್ಲಿ ಆ ಕಂಪೆನಿಯ ಅಥವಾ ಸಂಸ್ಥೆಯ ಅಥವಾ ಸ್ಥಾಪನೆಯ ಅಥವಾ ಸಂಘದ ಬಿಸಿನೆಸ್‌ನ ಚಾರ್ಜ್ ಮತ್ತು ಹೊಣೆಗಾರಿಕೆಯಲ್ಲಿದ್ದ ಪ್ರತಿಯೊಬ್ಬ ವ್ಯಕ್ತಿಯೂ ಆ ಅಪರಾಧವನ್ನು ಮಾಡಿರುವುದಾಗಿ ಭಾವಿಸತಕ್ಕದ್ದು ಮತ್ತು ಆ ರೀತಿ ಕ್ರಮ ಕೈಗೊಂಡು ಶಿಕ್ಷಿಸಲ್ಪಡಲು ಬಾಧ್ಯಸ್ಥನಾಗಿರುವುದಾಗಿದೆ:

ಆದರೆ, ಈ ಉಪ-ವಿಭಾಗದಲ್ಲಿ ಒಳಗೊಂಡಿರುವ ಯಾವುದೂ ಕೂಡ ಅಂತಹ ಯಾವುದೇ ವ್ಯಕ್ತಿಯನ್ನು ಅಪರಾಧವು ನಡೆದಿರುವುದು ತನ್ನ ಅರಿವಿನಿಂದಲ್ಲವೆಂದು ಅಥವಾ ಅಪರಾಧವನ್ನು ತಡೆಯುವುದಕ್ಕೆ ತಾನು ಸಾಕಷ್ಟು ಪ್ರಯತ್ನಿಸಿರುವೆನೆಂದು ಆತನು ಸಾಬೀತುಪಡಿಸುವುದಾದಲ್ಲಿ ಯಾವುದೇ ಶಿಕ್ಷೆಗೆ ಒಳಪಡಿಸತಕ್ಕದ್ದಲ್ಲ.

(2) (1)ನೇ ಉಪ-ವಿಭಾಗದಲ್ಲಿ ಏನೇ ಒಳಗೊಂಡಿದ್ದರೂ, ಒಂದು ಕಂಪೆನಿ ಅಥವಾ ಸ್ಥಾಪನೆ ಅಥವಾ ಸಂಸ್ಥೆ ಅಥವಾ ಸಂಘವು ಈ ಅಧಿನಿಯಮದ ಅಡಿಯಲ್ಲಿನ ಒಂದು ಅಪರಾಧವನ್ನು ಮಾಡುವಾಗ, ಈ ಅಧಿನಿಯಮದ ಅಡಿಯಲ್ಲಿನ ಆ ಅಪರಾಧವನ್ನು ಕಂಪೆನಿಯ ಅಥವಾ ಸ್ಥಾಪನೆಯ ಅಥವಾ ಸಂಸ್ಥೆಯ ಅಥವಾ ಸಂಘದ ಯಾವುದೇ ಡೈರೆಕ್ಟರ್, ಮ್ಯಾನೇಜರ್, ಸೆಕ್ರಟರಿ ಅಥವಾ ಇತರ ಉದ್ಯೋಗಿಗಳು ಎಂಬಿವರುಗಳ ಅರಿವಿನಿಂದ ಅಥವಾ ಸಮ್ಮತಿಯಿಂದ ಅಥವಾ ಅವರ ಭಾಗದಿಂದಿರುವ ಯಾವುದೇ ನಿರ್ಲಕ್ಷ್ಯದ ಕಾರಣದಿಂದಾಗಿದೆ ಎಂದು ಸಾಬೀತಾದಲ್ಲಿ, ಅಂತಹ ಡೈರೆಕ್ಟರ್, ಮ್ಯಾನೇಜರ್, ಸೆಕ್ರಟರಿ ಅಥವಾ ಇತರ ಉದ್ಯೋಗಿಗಳು, ಅಂತಹ ಅಪರಾಧವನ್ನು ಮಾಡಿರುವುದಾಗಿ ಭಾವಿಸಲಾಗುವುದು ಮತ್ತು ಆತನ ಅಥವಾ ಅವರ ವಿರುದ್ಧ ಕ್ರಮ ಕೈಗೊಳ್ಳತಕ್ಕದ್ದು ಮತ್ತು ಅದಕ್ಕನುಗುಣವಾಗಿ ಶಿಕ್ಷಿಸಲ್ಪಡತಕ್ಕದ್ದು.

ವಿವರಣೆ:—ಈ ಅಧಿನಿಯಮದ ಉದ್ದೇಶಕ್ಕಾಗಿ,—

(ಎ) "ಕಂಪೆನಿ ಅಥವಾ ಸ್ಥಾಪನೆ ಅಥವಾ ಸಂಸ್ಥೆ ಅಥವಾ ಸಂಘ" ಎಂದರೆ ಒಂದು ಫರ್ಮ್, ಸಂಘ ಅಥವಾ ವ್ಯಕ್ತಿಗಳ ಅಸೋಸಿಯೇಷನ್‌ಗಳು ಎಂಬಿವುಗಳು ಒಳಗೊಂಡ ನಿಕಾಯಗಳು ಎಂದರ್ಥ; ಮತ್ತು

This is a digitally signed Gazette.
Authenticity may be verified through https://compose.kerala.gov.in/

(ಬ) "ಡೈರೆಕ್ಟರ್" *ಎಂದರೆ*

(i) *ಫರ್ಮ್‌ಗೆ ಸಂಬಂಧಿಸಿದಂತೆ ಆ ಫರ್ಮ್‌ನ ಒಬ್ಬ ಪಾಲುದಾರ;*

(ii) *ಒಂದು ಸೊಸೈಟಿ ಅಥವಾ ವ್ಯಕ್ತಿಗಳ ಇತರ ಅಸೋಸಿಯೇಷನ್‌ಗಳು ಎಂಬಿವುಗಳಿಗೆ ಸಂಬಂಧಿಸಿದಂತೆ, ಆಯಾಯ ವಿಷಯದಂತೆ, ಸಂಘದ ಅಥವಾ ಇತರ ಅಸೋಸಿಯೇಷನ್‌ಗಳ ನಿಯಮಗಳ ಕೆಳಗೆ, ಆ ಸಂಘದ ಅಥವಾ ಅಸೋಸಿಯೇಷನ್‌ಗಳ ವಿಷಯಗಳನ್ನು ನಿರ್ವಹಿಸುವುದಕ್ಕಾಗಿ ಏರ್ಪಾಟು ಮಾಡಲ್ಪಟ್ಟಿರುವ ಒಬ್ಬ ವ್ಯಕ್ತಿ ಎಂದರ್ಥ;*

25. ಅಪರಾಧಗಳ ಪ್ರಚೋದನೆ.—22ನೇ ವಿಭಾಗದ ಅಡಿಯಲ್ಲಿನ ಯಾವುದೇ ಅಪರಾಧಕ್ಕೆ ನೆರವು ನೀಡುವ ಯಾವುದೇ ವ್ಯಕ್ತಿಯು, ಆ ರೀತಿ ನೆರವು ಲಭಿಸಿದ ಅಪರಾಧವು ಆ ನೆರವಿನ ಪರಿಣಾಮವಾಗಿ ಮಾಡಲ್ಪಟ್ಟಿದ್ದಲ್ಲಿ ಆರು ತಿಂಗಳಿಗಿಂತ ಕಡಿಮೆಯಲ್ಲದ ಮತ್ತು ಒಂದು ವರ್ಷದವರೆಗಿನ ಜೈಲು ಶಿಕ್ಷೆ ಮತ್ತು ಹತ್ತು ಲಕ್ಷ ರೂಪಾಯಿಯವರೆಗಿನ ದಂಡದೊಂದಿಗೆ ಅಥವಾ ಅವೆರಡೂ ಸೇರಿ ಶಿಕ್ಷಿಸಲ್ಪಡುವನು.

26. ಸ್ಟೇಟ್ ಫೀಡ್ ಕ್ವಾಲಿಟಿ ಕನ್ಸಲ್ಟೇಟಿವ್ ಕಮಿಟಿ.—(1) ಸರಕಾರವು, ಅಧಿಕೃತ ಗಜೆಟಿನಲ್ಲಿ ಅಧಿಸೂಚನೆ ಮುಖೇನ, ಸ್ಟೇಟ್ ಫೀಡ್ ಕ್ವಾಲಿಟಿ ಕನ್ಸಲ್ಟೇಟಿವ್ ಕಮಿಟಿ ಎಂಬ ಹೆಸರಿನಲ್ಲಿ ಒಂದು ಕನ್ಸಲ್ಟೇಟಿವ್ ಕಮಿಟಿಯನ್ನು ರೂಪೀಕರಿಸತಕ್ಕದ್ದು.

(2) ಮೇವು ಉದ್ದಿಮೆ, ಕೃಷಿಕರು, ಗ್ರಾಹಕರು, ಅನುಬಂಧ ಸಂಶೋಧನಾ ಸಂಸ್ಥೆಗಳು ಎಂಬಿವುಗಳ ಹಿತಾಸಕ್ತಿಯನ್ನು ಪ್ರತಿನಿಧಿಸುವುದಕ್ಕಾಗಿ, ಸ್ಟೇಟ್ ಫೀಡ್ ಕ್ವಾಲಿಟಿ ಕನ್ಸಲ್ಟೇಟಿವ್ ಕಮಿಟಿಯಲ್ಲಿ ಈ ಕೆಳಗಿನ ಸದಸ್ಯರುಗಳು ಒಳಗೊಂಡಿರುವರು, ಅದೇನೆಂದರೆ:—

(i) *ಮೃಗಸಂರಕ್ಷಣೆ ಮತ್ತು ಕ್ಷೀರಾಭಿವೃದ್ಧಿ ಇಲಾಖೆಯ ಸೆಕ್ರಟರಿ-ಚೇರ್‌ಪರ್ಸನ್;*

(ii) *ಮೃಗಸಂರಕ್ಷಣೆ ಇಲಾಖೆಯ ಡೈರೆಕ್ಟರ್-ಕನ್ವೀನರ್;*

(iii) *ಕ್ಷೀರಾಭಿವೃದ್ಧಿ ಇಲಾಖೆಯ ಡೈರೆಕ್ಟರ್-ಪದನಿಮಿತ್ತ;*

(iv) *ಕೇರಳ ಪಶುವೈದ್ಯಕೀಯ ಹಾಗೂ ಪಶು ವಿಜ್ಞಾನಗಳು ವಿಶ್ವವಿದ್ಯಾಲಯದ ಪಶು ಪೋಷಣೆ ವಿಭಾಗದ ಮುಖ್ಯಸ್ಥ-ಪದನಿಮಿತ್ತ;*

(v) *ಕೇರಳ ಪಶುವೈದ್ಯಕೀಯ ಹಾಗೂ ಪಶು ವಿಜ್ಞಾನಗಳು ವಿಶ್ವವಿದ್ಯಾಲಯದ ಸೆಂಟರ್ ಫಾರ್ ಅಡ್ವಾನ್ಸ್‌ಡ್ ಸ್ಟಡೀಸ್ ಇನ್ ಪೌಲ್ಟ್ರಿಯ ಡೈರೆಕ್ಟರ್-ಪದನಿಮಿತ್ತ;*

(vi) *ರಾಷ್ಟ್ರೀಯ ಕ್ಷೀರಾಭಿವೃದ್ಧಿ ಮಂಡಳಿಯ ಪ್ರತಿನಿಧಿ-ಸರಕಾರ ನಾಮನಿರ್ದೇಶಿಸುವ ಒಬ್ಬ ವ್ಯಕ್ತಿ; ಮತ್ತು*

(vii) *ಮೇವು ನಿರ್ಮಾಣ ಉದ್ದಿಮೆಯಿಂದಿರುವ ಮೂವರು ಪ್ರತಿನಿಧಿಗಳು-ಸರಕಾರ ನಾಮನಿರ್ದೇಶಿಸುವವರು (ಸಾರ್ವಜನಿಕ ಸಂಸ್ಥೆಗಳು, ಸಹಕಾರ ವಲಯ, ಖಾಸಗಿ ವಲಯಗಳಿಂದ ತಲಾ ಒಬ್ಬರಂತೆ).*

(3) ಸ್ಟೇಟ್ ಫೀಡ್ ಕ್ವಾಲಿಟಿ ಕನ್ಸಲ್ಟೇಟಿವ್ ಕಮಿಟಿಯಲ್ಲಿನ ನಾಮನಿರ್ದೇಶಿತ ಸದಸ್ಯರುಗಳಿಗೆ ಅರ್ಹವಾದ ಭತ್ಯೆಗಳು ಮತ್ತು ಆಸೀನ ಶುಲ್ಕ, ಕ್ವಾರಂ, ಸಭೆಗಳ ಸಂಖ್ಯೆ, ಬಹುಮತ, ಸಭೆಯ ಸ್ಥಳ, ಸಭೆಯನ್ನು ಸಮನ್‌ಮಾಡುವುದು ನಿಗದಿಪಡಿಸಿದ ಪ್ರಕಾರ ಆಗಿರತಕ್ಕದ್ದು.

27. ಸ್ಟೇಟ್ ಫೀಡ್ ಕ್ವಾಲಿಟಿ ಕನ್ಸಲ್ಟೇಟಿವ್ ಕಮಿಟಿಯ ಚಟುವಟಿಕೆಗಳು.—ಸ್ಟೇಟ್ ಫೀಡ್ ಕ್ವಾಲಿಟಿ ಕನ್ಸಲ್ಟೇಟಿವ್ ಕಮಿಟಿಗೆ 22ನೇ ವಿಭಾಗದಲ್ಲಿ ಉಲ್ಲೇಖಿಸಲ್ಪಟ್ಟ ಅಧಿಕಾರಗಳ ಜೊತೆಗೆ ಈ ಕೆಳಗಿನ ಅಧಿಕಾರಗಳು ಇರುವುದಾಗಿದೆ, ಅದೇನೆಂದರೆ:—

(ಎ) ಈ ಅಧಿನಿಯಮ ಮತ್ತು ಅದರ ಕೆಳಗೆ ರಚಿಸಿದ ನಿಯಮಗಳಿಗೆ ಮತ್ತು ರೆಗ್ಯುಲೇಶನುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಸರಕಾರಕ್ಕೆ ತಜ್ಞ ಅಭಿಪ್ರಾಯವನ್ನು ನೀಡುವುದು;

(ಬಿ) ಮೇವಿನ ನಿರ್ಮಾಣ ಉದ್ದಿಮೆ ವಲಯದಲ್ಲಿ ಕಾಲಾಕಾಲಗಳಲ್ಲಿ ಉಂಟಾಗುವ ಪ್ರಗತಿಗೆ ಅನುಗುಣವಾಗಿ ಮೇವಿನ ಗುಣಮಟ್ಟ ಮಾನದಂಡಗಳನ್ನು ಪರಿಷ್ಕರಿಸಲು ಸರಕಾರಕ್ಕೆ ಶಿಫಾರಸುಗಳನ್ನು ನೀಡುವುದು;

(ಸಿ) ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣ ಎಂಬಿವುಗಳ ನಿರ್ಮಾಣಕ್ಕೆ, ಆಯಾಯ ವಿಷಯದಂತೆ, ಬಳಸುವಂತಹುದೋ ಬಳಸತಕ್ಕದ್ದಲ್ಲದಾದುದೋ ಆದ ಘಟಕ ಅಂಶಗಳ ಅಧಿಸೂಚನೆ ಪಟ್ಟಿಯಲ್ಲಿ ಹೆಚ್ಚು ಮೇವು ಪದಾರ್ಥಗಳನ್ನು ಸೇರಿಸುವುದಕ್ಕಿರುವ ಶಿಫಾರಸುಗಳನ್ನು ನೀಡುವುದು;

(ಡಿ) ನಿಯಮಗಳಲ್ಲಿ ಮತ್ತು ರೆಗ್ಯುಲೇಶನುಗಳಲ್ಲಿ ಕಾಲಾಕಾಲಗಳಲ್ಲಿ ಅಗತ್ಯವಾದ ತಿದ್ದುಪಡಿಗಳಿಗೆ ಸಂಬಂಧಿಸಿದಂತೆ ಸರಕಾರಕ್ಕೆ ಶಿಫಾರಸು ನೀಡುವುದು.

This is a digitally signed Gazette.
Authenticity may be verified through https://compose.kerala.gov.in/

(ಇ) ಪ್ರಕರಣಗಳನ್ನು ನ್ಯಾಯಾಲಯದಲ್ಲಿ ವಿಚಾರಣೆ ಮಾಡುವುದಕ್ಕೆ ಅಗತ್ಯವಾದ ಶಿಫಾರಸುಗಳನ್ನು ನೀಡುವುದು; ಮತ್ತು

(ಎಫ್) ಸರಕಾರ ಕಾಲಾಕಾಲಗಳಲ್ಲಿ ಗಜೆಟ್ ಅಧಿಸೂಚನೆಯ ಮೂಲಕ ನಿರ್ಧರಿಸಿ ನೀಡುವ ಇತರ ಅಧಿಕಾರಗಳು.

28. ವಿನಾಯಿತಿ.—ಈ ಅಧಿನಿಯಮದಲ್ಲಿನ ಯಾವುದೂ ಕೂಡ,—

(ಎ) ಜಾನುವಾರುಗಳನ್ನು ಅಥವಾ ಕೋಳಿ ವರ್ಗವನ್ನು ಸಾಕುವ ಕೃಷಿಕರಿಗೆ ಅಥವಾ ಕೃಷಿ ಚಟುವಟಿಕೆಗಳಲ್ಲಿ ತೊಡಗಿರುವವರಿಗೆ ಅಥವಾ ಅವರು ಸ್ವಂತವಾಗಿ ಸಾಕುವ ಜಾನುವಾರುಗಳಿಗೆ ಅಥವಾ ಕೋಳಿ ವರ್ಗಕ್ಕೆ ನೀಡುವುದಕ್ಕಿರುವ ಮೇವುಗಳನ್ನು ಸ್ವಂತವಾಗಿ ತಯಾರಿಸಲು ಅಥವಾ ನಿರ್ಮಿಸಲು ಸಿದ್ಧರಾಗುವುದಕ್ಕೆ;

(ಬಿ) ಸಂಶೋಧನೆಯ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯಗಳು, ಸಂಶೋಧನಾ ಸಂಸ್ಥೆಗಳು ನಿರ್ಮಿಸುವ ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣ ಎಂಬಿವುಗಳಿಗೆ;

(ಸಿ) ಸರಕಾರಿ ಫಾರ್ಮ್‌ಗಳಲ್ಲಿ ಸಾಕುವ ಜಾನುವಾರುಗಳಿಗೆ ಮತ್ತು ಕೋಳಿ ವರ್ಗಕ್ಕೆ ಬೇಕಾಗಿ ಪ್ರಸ್ತುತ ಸಂಸ್ಥೆಗಳು ನಿರ್ಮಿಸುವ, ಉತ್ಪಾದಿಸುವ ಅಥವಾ ತಯಾರಿಸುವ ಜಾನುವಾರು ಮೇವಿಗೆ ಅಥವಾ ಕೋಳಿ ವರ್ಗ ಆಹಾರಕ್ಕೆ; ಅನ್ವಯವಾಗುವುದಲ್ಲ.

29. ದಾಖಲೆಗಳ ಜೋಪಾನಗೊಳಿಸುವಿಕೆ.—ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣ ಎಂಬಿವುಗಳನ್ನು ನಿರ್ಮಿಸಲು ಅಥವಾ ಮಾರಾಟ ಮಾಡುವುದಕ್ಕಿರುವ ಲೈಸೆನ್ಸ್ ಹೊಂದಿರುವ ವ್ಯಕ್ತಿ, ಆತನು ಸಂಗ್ರಹಿಸಿದ ಕಚ್ಚಾ ಸಾಮಾಗ್ರಿಗಳು, ಉತ್ಪಾದಿಸಿದ ಮತ್ತು ಮಾರಾಟಕ್ಕಾಗಿ ಸಿದ್ಧಪಡಿಸಿದ ಸಾಮಾಗ್ರಿಗಳು, ಖರೀದಿಸಿದ ಮತ್ತು ಮಾರಾಟ ಮಾಡಿದ ಮೇವಿನ ಪ್ರಮಾಣ, ಗುಣಮಟ್ಟ ಎಂಬಿವುಗಳನ್ನು ಒಳಗೊಂಡು ಆತನ ವ್ಯಾಪಾರಕ್ಕೆ ಸಂಬಂಧಿಸಿದ ದಾಖಲೆಗಳನ್ನು ನಿಗದಿಪಡಿಸಿದ ವಿಧಾನದಲ್ಲಿ ಜೋಪಾನವಾಗಿರಿಸತಕ್ಕದ್ದು.

30. ರಿಟರ್ನುಗಳ ಸಲ್ಲಿಸುವಿಕೆ.—ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣ ಎಂಬಿವುಗಳನ್ನು ನಿರ್ಮಿಸಲು ಅಥವಾ ಮಾರಾಟ ಮಾಡುವುದಕ್ಕಿರುವ ಲೈಸೆನ್ಸ್ ಹೊಂದಿರುವ ಪ್ರತಿಯೊಬ್ಬ ಲೈಸನ್ಸುದಾರನೂ, ಆತನು ನಿರ್ಮಿಸಿದ, ಮಿಶ್ರಣ ಮಾಡಿದ, ತಯಾರಿಸಿದ ಮತ್ತು ಮಾರಾಟ ಮಾಡಿದ ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣ ಎಂಬಿವುಗಳಿಗೆ ಸಂಬಂಧಪಟ್ಟ ಮಾಹಿತಿಗಳನ್ನೊಳಗೊಂಡ, ನಿಗದಿಪಡಿಸಿದ ಮಾದರಿಯ, ವಾರ್ಷಿಕ ತಳಹದಿಯ ರಿಟರ್ನ್‌ನ ದ್ವಿಪ್ರತಿಗಳನ್ನು ಪ್ರತಿಯೊಂದು ಆರ್ಥಿಕ ವರ್ಷ ಮುಕ್ತಾಯಗೊಂಡ ಮೂರು ತಿಂಗಳೊಳಗೆ ಲೈಸೆನ್ಸಿಂಗ್ ಅಥಾರಿಟಿಗೆ ಸಲ್ಲಿಸತಕ್ಕದ್ದು.

31. ಲೈಸೆನ್ಸಿಂಗ್ ಅಥಾರಿಟಿಯ ವಾರ್ಷಿಕ ವರದಿ.—(1) ಲೈಸೆನ್ಸಿಂಗ್ ಅಥಾರಿಟಿಯು ಪ್ರತಿಯೊಂದು ಆರ್ಥಿಕ ವರ್ಷ ನಿಗದಿಪಡಿಸಿದ ಅಂತಹ ನಮೂನೆಯಲ್ಲಿ ಮತ್ತು ಅಂತಹ ಸಮಯದಲ್ಲಿ, ಪೂರ್ವ ವರ್ಷದಲ್ಲಿ ನಡೆಸಿದ ಚಟುವಟಿಕೆಗಳಿಗೆ ಸಂಬಂಧಿಸಿದ ಒಂದು ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಆ ವರದಿಯ ಪ್ರತಿಗಳನ್ನು ಸರಕಾರಕ್ಕೆ ಕಳುಹಿಸಿಕೊಡತಕ್ಕದ್ದು.

(2) (1)ನೇ ಉಪ-ವಿಭಾಗ ಪ್ರಕಾರವಿರುವ ವರದಿ ಲಭಿಸಿದ ಕೂಡಲೇ ಅದರ ಒಂದು ಪ್ರತಿಯನ್ನು ಆದಷ್ಟು ಬೇಗನೆ ಕೇರಳ ವಿಧಾನಸಭೆಯ ಸಮಕ್ಷ ಮಂಡಿಸತಕ್ಕದ್ದು.

32. ಸದ್ಭಾವನೆಯಿಂದ ಕೈಗೊಂಡ ಕ್ರಮಗಳಿಗೆ ಸಂರಕ್ಷಣೆ.—ಸ್ಟೇಟ್ ಫೀಡ್ ಕ್ವಾಲಿಟಿ ಕನ್ಸಲ್ಟೇಟಿವ್ ಕಮಿಟಿಯ ಸದಸ್ಯರುಗಳು, ಲೈಸೆನ್ಸಿಂಗ್ ಅಥಾರಿಟಿ, ಫೀಡ್ ಸೇಫ್ಟಿ ಎನ್‌ಫೋರ್ಸ್‌ಮೆಂಟ್ ಅಧಿಕಾರಿ, ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿ ಅಥವಾ ಅಧಿಕೃತ ಅಧಿಕಾರಿ ಎಂಬಿವರುಗಳು ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡ ಯಾವುದೇ ಕ್ರಮಕ್ಕೆ ಮತ್ತು ಕಾರ್ಯಕ್ಕೆ ವಿರುದ್ಧವಾಗಿ ಯಾವುದೇ ದಾವೆಯೋ ಪ್ರಾಸಿಕ್ಯೂಶನೋ ಇತರ ಕಾನೂನು ಕ್ರಮಗಳೋ ನೆಲೆನಿಲ್ಲುವಂತದ್ದಲ್ಲ.

33. ಸ್ಟೇಟ್ ಫೀಡ್ ಕ್ವಾಲಿಟಿ ಕನ್ಸಲ್ಟೇಟಿವ್ ಕಮಿಟಿಯ ಸದಸ್ಯರುಗಳು, ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಗಳು ಮತ್ತು ಇತರ ಉದ್ಯೋಗಸ್ಥರು ಸಾರ್ವಜನಿಕ ಸೇವಕರಾಗಿರುವರೆಂದು.—ಸ್ಟೇಟ್ ಫೀಡ್ ಕ್ವಾಲಿಟಿ ಕನ್ಸಲ್ಟೇಟಿವ್ ಕಮಿಟಿಯ ಸದಸ್ಯರುಗಳು, ಲೈಸೆನ್ಸಿಂಗ್ ಅಥಾರಿಟಿ, ಫೀಡ್ ಸೇಫ್ಟಿ ಎನ್‌ಫೋರ್ಸ್‌ಮೆಂಟ್ ಅಧಿಕಾರಿ, ಫೀಡ್ ಸೇಫ್ಟಿ ಅಶ್ಯೂರೆನ್ಸ್ ಅಧಿಕಾರಿಗಳು ಅವರು ಅಧಿಕೃತಗೊಳಿಸಿದುದಕ್ಕನುಸರಿಸಿ ಕಾರ್ಯವೆಸಗುವ ಯಾವುದೇ ವ್ಯಕ್ತಿಯು, ಈ ಅಧಿನಿಯಮದ ಮತ್ತು ಅದರ ಅಡಿಯಲ್ಲಿ ರಚಿಸಿದ ನಿಯಮಗಳ, ರೆಗ್ಯುಲೇಶನುಗಳ ಉಪಬಂಧಗಳಿಗನುಸಾರವಾಗಿ ಕಾರ್ಯವೆಸಗುವಾಗ ಅಥವಾ ಕಾರ್ಯವೆಸಗುತ್ತಿರುವುದಾಗಿ ಭಾವಿಸಲ್ಪಡುವಾಗ 1860ರ ಭಾರತ ದಂಡ ಸಂಹಿತೆ (1860ರ 45ನೇ ಕೇಂದ್ರ ಅಧಿನಿಯಮ)ಯ 21ನೇ ವಿಭಾಗದ ಅರ್ಥವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕ ಸೇವಕರೆಂದು ಭಾವಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

34. ಅಧಿನಿಯಮದ ಅಧ್ಯಾರೋಹಿ ಪ್ರಭಾವ.—*ಈ ಅಧಿನಿಯಮದ ಉಪಬಂಧಗಳಿಗೆ, ಅದಕ್ಕೆ ವಿರುದ್ಧವಾಗಿ ತತ್ಕಾಲ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ ಅಧ್ಯಾರೋಹಿ ಪ್ರಭಾವವಿರುವುದಾಗಿದೆ*

35. ಅಧಿಕಾರಗಳ ನಿಯೋಜನೆ.—*ಸರಕಾರಕ್ಕೆ, ಈ ಅಧಿನಿಯಮದ ಅಡಿಯಲ್ಲಿನ ಎಲ್ಲಾ ಅಥವಾ ಯಾವುದೇ ಅಧಿಕಾರಗಳನ್ನು ಗಜೆಟ್‌ನಲ್ಲಿ ಅಧಿಸೂಚಿಸುವ ಆದೇಶದ ಮುಖೇನ ಅಧಿಕಾರಿಗಳಿಗೆ ನಿಯೋಜಿಸಬಹುದಾಗಿದೆ.*

36. ತೊಂದರೆಗಳನ್ನು ನೀಗಿಸುವುದಕ್ಕಿರುವ ಅಧಿಕಾರ.—*(1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವುದರಲ್ಲಿ ಯಾವುದೇ ತೊಂದರೆಯುಂಟಾಗುವುದಾದಲ್ಲಿ, ಸರಕಾರಕ್ಕೆ, ಅಂತಹ ತೊಂದರೆಗಳನ್ನು ನಿವಾರಿಸುವುದಕ್ಕಾಗಿ, ಅವಶ್ಯಕ ಅಥವಾ ಯುಕ್ತವಾದುದೆಂದು ತೋರುವ ಅಂತಹ ಉಪಬಂಧಗಳಿಗೆ ವಿರುದ್ಧವಲ್ಲದ ಯಾವುದೇ ಕ್ರಮಗಳನ್ನು, ಅಧಿಕೃತ ಗಜೆಟಿನಲ್ಲಿ ಪ್ರಕಟಿಸಿದ ಸಾಮಾನ್ಯ ಅಥವಾ ವಿಶೇಷ ಆದೇಶದ ಮುಖೇನ ಕೈಗೊಳ್ಳಬಹುದಾಗಿದೆ:*

ಆದರೆ, ಅಂತಹ ಯಾವುದೇ ಆದೇಶವನ್ನು ಈ ಅಧಿನಿಯಮವು ಗಜೆಟಿನಲ್ಲಿ ಪ್ರಕಟಿಸಲ್ಪಡುವ ದಿನಾಂಕದಿಂದ ಎರಡು ವರ್ಷಕಾಲಾವಧಿಯು ಕೊನೆಗೊಂಡ ನಂತರ ಜಾರಿಗೊಳಿಸತಕ್ಕದ್ದಲ್ಲ.

(2) ಈ ವಿಭಾಗದ ಪ್ರಕಾರ ಜಾರಿಗೊಳಿಸಿದ ಎಲ್ಲಾ ಆದೇಶವನ್ನು ಅದನ್ನು ಜಾರಿಗೊಳಿಸಿದ ನಂತರ ಆದಷ್ಟು ಬೇಗನೆ ವಿಧಾನಸಭೆಯ ಸಮಕ್ಷದಲ್ಲಿ ಮಂಡಿಸತಕ್ಕದ್ದು.

37. ಪೋಲೀಸ್ ಅಧಿಕಾರಿಯ ಕರ್ತವ್ಯ.—*ಈ ಅಧಿನಿಯಮ ಪ್ರಕಾರದ ಯಾವುದೇ ಅಧಿಕಾರಿಗಳು ಅದರ ಅಧಿಕಾರದ ಕಾನೂನುಬದ್ಧ ವಿನಿಯೋಗಕ್ಕಾಗಿ ನೆರವನ್ನು ನ್ಯಾಯಸಮ್ಮತವಾಗಿ ಕೋರುವಾಗ ನೆರವನ್ನು ನೀಡುವುದು ಎಂಬುದು ಯಾವುದೇ ಪೋಲೀಸ್ ಅಧಿಕಾರಿಯ ಕರ್ತವ್ಯವಾಗಿರುವುದು.*

38. ರೆಗ್ಯುಲೇಶನುಗಳನ್ನು ರಚಿಸುವ ಅಧಿಕಾರ.—*(1) ಸರಕಾರಕ್ಕೆ ಅಧಿಕೃತ ಗಜೆಟ್‌ನಲ್ಲಿ ಅಧಿಸೂಚನೆಯ ಮುಖೇನ ಈ ಅಧಿನಿಯಮದ ಅಗತ್ಯಗಳಿಗಾಗಿ ರೆಗ್ಯುಲೇಶನುಗಳನ್ನು ರಚಿಸಬಹುದಾಗಿದೆ.*

(2) ಈ ಅಧಿನಿಯಮದ ಪ್ರಕಾರ ರಚಿಸಿದ ಪ್ರತಿಯೊಂದು ರೆಗ್ಯುಲೇಶನನ್ನು, ಅದನ್ನು ರಚಿಸಿದ ಅನಂತರ ಆದಷ್ಟು ಬೇಗನೇ, ವಿಧಾನಸಭೆಯು ಅಧಿವೇಶನದಲ್ಲಿರುವಾಗ, ವಿಧಾನಸಭೆಯ ಸಮಕ್ಷದಲ್ಲಿ ಒಂದು ಅಧಿವೇಶನದಲ್ಲೋ ಸತತವಾದ ಎರಡು ಅಧಿವೇಶನಗಳಲ್ಲೋ ಒಳಗೊಳ್ಳುವ ಒಟ್ಟು ಹದಿನಾಲ್ಕು ದಿವಸ ಕಾಲಾವಧಿಗೆ ಮಂಡಿಸತಕ್ಕದ್ದು ಮತ್ತು ಆ ರೀತಿ ಅದನ್ನು ಮಂಡಿಸಲಾಗುವ ಅಧಿವೇಶನವೋ ನಿಕಟಾನಂತರದ ಅಧಿವೇಶನವೋ ಕೊನೆಗೊಳ್ಳುವುದಕ್ಕಿಂತ ಮುಂಚಿತವಾಗಿ, ವಿಧಾನಸಭೆಯು ರೆಗ್ಯುಲೇಶನ್‌ನಲ್ಲಿ ಯಾವುದೇ ಮಾರ್ಪಾಟು ಮಾಡುವುದೋ ಅಲ್ಲದಿದ್ದಲ್ಲಿ ಆ ರೆಗ್ಯುಲೇಶನನ್ನು ರಚಿಸಬೇಕಾಗಿಲ್ಲೆಂದು ತೀರ್ಮಾನಿಸುವುದೋ ಮಾಡುವುದಾದಲ್ಲಿ, ಆ ರೆಗ್ಯುಲೇಶನಿಗೆ ಅನಂತರ ಆಯಾಯ ವಿಷಯದಂತೆ, ಆ ರೀತಿ ಮಾರ್ಪಾಟುಗೊಳಿಸಿದ ರೀತಿಯಲ್ಲಿ ಮಾತ್ರ ಪ್ರಾಬಲ್ಯವಿರುವುದು ಅಥವಾ ಯಾವುದೇ ಪ್ರಾಬಲ್ಯವು ಇಲ್ಲದಾಗುವುದಾಗಿದೆ, ಹಾಗಿದ್ದರೂ, ಅಂತಹ ಯಾವುದೇ ಮಾರ್ಪಾಟುಗೊಳಿಸುವಿಕೆಯೋ ರದ್ದುಗೊಳಿಸುವಿಕೆಯೋ ಆ ರೆಗ್ಯುಲೇಶನ್ ಪ್ರಕಾರ ಹಿಂದೆ ಮಾಡಿರುವ ಯಾವುದೇ ವಿಷಯದ ಸಿಂಧುತ್ವಕ್ಕೆ ಭಂಗವಾಗದ ರೀತಿಯಲ್ಲಿ ಆಗಿರತಕ್ಕದ್ದು.

39. ನಿಯಮಗಳನ್ನು ರಚಿಸುವ ಅಧಿಕಾರ.—*(1) ಸರಕಾರಕ್ಕೆ ಅಧಿಕೃತ ಗಜೆಟ್‌ನಲ್ಲಿ ಅಧಿಸೂಚನೆಯ ಮುಖೇನ ಈ ಅಧಿನಿಯಮದ ಎಲ್ಲಾ ಅಥವಾ ಯಾವುದೇ ಉಪಬಂಧಗಳನ್ನು ಜಾರಿಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದಾಗಿದೆ.*

(2) ಈ ಅಧಿನಿಯಮದ ಪ್ರಕಾರ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ಅನಂತರ ಆದಷ್ಟು ಬೇಗನೆ, ವಿಧಾನಸಭೆಯು ಅಧಿವೇಶನದಲ್ಲಿರುವಾಗ, ವಿಧಾನಸಭೆಯ ಸಮಕ್ಷದಲ್ಲಿ ಒಂದು ಅಧಿವೇಶನದಲ್ಲೋ ಸತತವಾದ ಎರಡು ಅಧಿವೇಶನಗಳಲ್ಲೋ ಒಳಗೊಳ್ಳುವ ಒಟ್ಟು ಹದಿನಾಲ್ಕು ದಿವಸ ಕಾಲಾವಧಿಗೆ ಮಂಡಿಸತಕ್ಕದ್ದು ಮತ್ತು ಆ ರೀತಿ ಅದನ್ನು ಮಂಡಿಸಲಾಗುವ ಅಧಿವೇಶನವೋ ನಿಕಟಾನಂತರದ ಅಧಿವೇಶನವೋ ಕೊನೆಗೊಳ್ಳುವುದಕ್ಕಿಂತ ಮುಂಚಿತವಾಗಿ, ವಿಧಾನಸಭೆಯು ಪ್ರಸ್ತುತ ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡುವುದೋ ಅಲ್ಲದಿದ್ದಲ್ಲಿ ಆ ನಿಯಮವನ್ನು ರಚಿಸಬೇಕಾಗಿಲ್ಲೆಂದು ತೀರ್ಮಾನಿಸುವುದೋ ಮಾಡುವುದಾದಲ್ಲಿ ಆ ನಿಯಮಕ್ಕೆ ಅನಂತರ ಆಯಾಯ ವಿಷಯದಂತೆ, ಆ ರೀತಿ ಮಾರ್ಪಾಟುಗೊಳಿಸಿದ ರೀತಿಯಲ್ಲಿ ಮಾತ್ರ ಪ್ರಾಬಲ್ಯವಿರುವುದು ಅಥವಾ ಯಾವುದೇ ಪ್ರಾಬಲ್ಯವು ಇಲ್ಲದಾಗುವುದಾಗಿದೆ. ಹಾಗಿದ್ದರೂ, ಅಂತಹ ಯಾವುದೇ ಮಾರ್ಪಾಟುಗೊಳಿಸುವಿಕೆಯೋ ರದ್ದುಗೊಳಿಸುವಿಕೆಯೋ ಆ ನಿಯಮದ ಪ್ರಕಾರ ಹಿಂದೆ ಮಾಡಿರುವ ಯಾವುದೇ ವಿಷಯದ ಸಿಂಧುತ್ವಕ್ಕೆ ಭಂಗವಾಗದ ರೀತಿಯಲ್ಲಿ ಆಗಿರತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

17

40. ಸಿಂಧುತ್ವ.—(1) 2022ರ ಕೇರಳ ಜಾನುವಾರು ಮೇವು, ಕೋಳಿ ವರ್ಗ ಆಹಾರ ಮತ್ತು ಖನಿಜ ಮಿಶ್ರಣ (ನಿರ್ಮಾಣ ಮತ್ತು ಮಾರಾಟದ ನಿಯಂತ್ರಣ) ಅಧ್ಯಾದೇಶ (2022ರ 10) (ಇನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲ್ಪಡುವುದು)ದ ಕಾರ್ಯಾಚರಣೆಯು ಮುಕ್ತಾಯಗೊಂಡಿದ್ದರೂ,—

(ಎ) ಪ್ರಸ್ತುತ ಅಧ್ಯಾದೇಶದ ಪ್ರಕಾರ ಮಾಡಿದ ಅಥವಾ ಮಾಡಿರುವುದಾಗಿ ಭಾವಿಸಲ್ಪಡುವ ಯಾವುದೇ ಕಾರ್ಯ ಅಥವಾ ಕೈಗೊಂಡ ಅಥವಾ ಕೈಗೊಂಡಿರುವುದಾಗಿ ಭಾವಿಸಲ್ಪಡುವ ಯಾವುದೇ ಕ್ರಮವು ಈ ಅಧಿನಿಯಮದ ಪ್ರಕಾರ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು;

(ಬ) ಪ್ರಸ್ತುತ ಅಧ್ಯಾದೇಶದ ಕಾರ್ಯಾಚರಣೆಯು ಮುಕ್ತಾಯಗೊಂಡ ನಂತರ ಮತ್ತು ಈ ಅಧಿನಿಯಮವನ್ನು ಗಜೆಟಿನಲ್ಲಿ ಪ್ರಕಟಿಸುವ ದಿನಾಂಕಕ್ಕಿಂತ ಮೊದಲು ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವು, ಅದು ಪ್ರಸ್ತುತ ಅಧ್ಯಾದೇಶದ ಕಾರ್ಯಾಚರಣೆಯು ಮುಕ್ತಾಯವಾಗದಿರುತ್ತಿದ್ದಲ್ಲಿ ಪ್ರಸ್ತುತ ಅಧ್ಯಾದೇಶದ ಪ್ರಕಾರ ಮಾಡಿರುವುದೋ ಅಥವಾ ಕೈಗೊಂಡಿರುವುದೋ ಎಂಬಂತೆ, ಈ ಅಧಿನಿಯಮದ ಪ್ರಕಾರ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು.

(2) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, 2022 ಆಗಸ್ಟ್ 8ನೇ ದಿನಾಂಕದಿಂದ ಈ ಅಧಿನಿಯಮವನ್ನು ಗಜೆಟಿನಲ್ಲಿ ಪ್ರಕಟಿಸುವ ದಿನಾಂಕದವರೆಗಿನ ಕಾಲಾವಧಿಯಲ್ಲಿ ಈ ಅಧಿನಿಯಮದ ಅಡಿಯಲ್ಲಿನ ಒಂದು ಅಪರಾಧವನ್ನು ಮಾಡಿರುವುದಾಗಿ ಆರೋಪಿಸಲ್ಪಡುವ ಯಾವುದೇ ವ್ಯಕ್ತಿಯನ್ನು ಅಪರಾಧ ನಿರ್ಣಯಕ್ಕೆ ಒಳಪಡಿಸತಕ್ಕದ್ದಲ್ಲ.

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಎ) ಇಲಾಖೆ

ಅಧಿಸೂಚನೆ

ನಂಬ್ರ 64/ಲೆಗ್. ಎ1/2024/ಕಾನೂನು. ತಿರುವನಂತಪುರಂ, 2024 ಜುಲೈ 30, 1199 ಕರ್ಕಾಟಕ 15/ 1946 ಶ್ರಾವಣ 8.

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2024 ಜುಲೈ 27ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಕೆ. ಜಿ. ಸನಲ್ ಕುಮಾರ್,
ಕಾನೂನು ಕಾರ್ಯದರ್ಶಿ.

2024ರ 21ನೇ ಅಧಿನಿಯಮ

2024ರ ಕೇರಳ ಧನವಿನಿಯೋಗ (4ನೇ ನಂಬ್ರ) ಅಧಿನಿಯಮ

2017 ಮಾರ್ಚ್ 31ನೇ ದಿನಾಂಕದಂದು ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಕೆಲವು ಸೇವೆಗಳಿಗಾಗಿ ಆ ವರ್ಷದಲ್ಲಿ ಅನುಮತಿಸಿದ ಮೊತ್ತಗಳನ್ನು ಮೀರಿ ಖರ್ಚುಮಾಡಿದ ಮೊತ್ತಗಳನ್ನು ಭರಿಸುವುದಕ್ಕಾಗಿ ಕೇರಳ ರಾಜ್ಯ ಸಂಚಿತ ನಿಧಿಯಿಂದ ಮೊತ್ತಗಳನ್ನು ವಿನಿಯೋಗಿಸುವುದಕ್ಕೆ ಅಧಿಕೃತಗೊಳಿಸಲು ಉಪಬಂಧಿಸುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ.—2017 ಮಾರ್ಚ್ 31ನೇ ದಿನಾಂಕದಂದು ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಕೆಲವು ಸೇವೆಗಳಿಗಾಗಿ ಆ ವರ್ಷದಲ್ಲಿ ಅನುಮತಿಸಿದ ಮೊತ್ತಗಳನ್ನು ಮೀರಿ ಖರ್ಚುಮಾಡಿದ ಮೊತ್ತಗಳನ್ನು ಭರಿಸುವುದಕ್ಕಾಗಿ ಕೇರಳ ರಾಜ್ಯ ಸಂಚಿತ ನಿಧಿಯಿಂದ ಮೊತ್ತಗಳನ್ನು ವಿನಿಯೋಗಿಸುವುದಕ್ಕೆ ಅಧಿಕೃತಗೊಳಿಸಲು ಉಪಬಂಧಿಸುವುದು ಅಗತ್ಯವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗಿದೆ:—

1. ಸಂಕ್ಷಿಪ್ತ ನಾಮ.—ಈ ಅಧಿನಿಯಮವನ್ನು 2024ರ ಕೇರಳ ಧನವಿನಿಯೋಗ (4ನೇ ನಂಬ್ರ) ಅಧಿನಿಯಮ ಎಂದು ಕರೆಯಬಹುದು.

2. 2017 ಮಾರ್ಚ್ 31ನೇ ದಿನಾಂಕದಂದು ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಕೆಲವು ಅಧಿಕ ಖರ್ಚುಗಳನ್ನು ಭರಿಸುವುದಕ್ಕಾಗಿ ಕೇರಳ ರಾಜ್ಯ ಸಂಚಿತ ನಿಧಿಯಿಂದ 95,63,28,730 ರೂಪಾಯಿಗಳ ನೀಡುವಿಕೆ.—ಅನುಸೂಚಿಯ (2)ನೇ ಕಾಲಂನಲ್ಲಿ ಹೇಳಿರುವ ಸೇವೆಗಳಿಗೆ ಸಂಬಂಧಿಸಿ 2017 ಮಾರ್ಚ್ 31ನೇ ದಿನಾಂಕದಂದು ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಆ ಸೇವೆಗಳಿಗೆ ಆ ವರ್ಷಕ್ಕಾಗಿ ಅನುಮತಿಸಿದ ಮೊತ್ತಗಳನ್ನು ಮೀರಿ ಖರ್ಚು ಮಾಡಿದ ಮೊತ್ತಗಳನ್ನು ಭರಿಸುವುದಕ್ಕಾಗಿ ಅನುಸೂಚಿಯ (3)ನೇ ಕಾಲಂನಲ್ಲಿ ಹೇಳಿರುವ ಒಟ್ಟು ತೊಂಭತ್ತೈದು ಕೋಟಿ ಅರವತ್ತಮೂರು ಲಕ್ಷದ ಇಪ್ಪತ್ತೆಂಟು ಸಾವಿರದ ಏಳುನೂರ ಮೂವತ್ತು ರೂಪಾಯಿಗಳಷ್ಟಾಗುವ ಮೊತ್ತಗಳನ್ನು ಕೇರಳ ರಾಜ್ಯ ಸಂಚಿತ ನಿಧಿಯಿಂದ ನೀಡುವುದಕ್ಕೂ ವಿನಿಯೋಗಿಸುವುದಕ್ಕೂ ಅಧಿಕೃತಗೊಳಿಸಿರುವುದಾಗಿ ಭಾವಿಸತಕ್ಕದ್ದು.

3. ಧನವಿನಿಯೋಗ.—ಈ ಅಧಿನಿಯಮದ ಪ್ರಕಾರ ಕೇರಳ ರಾಜ್ಯ ಸಂಚಿತ ನಿಧಿಯಿಂದ ನೀಡುವುದಕ್ಕೆ ಹಾಗೂ ವಿನಿಯೋಗಿಸುವುದಕ್ಕೆ ಅಧಿಕೃತಗೊಳಿಸಿರುವುದಾಗಿ ಭಾವಿಸಲ್ಪಡುವ ಮೊತ್ತಗಳನ್ನು 2017 ಮಾರ್ಚ್ 31ನೇ ದಿನಾಂಕದಂದು ಕೊನೆಗೊಂಡ ಆರ್ಥಿಕ ವರ್ಷಕ್ಕೆ ಸಂಬಂಧಿಸಿ ಅನುಸೂಚಿಯಲ್ಲಿ ಹೇಳಿರುವ ಸೇವೆಗಳಿಗೆ ಹಾಗೂ ಉದ್ದೇಶಗಳಿಗಾಗಿ ವಿನಿಯೋಗಿಸಿರುವುದಾಗಿ ಭಾವಿಸತಕ್ಕದ್ದು.

G.19/2025(1)/GPC.

This is a digitally signed Gazette.
Authenticity may be verified through https://compose.kerala.gov.in/

2

ಅನುಸೂಚಿ

(2 ಮತ್ತು 3ನೇ ವಿಭಾಗಗಳನ್ನು ನೋಡಿರಿ)

(1)		(2)		(3)		
ಕ್ರಮ ನಂಬ್ರ	ಧನ ಬೇಡಿಕೆ ನಂಬ್ರ	ಸೇವೆಗಳು ಮತ್ತು ಉದ್ದೇಶಗಳು		ಮೀರಿದ್ದು		ಒಟ್ಟು (₹)
				ವಿಧಾನ ಸಭೆ ಮತ ನೀಡಿದ್ದು (₹)	ಸಂಚಿತ ನಿಧಿಯ ಮೇಲೆ ಹೊರಿಸಿದ್ದು (₹)	
1.	X	**ಖಜಾನೆಗಳು ಹಾಗೂ ಲೆಕ್ಕಪತ್ರಗಳು**	**ಕಂದಾಯ**	**10,80,38,497**	..	**10,80,38,497**
2.	XI	*ಜಿಲ್ಲಾಡಳಿತ ಹಾಗೂ ವಿವಿಧೋದ್ದೇಶಗಳು*	*ಕಂದಾಯ*	*1,80,62,932*	..	*1,80,62,932*
3.	XV	*ಸಾರ್ವಜನಿಕ ಕಾಮಗಾರಿ*	*ಬಂಡವಾಳ*	*67,46,17,972*	..	*67,46,17,972*
4.	XIX	*ಕುಟುಂಬ ಕಲ್ಯಾಣ*	*ಕಂದಾಯ*	*13,93,07,240*	..	*13,93,07,240*
5.	XXX	*ಆಹಾರ*	*ಬಂಡವಾಳ*	*1,63,02,089*	..	*1,63,02,089*
			ಒಟ್ಟು	***95,63,28,730***	..	***95,63,28,730***

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಎ) ಇಲಾಖೆ

ಅಧಿಸೂಚನೆ

ನಂಬ್ರ 64/ಲೆಗ್. ಎ1/2024/ಕಾನೂನು. ತಿರುವನಂತಪುರಂ, 2024 ಜುಲೈ 30, 1199 ಕರ್ಕಾಟಕ 15/ 1946 ಶ್ರಾವಣ 8.

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2024 ಜುಲೈ 27ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಕೆ. ಜಿ. ಸನಲ್ ಕುಮಾರ್,
ಕಾನೂನು ಕಾರ್ಯದರ್ಶಿ.

2024ರ 22ನೇ ಅಧಿನಿಯಮ

2024ರ ಕೇರಳ ಧನವಿನಿಯೋಗ (5ನೇ ನಂಬ್ರ) ಅಧಿನಿಯಮ

2018 ಮಾರ್ಚ್ 31ನೇ ದಿನಾಂಕದಂದು ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಕೆಲವು ಸೇವೆಗಳಿಗಾಗಿ ಆ ವರ್ಷದಲ್ಲಿ ಅನುಮತಿಸಿದ ಮೊತ್ತಗಳನ್ನು ಮೀರಿ ಖರ್ಚುಮಾಡಿದ ಮೊತ್ತಗಳನ್ನು ಭರಿಸುವುದಕ್ಕಾಗಿ ಕೇರಳ ರಾಜ್ಯ ಸಂಚಿತ ನಿಧಿಯಿಂದ ಮೊತ್ತಗಳನ್ನು ವಿನಿಯೋಗಿಸುವುದಕ್ಕೆ ಅಧಿಕೃತಗೊಳಿಸಲು ಉಪಬಂಧಿಸುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ.—2018 ಮಾರ್ಚ್ 31ನೇ ದಿನಾಂಕದಂದು ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಕೆಲವು ಸೇವೆಗಳಿಗಾಗಿ ಆ ವರ್ಷದಲ್ಲಿ ಅನುಮತಿಸಿದ ಮೊತ್ತಗಳನ್ನು ಮೀರಿ ಖರ್ಚುಮಾಡಿದ ಮೊತ್ತಗಳನ್ನು ಭರಿಸುವುದಕ್ಕಾಗಿ ಕೇರಳ ರಾಜ್ಯ ಸಂಚಿತ ನಿಧಿಯಿಂದ ಮೊತ್ತಗಳನ್ನು ವಿನಿಯೋಗಿಸುವುದಕ್ಕೆ ಅಧಿಕೃತಗೊಳಿಸಲು ಉಪಬಂಧಿಸುವುದು ಅಗತ್ಯವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗಿದೆ:—

1. ಸಂಕ್ಷಿಪ್ತ ನಾಮ.—ಈ ಅಧಿನಿಯಮವನ್ನು 2024ರ ಕೇರಳ ಧನವಿನಿಯೋಗ (5ನೇ ನಂಬ್ರ) ಅಧಿನಿಯಮ ಎಂದು ಕರೆಯಬಹುದು.

2. 2018 ಮಾರ್ಚ್ 31ನೇ ದಿನಾಂಕದಂದು ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಕೆಲವು ಅಧಿಕ ಖರ್ಚುಗಳನ್ನು ಭರಿಸುವುದಕ್ಕಾಗಿ ಕೇರಳ ರಾಜ್ಯ ಸಂಚಿತ ನಿಧಿಯಿಂದ 3492,05,95,838 ರೂಪಾಯಿಗಳ ನೀಡುವಿಕೆ.—ಅನುಸೂಚಿಯ (2)ನೇ ಕಾಲಂನಲ್ಲಿ ಹೇಳಿರುವ ಸೇವೆಗಳಿಗೆ ಸಂಬಂಧಿಸಿ 2018 ಮಾರ್ಚ್ 31ನೇ ದಿನಾಂಕದಂದು ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಆ ಸೇವೆಗಳಿಗೆ ಆ ವರ್ಷಕ್ಕಾಗಿ ಅನುಮತಿಸಿದ ಮೊತ್ತಗಳನ್ನು ಮೀರಿ ಖರ್ಚು ಮಾಡಿದ ಮೊತ್ತಗಳನ್ನು ಭರಿಸುವುದಕ್ಕಾಗಿ ಅನುಸೂಚಿಯ (3)ನೇ ಕಾಲಂನಲ್ಲಿ ಹೇಳಿರುವ ಒಟ್ಟು ಮೂರು ಸಾವಿರದ ನಾನೂರ ತೊಂಭತ್ತೆರಡು ಕೋಟಿ ಐದು ಲಕ್ಷದ ತೊಂಭತ್ತೈದು ಸಾವಿರದ ಎಂಟುನೂರ ಮೂವತ್ತೆಂಟು ರೂಪಾಯಿಗಳಷ್ಟಾಗುವ ಮೊತ್ತಗಳನ್ನು ಕೇರಳ ರಾಜ್ಯ ಸಂಚಿತ ನಿಧಿಯಿಂದ ನೀಡುವುದಕ್ಕೂ ವಿನಿಯೋಗಿಸುವುದಕ್ಕೂ ಅಧಿಕೃತಗೊಳಿಸಿರುವುದಾಗಿ ಭಾವಿಸತಕ್ಕದ್ದು.

3. ಧನವಿನಿಯೋಗ.—ಈ ಅಧಿನಿಯಮದ ಪ್ರಕಾರ ಕೇರಳ ರಾಜ್ಯ ಸಂಚಿತ ನಿಧಿಯಿಂದ ನೀಡುವುದಕ್ಕೆ ಹಾಗೂ ವಿನಿಯೋಗಿಸುವುದಕ್ಕೆ ಅಧಿಕೃತಗೊಳಿಸಿರುವುದಾಗಿ ಭಾವಿಸಲ್ಪಡುವ ಮೊತ್ತಗಳನ್ನು 2018 ಮಾರ್ಚ್ 31ನೇ ದಿನಾಂಕದಂದು ಕೊನೆಗೊಂಡ ಆರ್ಥಿಕ ವರ್ಷಕ್ಕೆ ಸಂಬಂಧಿಸಿ ಅನುಸೂಚಿಯಲ್ಲಿ ಹೇಳಿರುವ ಸೇವೆಗಳಿಗೆ ಹಾಗೂ ಉದ್ದೇಶಗಳಿಗಾಗಿ ವಿನಿಯೋಗಿಸಿರುವುದಾಗಿ ಭಾವಿಸತಕ್ಕದ್ದು.

G.19/2025(2)/GPC.

This is a digitally signed Gazette.
Authenticity may be verified through https://compose.kerala.gov.in/

2

ಅನುಸೂಚಿ

(2 ಮತ್ತು 3ನೇ ವಿಭಾಗಗಳನ್ನು ನೋಡಿರಿ)

(1)		(2)		(3)		
ಕ್ರಮ ನಂಬ್ರ	ಧನ ಬೇಡಿಕೆ ನಂಬ್ರ	ಸೇವೆಗಳು ಮತ್ತು ಉದ್ದೇಶಗಳು		ಮೀರಿದ್ದು		ಒಟ್ಟು (₹)
				ವಿಧಾನ ಸಭೆ ಮತ ನೀಡಿದ್ದು (₹)	ಸಂಚಿತ ನಿಧಿಯ ಮೇಲೆ ಹೊರಿಸಿದ್ದು (₹)	
1.	I	**ರಾಜ್ಯ ವಿಧಾನಸಭೆ**	**ಕಂದಾಯ**	**69,28,210**	**..**	**69,28,210**
2.		*ಸಾಲ ಬಾಧ್ಯತೆಗಳು*	*ಕಂದಾಯ*	*..*	*1097,60,71,248*	*1097,60,71,248*
3.	XV	*ಸಾರ್ವಜನಿಕ ಕಾಮಗಾರಿ*	*ಕಂದಾಯ*	*65,46,74,799*	*..*	*65,46,74,799*
4.	XVI	*ಪಿಂಚಣಿ ಹಾಗೂ ವಿವಿಧೋದ್ದೇಶಗಳು*	*ಕಂದಾಯ*	*2273,73,14,119*	*..*	*2273,73,14,119*
5.	XIX	*ಕುಟುಂಬ ಕಲ್ಯಾಣ*	*ಕಂದಾಯ*	*54,53,82,062*	*2,25,400*	*54,56,07,462*
			ಒಟ್ಟು	***2394,42,99,190***	***1097,62,96,648***	***3492,05,95,838***

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಎ) ಇಲಾಖೆ

ಅಧಿಸೂಚನೆ

ನಂಬ್ರ 64/ಲೆಗ್. ಎ1/2024/ಕಾನೂನು. ತಿರುವನಂತಪುರಂ, 2024 ಜುಲೈ 30, 1199 ಕರ್ಕಾಟಕ 15/ 1946 ಶ್ರಾವಣ 8.

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2024 ಜುಲೈ 27ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಕೆ. ಜಿ. ಸನಲ್ ಕುಮಾರ್,
ಕಾನೂನು ಕಾರ್ಯದರ್ಶಿ.

2024ರ 23ನೇ ಅಧಿನಿಯಮ

2024ರ ಕೇರಳ ಧನವಿನಿಯೋಗ (6ನೇ ನಂಬ್ರ) ಅಧಿನಿಯಮ

2019 ಮಾರ್ಚ್ 31ನೇ ದಿನಾಂಕದಂದು ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಕೆಲವು ಸೇವೆಗಳಿಗಾಗಿ ಆ ವರ್ಷದಲ್ಲಿ ಅನುಮತಿಸಿದ ಮೊತ್ತಗಳನ್ನು ಮೀರಿ ಖರ್ಚುಮಾಡಿದ ಮೊತ್ತಗಳನ್ನು ಭರಿಸುವುದಕ್ಕಾಗಿ ಕೇರಳ ರಾಜ್ಯ ಸಂಚಿತ ನಿಧಿಯಿಂದ ಮೊತ್ತಗಳನ್ನು ವಿನಿಯೋಗಿಸುವುದಕ್ಕೆ ಅಧಿಕೃತಗೊಳಿಸಲು ಉಪಬಂಧಿಸುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ.—2019 ಮಾರ್ಚ್ 31ನೇ ದಿನಾಂಕದಂದು ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಕೆಲವು ಸೇವೆಗಳಿಗಾಗಿ ಆ ವರ್ಷದಲ್ಲಿ ಅನುಮತಿಸಿದ ಮೊತ್ತಗಳನ್ನು ಮೀರಿ ಖರ್ಚುಮಾಡಿದ ಮೊತ್ತಗಳನ್ನು ಭರಿಸುವುದಕ್ಕಾಗಿ ಕೇರಳ ರಾಜ್ಯ ಸಂಚಿತ ನಿಧಿಯಿಂದ ಮೊತ್ತಗಳನ್ನು ವಿನಿಯೋಗಿಸುವುದಕ್ಕೆ ಅಧಿಕೃತಗೊಳಿಸಲು ಉಪಬಂಧಿಸುವುದು ಅಗತ್ಯವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗಿದೆ:—

1. ಸಂಕ್ಷಿಪ್ತ ನಾಮ.—ಈ ಅಧಿನಿಯಮವನ್ನು 2024ರ ಕೇರಳ ಧನವಿನಿಯೋಗ (6ನೇ ನಂಬ್ರ) ಅಧಿನಿಯಮ ಎಂದು ಕರೆಯಬಹುದು.

2. 2019 ಮಾರ್ಚ್ 31ನೇ ದಿನಾಂಕದಂದು ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಕೆಲವು ಅಧಿಕ ಖರ್ಚುಗಳನ್ನು ಭರಿಸುವುದಕ್ಕಾಗಿ ಕೇರಳ ರಾಜ್ಯ ಸಂಚಿತ ನಿಧಿಯಿಂದ 4422,18,58,468 ರೂಪಾಯಿಗಳ ನೀಡುವಿಕೆ.—ಅನುಸೂಚಿಯ (2)ನೇ ಕಾಲಂನಲ್ಲಿ ಹೇಳಿರುವ ಸೇವೆಗಳಿಗೆ ಸಂಬಂಧಿಸಿ 2019 ಮಾರ್ಚ್ 31ನೇ ದಿನಾಂಕದಂದು ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಆ ಸೇವೆಗಳಿಗೆ ಆ ವರ್ಷಕ್ಕಾಗಿ ಅನುಮತಿಸಿದ ಮೊತ್ತಗಳನ್ನು ಮೀರಿ ಖರ್ಚು ಮಾಡಿದ ಮೊತ್ತಗಳನ್ನು ಭರಿಸುವುದಕ್ಕಾಗಿ ಅನುಸೂಚಿಯ (3)ನೇ ಕಾಲಂನಲ್ಲಿ ಹೇಳಿರುವ ಒಟ್ಟು ನಾಲ್ಕು ಸಾವಿರದ ನಾನೂರ ಇಪ್ಪತ್ತೆರಡು ಕೋಟಿ ಹದಿನೆಂಟು ಲಕ್ಷದ ಐವತ್ತೆಂಟು ಸಾವಿರದ ನಾನೂರ ಅರವತ್ತೆಂಟು ರೂಪಾಯಿಗಳಷ್ಟಾಗುವ ಮೊತ್ತಗಳನ್ನು ಕೇರಳ ರಾಜ್ಯ ಸಂಚಿತ ನಿಧಿಯಿಂದ ನೀಡುವುದಕ್ಕೂ ವಿನಿಯೋಗಿಸುವುದಕ್ಕೂ ಅಧಿಕೃತಗೊಳಿಸಿರುವುದಾಗಿ ಭಾವಿಸತಕ್ಕದ್ದು.

3. ಧನವಿನಿಯೋಗ.—ಈ ಅಧಿನಿಯಮದ ಪ್ರಕಾರ ಕೇರಳ ರಾಜ್ಯ ಸಂಚಿತ ನಿಧಿಯಿಂದ ನೀಡುವುದಕ್ಕೆ ಹಾಗೂ ವಿನಿಯೋಗಿಸುವುದಕ್ಕೆ ಅಧಿಕೃತಗೊಳಿಸಿರುವುದಾಗಿ ಭಾವಿಸಲ್ಪಡುವ ಮೊತ್ತಗಳನ್ನು 2019 ಮಾರ್ಚ್ 31ನೇ ದಿನಾಂಕದಂದು ಕೊನೆಗೊಂಡ ಆರ್ಥಿಕ ವರ್ಷಕ್ಕೆ ಸಂಬಂಧಿಸಿ ಅನುಸೂಚಿಯಲ್ಲಿ ಹೇಳಿರುವ ಸೇವೆಗಳಿಗೆ ಹಾಗೂ ಉದ್ದೇಶಗಳಿಗಾಗಿ ವಿನಿಯೋಗಿಸಿರುವುದಾಗಿ ಭಾವಿಸತಕ್ಕದ್ದು.

G.19/2025(3)/GPC.

This is a digitally signed Gazette.
Authenticity may be verified through https://compose.kerala.gov.in/

2

ಅನುಸೂಚಿ

(2 ಮತ್ತು 3ನೇ ವಿಭಾಗಗಳನ್ನು ನೋಡಿರಿ)

(1)		(2)		(3)		
ಕ್ರಮ ನಂಬ್ರ	ಧನ ಬೇಡಿಕೆ ನಂಬ್ರ	ಸೇವೆಗಳು ಮತ್ತು ಉದ್ದೇಶಗಳು		ಮೀರಿದ್ದು		ಒಟ್ಟು (₹)
				ವಿಧಾನ ಸಭೆ ಮತ ನೀಡಿದ್ದು (₹)	ಸಂಚಿತ ನಿಧಿಯ ಮೇಲೆ ಹೊರಿಸಿದ್ದು (₹)	
1.	I	**ರಾಜ್ಯ ವಿಧಾನಸಭೆ**	**ಕಂದಾಯ**	**64,47,966**	**..**	**64,47,966**
2.		*ಸಾಲ ಬಾಧ್ಯತೆಗಳು*	*ಕಂದಾಯ*	*..*	*1057,69,39,594*	*1057,69,39,594*
3.		*ಸಾರ್ವಜನಿಕ ಸಾಲ ಮರುಪಾವತಿ*	*ಬಂಡವಾಳ*	*..*	*3363,84,70,908*	*3363,84,70,908*
			ಒಟ್ಟು	***64,47,966***	***4421,54,10,502***	***4422,18,58,468***

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಎ) ಇಲಾಖೆ

ಅಧಿಸೂಚನೆ

ನಂಬ್ರ 64/ಲೆಗ್. ಎ1/2024/ಕಾನೂನು. ತಿರುವನಂತಪುರಂ, 2024 ಜುಲೈ 30, 1199 ಕರ್ಕಾಟಕ 15/ 1946 ಶ್ರಾವಣ 8.

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2024 ಜುಲೈ 27ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಕೆ. ಜಿ. ಸನಲ್ ಕುಮಾರ್,
ಕಾನೂನು ಕಾರ್ಯದರ್ಶಿ.

2024ರ 24ನೇ ಅಧಿನಿಯಮ

2024ರ ಕೇರಳ ಧನವಿನಿಯೋಗ (7ನೇ ನಂಬ್ರ) ಅಧಿನಿಯಮ

2020 ಮಾರ್ಚ್ 31ನೇ ದಿನಾಂಕದಂದು ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಕೆಲವು ಸೇವೆಗಳಿಗಾಗಿ ಆ ವರ್ಷದಲ್ಲಿ ಅನುಮತಿಸಿದ ಮೊತ್ತಗಳನ್ನು ಮೀರಿ ಖರ್ಚುಮಾಡಿದ ಮೊತ್ತಗಳನ್ನು ಭರಿಸುವುದಕ್ಕಾಗಿ ಕೇರಳ ರಾಜ್ಯ ಸಂಚಿತ ನಿಧಿಯಿಂದ ಮೊತ್ತಗಳನ್ನು ವಿನಿಯೋಗಿಸುವುದಕ್ಕೆ ಅಧಿಕೃತಗೊಳಿಸಲು ಉಪಬಂಧಿಸುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ.—2020 ಮಾರ್ಚ್ 31ನೇ ದಿನಾಂಕದಂದು ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಕೆಲವು ಸೇವೆಗಳಿಗಾಗಿ ಆ ವರ್ಷದಲ್ಲಿ ಅನುಮತಿಸಿದ ಮೊತ್ತಗಳನ್ನು ಮೀರಿ ಖರ್ಚುಮಾಡಿದ ಮೊತ್ತಗಳನ್ನು ಭರಿಸುವುದಕ್ಕಾಗಿ ಕೇರಳ ರಾಜ್ಯ ಸಂಚಿತ ನಿಧಿಯಿಂದ ಮೊತ್ತಗಳನ್ನು ವಿನಿಯೋಗಿಸುವುದಕ್ಕೆ ಅಧಿಕೃತಗೊಳಿಸಲು ಉಪಬಂಧಿಸುವುದು ಅಗತ್ಯವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗಿದೆ:—

1. ಸಂಕ್ಷಿಪ್ತ ನಾಮ.—ಈ ಅಧಿನಿಯಮವನ್ನು 2024ರ ಕೇರಳ ಧನವಿನಿಯೋಗ (7ನೇ ನಂಬ್ರ) ಅಧಿನಿಯಮ ಎಂದು ಕರೆಯಬಹುದು.

2. 2020 ಮಾರ್ಚ್ 31ನೇ ದಿನಾಂಕದಂದು ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಕೆಲವು ಅಧಿಕ ಖರ್ಚುಗಳನ್ನು ಭರಿಸುವುದಕ್ಕಾಗಿ ಕೇರಳ ರಾಜ್ಯ ಸಂಚಿತ ನಿಧಿಯಿಂದ 336,63,05,807 ರೂಪಾಯಿಗಳ ನೀಡುವಿಕೆ.—ಅನುಸೂಚಿಯ (2)ನೇ ಕಾಲಂನಲ್ಲಿ ಹೇಳಿರುವ ಸೇವೆಗಳಿಗೆ ಸಂಬಂಧಿಸಿ 2020 ಮಾರ್ಚ್ 31ನೇ ದಿನಾಂಕದಂದು ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಆ ಸೇವೆಗಳಿಗೆ ಆ ವರ್ಷಕ್ಕಾಗಿ ಅನುಮತಿಸಿದ ಮೊತ್ತಗಳನ್ನು ಮೀರಿ ಖರ್ಚು ಮಾಡಿದ ಮೊತ್ತಗಳನ್ನು ಭರಿಸುವುದಕ್ಕಾಗಿ ಅನುಸೂಚಿಯ (3)ನೇ ಕಾಲಂನಲ್ಲಿ ಹೇಳಿರುವ ಒಟ್ಟು ಮುನ್ನೂರ ಮೂವತ್ತಾರು ಕೋಟಿ ಅರವತ್ತ ಮೂರುಲಕ್ಷದ ಐದು ಸಾವಿರದ ಎಂಟುನೂರ ಏಳು ರೂಪಾಯಿಗಳಷ್ಟಾಗುವ ಮೊತ್ತಗಳನ್ನು ಕೇರಳ ರಾಜ್ಯ ಸಂಚಿತ ನಿಧಿಯಿಂದ ನೀಡುವುದಕ್ಕೂ ವಿನಿಯೋಗಿಸುವುದಕ್ಕೂ ಅಧಿಕೃತಗೊಳಿಸಿರುವುದಾಗಿ ಭಾವಿಸತಕ್ಕದ್ದು.

3. ಧನವಿನಿಯೋಗ.—ಈ ಅಧಿನಿಯಮದ ಪ್ರಕಾರ ಕೇರಳ ರಾಜ್ಯ ಸಂಚಿತ ನಿಧಿಯಿಂದ ನೀಡುವುದಕ್ಕೆ ಹಾಗೂ ವಿನಿಯೋಗಿಸುವುದಕ್ಕೆ ಅಧಿಕೃತಗೊಳಿಸಿರುವುದಾಗಿ ಭಾವಿಸಲ್ಪಡುವ ಮೊತ್ತಗಳನ್ನು 2020 ಮಾರ್ಚ್ 31ನೇ ದಿನಾಂಕದಂದು ಕೊನೆಗೊಂಡ ಆರ್ಥಿಕ ವರ್ಷಕ್ಕೆ ಸಂಬಂಧಿಸಿ ಅನುಸೂಚಿಯಲ್ಲಿ ಹೇಳಿರುವ ಸೇವೆಗಳಿಗೆ ಹಾಗೂ ಉದ್ದೇಶಗಳಿಗಾಗಿ ವಿನಿಯೋಗಿಸಿರುವುದಾಗಿ ಭಾವಿಸತಕ್ಕದ್ದು.

G.19/2025(4)/GPC.

This is a digitally signed Gazette.
Authenticity may be verified through https://compose.kerala.gov.in/

2

ಅನುಸೂಚಿ

(2 ಮತ್ತು 3ನೇ ವಿಭಾಗಗಳನ್ನು ನೋಡಿರಿ)

(1)		(2)	(3)		
ಕ್ರಮ ನಂಬ್ರ	ಧನ ಬೇಡಿಕೆ ನಂಬ್ರ	ಸೇವೆಗಳು ಮತ್ತು ಉದ್ದೇಶಗಳು	ಮೀರಿದ್ದು		ಒಟ್ಟು (₹)
			ವಿಧಾನ ಸಭೆ ಮತ ನೀಡಿದ್ದು (₹)	ಸಂಚಿತ ನಿಧಿಯ ಮೇಲೆ ಹೊರಿಸಿದ್ದು (₹)	
1.		ಸಾರ್ವಜನಿಕ ಸಾಲ ಮರುಪಾವತಿ **ಬಂಡವಾಳ**	**..**	**336,63,05,807**	**336,63,05,807**
		ಒಟ್ಟು		***336,63,05,807***	***336,63,05,807***

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಎಚ್) ಇಲಾಖೆ

ಅಧಿಸೂಚನೆ

ನಂಬ್ರ 142/ಲೆಗ್. ಎಚ್2/2022/ಕಾನೂನು. ತಿರುವನಂತಪುರಂ, 2024 ಜೂನ್ 7, 1199 ವೃಷಭ 24/ 1946 ಜ್ಯೇಷ್ಠ 17.

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2024 ಏಪ್ರಿಲ್ 26ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಕೆ. ಜಿ. ಸನಲ್‌ಕುಮಾರ್,
ಕಾನೂನು ಕಾರ್ಯದರ್ಶಿ.

2024ರ 9ನೇ ಅಧಿನಿಯಮ

2023ರ ಕೇರಳ ಸಹಕಾರಿ ಸಂಘಗಳ (ತಿದ್ದುಪಡಿ) ಅಧಿನಿಯಮ

1969ರ ಕೇರಳ ಸಹಕಾರಿ ಸಂಘಗಳ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿಮಾಡುವುದಕ್ಕಿರುವ ಒಂದು ಅಧಿನಿಯಮ

ಪೀಠಿಕೆ.—1969ರ ಕೇರಳ ಸಹಕಾರಿ ಸಂಘಗಳ ಅಧಿನಿಯಮ (1969ರ 21ನೇ ಅಧಿನಿಯಮ)ವನ್ನು ಇನ್ನು ಮುಂದಿನ ಉದ್ದೇಶಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ಎಪ್ಪತ್ತನಾಲ್ಕನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2023ರ ಕೇರಳ ಸಹಕಾರಿ ಸಂಘಗಳ (ತಿದ್ದುಪಡಿ) ಅಧಿನಿಯಮ ಎಂದು ಕರೆಯಬಹುದು.

(2) ಇದು ಕೂಡಲೇ ಜಾರಿಗೆ ಬರುವುದಾಗಿದೆ.

2. 2ನೇ ವಿಭಾಗದ ತಿದ್ದುಪಡಿ.—1969ರ ಕೇರಳ ಸಹಕಾರಿ ಸಂಘಗಳ ಅಧಿನಿಯಮ (1969ರ 21ನೇ ಅಧಿನಿಯಮ) (ಇನ್ನು ಮುಂದೆ ಪ್ರಧಾನ ಅಧಿನಿಯಮ ಎಂದು ಉಲ್ಲೇಖಿಸಲ್ಪಡುವುದು)ದ 2ನೇ ವಿಭಾಗದಲ್ಲಿ,—

(i) (ಎಬಿ) ಖಂಡದಲ್ಲಿ, ಈ ಕೆಳಗಿನ ವಾಕ್ಯವನ್ನು ಕೊನೆಯಲ್ಲಿ ಸೇರಿಸತಕ್ಕದ್ದು, ಅದೇನೆಂದರೆ:—

"ಅಕೌಂಟುಗಳನ್ನು ಕಂಪ್ಯೂಟರೀಕರಿಸಿರುವ ಸಹಕಾರಿ ಸಂಘಗಳ ವಿಷಯದಲ್ಲಿ, ಅಕೌಂಟ್‌ಗಳ ಸಾಫ್ಟ್‌ವೇರ್ ಸೊಲ್ಯೂಶನ್ಸ್ ಮುಖೇನದ ಪರಿಶೀಲನೆ ಮತ್ತು ಇನ್‌ಫರ್ಮೇಶನ್ ಸಿಸ್ಟಂನ ಲೆಕ್ಕ ಪರಿಶೋಧನೆ ಮತ್ತು ಡೇಟಾ ಮೈಗ್ರೇಶನ್ ಇದರಲ್ಲಿ ಒಳಪಡುವುದು.".

This is a digitally signed Gazette.
Authenticity may be verified through https://compose.kerala.gov.in/

(ii) *(ಎಸಿ) ಖಂಡದ ನಂತರ ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—*

"*(ಎಡಿ)* "ಆಡಳಿತಾತ್ಮಕ ಲೆಕ್ಕ ಪರಿಶೋಧನೆ" ಎಂದರೆ, *ಸಂಘದ ರಚನೆ, ನಿರ್ವಹಣೆ ಮತ್ತು ಸ್ಥಾಪನೆ, ಪುಸ್ತಕಗಳ ಮತ್ತು ಆಕೌಂಟ್‌ಗಳ ಇನ್ನಿತರ ದಾಖಲೆಗಳ ಜೋಪಾನಗೊಳಿಸುವಿಕೆ, ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನೊಳಗೊಂಡ ಸಂಘದ ಎಲ್ಲಾ ವಿಷಯಗಳು ಸಹಕಾರಿ ತತ್ವಗಳಿಗೆ ಅನುಸಾರವಾಗಿ ಸದಸ್ಯರುಗಳ ಆರ್ಥಿಕ ಕಲ್ಯಾಣವನ್ನು ಪ್ರೋತ್ಸಾಹಿಸುವಲ್ಲಿ ಅದರ ಚಟುವಟಿಕೆಗಳು ಎಷ್ಟರಮಟ್ಟಿಗೆ ಉಪಯುಕ್ತವಾಗಿದೆ ಎಂಬುದರ ಸೂಕ್ಷ್ಮ ನಿರ್ಧರಣೆ ಎಂದರ್ಥ ಮತ್ತು ಅದರಲ್ಲಿ ಕಂಪ್ಲಯನ್ಸ್ ಆಡಿಟ್, ಪರ್ಫೋಮನ್ಸ್ ಆಡಿಟ್ ಮತ್ತು ಐಟಿ ಆಡಿಟ್ ಒಳಗೊಳ್ಳುವುದಾಗಿದೆ.*".

(iii) *(ಡಿಎ) ಖಂಡದ ನಂತರ, ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—*

"*(ಡಿಬಿ)* "ಪ್ರಾಥಮಿಕ ಕೃಷಿ ಸಾಲ ಸಂಘಗಳಿಗಿರುವ ಸಾಮಾನ್ಯ ಸಾಫ್ಟ್‌ವೇರ್" ಎಂದರೆ, *ಪ್ರಾಥಮಿಕ ಕೃಷಿ ಸಾಲ ಸಂಘಗಳ ಸಂಪೂರ್ಣ ದಿನನಿತ್ಯದ ಚಟುವಟಿಕೆಗಳನ್ನು ಒಳಗೊಳ್ಳುವ, ಒಂದು ಕೇಂದ್ರೀಕೃತ ಸಂರಚನೆಯ ಮುಖೇನವಿರುವ, ಪರಿಣಾಮಕಾರಿಯಾದ ಒಂದು ಸಾಫ್ಟ್‌ವೇರ್ ಸೊಲ್ಯೂಶನ್ ಎಂದರ್ಥ.*

(ಡಿಸಿ) "ಕನ್ಸೋರ್ಶಿಯಮ್" ಎಂದರೆ, *ಸಾರ್ವಜನಿಕ ಉದ್ದೇಶಕ್ಕಾಗಿ ಆರ್ಥಿಕ ನೆರವನ್ನು ಲಭ್ಯಗೊಳಿಸುವುದಕ್ಕಿರುವ ನಿಧಿಯನ್ನು ಸಂಗ್ರಹಿಸುವುದಕ್ಕಾಗಿ ಒಂದು ನೂತನ ಸಂಸ್ಥೆಯನ್ನು ಸ್ಥಾಪಿಸುವುದು ಎಂಬ ಸಾಮಾನ್ಯ ಗುರಿಯ ತಳಹದಿಯಲ್ಲಿ, ರಾಜ್ಯ ಸರಕಾರದ ಅಂಗೀಕಾರದೊಂದಿಗೆ ರಚಿಸಲಾದ ಸಹಕಾರಿ ಸಂಘಗಳ ಒಂದು ಔಪಚಾರಿಕ ಕೂಟ ಎಂದರ್ಥ.*".

(iv) *(ಐಬಿ) ಖಂಡದ ಬದಲು ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—*

"*(ಐಬಿ)* "ಫೆಡರಲ್ ಸಹಕಾರಿ ಸಂಘ" ಎಂದರೆ, *ಅದರ ಕಾರ್ಯಾಚರಣಾ ಪ್ರದೇಶವಾಗಿ ಒಂದಕ್ಕಿಂತ ಹೆಚ್ಚು ಜಿಲ್ಲೆಗಳಿರುವ ಮತ್ತು ರಾಜ್ಯ ಸರಕಾರ ಅಥವಾ ವ್ಯಕ್ತಿಗಳು ಅಥವಾ ಇತರ ಸಹಕಾರಿ ಸಂಘಗಳು ಅದರ ಸದಸ್ಯರುಗಳಾಗಿರುವ ಒಂದು ಸಹಕಾರಿ ಸಂಘ ಎಂದರ್ಥ. ಆದರೆ, ಸಂಘದಲ್ಲಿನ ವ್ಯಕ್ತಿಗತ ಸದಸ್ಯರುಗಳ ಸಂಖ್ಯೆಯು ಸಂಘದ ಒಟ್ಟು ಸದಸ್ಯರ ಸಂಖ್ಯೆಯ ಇಪ್ಪತ್ತೈದು ಶೇಕಡಾಕ್ಕಿಂತ ಮೀರತಕ್ಕದ್ದಲ್ಲ:*

ಆದರೆ, ವ್ಯಕ್ತಿಗತ ಸದಸ್ಯರುಗಳ ಸಂಖ್ಯೆಗೆ ಸಂಬಂಧಿಸಿದ ಪರತ್ತು 2023ರ ಕೇರಳ ಸಹಕಾರಿ ಸಂಘಗಳ (ತಿದ್ದುಪಡಿ) ಅಧಿನಿಯಮವು ಜಾರಿಗೆ ಬರುವುದಕ್ಕಿಂತ ಮೊದಲು ಅಸ್ತಿತ್ವದಲ್ಲಿದ್ದ ಸಂಘಗಳಿಗೆ ಅನ್ವಯವಾಗುವುದಲ್ಲ.".

(v) *(ಒಎಎ) ಖಂಡದ ಬದಲು ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—*

"*(ಒಎಎ)* "ಪ್ರಾಥಮಿಕ ಕೃಷಿ ಸಾಲ ಸಂಘ" ಎಂದರೆ, *ಕೃಷಿ ಉದ್ದೇಶಗಳಿಗಾಗಿ ಅಥವಾ ಸಂಬಂಧಿತ ಕೃಷಿ ಚಟುವಟಿಕೆಗಳಿಗಾಗಿ ಅದರ ಸದಸ್ಯರಿಗೆ ಆರ್ಥಿಕ ನೆರವು ಒದಗಿಸುವುದು ಎಂಬುದು ಪ್ರಾಥಮಿಕ ಗುರಿ ಅಥವಾ ಪ್ರಮುಖ ವ್ಯವಹಾರವಾಗಿರುವ ಮತ್ತು ಕಾರ್ಯಾಚರಣಾ ಪ್ರದೇಶವು ಒಂದು ಗ್ರಾಮ, ಪಂಚಾಯತ್ ಅಥವಾ ಮುನಿಸಿಪಾಲಿಟಿಗೆ ಸೀಮಿತವಾದ ಒಂದು ಸರ್ವೀಸ್ ಸಹಕಾರಿ ಸಂಘ, ಒಂದು ಸರ್ವೀಸ್ ಸಹಕಾರಿ ಬೇಂಕ್, ಒಂದು ಕೃಷಿಕ ಸರ್ವೀಸ್ ಸಹಕಾರಿ ಬೇಂಕ್ ಅಥವಾ ಒಂದು ಗ್ರಾಮೀಣ ಬೇಂಕ್ ಎಂದರ್ಥ ಮತ್ತು ಅಂತಹ ಸಾಲಗಳ ಮತ್ತು ಮುಂಗಡಗಳ ಬಡ್ಡಿದರ ಮತ್ತು ಕಾರ್ಯಾಚರಣೆಯ ಪ್ರದೇಶವು ರೆಜಿಸ್ಟ್ರಾರ್‌ರವರು ನಿರ್ಧರಿಸಿದ ಪ್ರಕಾರ ಆಗಿರುವುದು:*

ಆದರೆ, ಕಾರ್ಯಾಚರಣಾ ಪ್ರದೇಶಕ್ಕೆ ಸಂಬಂಧಿಸಿದ ನಿರ್ಬಂಧವು 2000 ಜನವರಿ 1ರಂದು ಅಸ್ತಿತ್ವದಲ್ಲಿದ್ದ ಸಂಘಗಳಿಗೆ ಅಥವಾ ಬೇಂಕುಗಳಿಗೆ ಅನ್ವಯವಾಗುವುದಲ್ಲ.".

(vi) *(ಒಬಿ) ಖಂಡದ ಬದಲು ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—*

"*(ಒಬಿ)* "ಪ್ರಾಥಮಿಕ ಸಾಲ ಸಂಘ" ಎಂದರೆ, *ಅದರ ಸದಸ್ಯರಿಗೆ ಸಾಲ ನೀಡುವುದಕ್ಕೆ ಮತ್ತು ಹೂಡಿಕೆಗೆ ಬೇಕಾಗಿ ಅದರ ಸದಸ್ಯರಿಂದ ಠೇವಣಿ ಸ್ವೀಕರಿಸುವುದು ಎಂಬುದು ಅದರ ಪ್ರಾಥಮಿಕ ಗುರಿ ಅಥವಾ ಪ್ರಮುಖ ವ್ಯವಹಾರವಾಗಿರುವ ಮತ್ತು ಅದರ ಉಪನಿಯಮಗಳ ಪ್ರಕಾರ ಇತರ ಸಹಕಾರಿ ಸಂಘಗಳನ್ನು ಅದರ ಸದಸ್ಯರನ್ನಾಗಿ ಅನುಮತಿಸದ ಪ್ರಾಥಮಿಕ ಕೃಷಿ ಸಾಲ ಸಂಘವನ್ನು ಹೊರತುಪಡಿಸಿದ ಸಹಕಾರಿ ಸಂಘ ಎಂದರ್ಥ.*".

(vii) *(ಒಡಿ) ಖಂಡದ ಬದಲು ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—*

"*(ಒಡಿ)* "ಪ್ರಾಥಮಿಕ ಸಹಕಾರಿ ಸಂಘ" ಎಂದರೆ, *ರಾಜ್ಯದ ಒಂದು ಕಂದಾಯ ಜಿಲ್ಲೆಯಲ್ಲಿ ಅಥವಾ ಒಂದಕ್ಕಿಂತ ಹೆಚ್ಚು ಜಿಲ್ಲೆಗಳಲ್ಲಿ ಒಳಪಡುವ, ಯಾವುದೇ ನಿರ್ದಿಷ್ಟಪಡಿಸಿದ ಪ್ರದೇಶದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮತ್ತು ವ್ಯಕ್ತಿಗಳು, ಇತರ ಸಂಘಗಳು, ರಾಜ್ಯ ಸರಕಾರ ಮತ್ತು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳನ್ನು ಅದರ ಸದಸ್ಯರನ್ನಾಗಿ ಹೊಂದಿರುವ ಸಂಘ ಎಂದರ್ಥ.*".

This is a digitally signed Gazette.
Authenticity may be verified through https://compose.kerala.gov.in/

3

(viii) *(ಪಿ) ಖಂಡದಲ್ಲಿ* "ಯಾವುದೇ ವ್ಯಕ್ತಿ" *ಎಂಬ ಪದಗಳ ಬದಲು* "ರಾಜ್ಯ ಸರಕಾರದ ಇತರ ಯಾವುದೇ ಅಧಿಕಾರಿ" *ಎಂಬ ಪದಗಳನ್ನು ಸೇರಿಸತಕ್ಕದ್ದು.*

(ix) *(ಕ್ಯೂಬಿ) ಖಂಡದ ಬದಲು ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—*

"*(ಕ್ಯೂಬಿಎ)* "ಸಾಮಾಜಿಕ ಸಹಕಾರಿ ಸಂಘ" *ಎಂದರೆ ವಿಕಲಚೇತನರು, ವಯೋವೃದ್ಧರು, ತೃತೀಯಲಿಂಗಿಗಳು, ಖಿನ್ನತೆಗೆ ಒಳಗಾದ ವ್ಯಕ್ತಿಗಳು ಅಥವಾ ಮಾನಸಿಕ ಸವಾಲುಗಳನ್ನು ಎದುರಿಸುವ ವ್ಯಕ್ತಿಗಳಂತಹ ಸಾಮಾಜಿಕ ವರ್ಗಗಳ ಕಲ್ಯಾಣಕ್ಕಾಗಿ ರಚಿಸಲಾದ ಪ್ರಾಥಮಿಕ ಸಹಕಾರಿ ಸಂಘಗಳು ಎಂದರ್ಥ.*".

(x) *(ಆರ್‌ಎ) ಖಂಡದಲ್ಲಿ* "ರಾಜ್ಯ ಸಹಕಾರಿ ಕೃಷಿ-ಗ್ರಾಮೀಣ ಅಭಿವೃದ್ಧಿ ಬೇಂಕ್" *ಎಂಬ ಪದಗಳ ಮೊದಲು* "ಕೇರಳ" *ಎಂಬ ಪದವನ್ನು ಸೇರಿಸತಕ್ಕದ್ದು.*

(xi) *(ಯು) ಖಂಡದ ನಂತರ ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—*

"*(ವಿ)* "ಯುವಜನ ಸಹಕಾರಿ ಸಂಘಗಳು" *ಎಂದರೆ ಒಂದು ಜಿಲ್ಲೆಯೊಳಗೆ ಕಾರ್ಯಾಚರಣಾ ಪ್ರದೇಶವನ್ನು ಹೊಂದಿರುವ ಮತ್ತು ಉದ್ಯೋಗಾವಕಾಶ ಮತ್ತು ವರಮಾನ ಸೃಷ್ಟಿಸುವಿಕೆ ಮತ್ತು ಯುವಕರ ಕಲ್ಯಾಣ ಎಂಬ ಗುರಿಗಳೊಂದಿಗೆ ಉದ್ಯಮಶೀಲತೆ, ನೂತನ ತಂತ್ರಜ್ಞಾನ, ನಾವೀನ್ಯತೆಗಳು, ಸ್ಟಾರ್ಟ್ ಅಪ್‌ಗಳು ಎಂಬಿವುಗಳನ್ನು ಉತ್ತೇಜಿಸುವುದಕ್ಕಾಗಿ ನೋಂದಾಯಿಸಲಾದ ಸಹಕಾರಿ ಸಂಘಗಳು ಎಂದರ್ಥ.*".

3. 3ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 3ನೇ ವಿಭಾಗದಲ್ಲಿ,—

(i) *(1)ನೇ ಉಪ-ವಿಭಾಗದಲ್ಲಿ* "ಒಬ್ಬ ವ್ಯಕ್ತಿಯನ್ನು" *ಎಂಬ ಪದಗಳ ಬದಲು* "ರಾಜ್ಯ ಸರಕಾರದ ಒಬ್ಬ ಅಧಿಕಾರಿಯನ್ನು" *ಎಂಬ ಪದಗಳನ್ನು ಸೇರಿಸತಕ್ಕದ್ದು.*

(ii) *(2)ನೇ ಉಪ-ವಿಭಾಗದಲ್ಲಿ* "ಯಾವುದೇ ವ್ಯಕ್ತಿಗೆ" *ಎಂಬ ಪದದ ಬದಲು* "ರಾಜ್ಯ ಸರಕಾರದ ಯಾವುದೇ ಅಧಿಕಾರಿಗೆ" *ಎಂಬ ಪದಗಳನ್ನು ಸೇರಿಸತಕ್ಕದ್ದು.*

4. 7ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 7ನೇ ವಿಭಾಗದಲ್ಲಿ,—

(i) *(1)ನೇ ವಿಭಾಗದಲ್ಲಿ,—*

(ಎ) *(ಡಿ) ಖಂಡದಲ್ಲಿ* "ನಿಯಮಗಳು" *ಎಂಬ ಪದದ ಮತ್ತು ಚಿಹ್ನೆಯ ನಂತರ ಬರುವ* "ಮತ್ತು" *ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು.*

(ಬಿ) *(ಇ) ಖಂಡದಲ್ಲಿ* "ರೆಜಿಸ್ಟ್ರಾರ್‌ರವರಿಗೆ ಮನವರಿಕೆಯಾದಲ್ಲಿ ಆತನಿಗೆ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ತೊಂಭತ್ತು ದಿವಸಗಳೊಳಗೆ ಆ ಸಂಘವನ್ನು ಮತ್ತು ಅದರ ಉಪನಿಯಮಗಳನ್ನು ನೋಂದಾಯಿಸಬಹುದಾಗಿದೆ" *ಎಂಬ ಪದಗಳ ಮತ್ತು ಚಿಹ್ನೆಯ ಬದಲು* "ಮತ್ತು" *ಎಂಬ ಚಿಹ್ನೆ ಮತ್ತು ಪದವನ್ನು ಸೇರಿಸತಕ್ಕದ್ದು.*

(ಸಿ) *(ಇ) ಖಂಡದ ನಂತರ ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—*

"(ಎಫ್) *ಕನಿಷ್ಟ ಷೇರು ಬಂಡವಾಳವಾಗಿ ಪ್ರಸ್ತಾವಿತ ಸಾಲ ಸಂಘಗಳು ಎರಡು ಲಕ್ಷದ ಐವತ್ತು ಸಾವಿರ ರೂಪಾಯಿಯನ್ನು ಸಂಗ್ರಹಿಸಿದೆ ಎಂದೂ ಸಾಲೇತರ ಸಹಕಾರಿ ಸಂಘಗಳು ಒಂದು ಲಕ್ಷ ರೂಪಾಯಿಯನ್ನು ಸಂಗ್ರಹಿಸಿದೆ ಎಂದೂ;*

ರೆಜಿಸ್ಟ್ರಾರ್‌ರವರಿಗೆ ಮನವರಿಕೆಯಾದಲ್ಲಿ ಆತನಿಗೆ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿವಸಗಳೊಳಗಾಗಿ ಆ ಸಂಘವನ್ನು ಮತ್ತು ಅದರ ಉಪನಿಯಮಗಳನ್ನು ನೋಂದಾಯಿಸಬಹುದಾಗಿದೆ:

ಆದರೆ, ಈ ಖಂಡದಲ್ಲಿನ ಕನಿಷ್ಠ ಷೇರು ಬಂಡವಾಳಕ್ಕೆ ಸಂಬಂಧಿಸಿದ ಷರತ್ತು ಪರಿಶಿಷ್ಟ ಜಾತಿಗಳು/ಪರಿಶಿಷ್ಟ ಪಂಗಡಗಳು, ಮೀನುಗಾರಿಕೆ, ಮಹಿಳಾ, ತೃತೀಯಲಿಂಗಿಗಳು, ಪ್ರಾಥಮಿಕ ಆನಂದ್ ನಮೂನೆಯ ಕ್ಷೀರ ಸಹಕಾರಿ ಸಂಘಗಳು, ಶಾಲೆಗಳು, ಕಾಲೇಜುಗಳು, ಸಾಂಪ್ರದಾಯಿಕ ಕೈಗಾರಿಕಾ ಸಹಕಾರಿ ಸಂಘಗಳು ಎಂಬಿವುಗಳಿಗೆ ಅನ್ವಯವಾಗುವುದಲ್ಲ.".

(ii) *(2)ನೇ ಉಪ-ವಿಭಾಗದಲ್ಲಿ* "ಏಳು ದಿವಸಗಳೊಳಗೆ" *ಎಂಬ ಪದಗಳ ಬದಲು* "ಹದಿನೈದು ದಿವಸಗಳೊಳಗೆ" *ಎಂಬ ಪದಗಳನ್ನು ಸೇರಿಸತಕ್ಕದ್ದು.*

(iii) *(3)ನೇ ಉಪ-ವಿಭಾಗದಲ್ಲಿ* "ತೊಂಭತ್ತು ದಿವಸಗಳೊಳಗೆ" *ಎಂಬ ಪದಗಳ ಬದಲು* "ಅರುವತ್ತು ದಿವಸಗಳೊಳಗೆ" *ಎಂಬ ಎಂಬ ಪದಗಳನ್ನು ಸೇರಿಸತಕ್ಕದ್ದು.*

This is a digitally signed Gazette.
Authenticity may be verified through https://compose.kerala.gov.in/

5. 8ಎ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 8ಎ ವಿಭಾಗದ (2)ನೇ ಉಪ-ವಿಭಾಗದಲ್ಲಿ "ಅರುವತ್ತು ದಿವಸಗಳೊಳಗೆ" ಎಂಬ ಪದಗಳು ಎಲ್ಲೆಲ್ಲಿ ಬರುವುದೋ ಅಲ್ಲೆಲ್ಲಾ "ನಲ್ವತ್ತೈದು ದಿವಸಗಳೊಳಗೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

6. 14ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 14ನೇ ವಿಭಾಗದಲ್ಲಿ,—

(i) 14ನೇ ವಿಭಾಗದ ಪಾರ್ಶ್ವ ಶೀರ್ಷಿಕೆಯಲ್ಲಿ "ಸಮ್ಮಿಲನ" ಎಂಬ ಪದದ ನಂತರ "ವಿಲೀನ" ಎಂಬ ಪದವನ್ನು ಸೇರಿಸತಕ್ಕದ್ದು.

(ii) (1)ನೇ ಉಪ-ವಿಭಾಗದಲ್ಲಿ,—

(ಎ) "ಸಂಘಕ್ಕೆ" ಎಂಬ ಪದದ ಮತ್ತು ಚಿಹ್ನೆಯ ನಂತರ "ರೆಜಿಸ್ಟ್ರಾರ್‌ರವರ ಪೂರ್ವಾನುಮತಿಯೊಂದಿಗೆ" ಎಂಬ ಪದಗಳನ್ನು ಮತ್ತು ಚಿಹ್ನೆಯನ್ನು ಸೇರಿಸತಕ್ಕದ್ದು.

(ಬಿ) "ಮೂರನೇ ಎರಡು ಭಾಗದ" ಎಂಬ ಪದಗಳ ಬದಲು "ಕೇವಲ" ಎಂಬ ಪದವನ್ನು ಸೇರಿಸತಕ್ಕದ್ದು.

(iii) (2)ನೇ ಉಪ-ವಿಭಾಗದಲ್ಲಿ "ಸಂಘಗಳಿಗೆ" ಎಂಬ ಪದದ ಮತ್ತು ಚಿಹ್ನೆಯ ನಂತರ "ರೆಜಿಸ್ಟ್ರಾರ್‌ರವರ ಪೂರ್ವಾನುಮತಿಯೊಂದಿಗೆ" ಎಂಬ ಪದಗಳನ್ನು ಮತ್ತು ಚಿಹ್ನೆಯನ್ನು ಸೇರಿಸತಕ್ಕದ್ದು ಮತ್ತು "ಮೂರನೇ ಎರಡು ಭಾಗದ" ಎಂಬ ಪದಗಳ ಬದಲು "ಕೇವಲ" ಎಂಬ ಪದವನ್ನು ಸೇರಿಸತಕ್ಕದ್ದು.

(iv) (2)ನೇ ಉಪ-ವಿಭಾಗದ ನಂತರ (2ಎ) ಉಪ-ವಿಭಾಗವಾಗಿ ಈ ಕೆಳಗಿನವುಗಳನ್ನು ಸೇರಿಸತಕ್ಕದ್ದು,—

"(2ಎ) ಅಸ್ತಿತ್ವದಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಅಥವಾ ನಿಯಮದಲ್ಲಿ ಅಥವಾ ಯಾವುದೇ ಸಂಘದ ಉಪನಿಯಮಗಳಲ್ಲಿ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ ಅಂತಹ ಸಂಘದ ಸಾಮಾನ್ಯ ಸಭೆಯಲ್ಲಿ ಸರಳ ಬಹುಮತದಿಂದ ಠರಾವನ್ನು ಮಂಜೂರುಮಾಡಿ ಒಂದು ಅಥವಾ ಅದಕ್ಕಿಂತ ಹೆಚ್ಚು ಸಂಘಗಳಿಗೆ ಇತರ ಯಾವುದೇ ಸಂಘದೊಂದಿಗೆ ವಿಲೀನಗೊಳ್ಳಬಹುದಾಗಿದೆ:

ಆದರೆ, ಅಂತಹ ವಿಲೀನವನ್ನು ಕಾರ್ಯಗತಗೊಳಿಸುವ ಮೊದಲು, ಠರಾವನ್ನು ಮಂಜೂರು ಮಾಡುತಾ ಯಾವ ಸಂಘದೊಂದಿಗೆ ಆಗಿ ವಿಲೀನಗೊಳ್ಳಬೇಕಾಗಿರುವುದು ಆ ಸಂಘವು ಅದರ ಸಾಮಾನ್ಯ ಸಭೆಯಲ್ಲಿ ಸರಳ ಬಹುಮತದೊಂದಿಗೆ ಮಂಜೂರು ಮಾಡಿದ ಒಂದು ಠರಾವಿನ ಮೂಲಕ ಅಂತಹ ವಿಲೀನಕ್ಕೆ ಅಂಗೀಕಾರವನ್ನು ನೀಡತಕ್ಕದ್ದು.".

(v) (3)ನೇ ಉಪ-ವಿಭಾಗದಲ್ಲಿ, "(2)ನೇ ಉಪ-ವಿಭಾಗ ಅಥವಾ" ಎಂಬ ಚಿಹ್ನೆ, ಅಂಕೆ ಮತ್ತು ಪದದ ಬದಲು "(2)ನೇ ಉಪ-ವಿಭಾಗ ಅಥವಾ (2ಎ) ಉಪ-ವಿಭಾಗ" ಎಂಬ ಚಿಹ್ನೆಗಳನ್ನು, ಅಂಕೆಗಳನ್ನು ಮತ್ತು ಪದಗಳನ್ನು ಸೇರಿಸತಕ್ಕದ್ದು ಮತ್ತು "ವರ್ಗಾವಣೆ, ವಿಭಜನೆ ಮತ್ತು ಸಮ್ಮಿಲನ" ಎಂಬ ಪದಗಳ ಮತ್ತು ಚಿಹ್ನೆಯ ಬದಲು "ಸಮ್ಮಿಲನ, ವಿಲೀನ, ವರ್ಗಾವಣೆ ಅಥವಾ ವಿಭಜನೆ" ಎಂಬೀ ಪದಗಳನ್ನು ಮತ್ತು ಚಿಹ್ನೆಗಳನ್ನು ಸೇರಿಸತಕ್ಕದ್ದು.

(vi) (7)ನೇ ಉಪ-ವಿಭಾಗದ ಬದಲು ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(8) (1)ನೇ ಉಪ-ವಿಭಾಗ ಅಥವಾ (2)ನೇ ಉಪ-ವಿಭಾಗ ಅಥವಾ (2ಎ) ಉಪ-ವಿಭಾಗ ಪ್ರಕಾರ ಪ್ರಸ್ತುತ ಸಂಘಗಳು ಸಿದ್ದಪಡಿಸಿದ ಮತ್ತು ರೆಜಿಸ್ಟ್ರಾರ್‌ರವರು ಅಂಗೀಕರಿಸಿದಂತಹ ಸ್ವತ್ತುಗಳನ್ನು ಮತ್ತು ಹೊಣೆಗಾರಿಕೆಗಳನ್ನು ವರ್ಗಾಯಿಸುವುದಕ್ಕಿರುವ ವಿವರವಾದ ಯೋಜನೆ ಮತ್ತು ವಿಲೀನ ಯೋಜನೆಯನ್ನು ಆಯಾಯ ವಿಷಯದಂತೆ ರೆಜಿಸ್ಟ್ರಾರ್‌ರವರು ಮತ್ತು ಸಂಘಗಳು ಪ್ರಕಟಿಸತಕ್ಕದ್ದು.".

7. 14ಎಎ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 14ಎಎ ವಿಭಾಗದಲ್ಲಿ,—

(i) (2)ನೇ ಉಪ-ವಿಭಾಗದ ನಂತರ ಈ ಕೆಳಗಿನ ಉಪ-ವಿಭಾಗಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(2ಎ) ಅಂಗ ಸಂಸ್ಥೆಗಳಿಗಿರುವ ಷೇರು ಬಂಡವಾಳದ ಪಾಲು ಅಥವಾ ಆರ್ಥಿಕ ನೆರವನ್ನು 56ನೇ ವಿಭಾಗದ (2)ನೇ ಉಪ-ವಿಭಾಗದಲ್ಲಿ ಉಪಬಂಧಿಸಿದ ಪ್ರಕಾರ ಸಂಘದ ಬಾಕಿ ನಿವ್ವಳ ಲಾಭದಿಂದ ಪೂರೈಸತಕ್ಕದ್ದು ಮತ್ತು ಅಂಗ ಸಂಸ್ಥೆಗಳಿಗಿರುವ ಷೇರು ಬಂಡವಾಳ ಹೊರತಾದ ಯಾವುದೇ ಮುಂದುವರಿದ ಹೂಡಿಕೆಯನ್ನು, ರೆಜಿಸ್ಟ್ರಾರ್‌ರವರು ನಿರ್ದಿಷ್ಟಪಡಿಸುವ ಮಾನದಂಡಗಳಿಗೆ ವಿಧೇಯವಾಗಿ ಸಂಘ/ಬೇಂಕಿನಿಂದ ಸಾಲವಾಗಿ ಅನುಮತಿಸಿ ನೀಡತಕ್ಕದ್ದು.

(2ಬಿ) ಸರಕಾರದಿಂದ ಆರ್ಥಿಕ ನೆರವನ್ನು ಪಡೆದ ಯಾವುದೇ ಸಂಘ/ಬೇಂಕ್ ಅಂಗ ಸಂಸ್ಥೆಗಳಲ್ಲಿನ ಡೈರೆಕ್ಟರ್ ಬೋರ್ಡ್‌ನಲ್ಲಿ ಕೇರಳ ಸರಕಾರದ ನಾಮನಿರ್ದೇಶಿತರನ್ನು ನಿಗದಿಪಡಿಸಿದ ಪ್ರಕಾರ ಒಳಗೊಳ್ಳಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

5

(2ಸಿ) ರೆಜಿಸ್ಟ್ರಾರ್‌ರವರು, ಅಂಗ ಸಂಸ್ಥೆಗಳ ಲೆಕ್ಕಪರಿಶೋಧನೆ, ದಾಖಲೆಗಳ ತಪಾಸಣೆ ಮತ್ತು ಪರಿಶೀಲನೆಯನ್ನು ನಿಗದಿಪಡಿಸಿದ ಪ್ರಕಾರ ನಡೆಸತಕ್ಕದ್ದು;

(2ಡಿ) ಅಂಗ ಸಂಸ್ಥೆಗಳಿಗೆ ಸಂಘ/ಬೇಂಕಿನಿಂದ ಯಾವುದೇ ಷೇರು ಬಂಡವಾಳ ಪಾಲನ್ನು ಅಥವಾ ಆರ್ಥಿಕ ನೆರವನ್ನು ನೀಡುವುದು, ಸಂಬಂಧಪಟ್ಟ ಸಂಘ/ಬೇಂಕಿನ ಸಾಮಾನ್ಯ ಸಭೆಯು ಮಂಜೂರುಮಾಡಿದ ಠರಾವಿನ ತಳಹದಿಯಲ್ಲಿ ರೆಜಿಸ್ಟ್ರಾರ್‌ರವರ ಪೂರ್ವಾನುಮತಿಯಿಂದ ಆಗಿರತಕ್ಕದ್ದು.

(2ಇ) ಸಂಘ ಅದರ ಅಂಗ ಸಂಸ್ಥೆಗಳಿಗೆ ನಿಧಿಯನ್ನು ವರ್ಗಾಯಿಸುವುದು ಮತ್ತು ಆಸ್ತಿಗಳನ್ನು ಗುತ್ತಿಗೆ ನೀಡುವುದು ಪ್ರಸ್ತುತ ಸಂಘ/ಬೇಂಕಿನ ಸಾಮಾನ್ಯ ಸಭೆಯು ಮಂಜೂರು ಮಾಡುವ ಠರಾವಿನ ತಳಹದಿಯಲ್ಲಿ, ಸರಕಾರದ ಪೂರ್ವಾನುಮತಿಯೊಂದಿಗೆ ಆಗಿರತಕ್ಕದ್ದು.".

(ii) *ಅಸ್ತಿತ್ವದಲ್ಲಿರುವ (3)ನೇ ಉಪ-ವಿಭಾಗದ ನಂತರ ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—*

"*(4) ಈ ವಿಭಾಗದ ಮೊದಲು ಹೇಳಿದ ಉಪಬಂಧಗಳಲ್ಲಿ ಏನೇ ಒಳಗೊಂಡಿದ್ದರೂ, 2023ರ ಕೇರಳ ಸಹಕಾರಿ ಸಂಘಗಳ (ತಿದ್ದುಪಡಿ) ಅಧಿನಿಯಮದ ಪ್ರಾರಂಭದ ಅಥವಾ ಅದರ ನಂತರ ಯಾವುದೇ ಅಂಗ ಸಂಸ್ಥೆಯನ್ನು ಈ ವಿಭಾಗ ಪ್ರಕಾರ ಪ್ರೋತ್ಸಾಹಿಸತಕ್ಕದ್ದಲ್ಲ ಆದರೆ 2023ರ ಕೇರಳ ಸಹಕಾರಿ ಸಂಘಗಳ (ತಿದ್ದುಪಡಿ) ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿ ನೋಂದಾಯಿಸಿ ಕಾರ್ಯಾಚರಿಸುತ್ತಿರುವ ಅಸ್ತಿತ್ವದಲ್ಲಿರುವ ಅಂಗ ಸಂಸ್ಥೆಗಳು ಮೊದಲು ಹೇಳಿದ (1)ರಿಂದ (3)ರ ವರೆಗಿನ ಉಪ-ವಿಭಾಗಗಳಲ್ಲಿನ ಉಪಬಂಧಗಳಿಗೆ ವಿಧೇಯವಾಗಿ ನಿಗದಿಪಡಿಸಿದ ಪ್ರಕಾರ ಅದರ ಕಾರ್ಯಾಚರಣೆಯನ್ನು ಮುಂದುವರಿಸತಕ್ಕದ್ದು.*".

8. 14ಬಿ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 14ಬಿ ವಿಭಾಗದಲ್ಲಿ,—

(i) *ಅಸ್ತಿತ್ವದಲ್ಲಿನ (1)ನೇ ಉಪ-ವಿಭಾಗದ ನಂತರ ಈ ಕೆಳಗಿನ ಉಪ-ವಿಭಾಗಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—*

"*(1ಎ) ಸಹಕಾರಿ ಸಂಘಗಳ ಅಂತಹ ಪಾಲುದಾರಿಕೆಯ ರಚನೆಗೆ ಅಗತ್ಯವಾದ ವಿವರವಾದ ಯೋಜನಾ ವರದಿಯನ್ನು ಸಂಬಂಧಪಟ್ಟ ಸಂಘಗಳು ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ಅಂಗೀಕಾರಕ್ಕಾಗಿ, ಅಂತಹ ಸಂಘಗಳ ಸಾಮಾನ್ಯ ಸಭೆಗಳಲ್ಲಿ ಸಲ್ಲಿಸತಕ್ಕದ್ದು.*

(1ಬಿ) ಸಹಕಾರಿ ಸಂಘಗಳ ಅಂತಹ ಪಾಲುದಾರಿಕೆಯ ರಚನೆಯ ಅಂಗೀಕಾರಕ್ಕಾಗಿ, ಸಹಕಾರಿ ಸಂಘದ ಸಾಮಾನ್ಯ ಸಭೆಗಳು ಅಂಗೀಕರಿಸಿದ ಯೋಜನಾ ವರದಿಯನ್ನು ನಿಗದಿಪಡಿಸಿದ ಪ್ರಕಾರ, ರೆಜಿಸ್ಟ್ರಾರ್‌ರವರ ಮೂಲಕ, ಸರಕಾರಕ್ಕೆ ಸಲ್ಲಿಸತಕ್ಕದ್ದು.

(1ಸಿ) ರೆಜಿಸ್ಟ್ರಾರ್‌ರವರು, ಅಂತಹ ಸಂಘಗಳ ಲೆಕ್ಕಪರಿಶೋಧನೆ, ದಾಖಲೆಗಳ ತಪಾಸಣೆ ಮತ್ತು ಪರಿಶೀಲನೆಯನ್ನು ನಿಗದಿಪಡಿಸಿದ ಪ್ರಕಾರ ನಡೆಸತಕ್ಕದ್ದು;

(1ಡಿ) ಅಂತಹ ಪಾಲುದಾರಿಕೆಗೆ ನಿಧಿಯನ್ನು ಸಂಗ್ರಹಿಸುವ ವಿಷಯದಲ್ಲಿ, ಸಹಕಾರಿ ಸಂಘಗಳ ಪಾಲುದಾರಿಕೆಯು, ನಿಗದಿಪಡಿಸಿದ ಪ್ರಕಾರ ಸರಕಾರದ ಪೂರ್ವಾನುಮತಿಯನ್ನು ಪಡೆದಿರತಕ್ಕದ್ದು.".

9. 15ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 15ನೇ ವಿಭಾಗದ (3)ನೇ ಉಪ-ವಿಭಾಗದ ನಂತರ ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*(4) 14ನೇ ವಿಭಾಗದ ಉಪಬಂಧಗಳಿಗನುಸಾರವಾಗಿ ಒಂದು ಅಥವಾ ಅದಕ್ಕಿಂತ ಹೆಚ್ಚು ಸಂಘಗಳು ಬೇರೊಂದು ಸಂಘದೊಂದಿಗೆ ವಿಲೀನಗೊಳ್ಳುವಾಗ ವಿಲೀನಗೊಳ್ಳುವಿಕೆಯಲ್ಲಿ ತೊಡಗಿದ ಪ್ರತಿಯೊಂದು ಸಂಘದ ನೋಂದಣಿಯು ರದ್ದುಗೊಳ್ಳುವುದು ಮತ್ತು ಅದನ್ನು ವಿಸರ್ಜಿಸಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಅದು ಒಂದು ನಿಗಮಿತ ನಿಕಾಯ ಅಲ್ಲದಾಗುವುದು.*".

10. 16ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 16ನೇ ವಿಭಾಗದಲ್ಲಿ, ಅಸ್ತಿತ್ವದಲ್ಲಿನ (1)ನೇ ಉಪ-ವಿಭಾಗದ (ಎ) ಖಂಡದ (i)*ನೇ ಐಟಮ್‌ನ ಅಸ್ತಿತ್ವದಲ್ಲಿನ ಷರತ್ತಿನ ನಂತರ, ಈ ಕೆಳಗಿನ ಐಟಮ್ ಮತ್ತು ಷರತ್ತನ್ನು ಸೇರಿಸತಕ್ಕದ್ದು, ಅದೇನೆಂದರೆ:—*

"(i*ಎ) ಯುವಜನ ಸಹಕಾರಿ ಸಂಘಗಳ ವಿಷಯದಲ್ಲಿ ನಲ್ವತ್ತೈದು ವಯಸ್ಸು ಪೂರ್ತಿಯಾಗದ ವ್ಯಕ್ತಿ;*

ಆದರೆ, ನಲ್ವತ್ತೈದು ವಯಸ್ಸು ಪೂರ್ತಿಯಾಗುವಾಗ ಅಂತಹ ಸದಸ್ಯರುಗಳ ಸದಸ್ಯತ್ವವು ಅಸ್ತಿತ್ವದಲ್ಲಿಲ್ಲದಾಗುವುದು ಮತ್ತು ಅವರು ಸಂಘದ ಸಹ ಸದಸ್ಯರಾಗುವರು.".

This is a digitally signed Gazette.
Authenticity may be verified through https://compose.kerala.gov.in/

11. 18ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ *18ನೇ* ವಿಭಾಗದ *(3)*ನೇ ಉಪ-ವಿಭಾಗವನ್ನು ಈ ಕೆಳಗಿನಂತೆ ಪ್ರತಿಯೋಜಿಸತಕ್ಕದ್ದು, ಅದೇನೆಂದರೆ:—

"*(3)* ಈ ವಿಭಾಗದಲ್ಲಿ ಉಪಬಂಧಿಸಿದುದನ್ನುಳಿದು ನಾಮಮಾತ್ರ ಅಥವಾ ಸಹ ಸದಸ್ಯನ ಅಂತಹ ವಿಶೇಷ ಹಕ್ಕುಗಳು ಮತ್ತು ಹಕ್ಕುಗಳು ಇರುವುದಾಗಿದೆ ಮತ್ತು ಸಂಘಗಳಿಗೆ ನೀಡುವ ಸಾಲ ಸೌಲಭ್ಯಗಳು ಒಳಗೊಂಡ ವಿವಿಧ ಸೇವೆಗಳಿಗೆ ಅರ್ಹತೆಯಿರುವುದಾಗಿದೆ ಮತ್ತು ಪ್ರಸ್ತುತ ಸಂಘದ ಉಪನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಪ್ರಕಾರ ಒಬ್ಬ ಸದಸ್ಯನ ಅಂತಹ ಹೊಣೆಗಾರಿಕೆಗಳಿಗೆ ವಿಧೇಯನಾಗಿರುವನು.".

12. 19ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ *19ನೇ* ವಿಭಾಗದಲ್ಲಿ,—

(i) ಅಸ್ತಿತ್ವದಲ್ಲಿರುವ ವಿಭಾಗವನ್ನು *(1)*ನೇ ಉಪ-ವಿಭಾಗವಾಗಿ ಅಂಕಿತಗೊಳಿಸತಕ್ಕದ್ದು;

(ii) ಆ ರೀತಿ ಅಂಕಿತಗೊಳಿಸಿದ *(1)*ನೇ ಉಪ-ವಿಭಾಗದ ನಂತರ ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*(2)* ಒಂದು ಸಂಘದ ಸಾಮಾನ್ಯ ಸಭೆಯು ಷೇರು ಮೌಲ್ಯವನ್ನು ಹೆಚ್ಚಿಸಲು ತೀರ್ಮಾನಿಸಿದ್ದಲ್ಲಿ, ಒಬ್ಬ ಸದಸ್ಯನಿಗೆ ಸದಸ್ಯತ್ವದಲ್ಲಿ ಮುಂದುವರಿಯುವುದಕ್ಕಿರುವ ಹಕ್ಕು ಷೇರು ಮೌಲ್ಯವನ್ನು ಹೆಚ್ಚಿಸಿದ ದಿನಾಂಕದಿಂದ ಐದು ವರ್ಷಗಳವರೆಗೆ ಇರುವುದಾಗಿದೆ ಆದರೆ, ಸ್ವಾಧೀನದಲ್ಲಿರುವ ಷೇರುಗಳ ವರ್ಧಿತ ಮೌಲ್ಯವನ್ನು ಪಾವತಿಸುವುದಕ್ಕನುಗುಣವಾಗಿ ಮಾತ್ರ ಒಬ್ಬ ಸದಸ್ಯನೆಂಬ ನಿಟ್ಟಿನಲ್ಲಿ ಆತನ ಹಕ್ಕುಗಳನ್ನು ವಿನಿಯೋಗಿಸಲು ಅನುಮತಿಸತಕ್ಕದ್ದು.".

13. 19ಬಿ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ *19ಬಿ* ವಿಭಾಗದಲ್ಲಿ,—

(i) *(ಇ)* ಖಂಡದಲ್ಲಿ "ಮತ್ತು" ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು;

(ii) *(ಎಫ್)* ಖಂಡದಲ್ಲಿ "." ಎಂಬ ಚಿಹ್ನೆಯ ಬದಲು "ಮತ್ತು" ಎಂಬ ಚಿಹ್ನೆ ಮತ್ತು ಪದವನ್ನು ಸೇರಿಸತಕ್ಕದ್ದು;

(iii) (ಎಫ್) ಖಂಡದ ನಂತರ, ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಜಿ) ಪ್ರಸ್ತುತ ಸಂಘದ ಕಮಿಟಿ ಮತ್ತು ಸಾಮಾನ್ಯ ಸಭೆಯು ಅಂಗೀಕರಿಸಿದ ತಿದ್ದುಪಡಿ ವರದಿಯೊಂದಿಗೆ ಅತಿನೂತನ ಶಾಸನಬದ್ಧ ಲೆಕ್ಕಪರಿಶೋಧನಾ ವರದಿಯಲ್ಲಿ ಒಳಗೊಂಡಿರುವ ದೋಷಗಳ ಸಾರಾಂಶ;".

14. 20ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ *20ನೇ* ವಿಭಾಗದಲ್ಲಿ, *(ಡಿ)* ಖಂಡದಲ್ಲಿ, "ಚುನಾವಣೆ" ಎಂಬ ಪದದ ಬದಲು "ಮತ್ತು ತೆಗೆದುಹಾಕುವಿಕೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

15. 22ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ *22ನೇ* ವಿಭಾಗದ *(1)*ನೇ ಉಪ-ವಿಭಾಗದಲ್ಲಿ, ಅಸ್ತಿತ್ವದಲ್ಲಿನ ಷರತ್ತಿನ ನಂತರ ಈ ಕೆಳಗಿನ ಷರತ್ತನ್ನು ಸೇರಿಸತಕ್ಕದ್ದು, ಅದೇನೆಂದರೆ:—

"ಅದೂ ಅಲ್ಲದೆ, ಭಾರತೀಯ ರಿಸರ್ವ್ ಬೇಂಕ್‌ನ ಲೈಸನ್ಸ್ ಇರುವ ಒಂದು ಅರ್ಬನ್ ಸಹಕಾರಿ ಬೇಂಕಿನಲ್ಲಿ, ಒಬ್ಬ ವ್ಯಕ್ತಿಗತ ಸದಸ್ಯನಿಗೆ ಸ್ವಾಧೀನದಲ್ಲಿಟ್ಟುಕೊಳ್ಳಬಹುದಾದ ಗರಿಷ್ಠ ಷೇರು ಬಂಡವಾಳ ಮೊತ್ತವನ್ನು ಬೇಂಕಿನ ಒಟ್ಟು ಪಾವತಿಸಿದ ಷೇರು ಬಂಡವಾಳ ಮೌಲ್ಯದ ಐದು ಶೇಕಡವಾಗಿ ಸೀಮಿತಗೊಳಿಸಲಾಗಿದೆ.".

16. 26ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ *26ನೇ* ವಿಭಾಗದಲ್ಲಿ, *(1)*ನೇ ಉಪ-ವಿಭಾಗದ *(ಬಿ)* ಖಂಡದಲ್ಲಿ, "ಎರಡು" ಎಂಬ ಪದದ ಬದಲು "ಮೂರು" ಎಂಬ ಪದವನ್ನು ಸೇರಿಸತಕ್ಕದ್ದು.

17. 28ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ *28ನೇ* ವಿಭಾಗದಲ್ಲಿ,—

(i) *(1)*ನೇ ಉಪ-ವಿಭಾಗದ ಮೂರನೇ ಷರತ್ತಿನಲ್ಲಿ,—

(ಎ) "ಸಂಘಗಳ ಕಮಿಟಿಗಳಿಗಿರುವ" ಎಂಬ ಪದಗಳ ಬದಲು "ಎಲ್ಲಾ ಪ್ರಾಥಮಿಕ ಕೃಷಿ ಸಾಲ ಸಂಘಗಳ ಮತ್ತು ಎಲ್ಲಾ ಪ್ರಾಥಮಿಕ ಸಂಘಗಳ ಕಮಿಟಿಗಳಿಗಿರುವ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) "ಯಾವುದೇ ಸಂಘದ" ಎಂಬ ಪದಗಳ ಬದಲು "ಅಂತಹ ಸಂಘದ" ಎಂಬ ಪದಗಳನ್ನು ಸೇರಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

7

(ii) *(1ಎ) ಉಪ-ವಿಭಾಗದ ಪರತ್ತುಗಳನ್ನು ಬಿಟ್ಟುಬಿಡತಕ್ಕದ್ದು.*

(iii) *(1ಸಿ)* ಉಪ-ವಿಭಾಗದಲ್ಲಿ "ಹತ್ತು ಸಾವಿರ ರೂಪಾಯಿಗಳು" ಎಂಬ ಪದದ ಬದಲು "ಇಪ್ಪತ್ತೈದು ಸಾವಿರ ರೂಪಾಯಿಗಳು" ಎಂಬ ಪದವನ್ನು ಸೇರಿಸತಕ್ಕದ್ದು.

(iv) *(1ಸಿ)* ಉಪ-ವಿಭಾಗದ ನಂತರ ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*(1ಸಿಎ)* ಅಧಿನಿಯಮದ ನಿಯಮಗಳಲ್ಲಿ ಅಥವಾ ಸಂಘದ ಬೈಲಾಗಳಲ್ಲಿ ಏನೇ ಒಳಗೊಂಡಿದ್ದರೂ, ಪ್ರತಿಯೊಂದು ಸಂಘದ ಕಮಿಟಿಗಳಲ್ಲಿನ ಎರಡು ಸ್ಥಾನಗಳನ್ನು ಚುನಾವಣೆಗಾಗಿ ನಾಮನಿರ್ದೇಶವನ್ನು ಸಲ್ಲಿಸುವ ದಿನಾಂಕದಂದು ನಲ್ವತ್ತು ವಯಸ್ಸನ್ನು ಮೀರದ ಸದಸ್ಯರಿಗಾಗಿ ಮೀಸಲಿಡತಕ್ಕದ್ದು ಮತ್ತು ಅದರಲ್ಲಿ ಒಂದು ಮೀಸಲು ರಹಿತ ವಿಭಾಗದಿಂದಿರುವವರಿಗೆ ಮತ್ತೊಂದು 28ಎ ವಿಭಾಗದ *(1)*ನೇ ಉಪ-ವಿಭಾಗದಲ್ಲಿ ಉಪಬಂಧಿಸಿರುವ ಮಹಿಳಾ ಮೀಸಲಾತಿ ವಿಭಾಗದಿಂದಿರುವವರಿಗೆ ಆಗಿರತಕ್ಕದ್ದು.".

(v) *(1ಇ)* ಉಪ-ವಿಭಾಗದ (iii)ನೇ ಐಟಮ್‌ನ ಬದಲು ಈ ಕೆಳಗಿನ ಐಟಮ್ ಅನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(iii) ಆಂತಹ ವಿಭಜನೆಯನ್ನು ರೆಜಿಸ್ಟ್ರಾರ್‌ರವರು ವಿಭಜನೆಯ ಆದೇಶವನ್ನು ಹೊರಡಿಸಿದ ದಿನಾಂಕದಿಂದ ಒಂದು ವರ್ಷದೊಳಗೆ ಪೂರ್ತಿಗೊಳಿಸತಕ್ಕದ್ದು".

(vi) *(1ಜಿ)* ಉಪ-ವಿಭಾಗದ ಬದಲು, ಈ ಕೆಳಗಿನವುಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*(1ಜಿ)* ಒಂದು ಸಂಘದ ಬೈಲಾಗಳಲ್ಲಿ ಏನೇ ಒಳಗೊಂಡಿದ್ದರೂ, ಅಧಿಕಾರದಲ್ಲಿರುವ ಕಮಿಟಿಯು, ಒಂದು ವಾಣಿಜ್ಯ ಬೇಂಕ್, ಕೇರಳ ರಾಜ್ಯ ಸಹಕಾರಿ ಬೇಂಕ್, ಒಂದು ಅರ್ಬನ್ ಸಹಕಾರಿ ಬೇಂಕ್, ಕೇರಳ ರಾಜ್ಯ ಕೃಷಿ ಗ್ರಾಮೀಣ ಅಭಿವೃದ್ಧಿ ಬೇಂಕ್, ಒಂದು ಪ್ರಾಥಮಿಕ ಸಹಕಾರಿ ಕೃಷಿ ಗ್ರಾಮೀಣ ಅಭಿವೃದ್ಧಿ ಬೇಂಕ್ ಅಥವಾ ಹಿಂದಿನ ಜಿಲ್ಲಾ ಸಹಕಾರಿ ಬೇಂಕಿನಲ್ಲಿ ಪೇಡ್ ಸರ್ವೀಸ್‌ನಲ್ಲಿ ಇರುವ ಅಥವಾ ಇದ್ದ ಅಥವಾ ಒಂದು ಸರ್ವೀಸ್ ಸಹಕಾರಿ ಬೇಂಕಿನಲ್ಲಿ ಮ್ಯಾನೇಜರ್ ಕೇಡರ್‌ನಲ್ಲಿ ಅಥವಾ ಸಹಕಾರ/ಸಹಕಾರಿ ಮ್ಯಾನೇಜ್‌ಮೆಂಟ್, ಮ್ಯಾನೇಜ್‌ಮೆಂಟ್, ಕೃಷಿ ಅರ್ಥಶಾಸ್ತ್ರ, ವಾಣಿಜ್ಯ, ಸಾರ್ವಜನಿಕ ಹಣಕಾಸು, ಕಾನೂನು, ಗ್ರಾಮಾಭಿವೃದ್ಧಿ, ಮಾಹಿತಿ ತಂತ್ರಜ್ಞಾನ ಎಂಬಿವುಗಳಲ್ಲಿ ತಜ್ಞತೆಯಿರುವ ಇಬ್ಬರು ವ್ಯಕ್ತಿಗಳು ಅಥವಾ ಪ್ರತಿನಿಧಿಗಳನ್ನು ಸಂಘದ ಕಮಿಟಿಯಲ್ಲಿ ಸದಸ್ಯರನ್ನಾಗಿ ಕೋ-ಆಪ್ಟ್ ಮಾಡತಕ್ಕದ್ದು:

ಆದರೆ, ಆ ರೀತಿ ಕೋ-ಆಪ್ಟ್ ಮಾಡಲ್ಪಟ್ಟ ಸದಸ್ಯರ ಸಂಖ್ಯೆಯು *(1ಎ)* ಉಪ-ವಿಭಾಗದಲ್ಲಿ ನಿರ್ದಿಷ್ಟಪಡಿಸಿದ ಗರಿಷ್ಟ ಮಿತಿಯ ಜೊತೆಗೆ ಇಬ್ಬರಿಗಿಂತ ಮೀರತಕ್ಕದ್ದಲ್ಲ:

ಆದೂ ಆಲ್ಲದೆ, ಆರೀತಿ ಕೋ-ಆಪ್ಟ್ ಮಾಡಲ್ಪಟ್ಟ ಸದಸ್ಯರಿಗೆ, ಸಹಕಾರಿ ಸಂಘದ ಯಾವುದೇ ಚುನಾವಣೆಯಲ್ಲಿ ಆಂತಹ ಸದಸ್ಯರೆಂಬ ನಿಟ್ಟಿನಲ್ಲಿ ಮತ ಚಲಾಯಿಸುವ ಹಕ್ಕು ಇರುವುದಲ್ಲ ಮತ್ತು ಮಂಡಳಿಯ ಪದಾಧಿಕಾರಿಗಳಾಗಿ ಆಯ್ಕೆಯಾಗಲು ಅರ್ಹರಾಗಿರುವುದಲ್ಲ:

ಮತ್ತೂ ಆದರೆ, ಒಂದು ಸಹಕಾರಿ ಸಂಘದ ಆ ರೀತಿಯಲ್ಲಿ ಕೋ-ಆಪ್ಟ್ ಮಾಡಲ್ಪಟ್ಟ ಸದಸ್ಯರು ಮಂಡಳಿಯ ಸದಸ್ಯರೂ ಆಗಿರುವರು ಮತ್ತು *(1ಎ)* ಉಪ-ವಿಭಾಗದಲ್ಲಿ ನಿರ್ದಿಷ್ಟಪಡಿಸಿದ ಒಟ್ಟು ಡೈರೆಕ್ಟರ್‌ಗಳ ಸಂಖ್ಯೆಯನ್ನು ಲೆಕ್ಕಹಾಕುವ ಉದ್ದೇಶಕ್ಕಾಗಿ ಆಂತಹ ಸದಸ್ಯರನ್ನು ಹೊರತುಪಡಿಸತಕ್ಕದ್ದು:

ಮತ್ತೂ ಆದರೆ, ಕಮಿಟಿಯನ್ನು ರಚಿಸಿದ ದಿನಾಂಕದಿಂದ ಆರು ತಿಂಗಳ ಕಾಲಾವಧಿಯೊಳಗೆ, ನಿರ್ದಿಷ್ಟಪಡಿಸಿದ ಪ್ರಕಾರ ವ್ಯಕ್ತಿಗಳನ್ನು ಕೋ-ಆಪ್ಟ್ ಮಾಡದಿದ್ದಲ್ಲಿ ಸರಕಾರ ಅಥವಾ ರೆಜಿಸ್ಟ್ರಾರ್‌ರವರು, ಆಯಾಯ ವಿಷಯದಂತೆ, ನಿಗದಿಪಡಿಸಿದ ಪ್ರಕಾರ ಯುಕ್ತ ನೋಟೀಸನ್ನು ನೀಡುತಾ ಪ್ರಸ್ತುತ ಉಪ-ವಿಭಾಗದಲ್ಲಿ ನಿರ್ದಿಷ್ಟಪಡಿಸಿದ ಪ್ರಕಾರ ಆಂತಹ ನಾಮನಿರ್ದೇಶವನ್ನು ಮಾಡತಕ್ಕದ್ದು.".

(vii) *(2)*ನೇ ಉಪ-ವಿಭಾಗದ ನಂತರ, ಈ ಕೆಳಗಿನವುಗಳನ್ನು *(2ಎ)* ಉಪ-ವಿಭಾಗವನ್ನಾಗಿ ಸೇರಿಸತಕ್ಕದ್ದು, ಅದೇನೆಂದರೆ:—

"*(2ಎ)* ಅಧಿನಿಯಮದಲ್ಲಿ, ನಿಯಮಗಳಲ್ಲಿ ಅಥವಾ ಒಂದು ಸಾಲ ಸಂಘದ ಬೈಲಾಗಳಲ್ಲಿ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ, ಒಂದು ಸಂಘದ ಕಮಿಟಿಯ ಯಾವುದೇ ಸದಸ್ಯನಿಗೆ, ಕಾಲಾವಧಿಯು ಪೂರ್ಣವೋ ಅಥವಾ ಭಾಗಶಃವೋ ಎಂಬುದನ್ನು ಪರಿಗಣಿಸದೆ, ಮುಂದುವರಿದ ಮೂರಕ್ಕಿಂತ ಹೆಚ್ಚು ಬಾರಿ ಕಮಿಟಿಗೆ ಆಯ್ಕೆಯಾಗಲು ಅರ್ಹತೆಯಿಲ್ಲದಿರುವುದು.

ವಿವರಣೆ.—ಈ ಉಪ-ವಿಭಾಗದ ಉದ್ದೇಶಕ್ಕಾಗಿ "ಸಾಲ ಸಂಘ" ಎಂದರೆ, ಕೇರಳ ರಾಜ್ಯ ಸಹಕಾರಿ ಬೇಂಕ್ ಲಿಮಿಟೆಡ್, ಪ್ರಾಥಮಿಕ ಕೃಷಿ ಸಾಲ ಸಂಘಗಳು, ಸರ್ವೀಸ್ ಸಹಕಾರಿ ಬೇಂಕ್‌ಗಳು, ಸ್ಥಳೀಯ ಸಹಕಾರಿ ಬೇಂಕ್‌ಗಳು, ಗ್ರಾಮೀಣ ಬೇಂಕ್‌ಗಳು, ಕೃಷಿಕ ಸರ್ವೀಸ್ ಸಹಕಾರಿ ಬೇಂಕ್‌ಗಳು, ಅರ್ಬನ್ ಸಹಕಾರಿ ಬೇಂಕ್‌ಗಳು, ಕೇರಳ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬೇಂಕ್ ಲಿಮಿಟೆಡ್, ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬೇಂಕ್, ಅರ್ಬನ್ ಸಹಕಾರಿ ಸಂಘಗಳು, ಅಗ್ರಿಕಲ್ಚರಲ್ ಇಂಪ್ರೂವ್‌ಮೆಂಟ್ ಕೋ-ಆಪರೇಟೀವ್ ಸೊಸೈಟಿಗಳು, ನೌಕರರ ಸಾಲ ಸಂಘಗಳು, ಗ್ರಾಮೀಣ ಸಹಕಾರಿ ಸಂಘಗಳು, ಪ್ರಾಥಮಿಕ ಹೌಸಿಂಗ್ ಸಹಕಾರಿ ಸಂಘಗಳು ಮತ್ತು ಕೇರಳ ರಾಜ್ಯ ಹೌಸಿಂಗ್ ಫೆಡರೇಶನ್ ಎಂದರ್ಥ.".

This is a digitally signed Gazette.
Authenticity may be verified through https://compose.kerala.gov.in/

8

(viii) *(3)ನೇ ಉಪ-ವಿಭಾಗದ ಪರಂತುವಿನಲ್ಲಿ* "ಒಂದಕ್ಕಿಂತ ಹೆಚ್ಚು ಸಂಘದ" *ಎಂಬ ಪದಗಳ ಬದಲು* "ಒಂದಕ್ಕಿಂತ ಹೆಚ್ಚು ಸಂಘದ ಅಥವಾ ವಿಭಿನ್ನವಾದ ಎರಡಕ್ಕಿಂತ ಹೆಚ್ಚು ಸಂಘದ" *ಎಂಬ ಪದಗಳನ್ನು ಸೇರಿಸತಕ್ಕದ್ದು.*

18. 28ಎಬಿ ವಿಭಾಗದ ತಿದ್ದುಪಡಿ.—*ಪ್ರಧಾನ ಅಧಿನಿಯಮದ 28ಎಬಿ ವಿಭಾಗದ (2)ನೇ ಉಪ-ವಿಭಾಗದಲ್ಲಿ* "ಕಮಿಟಿಯ ಇತರ ಯಾವುದೇ ಅಧಿಕಾರಿಯನ್ನು" *ಎಂಬ ಪದಗಳ ನಂತರ* "ಅಥವಾ ಕಮಿಟಿಯಿಂದ ನೇಮಕಗೊಂಡ ಸಂಘದ ಒಬ್ಬ ಪ್ರತಿನಿಧಿಯನ್ನು" *ಎಂಬ ಪದಗಳನ್ನು ಸೇರಿಸತಕ್ಕದ್ದು.*

19. 28ಬಿ ವಿಭಾಗದ ತಿದ್ದುಪಡಿ.—*ಪ್ರಧಾನ ಅಧಿನಿಯಮದ 28ಬಿ ವಿಭಾಗದಲ್ಲಿ,*—

(i) *(1)ನೇ ಉಪ-ವಿಭಾಗದಲ್ಲಿ* "ಸಹಕಾರಿ ಸಂಘಗಳಿಗೆ" *ಎಂಬ ಪದದ ಬದಲು* "ಸಹಕಾರಿ ಸಂಘಗಳಿಗೆ, ರಾಜ್ಯ ಸಹಕಾರಿ ಒಕ್ಕೂಟಕ್ಕೆ ಮತ್ತು ವೃತ್ತ ಸಹಕಾರಿ ಒಕ್ಕೂಟಗಳಿಗೆ" *ಎಂಬ ಪದಗಳನ್ನು ಸೇರಿಸತಕ್ಕದ್ದು.*

(ii) *28ಬಿ ವಿಭಾಗದ (2)ನೇ ಉಪ-ವಿಭಾಗದಲ್ಲಿ* "ಸರಕಾರಿ ವಿಶೇಷ ಕಾರ್ಯದರ್ಶಿಯವರ" *ಎಂಬ ಪದದ ಬದಲು* "ಕಾನೂನು ಇಲಾಖೆಯ ಸರಕಾರಿ ವಿಶೇಷ ಕಾರ್ಯದರ್ಶಿಯವರ" *ಎಂಬ ಪದಗಳನ್ನು ಸೇರಿಸತಕ್ಕದ್ದು.*

20. 29ನೇ ವಿಭಾಗದ ತಿದ್ದುಪಡಿ.—*ಪ್ರಧಾನ ಅಧಿನಿಯಮದ 29ನೇ ವಿಭಾಗದಲ್ಲಿ,*—

(i) *(1)ನೇ ಉಪ-ವಿಭಾಗದಲ್ಲಿ,*—

(ಎ) *(ಸಿಸಿ) ಖಂಡದಲ್ಲಿ,* "ಲೆಕ್ಕ ಪತ್ರಗಳ" *ಎಂಬ ಪದದ ಬದಲು* "ಪರಿಶೋಧಿತ ಲೆಕ್ಕ ಪತ್ರಗಳ" *ಎಂಬ ಪದಗಳನ್ನು ಸೇರಿಸತಕ್ಕದ್ದು.*

(ಬಿ) *(ಸಿಇ) ಖಂಡದ ನಂತರ ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:*—

"*(ಸಿಇ) ಹಿಂದಿನ ಆರ್ಥಿಕ ವರ್ಷದಲ್ಲಿ ಸಂಘದ ಕಮಿಟಿಯ ಸದಸ್ಯರ, ನೌಕರರ ಮತ್ತು ಅವರ ಕುಟುಂಬದ ಸದಸ್ಯರ ಮತ್ತು ಸಂಘಕ್ಕೆ ಬಾಕಿಯಾದ ಎಲ್ಲಾ ಹೊಣೆಗಾರಿಕೆಗಳಿಗೆ ಸಂಬಂಧಿಸಿದ ವಿವರವಾದ ಪಟ್ಟಿಯ ಪರಿಗಣನೆ.

ವಿವರಣೆ.—*ಈ ಖಂಡದ ಉದ್ದೇಶಕ್ಕಾಗಿ* "ಕುಟುಂಬದ ಸದಸ್ಯರು" *ಎಂದರೆ, ಗಂಡ, ಹೆಂಡತಿ, ದತ್ತು ಪಡೆದ ಮಕ್ಕಳನ್ನೊಳಗೊಂಡ ಮಕ್ಕಳು ಮತ್ತು ಪೋಷಕರು; ಮತ್ತು.*".

(ii) *(2)ನೇ ಉಪ-ವಿಭಾಗವನ್ನು ಈ ಕೆಳಗಿನಂತೆ ಪ್ರತಿಯೋಜಿಸತಕ್ಕದ್ದು, ಅದೇನೆಂದರೆ:*—

"*(2) ರೆಜಿಸ್ಟ್ರಾರ್‌ರವರಿಗೆ ಅಥವಾ ಆತನು ನಿಯೋಜಿಸುವ ಇತರ ಯಾವುದೇ ವ್ಯಕ್ತಿಗೆ ಅಥವಾ ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕರಿಗೆ ಅಥವಾ ಆತನು ನಿಯೋಜಿಸುವ ಇತರ ಯಾವುದೇ ವ್ಯಕ್ತಿಗೆ ಯಾವುದೇ ಸಂಘದ ಕಮಿಟಿಗೆ ಅಥವಾ ಸಾಮಾನ್ಯ ಸಭೆಗೆ ಹಾಜರಾಗಲು ಹಕ್ಕು ಇರುವುದಾಗಿದೆ.*".

21. 31ನೇ ವಿಭಾಗದ ತಿದ್ದುಪಡಿ.—*ಪ್ರಧಾನ ಅಧಿನಿಯಮದ 31ನೇ ವಿಭಾಗದ (3)ನೇ ಉಪ-ವಿಭಾಗದಲ್ಲಿ* "ಚರ್ಚೆಯಲ್ಲಿ ಭಾಗವಹಿಸಲೋ" *ಎಂಬ ಪದಗಳ ನಂತರ* "ಪದಾಧಿಕಾರಿಗಳ ಚುನಾವಣೆಗಿರುವ ಮತದಾನದಲ್ಲಿ ಭಾಗವಹಿಸಲೋ" *ಎಂಬ ಪದಗಳನ್ನು ಸೇರಿಸತಕ್ಕದ್ದು.*

22. 32ನೇ ವಿಭಾಗದ ತಿದ್ದುಪಡಿ.—*ಪ್ರಧಾನ ಅಧಿನಿಯಮದ 32ನೇ ವಿಭಾಗದಲ್ಲಿ,*—

(i) *(1)ನೇ ಉಪ-ವಿಭಾಗದಲ್ಲಿ,*—

(ಎ) *(ಬಿ) ಖಂಡದ ನಂತರ ಈ ಕೆಳಗಿನ ಖಂಡವನ್ನು (ಬಿಎ) ಖಂಡವಾಗಿ ಸೇರಿಸತಕ್ಕದ್ದು, ಅದೇನೆಂದರೆ:*—

"*(ಬಿಎ) ಅಧಿನಿಯಮದ 76ನೇ ವಿಭಾಗದಲ್ಲಿ ಉಲ್ಲೇಖಿಸುವ ಆದೇಶಗಳು ಇತ್ಯಾದಿಯನ್ನು ಜಾರಿಗೊಳಿಸುವುದರಲ್ಲಿನ ಮನಃಪೂರ್ವಕವಾದ ಲೋಪ; ಅಥವಾ*".

(ಬಿ) *(ಡಿ) ಖಂಡದಲ್ಲಿ,* "ಅವರು ಸಂಘದ ಸದಸ್ಯರಾಗಿರಬೇಕೆಂದಿಲ್ಲ" *ಎಂಬ ಪದಗಳ ಮತ್ತು ಚಿಹ್ನೆಯ ಬದಲು* "ಅವರು ಸಂಘದ ಸದಸ್ಯರಾಗಿರತಕ್ಕದ್ದು" *ಎಂಬ ಪದಗಳನ್ನು ಮತ್ತು ಚಿಹ್ನೆಯನ್ನು ಸೇರಿಸತಕ್ಕದ್ದು ಮತ್ತು ಮೂರನೇ ಪರಂತುವನ್ನು ಮತ್ತು ವಿವರಣೆ IIನ್ನು ಬಿಟ್ಟುಬಿಡತಕ್ಕದ್ದು ಮತ್ತು ವಿವರಣೆ IIರಲ್ಲಿನ* "II"*ನ್ನು ಬಿಟ್ಟುಬಿಡತಕ್ಕದ್ದು.*

This is a digitally signed Gazette.
Authenticity may be verified through https://compose.kerala.gov.in/

9

(ಸಿ) *(ಇ) ಖಂಡದಲ್ಲಿ,* "ಎರಡು ಅನುಕ್ರಮವಾದ ಕಾಲಾವಧಿಗಳಿಗೆ" ಎಂಬ ಪದಗಳ ಬದಲು "ಮುಂದಿನ ಒಂದು ಕಾಲಾವಧಿಗೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) *(4)ನೇ ಉಪ-ವಿಭಾಗದ ಕೊನೆಯಲ್ಲಿ ಈ ಕೆಳಗಿನ ಪದಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—*

"ಸದಸ್ಯರ ದಾಖಲಾತಿಯನ್ನು ಒಳಗೊಂಡಂತೆ, ಸಂಘದ ಹಿತಾಸಕ್ತಿಗೆ ಅಗತ್ಯವಾಗಬಹುದಾದ ಎಲ್ಲಾ ಕ್ರಮಗಳನ್ನು ವಹಿಸಿಕೊಳ್ಳಲು ಅಧಿಕಾರ ಇರುವುದಾಗಿದೆ. ಆದರೆ ಒಂದು ಚುನಾಯಿತ ಕಮಿಟಿಯು ಸದಸ್ಯತ್ವವನ್ನು ಸ್ಥಿರೀಕರಿಸದ ಹೊರತು ಅಂತಹ ಸದಸ್ಯರಿಗೆ ಮತದಾನದ ಹಕ್ಕು ಇರುವುದಲ್ಲ.".

23. 33ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ *33ನೇ* ವಿಭಾಗದಲ್ಲಿ,—

(i) *(1)ನೇ* ಉಪ-ವಿಭಾಗದ (ಬಿ) ಖಂಡದಲ್ಲಿ, "ಅವರು ಸಂಘದ ಸದಸ್ಯರಾಗಿರಬೇಕೆಂದಿಲ್ಲ" ಎಂಬ ಪದಗಳ ಬದಲು "ಅವರು ಸಂಘದ ಸದಸ್ಯರುಗಳ ಪೈಕಿಯಿಂದಿರುವವರಾಗಿರತಕ್ಕದ್ದು" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) *(2)ನೇ* ಉಪ-ವಿಭಾಗದಲ್ಲಿ,—

(ಎ) "ಸಂಘದ ಯಾವುದೇ ಅಧಿಕಾರಿಯ" ಎಂಬ ಪದಗಳ ನಂತರ "ಸದಸ್ಯರ ದಾಖಲಾತಿ ಒಳಗೊಂಡಂತೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) *ಈ ಕೆಳಗಿನ ವಾಕ್ಯವನ್ನು ಕೊನೆಯಲ್ಲಿ ಸೇರಿಸತಕ್ಕದ್ದು, ಅದೇನೆಂದರೆ:—*

"ಚುನಾಯಿತ ಕಮಿಟಿಯು ಅಂತಹ ಸದಸ್ಯತ್ವವನ್ನು ಸ್ಥಿರೀಕರಿಸದ ಹೊರತು ಆ ರೀತಿ ನೋಂದಾಯಿಸಲ್ಪಟ್ಟ ಸದಸ್ಯರಿಗೆ ಮತದಾನದ ಹಕ್ಕು ಇರುವುದಲ್ಲ ಮತ್ತು ಕಮಿಟಿಯು ಅಂತಹ ಸದಸ್ಯತ್ವವನ್ನು ಸ್ಥಿರೀಕರಿಸದಿದ್ದಲ್ಲಿ ಆ ರೀತಿ ನಿರಾಕರಿಸುವುದಕ್ಕಿರುವ ಕಾರಣಗಳನ್ನು ನಿರ್ದಿಷ್ಟಪಡಿಸತಕ್ಕದ್ದು.".

24. 34ಎ ಎಂಬ ಹೊಸ ವಿಭಾಗದ ಸೇರ್ಪಡೆ.—ಪ್ರಧಾನ ಅಧಿನಿಯಮದ *34ನೇ* ವಿಭಾಗದ ನಂತರ *ಈ ಕೆಳಗಿನ* ವಿಭಾಗವನ್ನು ಸೇರಿಸತಕ್ಕದ್ದು, *ಅದೇನೆಂದರೆ:—*

"*34ಎ. ಲೆಕ್ಕಪತ್ರಗಳ ನಿರ್ವಹಣೆ ಮತ್ತು ಸಾಮಾನ್ಯ ಸಾಫ್ಟ್‌ವೇರ್‌ನ ಅಳವಡಿಕೆ.*—*(1)* ಎಲ್ಲಾ ಸಹಕಾರಿ ಸಂಘಗಳೂ ನಿಗದಿಪಡಿಸಿದ ಪ್ರಕಾರ ಲಾಭ ಮತ್ತು ನಷ್ಟದ ಲೆಕ್ಕಪತ್ರ ಮತ್ತು ಬ್ಯಾಲೆನ್ಸ್‌ಶೀಟ್ ಅನ್ನು ಸಿದ್ಧಪಡಿಸುವುದಕ್ಕೆ ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟ ಅಕೌಂಟಿಂಗ್ ತತ್ವದಲ್ಲಿ ನಿರ್ದೇಶಿಸಿರುವ ನಮೂನೆಯಲ್ಲಿ ಡಬಲ್ ಎಂಟ್ರಿ ಬುಕ್ ಕೀಪಿಂಗ್ ಸಿಸ್ಟಂ ಅನ್ನು ಸಾಧ್ಯಗೊಳಿಸುವ ರೀತಿಯಲ್ಲಿ ಲೆಕ್ಕಪತ್ರ ಪುಸ್ತಕಗಳನ್ನು ಮತ್ತು ಆರ್ಥಿಕ ಹೇಳಿಕೆಗಳನ್ನು ನಿರ್ವಹಿಸತಕ್ಕದ್ದು.

(2) ಎಲ್ಲಾ ಸಹಕಾರಿ ಸಂಘಗಳಿಗಿರುವ ಸಾಮಾನ್ಯ ಸಾಫ್ಟ್‌ವೇರ್‌ನ ಸ್ಥಾಪನೆ, ನಿರ್ವಹಣೆ ಮತ್ತು ಬಳಕೆಗೆ ಸಂಬಂಧಿಸಿದಂತೆ ಅಗತ್ಯವಾದ ಮಾರ್ಗಸೂಚಿಗಳನ್ನು, ರೆಜಿಸ್ಟ್ರಾರ್‌ರವರು ನಿಗದಿಪಡಿಸಿದ ಪ್ರಕಾರ ಹೊರಡಿಸತಕ್ಕದ್ದು.

(3) ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್‌ಗೆ ಸಂಬಂಧಿಸಿದ ಸುರಕ್ಷೆ, ವಿಶ್ವಾಸಾರ್ಹತೆ, ಡೇಟಾ ಸಂರಕ್ಷಣೆ ಮತ್ತು ಇತರ ಅಂಶಗಳನ್ನು ಪರಿಶೀಲಿಸಲು, ಸರಕಾರದೊಂದಿಗೆ ಸಮಾಲೋಚಿಸುತಾ ನಿಗದಿಪಡಿಸಿದ ಪ್ರಕಾರ ವೃತ್ತಿಪರ ಮತ್ತು ತಾಂತ್ರಿಕ ತಂಡವನ್ನು ಒಳಗೊಂಡ ಒಂದು ತಾಂತ್ರಿಕ ಸೆಲ್‌ನ್ನು ರೆಜಿಸ್ಟ್ರಾರ್‌ರವರ ಕಛೇರಿಯಲ್ಲಿ ಸ್ಥಾಪಿಸತಕ್ಕದ್ದು.".

25. 36ಎ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ *36ಎ* ವಿಭಾಗದಲ್ಲಿ, "*10*ರಿಂದ *15*ರ ವರೆಗಿನ ವಿಭಾಗಗಳಲ್ಲಿನ *(ಎರಡನ್ನೂ ಒಳಗೊಂಡಂತೆ)*" ಎಂಬ ಅಂಕೆಗಳ, ಪದಗಳ ಮತ್ತು ಚಿಹ್ನೆಗಳ ಬದಲು "*9*ರಿಂದ *15*ರ ವರೆಗೆ *(ಎರಡನ್ನೂ ಒಳಗೊಂಡಂತೆ)* ಮತ್ತು *19*ರಿಂದ *28*ರವರೆಗಿನ *(ಎರಡನ್ನೂ ಒಳಗೊಂಡಂತೆ)* ವಿಭಾಗಗಳಲ್ಲಿನ" ಎಂಬ ಅಂಕೆಗಳನ್ನು, ಪದಗಳನ್ನು ಮತ್ತು ಚಿಹ್ನೆಗಳನ್ನು ಸೇರಿಸತಕ್ಕದ್ದು.

26. 56ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ *56ನೇ* ವಿಭಾಗದಲ್ಲಿ,—

(i) *(1)ನೇ* ಉಪ-ವಿಭಾಗದ (ಸಿ) ಖಂಡದ ನಂತರ *ಈ ಕೆಳಗಿನ* ಖಂಡವನ್ನು ಸೇರಿಸತಕ್ಕದ್ದು, *ಅದೇನೆಂದರೆ:—*

"*(ಡಿ)* ನಿವ್ವಳ ಲಾಭದ ಐದು ಶೇಕಡಾವನ್ನು ರೆಜಿಸ್ಟ್ರಾರ್‌ರವರು ನಿರ್ವಹಿಸುವ ವೃತ್ತಿಪರ ಶಿಕ್ಷಣ ನಿಧಿಗೆ ಜಮಾ ಮಾಡತಕ್ಕದ್ದು.".

(ii) *(2)ನೇ* ಉಪ-ವಿಭಾಗದ *(ಸಿಸಿ)* ಖಂಡವನ್ನು ಬಿಟ್ಟುಬಿಡತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

10

27. 56ಎ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 56ಎ ವಿಭಾಗಕ್ಕೆ ಈ ಕೆಳಗಿನ ಷರತ್ತನ್ನು ಸೇರಿಸತಕ್ಕದ್ದು, ಅದೇನೆಂದರೆ:—

"ಆದರೆ ಸಂಘಗಳ ಉದ್ದೇಶ ಗುರಿಗಳಿಗೆ ಸಂಬಂಧಪಟ್ಟ ಚಟುವಟಿಕೆಗಳಿಗೆ ಸ್ಥಿರಾಸ್ತಿಗಳನ್ನು ಬಳಸಬೇಕಾದಲ್ಲಿ ಅದಕ್ಕಾಗಿ ಸಂಘ ಸಾಮಾನ್ಯ ಸಭೆಯ ಠರಾವಿನ ತಳಹದಿಯಲ್ಲಿ ರೆಜಿಸ್ಟ್ರಾರ್‌ರವರಿಂದ ಪೂರ್ವಾನುಮತಿಯನ್ನು ಪಡೆಯತಕ್ಕದ್ದು.".

28. 57ಸಿ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 57ಸಿ ವಿಭಾಗದ (1)ನೇ ಉಪ-ವಿಭಾಗದಲ್ಲಿ, "ಸಾಲಗಳನ್ನು ಒದಗಿಸುವುದು" ಎಂಬ ಪದಗಳ ನಂತರ "ಸಾರ್ವಜನಿಕ ಉದ್ದೇಶಗಳಿಗಾಗಿ ಮತ್ತು" ಎಂಬ ಪದಗಳನ್ನು ಸೇರಿಸತಕ್ಕದ್ದು.

29. 57ಇ ಎಂಬ ಹೊಸ ವಿಭಾಗದ ಸೇರ್ಪಡೆ.—ಪ್ರಧಾನ ಅಧಿನಿಯಮದ 57ಡಿ ವಿಭಾಗದ ನಂತರ ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*57ಇ. ಸಹಕಾರಿ ಪುನರುಜ್ಜೀವನ ನಿಧಿ ಸ್ಕೀಮ್.*—(1) ಸರಕಾರಕ್ಕೆ, ಗಜೆಟ್ ಅಧಿಸೂಚನೆಯ ಮೂಲಕ ಅಸಾಮಾನ್ಯ ಸನ್ನಿವೇಶದ ಕಾರಣದಿಂದಾಗಿ ದುರ್ಬಲವಾದ ಅಥವಾ ನಿಷ್ಕ್ರಿಯ ಸ್ಥಿತಿಯಲ್ಲಾದ ಸಂಘಗಳನ್ನು ಪುನರುಜ್ಜೀವನಗೊಳಿಸುವುದಕ್ಕಾಗಿ ಆರ್ಥಿಕ ನೆರವನ್ನು ಒದಗಿಸುವುದಕ್ಕಾಗಿ ಸ್ಕೀಮ್‌ನಲ್ಲಿ ನಿರ್ದಿಷ್ಟಪಡಿಸಬಹುದಾದ ಅಂತಹ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು "ಸಹಕಾರಿ ಪುನರುಜ್ಜೀವನ ನಿಧಿ ಸ್ಕೀಮ್" ಎಂಬ ಹೆಸರಿನಲ್ಲಿ ಒಂದು ಸ್ಕೀಮನ್ನು ರೂಪಿಸಬಹುದಾಗಿದೆ ಮತ್ತು ನಿಗದಿಪಡಿಸಿದ ಪ್ರಕಾರ ಅದರ ಆಡಳಿತವನ್ನು ನಿರ್ವಹಿಸಬಹುದಾಗಿದೆ.

(2) ನಿಧಿಗೆ,—

(ಎ) 56ನೇ ವಿಭಾಗದ (1)ನೇ ಉಪ-ವಿಭಾಗದ (ಎ) ಖಂಡದಲ್ಲಿ ಉಲ್ಲೇಖಿಸಿದ ಮೀಸಲು ನಿಧಿಯ ಐವತ್ತು ಶೇಕಡಾಕ್ಕಿಂತ ಮೀರದ ಒಂದು ಮೊತ್ತವನ್ನು; ಮತ್ತು

(ಬಿ) ಕೃಷಿ ಸಾಲ ಸಂಘಗಳು ತಮ್ಮ ನಿವ್ವಳ ಲಾಭದಿಂದ ಮೀಸಲಾಗಿಟ್ಟ ಕೃಷಿ ಸಾಲ ಸ್ಥಿರೀಕರಣ ನಿಧಿಯ ಐವತ್ತು ಶೇಕಡಾಕ್ಕಿಂತ ಮೀರದ; ಅಗತ್ಯವಿರುವಾಗ;

(ಸಿ) ಸರಕಾರ ಕಾಲಾಕಾಲಕ್ಕೆ ಅನುಮತಿಸಬಹುದಾದ ಅಂತಹ ನಿಧಿ; ಮತ್ತು

(ಡಿ) ಸ್ಕೀಮ್‌ನ ಉಪಬಂಧಗಳ ಪ್ರಕಾರ ನಿಧಿಗೆ ಜಮಾ ಮಾಡಬಹುದಾದ ಇತರ ಯಾವುದೇ ಮೊತ್ತವನ್ನು ಮೀಸಲಿಡತಕ್ಕದ್ದು.".

30. 59ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 59ನೇ ವಿಭಾಗದಲ್ಲಿ ಆಸ್ತಿತ್ವದಲ್ಲಿನ (2)ನೇ ಉಪ-ವಿಭಾಗದ ನಂತರ ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(2ಎ) ಒಂದು ಸಂಘವು, ರೆಜಿಸ್ಟ್ರಾರ್‌ರವರು ನಿಗದಿಪಡಿಸಿದ ಮತ್ತು ಪ್ರಸ್ತುತ ಸಂಘದ ಬೈಲಾಗಳಲ್ಲಿ ಉಪಬಂಧಿಸಿದ ವ್ಯಕ್ತಿಗತ ಗರಿಷ್ಠ ಸಾಲಪಡೆಯುವಿಕೆಯ ಅಧಿಕಾರವನ್ನು ಮೀರದ ಯಾವುದೇ ಮೊತ್ತವನ್ನು ಮುಂಗಡವಾಗಿ ಅಥವಾ ಸಾಲವಾಗಿ ಮಂಜೂರುಮಾಡತಕ್ಕದ್ದಲ್ಲ. ಪ್ರಸ್ತುತ ಉಪಬಂಧದ ಯಾವುದೇ ಉಲ್ಲಂಘನೆಗೆ, ಸಂಬಂಧಪಟ್ಟ ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಹಕ ಕಮಿಟಿ ಮತ್ತು ಅಧಿನಿಯಮದ 94ನೇ ವಿಭಾಗದ (7ಎ) ಉಪ-ವಿಭಾಗದಲ್ಲಿ ಒದಗಿಸಲಾದ ಶಿಕ್ಷೆಗೆ ಹೊಣೆಗಾರರಾಗಿರುವರು.".

31. 59ಎ ಮತ್ತು 59ಬಿ ಎಂಬಿ ಹೊಸ ವಿಭಾಗಗಳ ಸೇರ್ಪಡೆ.—ಪ್ರಧಾನ ಅಧಿನಿಯಮದ 59ನೇ ವಿಭಾಗದ ನಂತರ ಈ ಕೆಳಗಿನ ವಿಭಾಗಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*59ಎ. ಆಸ್ತಿಯ ಮೌಲ್ಯ ನಿರ್ಣಯ.*—ಒಂದು ಸಹಕಾರಿ ಸಂಘಕ್ಕೆ ಒತ್ತೆಯಾಗಿ ಅಡಮಾನವಿಡುವ ಸ್ಥಿರ ಆಸ್ತಿಯ ಮೌಲ್ಯ ನಿರ್ಣಯದಲ್ಲಿ ಸಾಲದ ಮೊತ್ತ ಹತ್ತು ಲಕ್ಷಕ್ಕಿಂತ ಕಡಿಮೆಯಾಗಿದ್ದಲ್ಲಿ ಕಮಿಟಿಯು ಅಧಿಕೃತಗೊಳಿಸಿದ ಒಬ್ಬ ಅಧಿಕಾರಿ/ಅಧಿಕಾರಿಗಳು ಮತ್ತು ಸಾಲದ ಮೊತ್ತ ಹತ್ತು ಲಕ್ಷಕ್ಕಿಂತ ಮೀರಿದ್ದಲ್ಲಿ ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಕಮಿಟಿಯ ಇಬ್ಬರು ಸದಸ್ಯರು ಮತ್ತು ಕಮಿಟಿಯು ಅಧಿಕೃತಗೊಳಿಸಿದ ಒಬ್ಬ ಸ್ವತಂತ್ರ ಮೌಲ್ಯಮಾಪಕರು ಒಳಗೊಂಡ ಐದು ಸದಸ್ಯರನ್ನೊಳಗೊಂಡ ಒಂದು ಪ್ಯಾನೆಲ್ ಮೌಲ್ಯ ನಿರ್ಣಯ ಮಾಡತಕ್ಕದ್ದು.

59ಬಿ. ಸಂಘಗಳು ಚರ ಮತ್ತು ಸ್ಥಿರ ಆಸ್ತಿಗಳನ್ನು ಖರೀದಿಸುವುದು.—ಸಂಘಗಳು, ಸಂಘಗಳ ಸ್ವಂತ ನಿಧಿಯನ್ನು ಬಳಸಿ ಚರ ಮತ್ತು ಸ್ಥಿರ ಆಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳುವಾಗ ನಿಗದಿಪಡಿಸಿದ ಪ್ರಕಾರದ, ಮಾನದಂಡಗಳನ್ನು ಪಾಲಿಸತಕ್ಕದ್ದು.".

This is a digitally signed Gazette.
Authenticity may be verified through https://compose.kerala.gov.in/

11

32. 63ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ *63*ನೇ ವಿಭಾಗದಲ್ಲಿ,—

(i) *(4)*ನೇ ಉಪ-ವಿಭಾಗದಲ್ಲಿ, ಮೊದಲಿನ ಷರತ್ತಿನ ನಂತರ ಈ ಕೆಳಗಿನ ಷರತ್ತನ್ನು ಸೇರಿಸತಕ್ಕದ್ದು, ಅದೇನೆಂದರೆ:—

"ಅದೂ ಅಲ್ಲದೆ, ಆದಾಯ ತೆರಿಗೆ ರಿಟರ್ನ್ಗಳನ್ನು ಸಲ್ಲಿಸಲು ಹೊಣೆಗಾರರಾದ ಸಂಘಗಳ ವಿಷಯದಲ್ಲಿ, ಪ್ರಸ್ತುತ ಉದ್ದೇಶಕ್ಕಾಗಿರುವ ಆರ್ಥಿಕ ಹೇಳಿಕೆಯನ್ನು, ಆರ್ಥಿಕ ವರ್ಷ ಮುಕ್ತಾಯಗೊಂಡ ಮೂರು ತಿಂಗಳೊಳಗೆ ಲೆಕ್ಕಪರಿಶೋಧಕರು ಕ್ರಮಬದ್ಧವಾಗಿ ಪ್ರಮಾಣೀಕರಿಸತಕ್ಕದ್ದು.".

(ii) *(9)*ನೇ ಉಪ-ವಿಭಾಗದ ಮತ್ತು ಅದರ ಷರತ್ತಿನ ಬದಲು, ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*(9)* ಪ್ರತಿಯೊಂದು ಸಹಕಾರಿ ಸಂಘವು ರಾಜ್ಯ ಸರಕಾರ ಅಂಗೀಕರಿಸಿ ಅಧಿಸೂಚಿಸಿದಂತಹ ಸ್ಕೀಮ್ಗೆ ಅನುಗುಣವಾಗಿ ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕರು ನೇಮಿಸುವ ಲೆಕ್ಕಪರಿಶೋಧಕರ ಒಂದು ತಂಡದಿಂದ ಲೆಕ್ಕಪರಿಶೋಧನೆಯನ್ನು ನಡೆಸತಕ್ಕದ್ದು. ತಂಡದ ರೂಪೀಕರಣ, ರಚನೆ, ಲೆಕ್ಕಪರಿಶೋಧನಾ ರೀತಿ, ಲೆಕ್ಕಪರಿಶೋಧನಾ ವರದಿಯ ಪ್ರಕ್ರಿಯೆ ಮತ್ತು ಸಿದ್ಧಪಡಿಸುವಿಕೆಯ ವಿಧಾನ ಎಂಬವುಗಳನ್ನು ಸರಕಾರ ಅಂಗೀಕರಿಸಿದ ಸ್ಕೀಮ್ನಲ್ಲಿ ಒಳಪಡಿಸತಕ್ಕದ್ದು.".

(iii) *(10)*ನೇ ಉಪ-ವಿಭಾಗವನ್ನು ಈ ಕೆಳಗಿನಂತೆ ಪ್ರತಿಯೋಜಿಸತಕ್ಕದ್ದು, ಅದೇನೆಂದರೆ:—

"*(10)* ಎಲ್ಲಾ ಅಪೆಕ್ಸ್ ಸಂಘಗಳ ಮತ್ತು ಎಲ್ಲಾ ಗ್ರಾಮೀಣ ಸಹಕಾರಿ ಬೇಂಕುಗಳ ಹಣಕಾಸು ಸಂಬಂಧಿತ ಲೆಕ್ಕಗಳನ್ನು ಸಹಕಾರಿ ಲೆಕ್ಕಪರಿಶೋಧಕ ನಿರ್ದೇಶಕರು ಅಂಗೀಕರಿಸಿದ ಲೆಕ್ಕಪರಿಶೋಧನಾ ಸಂಸ್ಥೆಗಳಿಂದ ಲೆಕ್ಕಪರಿಶೋಧನೆ ಮಾಡಿಸತಕ್ಕದ್ದು ಮತ್ತು ಸಹಾಯ ಲಭಿಸಿದ ಅಪೆಕ್ಸ್ ಸಂಘಗಳ ಆಡಳಿತಾತ್ಮಕ ವಿಷಯಗಳನ್ನು ಮತ್ತು ಸಂಬಂಧಿತ ಲೆಕ್ಕಗಳನ್ನು ಇಲಾಖಾ ಮಟ್ಟದ ಲೆಕ್ಕಪರಿಶೋಧಕರಿಂದ ಲೆಕ್ಕಪರಿಶೋಧನೆ ಮಾಡಿಸತಕ್ಕದ್ದು ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕರಿಗೆ ಸಲ್ಲಿಸತಕ್ಕದ್ದು. ಪ್ರಸ್ತುತ ಲೆಕ್ಕಪರಿಶೋಧನೆಯಲ್ಲಿ ಸಂಘದ ಹಣದ ಅಥವಾ ಸ್ವತ್ತಿನ ಅಥವಾ ಆಸ್ತಿಗಳ ತಪ್ಪು ಬಳಕೆ ಮಾಡಲ್ಪಟ್ಟಿದೆಯೆಂದೋ ಅಥವಾ ಯಾವುದೇ ದುರುಪಯೋಗ ಅಥವಾ ವಂಚನೆ ಅಥವಾ ದ್ರವ್ಯಾಪಹರಣ ಮಾಡಲ್ಪಟ್ಟಿದೆಯೆಂದೋ ಬಹಿರಂಗವಾದಲ್ಲಿ, ಲೆಕ್ಕಪರಿಶೋಧಕರ ತಂಡವು ಒಂದು ವಿಶೇಷ ವರದಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ಸಹಕಾರಿ ಸಂಘದ ಲೆಕ್ಕಪರಿಶೋಧನಾ ನಿರ್ದೇಶಕರಿಗೆ ಮತ್ತು ರೆಜಿಸ್ಟ್ರಾರ್ರವರಿಗೆ ಕಳುಹಿಸಿಕೊಡತಕ್ಕದ್ದು. ರೆಜಿಸ್ಟ್ರಾರ್ರವರು ಸ್ವತಃ ಅಥವಾ ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕರು ರೆಜಿಸ್ಟ್ರಾರ್ರವರೊಂದಿಗೆ ಸಮಾಲೋಚಿಸುತಾ ಒಂದು ವಿವರವಾದ ವಿಚಾರಣೆಗಾಗಿ *68*ಎ ವಿಭಾಗ ಪ್ರಕಾರ ನೇಮಿಸಲ್ಪಟ್ಟ ವಿಜಿಲೆನ್ಸ್ ಅಧಿಕಾರಿಗೆ ವಿಶೇಷ ವರದಿಯನ್ನು ಕಳುಹಿಸಿಕೊಡತಕ್ಕದ್ದು.".

(iv) *(12)*ನೇ ಉಪ-ವಿಭಾಗದಲ್ಲಿ "ಅವರು ಸಂಘದ ಸದಸ್ಯರಾಗಿರಬೇಕೆಂದಿಲ್ಲ ಅವರಿಂದ" ಎಂಬ ಪದಗಳ ಬದಲು "ಸದಸ್ಯರಿಂದ" ಎಂಬ ಪದಗಳನ್ನು ಸೇರಿಸತಕ್ಕದ್ದು.

(v) *(12)*ನೇ ಉಪ-ವಿಭಾಗದ ನಂತರ ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*(12ಎ)* ಒಂದು ಸಹಕಾರಿ ಸಂಘದ ಲೆಕ್ಕಪರಿಶೋಧನೆಯಲ್ಲಿ ಸತತವಾದ ಎರಡಕ್ಕಿಂತ ಹೆಚ್ಚು ಲೆಕ್ಕಪರಿಶೋಧನೆಗಳಲ್ಲಿ ಒಬ್ಬ ಲೆಕ್ಕ ಪರಿಶೋಧಕನನ್ನು ಅಥವಾ ಲೆಕ್ಕಪರಿಶೋಧನಾ ಸಂಸ್ಥೆಗಳನ್ನು ಅಥವಾ ಲೆಕ್ಕಪರಿಶೋಧನಾ ತಂಡವನ್ನು ಹೊಣೆಗೊಳಿಸತಕ್ಕದ್ದಲ್ಲ.".

33. 64ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ *64*ನೇ ವಿಭಾಗದಲ್ಲಿ,—

(i) *(1)*ನೇ ಉಪ-ವಿಭಾಗದ ನಂತರ ಈ ಕೆಳಗಿನ ಉಪ-ವಿಭಾಗಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*(1ಎ)* ಒಂದು ಸಾಮಾನ್ಯ ಸಾಫ್ಟ್ವೇರ್ ಅಥವಾ ರೆಜಿಸ್ಟ್ರಾರ್ರವರು ಅಂಗೀಕರಿಸಿದ ಇತರ ಯಾವುದೇ ಸಾಫ್ಟ್ವೇರ್ ಅನ್ನು ಬಳಸಿ ಲೆಕ್ಕಗಳನ್ನು ಸಿದ್ಧಪಡಿಸುವ ಸಹಕಾರಿ ಸಂಘಗಳ ವಿಷಯದಲ್ಲಿ, ಇನ್ಫರ್ಮೇಶನ್ ಸಿಸ್ಟಮ್ನ ಲೆಕ್ಕಪರಿಶೋಧನೆ ಮತ್ತು ಸಾಫ್ಟ್ವೇರ್ನ ಮತ್ತು ಹಾರ್ಡ್ವೇರ್ನ ಮೌಲ್ಯಮಾಪನವನ್ನು ಲೆಕ್ಕಪರಿಶೋಧನೆಯಲ್ಲಿ ಒಳಪಡಿಸತಕ್ಕದ್ದು.

(1ಬಿ) ಇನ್ಫರ್ಮೇಶನ್ ಸಿಸ್ಟಮ್ನ ಲೆಕ್ಕಪರಿಶೋಧನೆಯಲ್ಲಿ ಮತ್ತು ಸಾಫ್ಟ್ವೇರ್ನ ಮತ್ತು ಹಾರ್ಡ್ವೇರ್ನ ಮೌಲ್ಯಮಾಪನದ ವೇಳೆಯಲ್ಲಿ ಯಾವುದೇ ದಾಖಲೆಗಳ ಕೃತಕತೆ ಅಥವಾ ಸಾಫ್ಟ್ವೇರ್ನ ಅಥವಾ ಹಾರ್ಡ್ವೇರ್ನ ಚಟುವಟಿಕೆಯಲ್ಲಿನ ಕೃತಕತೆಯು ಬಹಿರಂಗವಾದಲ್ಲಿ, ಲೆಕ್ಕ ಪರಿಶೋಧಕ/ಲೆಕ್ಕ ಪರಿಶೋಧಕರುಗಳು/ಲೆಕ್ಕ ಪರಿಶೋಧನಾ ಸಂಸ್ಥೆಗಳು ಪ್ರಸ್ತುತ ಕೃತಕತೆಗಳನ್ನು ಸಹಕಾರಿ ಲೆಕ್ಕ ಪರಿಶೋಧನಾ ನಿರ್ದೇಶಕರಿಗೆ ಮತ್ತು ರೆಜಿಸ್ಟ್ರಾರ್ರವರಿಗೆ ತಿಳಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

12

(1ಸಿ) ರೆಜಿಸ್ಟ್ರಾರ್‌ರವರು ಸ್ವತಃ ಅಥವಾ ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕರು ರೆಜಿಸ್ಟ್ರಾರ್‌ರವರೊಂದಿಗೆ ಸಮಾಲೋಚಿಸುತಾ ಸಿಸ್ಟಮ್‌ನ ಕೃತಕತೆಗಳಿಗೆ ಸಂಬಂಧಿಸಿದ ತನಿಖೆಗಾಗಿ, ಆಯಾಯ ವಿಷಯದಂತೆ ಪೋಲೀಸಿಗೆ ಅಥವಾ ವಿಜಿಲೆನ್ಸ್ ಅಧಿಕಾರಿಯವರಿಗೆ ಮಾಹಿತಿಯನ್ನು ನೀಡತಕ್ಕದ್ದು.".

(ii) *(4ಎ) ಉಪ-ವಿಭಾಗದಲ್ಲಿ* "*ಒಂದು ತಿಂಗಳೊಳಗೆ*" *ಎಂಬ ಪದಗಳ ಬದಲು* "*ಹದಿನೈದು ದಿವಸಗಳೊಳಗೆ*" *ಎಂಬ ಪದಗಳನ್ನು ಸೇರಿಸತಕ್ಕದ್ದು ಮತ್ತು* "*ಅವರು ಸದಸ್ಯರಾಗಿರಬೇಕೆಂದಿಲ್ಲ ಅವರಿಂದ*" *ಎಂಬ ಪದಗಳ ಬದಲು* "*ಸದಸ್ಯರುಗಳಿಂದ ಅದರಲ್ಲಿ*" *ಎಂಬ ಪದಗಳನ್ನು ಸೇರಿಸತಕ್ಕದ್ದು.*

(iii) *(4ಬಿ) ಉಪ-ವಿಭಾಗದಲ್ಲಿ* "*ಮೂರು ತಿಂಗಳೊಳಗೆ*" *ಎಂಬ ಪದಗಳ ಬದಲು* "*ನಲ್ವತ್ತೈದು ದಿವಸಗಳೊಳಗೆ*" *ಎಂಬ ಪದಗಳನ್ನು ಸೇರಿಸತಕ್ಕದ್ದು.*

(iv) *(5)ನೇ ಉಪ-ವಿಭಾಗದಲ್ಲಿ,—*

(ಎ) "*ಲೆಕ್ಕ ಪರಿಶೋಧಕರೋ*" *ಎಂಬ ಪದದ ಬದಲು* "*ಅಥವಾ ಲೆಕ್ಕ ಪರಿಶೋಧಕರ ತಂಡವೋ*" *ಎಂಬ ಪದಗಳನ್ನು ಸೇರಿಸತಕ್ಕದ್ದು.*

(ಬಿ) "*ನಾಲ್ಕು ತಿಂಗಳೊಳಗೆ*" *ಎಂಬ ಪದಗಳ ಬದಲು* "*ತೊಂಭತ್ತು ದಿವಸಗಳೊಳಗೆ*" *ಎಂಬ ಪದಗಳನ್ನು ಸೇರಿಸತಕ್ಕದ್ದು.*

(v) *(5)ನೇ ಉಪ-ವಿಭಾಗದ ನಂತರ ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—*

"*(5ಎ) ಲೆಕ್ಕಪರಿಶೋಧನೆಯನ್ನು ಪೂರ್ತಿಗೊಳಿಸಿ ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕರಿಗೆ ಲೆಕ್ಕಪರಿಶೋಧನಾ ವರದಿಯನ್ನು ಸಲ್ಲಿಸುವುದಕ್ಕೆ ಮುಂಚಿತವಾಗಿ, ಲೆಕ್ಕ ಪರಿಶೋಧಕರು, ಲೆಕ್ಕ ಪರಿಶೋಧಕರ ತಂಡ ಅಥವಾ ಲೆಕ್ಕ ಪರಿಶೋಧನಾ ಸಂಸ್ಥೆಯು, ಆಯಾಯ ವಿಷಯದಂತೆ, ಲೆಕ್ಕಪರಿಶೋಧನೆಯಲ್ಲಿನ ಪತ್ತೆಹಚ್ಚುವಿಕೆಗಳನ್ನು ಸಂಬಂಧಪಟ್ಟ ಸಂಘದ ನಿರ್ವಹಣಾ ಕಮಿಟಿಯೊಂದಿಗೆ ಚರ್ಚೆ ಮಾಡತಕ್ಕದ್ದು ಮತ್ತು ಅವರ ಪ್ರತ್ಯುತ್ತರವನ್ನು ಲಿಖಿತಮುಖೇನ ಪಡೆಯತಕ್ಕದ್ದು.*".

(vi) *(9)ನೇ ಉಪ-ವಿಭಾಗವನ್ನು ಈ ಕೆಳಗಿನಂತೆ ಪ್ರತಿಯೋಜಿಸತಕ್ಕದ್ದು, ಅದೇನೆಂದರೆ:—*

"*(9) ಸಂಘದ ಚಟುವಟಿಕೆಯಲ್ಲಿ ಯಾವುದೇ ನ್ಯೂನತೆಗಳಿವೆಯೆಂದು ಪ್ರಸ್ತುತ ವಿಭಾಗ ಪ್ರಕಾರ ನಡೆದ ಲೆಕ್ಕಪರಿಶೋಧನೆಯಲ್ಲಿ ಬಹಿರಂಗವಾದಲ್ಲಿ, ಲೆಕ್ಕಪರಿಶೋಧನಾ ವರದಿಯಲ್ಲಿ ಬೊಟ್ಟುಮಾಡಿದ ನ್ಯೂನತೆಗಳು ಮತ್ತು ಅವ್ಯವಹಾರಗಳು, ಯಾವುದೇ ಇದ್ದಲ್ಲಿ ಅದನ್ನು ಪರಿಹರಿಸಲು ಕಮಿಟಿಯು ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಪ್ರತಿ ವರ್ಷ ಸೇರುವ ಸಾಮಾನ್ಯ ಸಭೆಯ ಸಮಕ್ಷ ಕೈಗೊಂಡ ಕ್ರಮಕ್ಕೆ ಸಂಬಂಧಿಸಿದ ವರದಿಯೊಂದಿಗೆ ಲೆಕ್ಕಪರಿಶೋಧನಾ ವರದಿಯನ್ನು ಸಲ್ಲಿಸತಕ್ಕದ್ದು ಮತ್ತು ಅದರಲ್ಲಿ ಪ್ರಸ್ತುತ ನ್ಯೂನತೆಗಳನ್ನು ಮತ್ತು ಅವ್ಯವಹಾರಗಳನ್ನು ಪರಿಹರಿಸುವವರೆಗೆ ಕಮಿಟಿಗಳು ಕ್ರಮಗಳನ್ನು ಕೈಗೊಳ್ಳುವುದನ್ನು ಮುಂದುವರಿಸತಕ್ಕದ್ದು ಮತ್ತು ಎಲ್ಲಾ ನ್ಯೂನತೆಗಳನ್ನು ಮತ್ತು ಅವ್ಯವಹಾರಗಳನ್ನು ಪರಿಹರಿಸುವವರೆಗೆ ಪ್ರತಿವರ್ಷ ಅದನ್ನು ಸಾಮಾನ್ಯ ಸಭೆಯಲ್ಲಿ ಮಂಡಿಸತಕ್ಕದ್ದು. ಸಾಮಾನ್ಯ ಸಭೆಯು ನಡೆದ ದಿನಾಂಕದಿಂದ ಹದಿನೈದು ದಿವಸಗಳೊಳಗೆ ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕರಿಗೆ ಮತ್ತು ರೆಜಿಸ್ಟ್ರಾರವರಿಗೆ ಕೈಗೊಂಡ ಕ್ರಮದ ವರದಿಯನ್ನು ಕಮಿಟಿಗೆ ಕಳುಹಿಸಿಕೊಡತಕ್ಕದ್ದು.*".

(vii) *(9)ನೇ ಉಪ-ವಿಭಾಗದ ನಂತರ ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—*

"*(9ಎ) ಯಾವುದೇ ವ್ಯಕ್ತಿಯು, ಸಂಘಕ್ಕೆ ಉಂಟುಮಾಡಿದ ನಾಶನಷ್ಟಗಳ ಮೇಲಿನ ಕಾನೂನುಕ್ರಮಗಳಿಂದ ಹೊರತುಪಡಿಸುವುದಕ್ಕಾಗಿ ದಾಖಲೆಗಳನ್ನು ಅಥವಾ ದಸ್ತಾವೇಜುಗಳನ್ನು ನಾಶಮಾಡಲು ಅಥವಾ ತಿದ್ದಲು ಪ್ರಯತ್ನಿಸಿರುವನೆಂದು ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕರಿಗೆ ಅಥವಾ ಆತನು ಸಂಘದಲ್ಲಿ ಲೆಕ್ಕಪರಿಶೋಧನೆಯನ್ನು ನಡೆಸಲು ಅಧಿಕೃತಗೊಳಿಸಿದ ವ್ಯಕ್ತಿಗೆ ಅಭಿಪ್ರಾಯವಿದ್ದಲ್ಲಿ, ಪ್ರಸ್ತುತ ಮಾಹಿತಿಯನ್ನು ತನ್ನ ನಿಯಂತ್ರಣ ಅಧಿಕಾರಿಗೆ ರೆಜಿಸ್ಟ್ರಾರ್‌ರವರು ಅಥವಾ ಆತನು ಅಧಿಕೃತಗೊಳಿಸಿದ ವ್ಯಕ್ತಿಗಳೊಂದಿಗೆ ಸಮಾಲೋಚಿಸುತಾ ಆಯಾಯ ವಿಷಯದಂತೆ, ಪೋಲೀಸಿಗೆ ಅಥವಾ ವಿಜಿಲೆನ್ಸ್ ಅಧಿಕಾರಿಗೆ ದೂರು ಫೈಲು ಮಾಡುವುದಕ್ಕಾಗಿ ವರದಿ ಮಾಡತಕ್ಕದ್ದಾಗಿದೆ.*".

34. 65ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 65ನೇ ವಿಭಾಗದಲ್ಲಿ,—

(i) *(1)ನೇ ಉಪ-ವಿಭಾಗದಲ್ಲಿ,—*

(ಎ) (ಬಿ) ಖಂಡವನ್ನು ಹೊರತುಪಡಿಸತಕ್ಕದ್ದು;

This is a digitally signed Gazette.
Authenticity may be verified through https://compose.kerala.gov.in/

13

(ಬ) (ಡಿ) ಖಂಡದ ಬದಲು ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಡಿ) ಸಂಘದ ಕಮಿಟಿಯ ಬಹುಪಾಲು ಸದಸ್ಯರುಗಳ ಅಥವಾ ಸಂಘದ ಒಟ್ಟು ಸದಸ್ಯರ ಮೂರನೇ ಒಂದು ಭಾಗಕ್ಕಿಂತ ಕಡಿಮೆಯಲ್ಲದ ಅಥವಾ ಸಾಮಾನ್ಯ ಸಭೆಯ ಕ್ವಾರಂಗೆ ಅಗತ್ಯವಿರುವಷ್ಟು ಸಂಖ್ಯೆಯ ಸದಸ್ಯರುಗಳ ಯಾವುದು ಕಡಿಮೆಯೋ ಅವರ ಅರ್ಜಿಯ ಮೇಲೆ; ಅಥವಾ.".

(ಸಿ) (ಎಫ್) ಖಂಡದಲ್ಲಿ, "ವ್ಯಕ್ತಿಯ ಮುಖಾಂತರ" ಎಂಬ ಪದಗಳ ಬದಲು "ವ್ಯಕ್ತಿಯ ಅಥವಾ ವ್ಯಕ್ತಿಗಳ ಮುಖಾಂತರ" ಎಂಬೀ ಪದಗಳನ್ನು ಸೇರಿಸತಕ್ಕದ್ದು.

(ii) *(2)ನೇ ಉಪ-ವಿಭಾಗದಲ್ಲಿ (ಸಿ) ಖಂಡದ ನಂತರ ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—*

"(ಡಿ) ತನಿಖೆಗೆ ಸಂಬಂಧಪಟ್ಟ ಅಥವಾ ಅದರಲ್ಲಿ ಒಳಪಟ್ಟ ವ್ಯಕ್ತಿ/ವ್ಯಕ್ತಿಗಳಿಗೆ ತನಿಖೆಯ ವಿಷಯವನ್ನು ಸೂಚಿಸುತಾ ರೆಜಿಸ್ಟರ್ಡ್ ಅಂಚೆಯ ಮುಖಾಂತರ ನೇರವಾಗಿ ತಕ್ಕ ನೋಟೀಸು ನೀಡತಕ್ಕದ್ದು ಮತ್ತು ಆತನ/ಅವರ ಭಾಗವನ್ನು ಆಲಿಸುವುದಕ್ಕಿರುವ ಒಂದು ಅವಕಾಶವನ್ನು ನೀಡತಕ್ಕದ್ದು.".

(iii) *(2)ನೇ ಉಪ-ವಿಭಾಗದ ನಂತರ ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—*

"(2ಎ) ಈ ವಿಭಾಗದ ಅಡಿಯಲ್ಲಿ ನಡೆಸಿದ ತನಿಖೆಯಲ್ಲಿ ಯಾವುದೇ ನ್ಯೂನತೆಯು ಬಹಿರಂಗವಾದಲ್ಲಿ, ರೆಜಿಸ್ಟ್ರಾರ್‌ರವರಿಗೆ ಅಥವಾ ತನಿಖೆ ನಡೆಸಲು ಆತನು ಅಧಿಕೃತಗೊಳಿಸಿದ ವ್ಯಕ್ತಿ/ವ್ಯಕ್ತಿಗಳಿಗೆ, ವೈಯುಕ್ತಿಕ ಹೊಣೆಗಾರಿಕೆಯನ್ನು ನಿರ್ಣಯಿಸುವುದು ಒಳಗೊಂಡು, ಸಂಘಕ್ಕೆ ಉಂಟಾದ ನ್ಯೂನತೆಗಳ ಮತ್ತು ದುರುಪಯೋಗಪಡಿಸಿಕೊಂಡ ಮೊತ್ತ ಮತ್ತು ಇತರ ನಷ್ಟಗಳಿಗೆ ಸಂಬಂಧಿಸಿದ ವಿವರವಾದ ಒಂದು ತನಿಖಾ ವರದಿಯನ್ನು ಸಿದ್ಧಪಡಿಸತಕ್ಕದ್ದು. ತನಿಖೆಯಲ್ಲಿ 94ನೇ ವಿಭಾಗದ ಅಡಿಯಲ್ಲಿ ಬರುವ ಯಾವುದೇ ಅಪರಾಧವು ಬಹಿರಂಗವಾದಲ್ಲಿ, ತನಿಖಾಧಿಕಾರಿಯು ಒಂದು ವಿಶೇಷ ವರದಿಯನ್ನು ಸಿದ್ಧಪಡಿಸಿ ರೆಜಿಸ್ಟ್ರಾರ್‌ರವರಿಗೆ ಸಲ್ಲಿಸತಕ್ಕದ್ದು ಮತ್ತು ಅದರ ಜೊತೆಗೆ ಆತನು ಒಂದು ಪ್ರತಿಯನ್ನು ವಿವರವಾದ ತನಿಖೆಗಾಗಿ, ಆಯಾಯ ವಿಷಯದಂತೆ, ಪೋಲೀಸಿಗೆ ಅಥವಾ ವಿಜಿಲೆನ್ಸ್ ಅಧಿಕಾರಿಗೆ ಕಳುಹಿಸಿಕೊಡತಕ್ಕದ್ದು.".

(iv) *(5)ನೇ ಉಪ-ವಿಭಾಗದಲ್ಲಿ "ಆರು ತಿಂಗಳ ಕಾಲಾವಧಿಯೊಳಗೆ" ಎಂಬ ಪದದ ಬದಲು "ನಾಲ್ಕು ತಿಂಗಳ ಕಾಲಾವಧಿಯೊಳಗೆ" ಎಂಬ ಪದವನ್ನು ಸೇರಿಸತಕ್ಕದ್ದು.*

(v) *(6)ನೇ ಉಪ-ವಿಭಾಗದಲ್ಲಿ "32ನೇ ವಿಭಾಗದ ಉಪಬಂಧಗಳಿಗನುಸಾರವಾಗಿ" ಎಂಬ ಪದಗಳ ಮತ್ತು ಅಂಕೆಯ ಬದಲು "ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಆತನು ಕ್ರಮವನ್ನು ಆರಂಭಿಸಬಹುದು" ಎಂಬ ಪದವನ್ನು ಮತ್ತು ಚಿಹ್ನೆಯನ್ನು ಸೇರಿಸತಕ್ಕದ್ದು.*

(vi) *(6)ನೇ ಉಪ-ವಿಭಾಗದ ನಂತರ ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—*

"(7) ಯಾವುದೇ ತನಿಖೆಯಲ್ಲಿ ಸಹಕಾರಿ ಸಂಘದಲ್ಲಿ ಯಾವುದೇ ಅವ್ಯವಹಾರ, ದುರುಪಯೋಗ ಅಥವಾ ವಂಚನೆ ಅಥವಾ ಹಣ ಅಥವಾ ಆಸ್ತಿಗಳ ಅಥವಾ ಸ್ವತ್ತುಗಳ ದುರುಪಯೋಗ ಮಾಡಿರುವುದಾಗಿ ಅಥವಾ ಸಂಘಕ್ಕೆ ಯಾವುದೇ ನಷ್ಟ ಉಂಟಾಗಿರುವುದಾಗಿ ಬಹಿರಂಗವಾದಲ್ಲಿ, ರೆಜಿಸ್ಟ್ರಾರ್‌ರವರಿಗೆ ಅಥವಾ ರೆಜಿಸ್ಟ್ರಾರ್‌ರವರು ಇದಕ್ಕಾಗಿ ವಿಶೇಷವಾಗಿ ಅಧಿಕೃತಗೊಳಿಸಿದ ಅಥವಾ ಹೊಣೆಗೊಳಿಸಿದ ಯಾವುದೇ ಅಧಿಕಾರಿಗೆ, ನಷ್ಟವನ್ನು ನಿರ್ಣಯಿಸುತಾ ಕಾನೂನುಕ್ರಮಗಳ ಮೂಲಕ ಸಂಘದಿಂದ ದುರುಪಯೋಗಪಡಿಸಿಕೊಂಡ ಅಥವಾ ವಂಚಿಸಿದ ಹಣವನ್ನು, ಆಸ್ತಿಗಳನ್ನು ಮತ್ತು ಸ್ವತ್ತುಗಳನ್ನು ಮರಳಿಪಡೆಯುವುದಕ್ಕೆ ಅಗತ್ಯವಾದ ತ್ವರಿತ ಕ್ರಮಗಳನ್ನು ಕೈಗೊಳ್ಳಬಹುದಾಗಿದೆ.".

35. 66ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 66ನೇ ವಿಭಾಗದಲ್ಲಿ,—

(i) *(2)ನೇ ಉಪ-ವಿಭಾಗದ ನಂತರ ಈ ಕೆಳಗಿನ ಉಪ-ವಿಭಾಗಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—*

"(2ಎ) ಅಪೆಕ್ಸ್, ಕೇಂದ್ರೀಯ ಮತ್ತು ಒಕ್ಕೂಟ ಸಹಕಾರಿ ಸಂಘಗಳ ಮತ್ತು ಇನ್ನಿತರ ಪ್ರಾಥಮಿಕ ಸಹಕಾರಿ ಸಂಘಗಳ ತಪಾಸಣೆಗಾಗಿ, ರೆಜಿಸ್ಟ್ರಾರ್‌ರವರಿಗೆ ಆತನ ನಿಯಂತ್ರಣದಲ್ಲಿರುವ ಅಧಿಕಾರಿಗಳ ವಿಶೇಷ ತಂಡವನ್ನು ಅಧಿಕೃತಗೊಳಿಸಬಹುದಾಗಿದೆ.

(2ಬಿ) ಅಂತಹ ತಪಾಸಣೆಗಳ ವರದಿಯನ್ನು ಸಂಬಂಧಪಟ್ಟ ಅಪೆಕ್ಸ್, ಕೇಂದ್ರೀಯ ಮತ್ತು ಒಕ್ಕೂಟ ಸಂಘಗಳಿಗೆ ಮತ್ತು ಎಲ್ಲಾ ಪ್ರಾಥಮಿಕ ಸಹಕಾರಿ ಸಂಘಗಳಿಗೆ ಮೂವತ್ತು ದಿವಸಗಳೊಳಗೆ ಲಿಖಿತ ಮುಖೇನ ನೀಡತಕ್ಕದ್ದು ಮತ್ತು ಮಾಹಿತಿ ಲಭಿಸಿದ ದಿನಾಂಕದಿಂದ ನಲ್ವತ್ತೈದು ದಿವಸಗಳ ಕಾಲಾವಧಿಯೊಳಗೆ ರೆಜಿಸ್ಟ್ರಾರ್‌ರವರ ಸಮಕ್ಷ ಖಂಡಿಕೆ ವಿಂಗಡಿಸಿರುವ ತೃಪ್ತಿದಾಯಕವಾದ ಒಂದು ಕ್ರಮದ ವರದಿಯನ್ನು ಫೈಲು ಮಾಡಲು ಕಮಿಟಿಗೆ ಮತ್ತು ಸಂಘದ ಪ್ರಧಾನ ಕಾರ್ಯನಿರ್ವಾಹಕನಿಗೆ ಹೊಣೆಗಾರಿಕೆಯಿರುವುದಾಗಿದೆ.".

(ii) *(6)ನೇ ಉಪ-ವಿಭಾಗ ಮತ್ತು ಅದರ ಷರತ್ತನ್ನು ಬಿಟ್ಟುಬಿಡತಕ್ಕದ್ದು.*

This is a digitally signed Gazette.
Authenticity may be verified through https://compose.kerala.gov.in/

14

36. 66ಸಿ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ *66ಸಿ* ವಿಭಾಗದಲ್ಲಿ,—

(i) ಅಸ್ತಿತ್ವದಲ್ಲಿರುವ ವಿಭಾಗವನ್ನು *(1)*ನೇ ಉಪ-ವಿಭಾಗವಾಗಿ ಅಂಕಿತಗೊಳಿಸತಕ್ಕದ್ದು.

(ii) ಆ ರೀತಿ ಅಂಕಿತಗೊಳಿಸಿದ *(1)*ನೇ ಉಪ-ವಿಭಾಗದ ಖಂಡ *(ಎಫ್)* ಅನ್ನು *(ಜಿ)* ಖಂಡವಾಗಿ ಪುನರಕ್ಷರಗೊಳಿಸತಕ್ಕದ್ದು.

(iii) ಆ ರೀತಿ ಪುನರಕ್ಷರಗೊಳಿಸಿದ *(ಜಿ)* ಖಂಡದ ಮೊದಲು ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*(ಎಫ್)* ಕಮಿಟಿಯು ಅಂಗೀಕರಿಸಿದ ಲೆಕ್ಕಪರಿಶೋಧನಾ ವರದಿಯ ಮೇಲಿನ ತಿದ್ದುಪಡಿ ವರದಿಗಳು ಮತ್ತು ಸಂಘದ ಸಾಮಾನ್ಯ ಸಭೆಯ ಠರಾವು.".

(iv) *(1)*ನೇ ಉಪ-ವಿಭಾಗದ ನಂತರ ಈ ಕೆಳಗಿನವುಗಳನ್ನು *(2)*ನೇ ಉಪ-ವಿಭಾಗವಾಗಿ ಸೇರಿಸತಕ್ಕದ್ದು, ಅದೇನೆಂದರೆ:—

"*(2)* ಪ್ರತಿಯೊಂದು ಸಹಕಾರಿ ಸಂಘವು ಸಹಕಾರಿ ಸಂಘದ ಮುಖ್ಯ ಕಾರ್ಯನಿರ್ವಾಹಕರು ಯಥಾಪ್ರಕಾರ ಪ್ರಮಾಣೀಕರಿಸಿದ ಕ್ರೆಡಿಟ್ ಚಟುವಟಿಕೆಗಳ ಮೇಲಿನ ತ್ರೈಮಾಸಿಕ ರಿಟರ್ನ್ಗಳನ್ನು ಸಲ್ಲಿಸತಕ್ಕದ್ದು ಮತ್ತು ಅದನ್ನು ರೆಜಿಸ್ಟ್ರಾರ್ರವರು ಯಥಾಪ್ರಕಾರ ಪುನಃ ಪರಿಶೀಲಿಸತಕ್ಕದ್ದು ಮತ್ತು ಪ್ರತಿಯೊಂದು ತ್ರೈಮಾಸಿಕವು ಮುಕ್ತಾಯವಾಗುವಾಗ ರೆಜಿಸ್ಟ್ರಾರ್ರವರು ಅವಲೋಕಿಸಿದ ವರದಿಯ ತಳಹದಿಯಲ್ಲಿ ತಿದ್ದುಪಡಿ ವರದಿಯನ್ನು ಸಲ್ಲಿಸತಕ್ಕದ್ದು. ಯಾವುದೇ ಸಂಘವು ಯಥಾಸಮಯದಲ್ಲಿ ರಿಟರ್ನ್ಗಳನ್ನು ಸಲ್ಲಿಸಲು ವಿಫಲವಾದಲ್ಲಿ ರೆಜಿಸ್ಟ್ರಾರ್ರವರಿಗೆ ನಿಗದಿಪಡಿಸಿದ ಪ್ರಕಾರದ ಸಂಘಗಳ ವರ್ಗೀಕರಣ ಮತ್ತು ಕ್ಯಾಟಗರಿಯನ್ನು ತಳಹದಿಯನ್ನಾಗಿಸಿ ಹತ್ತು ಸಾವಿರ ರೂಪಾಯಿಗಿಂತ ಮೀರದ ದಂಡವನ್ನು ಹೊರಿಸಲು ಅಧಿಕಾರವಿರುವುದಾಗಿದೆ.".

37. 68ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ *68*ನೇ ವಿಭಾಗದಲ್ಲಿ,—

(i) *(1)*ನೇ ಉಪ-ವಿಭಾಗದಲ್ಲಿ "ಅದರ ಚಟುವಟಿಕೆಯನ್ನು ಮುಕ್ತಾಯಗೊಳಿಸುವ ಸಮಯದಲ್ಲಿ" ಎಂಬ ಪದಗಳ ನಂತರ "ಅಥವಾ ವಿಜಿಲೆನ್ಸ್ ಅಧಿಕಾರಿಯವರ ವರದಿಯ ತಳಹದಿಯಲ್ಲಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) *(3)*ನೇ ಉಪ-ವಿಭಾಗದಲ್ಲಿ,—

(ಎ) "*(2)*" ಎಂಬ ಅಂಕೆಯ ಮತ್ತು ಚಿಹ್ನೆಯ ನಂತರ "ಅರವತ್ತು ದಿವಸಗಳ ಕಾಲಾವಧಿಯೊಳಗೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) ಈ ಕೆಳಗಿನ ಷರತ್ತನ್ನು ಸೇರಿಸತಕ್ಕದ್ದು, ಅದೇನೆಂದರೆ:—

"ಆದರೆ ಅಂತಹ ಕಾಲಾವಧಿಯನ್ನು ರೆಜಿಸ್ಟ್ರಾರ್ರವರ ವಿವೇಚನಾಧಿಕಾರವನ್ನು ಬಳಸಿ ಕಾಲಾಕಾಲಗಳಲ್ಲಿ ಲಿಖಿತವಾಗಿ ದಾಖಲಿಸಿದ ಕಾರಣಗಳಿಂದಾಗಿ ವಿಸ್ತರಿಸಬಹುದಾಗಿದೆ ಮತ್ತು ಯಾವುದೇ ಸಂದರ್ಭದಲ್ಲಿ ಆ ರೀತಿ ವಿಸ್ತರಿಸಿದ ಕಾಲಾವಧಿಯು ಅರವತ್ತು ದಿವಸಗಳನ್ನು ಮೀರತಕ್ಕದ್ದಲ್ಲ.".

38. 68ಬಿ ಎಂಬ ಹೊಸ ವಿಭಾಗದ ಸೇರ್ಪಡೆ.—ಪ್ರಧಾನ ಅಧಿನಿಯಮದ *68ಎ* ವಿಭಾಗದ ನಂತರ ಈ ಕೆಳಗಿನವುಗಳನ್ನು *68ಬಿ* ವಿಭಾಗವನ್ನಾಗಿ ಸೇರಿಸತಕ್ಕದ್ದು, ಅದೇನೆಂದರೆ:—

"*68ಬಿ. ಅವ್ಯವಹಾರಗಳು ಇತ್ಯಾದಿಯನ್ನು ನಿರ್ವಹಿಸಲು ಸರಕಾರ ಅಥವಾ ರೆಜಿಸ್ಟ್ರಾರ್ರವರಿಗೆ ಇರುವ ಅಧಿಕಾರಗಳು.*— *(1) 1860*ರ ಭಾರತೀಯ ದಂಡ ಸಂಹಿತೆಯಲ್ಲಿ ಅಥವಾ *1988*ರ ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮ ಅಥವಾ ಅವೆರಡರಲ್ಲಿ ಇರುವ ಉಪಬಂಧಗಳ ಪ್ರಕಾರ ಒಂದು ಸಂಘದಲ್ಲಿನ ಹಣದ ದುರುಪಯೋಗ ಅಥವಾ ಅವ್ಯವಹಾರಗಳು ಅಥವಾ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಪ್ರಕರಣಗಳನ್ನು ಸರಕಾರಕ್ಕೆ ಅಥವಾ ರೆಜಿಸ್ಟ್ರಾರ್ರವರಿಗೆ ಆಯಾಯ ವಿಷಯದಂತೆ, ತನಿಖೆಗೆ ಮತ್ತು ಮುಂದುವರಿದ ಕ್ರಮಗಳಿಗಾಗಿ ಪೋಲೀಸಿಗೆ ಅಥವಾ ವಿಜಿಲೆನ್ಸ್ ಆಂಟಿ ಕರಪ್ಷನ್ ಬ್ಯೂರೋಗೆ, ಆಯಾಯ ವಿಷಯದಂತೆ, ಕಳುಹಿಸಿಕೊಡಬಹುದಾಗಿದೆ.

(2) ಒಂದು ಸಂಘದ ಕಮಿಟಿಯ ಸದಸ್ಯರ ಅಥವಾ ಅಧಿಕಾರಿಗಳ ಮತ್ತು ನೌಕರರ ಅಥವಾ ಅವರಿಬ್ಬರ ವಿರುದ್ಧ *1988*ರ ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮ ಪ್ರಕಾರದ ಒಂದು ಅಪರಾಧದ ವಿಚಾರಣೆ/ಎನ್ಕ್ವಯರಿ ಅಥವಾ ತನಿಖೆಯನ್ನು ನಡೆಸುವುದಕ್ಕೆ ಮತ್ತು ಅಪರಾಧದ ಸಂಜ್ಞಾನಕ್ಕೆ ಅನುಮತಿ ನೀಡುವುದಕ್ಕಿರುವ ಅಧಿಕಾರಿ ರೆಜಿಸ್ಟ್ರಾರ್ರವರು ಆಗಿರುವರು.

(3) ಸರಕಾರವು ಗೊತ್ತುಪಡಿಸುವ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ವಿಷಯದಲ್ಲಿ ಅನುಮತಿಯನ್ನು ನೀಡಬೇಕಾದ ಅಧಿಕಾರಿಯವರು ಸರಕಾರದ ಸಹಕಾರಿ ಇಲಾಖೆಯ ಕಾರ್ಯದರ್ಶಿಯವರು ಆಗಿರುವರು.".

This is a digitally signed Gazette.
Authenticity may be verified through https://compose.kerala.gov.in/

15

39. 69ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 69ನೇ ವಿಭಾಗದ (1)ನೇ ಉಪ-ವಿಭಾಗದಲ್ಲಿ,—

(i) (ಎಚ್) ಖಂಡದ ಬದಲು ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಎಚ್) ಸಂಘ ಮತ್ತು ಸಂಘದ ಒಬ್ಬ ಸಾಲಗಾರನ ನಡುವೆ; ಅಥವಾ".

(ii) (ಎಚ್) ಖಂಡದ ನಂತರ, ಈ ಕೆಳಗಿನ (ಐ), (ಜೆ) ಎಂಬೀ ಖಂಡಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಐ) ಸಹಕಾರಿ ಸಂಘ ಮತ್ತು 14 ಎಎ ವಿಭಾಗ ಪ್ರಕಾರದ ಅನುಬಂಧಿತ ಸಂಸ್ಥೆಗಳ ನಡುವೆ; ಅಥವಾ

(ಜೆ) 14ಬಿ ವಿಭಾಗ ಪ್ರಕಾರ ರಚಿಸಲಾದ ಪಾಲುದಾರಿಕೆಯಲ್ಲಿನ ಸದಸ್ಯರುಗಳ ನಡುವೆ, ಅಂತಹ ವಿವಾದಗಳಲ್ಲಿ ಹಣಕಾಸಿಗೆ ಸಂಬಂಧಿಸದ ವಿವಾದಗಳ ವಿಷಯದಲ್ಲಿ 70ಎ ವಿಭಾಗದ ಅಡಿಯಲ್ಲಿ ರಚಿಸಲಾದ ಸಹಕಾರಿ ಆರ್ಬಿಟ್ರೇಶನ್ ನ್ಯಾಯಾಲಯಕ್ಕೆ ಮತ್ತು ಹಣಕಾಸಿಗೆ ಸಂಬಂಧಿಸಿದ ವಿವಾದಗಳಲ್ಲಿ ರೆಜಿಸ್ಟ್ರಾರ್‌ರವರಿಗೆ ರೆಫರ್ ಮಾಡತಕ್ಕದ್ದು ಮತ್ತು ಆರ್ಬಿಟ್ರೇಶನ್ ನ್ಯಾಯಾಲಯ ಅಥವಾ ರೆಜಿಸ್ಟ್ರಾರ್‌ರವರು, ಆಯಾಯ ವಿಷಯದಂತೆ, ಅಂತಹ ವಿವಾದವನ್ನು ಇತ್ಯರ್ಥಗೊಳಿಸತಕ್ಕದ್ದು ಮತ್ತು ಅಂತಹ ವಿವಾದಕ್ಕೆ ಸಂಬಂಧಿಸಿದ ಯಾವುದೇ ಮೊಕದ್ದಮೆ ಅಥವಾ ಇತರ ನಡಾವಳಿಗಳನ್ನು ಕೈಗೊಳ್ಳಲು ಇತರ ಯಾವುದೇ ನ್ಯಾಯಾಲಯಕ್ಕೆ ಅಥವಾ ಪ್ರಾಧಿಕಾರಕ್ಕೆ ಅಧಿಕಾರ ವ್ಯಾಪ್ತಿಯಿರುವುದಲ್ಲ.".

40. 69ಎ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 69ಎ ವಿಭಾಗದ (1)ನೇ ಉಪ-ವಿಭಾಗದಲ್ಲಿ, "ಬ್ಯಾಂಕಿಂಗ್ ವ್ಯವಹಾರಗಳನ್ನು ನಡೆಸುವ" ಎಂಬ ಪದಗಳನ್ನು ಹೊರತುಪಡಿಸತಕ್ಕದ್ದು.

41. 70ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 70ನೇ ವಿಭಾಗದ (6)ನೇ ಉಪ-ವಿಭಾಗದಲ್ಲಿ, "ಒಂದು ಅವಾರ್ಡನ್ನು ಮಂಜೂರು ಮಾಡತಕ್ಕದ್ದು" ಎಂಬ ಪದಗಳ ನಂತರ "ಹಣಕಾಸಿಗೆ ಸಂಬಂಧಿಸಿದ ಸಮಸ್ಯೆಗಳು ಒಳಪಡುವ ವಿಷಯಗಳಲ್ಲಿ ಒಂದು ವರ್ಷದೊಳಗೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

42. 70ಎ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 70ಎ ವಿಭಾಗದ (2)ನೇ ಉಪ-ವಿಭಾಗದ ಬದಲು, ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(2) ಆರ್ಬಿಟ್ರೇಶನ್ ನ್ಯಾಯಾಲಯದ ಪ್ರಿಸೈಡಿಂಗ್ ಆಫೀಸರ್‌ರವರು ನ್ಯಾಯಾಂಗ ಸೇವೆಯಲ್ಲಿನ ಮುನ್ಸಿಫ್ ಮ್ಯಾಜಿಸ್ಟ್ರೇಟ್‌ರವರ ಅಥವಾ ಅದಕ್ಕಿಂತ ಹೆಚ್ಚಿನ ದರ್ಜೆಯ ಅಧಿಕಾರಿಯಾಗಿರತಕ್ಕದ್ದು.

43. 73ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 73ನೇ ವಿಭಾಗದಲ್ಲಿ,—

(i) (2ಎ) ಉಪ-ವಿಭಾಗದಲ್ಲಿ ಮತ್ತು ಅದರ ವಿವರಣೆಯಲ್ಲಿನ "ಮೂರು ವರ್ಷ" ಎಂಬ ಪದಗಳ ಬದಲು "ಎರಡು ವರ್ಷ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) (2ಎ) ಉಪ-ವಿಭಾಗದಲ್ಲಿ, ವಿವರಣೆಯ ನಂತರ ಈ ಕೆಳಗಿನ ಷರತ್ತುಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"ಆದರೆ, 72ನೇ ವಿಭಾಗದ (1)ನೇ ಉಪ-ವಿಭಾಗ ಪ್ರಕಾರ ಲಿಕ್ವಿಡೇಟರನ್ನು ನೇಮಿಸಿದ ದಿನಾಂಕದಿಂದ ಎರಡು ವರ್ಷಗಳ ಕಾಲಾವಧಿಯೊಳಗೆ ಮುಕ್ತಾಯ ನಡಾವಳಿಗಳನ್ನು ಪೂರ್ಣಗೊಳಿಸಲು ಸಾಧ್ಯವಾಗದಿದ್ದಲ್ಲಿ ಲಿಕ್ವಿಡೇಟರ್ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ಆತನಿಗೆ ತಡೆಯೊಡ್ಡುತ್ತಿರುವ ಕ್ರಮಗಳಲ್ಲಿನ ಅಡಚರಣೆಗಳನ್ನು ವಿವರಿಸಿ ರೆಜಿಸ್ಟ್ರಾರ್‌ರವರ ಮುಖೇನ ಒಂದು ವರದಿಯನ್ನು ಸಲ್ಲಿಸತಕ್ಕದ್ದು ಮತ್ತು ಅಂತಹ ವಿಷಯಗಳಲ್ಲಿ ನಿಗದಿಪಡಿಸಬಹುದಾದ ಪ್ರಕಾರ ಸರಕಾರದ ನಿರ್ದಿಷ್ಟಪಡಿಸಿದ ಸಮಯದೊಳಗೆ ಸರಕಾರದ ಅನುಮತಿಯೊಂದಿಗೆ ಅಂತಿಮ ವರದಿಯನ್ನು ಹೊರಡಿಸತಕ್ಕದ್ದು;

ಹಾಗಿದ್ದರೂ, ಅಂತಹ ವಿಸ್ತರಣೆಯು ಒಂದು ವರ್ಷದ ಕಾಲಾವಧಿಯನ್ನು ಮೀರತಕ್ಕದ್ದಲ್ಲ.".

44. 74ಸಿ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 74ಸಿ ವಿಭಾಗದಲ್ಲಿ,—

(i) ಅಸ್ತಿತ್ವದಲ್ಲಿರುವ ವಿಭಾಗವನ್ನು (1)ನೇ ಉಪ-ವಿಭಾಗವಾಗಿ ಅಂಕಿತಗೊಳಿಸತಕ್ಕದ್ದು;

(ii) ಆ ರೀತಿ ಅಂಕಿತಗೊಳಿಸಿದ (1)ನೇ ಉಪ-ವಿಭಾಗದ ನಂತರ ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(2) ರೆಜಿಸ್ಟ್ರಾರ್‌ರವರು, ತಪಾಸಣಾ ವರದಿಯ ತಳಹದಿಯಲ್ಲಿ ಅಗತ್ಯವಿದ್ದಲ್ಲಿ, ಚಟುವಟಿಕೆಗಳನ್ನು ಪುನರ್ ರಚಿಸುವುದಕ್ಕಿರುವ ಪರಿಹಾರ ಕ್ರಮಗಳನ್ನು ಸರಕಾರದೊಡನೆ ನಿರ್ದೇಶಿಸತಕ್ಕದ್ದು.".

This is a digitally signed Gazette.
Authenticity may be verified through https://compose.kerala.gov.in/

16

45. 76ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ *76*ನೇ ವಿಭಾಗದಲ್ಲಿ, "*68*ನೇ ವಿಭಾಗದ *(2)*ನೇ ಉಪ-ವಿಭಾಗ ಪ್ರಕಾರದ" ಎಂಬ ಪದಗಳ, ಅಂಕೆಗಳ ಮತ್ತು ಆವರಣದ ನಂತರ "ಅಥವಾ *69*ಎ ವಿಭಾಗದಲ್ಲಿ ಉಪಬಂಧಿಸಿರುವ ಓಂಬುಡ್ಸ್‌ಮ್ಯಾನ್‌ರವರ ಪ್ರತಿಯೊಂದು ಆದೇಶದ ಅಥವಾ" ಎಂಬ ಪದಗಳನ್ನು, ಅಂಕೆಗಳನ್ನು ಮತ್ತು ಅಕ್ಷರವನ್ನು ಸೇರಿಸತಕ್ಕದ್ದು.

*46. 80*ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ *80*ನೇ ವಿಭಾಗದಲ್ಲಿ,—

(i) *(3)*ನೇ ಉಪ-ವಿಭಾಗದ ಕೊನೆಯಲ್ಲಿ ಈ ಕೆಳಗಿನ ವಾಕ್ಯವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"ಪ್ರಸ್ತುತ ನೇಮಕಾತಿಯು ನಿಗದಿಪಡಿಸಿದ ಪ್ರಕಾರ ಅನಂತರದ ಪೋಲೀಸ್ ತಪಾಸಣೆಯ ಮೂಲಕ ಆತನ/ಆಕೆಯ ಸ್ವಭಾವ ಮತ್ತು ಪೂರ್ವಚರಿತ್ರೆಯನ್ನು ಪರಿಶೀಲಿಸಿದ ನಂತರವೇ ನೇಮಕಾತಿಯನ್ನು ಕ್ರಮಬದ್ಧಗೊಳಿಸತಕ್ಕದ್ದು.".

(ii) *(3ಎ)* ಉಪ-ವಿಭಾಗದಲ್ಲಿ,—

(ಎ) "ಸಂಘದ ನೌಕರರ" ಎಂಬ ಪದಗಳ ಬದಲು "ಸಂಘಗಳ ಮುಖ್ಯ ಕಾರ್ಯನಿರ್ವಾಹಕರ ಹೊರತಾದ ಸಂಘದ ನೌಕರರ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) ಈ ಕೆಳಗಿನ ವಾಕ್ಯವನ್ನು ಕೊನೆಯಲ್ಲಿ ಸೇರಿಸತಕ್ಕದ್ದು, ಅದೇನೆಂದರೆ:—

"ಅಪೆಕ್ಸ್ ಸಂಘಗಳಲ್ಲಿನ ಮುಖ್ಯ ಕಾರ್ಯನಿರ್ವಾಹಕನ ನೇಮಕಾತಿಯನ್ನು ಅರ್ಹತೆಗಳನ್ನು ನಿಗದಿಪಡಿಸುತಾ ಸರಕಾರ ನಡೆಸತಕ್ಕದ್ದು.".

(iii) *(5)*ನೇ ಉಪ-ವಿಭಾಗದಲ್ಲಿ,—

(ಎ) "ಮೂರು ಶೇಕಡಾ" ಎಂಬ ಪದಗಳ ಬದಲು "ನಾಲ್ಕು ಶೇಕಡಾ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) ಷರತ್ತಿನಲ್ಲಿ "ಮೂವತ್ತಮೂರಕ್ಕಿಂತ" ಎಂಬ ಪದದ ಬದಲು "ಇಪ್ಪತ್ತೈದಕ್ಕಿಂತ" ಎಂಬ ಪದವನ್ನು ಸೇರಿಸತಕ್ಕದ್ದು.

*47. 80*ಎ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ *80*ಎ ವಿಭಾಗದ *(1)*ನೇ ಉಪ-ವಿಭಾಗದಲ್ಲಿ "ಮಂಡಳಿಗಳಲ್ಲಿನ ನೌಕರರಿಗೆ" ಎಂಬ ಪದಗಳ ಬದಲು "ಮಂಡಳಿಗಳಲ್ಲಿನ ಮತ್ತು ರಾಜ್ಯದ ಸಹಕಾರಿ ಒಕ್ಕೂಟಗಳಲ್ಲಿನ ನೌಕರರಿಗೂ" ಎಂಬ ಪದಗಳನ್ನು ಸೇರಿಸತಕ್ಕದ್ದು.

*48. 80*ಬಿ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ *80*ಬಿ ವಿಭಾಗದಲ್ಲಿ, *(1)*ನೇ ಉಪ-ವಿಭಾಗದ ಬದಲು ಈ ಕೆಳಗಿನವುಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*(1)* ಅಧಿಕಾರಿಗಳನ್ನು ಮತ್ತು ನೌಕರರನ್ನು ನೇಮಕಾತಿ ಮಾಡುವುದಕ್ಕೆ ಸಂಬಂಧಿಸಿದಂತೆ, ಈ ಅಧಿನಿಯಮದಲ್ಲಿ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಅದರೆ *80*ಬಿಬಿ ವಿಭಾಗಕ್ಕೆ ಒಳಪಟ್ಟು ಮತ್ತು ಸರಕಾರ ಗಜೆಟ್ ಅಧಿಸೂಚನೆಯ ಮುಖೇನ, ಎಲ್ಲಾ ಸಹಕಾರಿ ಸಂಘಗಳಲ್ಲೂ ಮಂಡಳಿಗಳಲ್ಲೂ ರೆಜಿಸ್ಟ್ರಾರ್‌ರವರ ನಿಯಂತ್ರಣೆಯ ಅಡಿಯಲ್ಲಿರುವ ಇತರ ಸಂಸ್ಥೆಗಳಲ್ಲೂ, ಜೂನಿಯರ್ ಕ್ಲರ್ಕ್ ಮತ್ತು ಅದಕ್ಕಿಂತ ಹೆಚ್ಚಿನ ದರ್ಜೆಯ ಹುದ್ದೆಗಳಿಗಿರುವ ಎಲ್ಲಾ ನೇರ ನೇಮಕಾತಿಗಳಿಗಾಗಿ ಲಿಖಿತ ಪರೀಕ್ಷೆಯನ್ನು ನಡೆಸುವುದಕ್ಕಾಗಿ ಒಂದು ಸಹಕಾರಿ ಪರೀಕ್ಷಾ ಮಂಡಳಿಯನ್ನು ರಚಿಸತಕ್ಕದ್ದು:

ಆದರೆ, ರೆಜಿಸ್ಟ್ರಾರ್‌ರವರಿಗೆ, ಇಂತಹ ಸಂಘಗಳ ಆರ್ಥಿಕ ಸಾಮರ್ಥ್ಯ ಮತ್ತು ಚಟುವಟಿಕಾ ದಕ್ಷತೆಯನ್ನು ಪರಿಗಣಿಸುತಾ ಯಾವುದೇ ಸಂಘವನ್ನು ಅಥವಾ ಸಂಘಗಳ ವಿಭಾಗವನ್ನು ನಿಗದಿಪಡಿಸಿದ ಪ್ರಕಾರ ಈ ಉಪ-ವಿಭಾಗದ ಉಪಬಂಧದಿಂದ ಹೊರತುಪಡಿಸಬಹುದಾಗಿದೆ.".

*49. 88*ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ *88*ನೇ ವಿಭಾಗದ *(1)*ನೇ ಉಪ-ವಿಭಾಗದ *(ಇ)* ಖಂಡದ ಬದಲು ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"*(ಇ)* ವೃತ್ತದಲ್ಲಿ ಅಧಿಕಾರ ವ್ಯಾಪ್ತಿಯಿರುವ ಸಹಕಾರಿ ಲೆಕ್ಕ ಪರಿಶೋಧನಾ ಸಹಾಯಕ ನಿರ್ದೇಶಕರು, ಪದನಿಮಿತ್ತ;".

*50. 88*ಬಿ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ *88*ಬಿ ವಿಭಾಗದ (iii)ನೇ ಖಂಡದಲ್ಲಿ, "ಒಬ್ಬ ಅಧಿಕಾರಿಯನ್ನು" ಎಂಬ ಪದಗಳ ನಂತರ "ಅಲ್ಲದಿದ್ದಲ್ಲಿ ಒಬ್ಬ ಆಡಳಿತಗಾರನನ್ನು ಅಥವಾ ಮೂರಕ್ಕಿಂತ ಕಡಿಮೆಯಲ್ಲದ ಸದಸ್ಯರುಗಳಿರುವ ಒಂದು ಆಡಳಿತಾತ್ಮಕ ಕಮಿಟಿಯನ್ನು ಅದರಲ್ಲಿ ಒಬ್ಬರು ಕನ್ವೀನರ್ ಆಗಿರತಕ್ಕದ್ದು" ಎಂಬ ಪದಗಳನ್ನು ಸೇರಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

17

51. 89ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 89ನೇ ವಿಭಾಗದ (4)ನೇ ಉಪ-ವಿಭಾಗದಲ್ಲಿ,—

(i) (ಡಿ) ಖಂಡದಲ್ಲಿ, "(ಸಿ) ಖಂಡದ ಪ್ರಕಾರ" ಎಂಬ ಪದದ, ಅಕ್ಷರದ ಮತ್ತು ಆವರಣದ ಬದಲು "(ಬಿ) ಖಂಡದ ಪ್ರಕಾರ" ಎಂಬ ಪದವನ್ನು, ಅಕ್ಷರವನ್ನು ಮತ್ತು ಆವರಣವನ್ನು ಸೇರಿಸತಕ್ಕದ್ದು.

(ii) (ಇ) ಖಂಡದಲ್ಲಿ, "(ಡಿ) ಖಂಡದ ಪ್ರಕಾರ" ಎಂಬ ಪದದ, ಅಕ್ಷರದ ಮತ್ತು ಆವರಣದ ಬದಲು "(ಸಿ) ಖಂಡದ ಪ್ರಕಾರ" ಎಂಬ ಪದವನ್ನು, ಅಕ್ಷರವನ್ನು ಮತ್ತು ಆವರಣವನ್ನು ಸೇರಿಸತಕ್ಕದ್ದು.

(iii) (ಎಫ್) ಖಂಡದಲ್ಲಿ, "(ಇ) ಖಂಡದ ಪ್ರಕಾರ" ಎಂಬ ಪದದ, ಅಕ್ಷರದ ಮತ್ತು ಆವರಣದ ಬದಲು "(ಡಿ) ಖಂಡದ ಪ್ರಕಾರ" ಎಂಬ ಪದವನ್ನು, ಅಕ್ಷರವನ್ನು ಮತ್ತು ಆವರಣವನ್ನು ಸೇರಿಸತಕ್ಕದ್ದು.

52. 89ಬಿ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 89ಬಿ ವಿಭಾಗದಲ್ಲಿ, ಖಂಡ (iii)ರಲ್ಲಿ "ಒಬ್ಬ ಅಧಿಕಾರಿಯನ್ನು" ಎಂಬ ಪದಗಳ ಬದಲು "ಅಡೀಷನಲ್ ರೆಜಿಸ್ಟ್ರಾರವರ ದರ್ಜೆಗಿಂತ ಕಡಿಮೆಯಿಲ್ಲದ ಒಬ್ಬ ಅಧಿಕಾರಿಯನ್ನು ಅಥವಾ ಒಬ್ಬ ಆಡಳಿತಗಾರನನ್ನು ಅಥವಾ ಮೂರು ಮಂದಿಯನ್ನೊಳಗೊಂಡ ಒಂದು ಆಡಳಿತಾತ್ಮಕ ಕಮಿಟಿಯನ್ನು, ಅದರಲ್ಲಿ ಒಬ್ಬರು ಕನ್ವೀನರ್ ಆಗಿರತಕ್ಕದ್ದು" ಎಂಬ ಪದಗಳನ್ನು ಸೇರಿಸತಕ್ಕದ್ದು.

53. 91ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 91ನೇ ವಿಭಾಗದ (1)ನೇ ಉಪ-ವಿಭಾಗದ (ಸಿ) ಖಂಡದಲ್ಲಿ, "ಸಹಕಾರಿ ತತ್ವಗಳನ್ನು" ಎಂಬ ಪದಗಳ ಮುಂಚಿತವಾಗಿ "ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿ ಹಾಗೂ" ಎಂಬ ಪದಗಳನ್ನು ಸೇರಿಸತಕ್ಕದ್ದು.

54. 94ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 94ನೇ ವಿಭಾಗದಲ್ಲಿ,—

(i) (2)ನೇ ಉಪ-ವಿಭಾಗದಲ್ಲಿ, "ಎರಡು ಸಾವಿರ" ಎಂಬ ಪದದ ಬದಲು "ಐದು ಸಾವಿರ" ಎಂಬ ಪದವನ್ನು ಸೇರಿಸತಕ್ಕದ್ದು.

(ii) (3)ನೇ ಉಪ-ವಿಭಾಗದಲ್ಲಿ, "ಎರಡು ಸಾವಿರ" ಎಂಬ ಪದದ ಬದಲು "ಐದು ಸಾವಿರ" ಎಂಬ ಪದವನ್ನು ಸೇರಿಸತಕ್ಕದ್ದು.

(iii) (4)ನೇ ಉಪ-ವಿಭಾಗದಲ್ಲಿ, "ಐದು ಸಾವಿರ" ಎಂಬ ಪದದ ಬದಲು "ಹತ್ತು ಸಾವಿರ" ಎಂಬ ಪದವನ್ನು ಸೇರಿಸತಕ್ಕದ್ದು.

(iv) (4ಎ)ನೇ ಉಪ-ವಿಭಾಗದಲ್ಲಿ, "ಐದು ಸಾವಿರ" ಎಂಬ ಪದದ ಬದಲು "ಹತ್ತು ಸಾವಿರ" ಎಂಬ ಪದವನ್ನು ಸೇರಿಸತಕ್ಕದ್ದು.

(v) (4ಬಿ)ನೇ ಉಪ-ವಿಭಾಗದಲ್ಲಿ, "ಸಾವಿರ" ಎಂಬ ಪದದ ಬದಲು "ಐದು ಸಾವಿರ" ಎಂಬ ಪದವನ್ನು ಸೇರಿಸತಕ್ಕದ್ದು.

(vi) (5)ನೇ ಉಪ-ವಿಭಾಗದ (ಬಿ) ಖಂಡದಲ್ಲಿ "ಐದು ಸಾವಿರ" ಎಂಬ ಪದದ ಬದಲು "ಹತ್ತು ಸಾವಿರ" ಎಂಬ ಪದವನ್ನು ಸೇರಿಸತಕ್ಕದ್ದು.

(vii) (6)ನೇ ಉಪ-ವಿಭಾಗದಲ್ಲಿ, "ಐದು ಸಾವಿರ" ಎಂಬ ಪದದ ಬದಲು "ಹತ್ತು ಸಾವಿರ" ಎಂಬ ಪದವನ್ನು ಸೇರಿಸತಕ್ಕದ್ದು.

(viii) (7)ನೇ ಉಪ-ವಿಭಾಗದಲ್ಲಿ, "ಐದು ಸಾವಿರ" ಎಂಬ ಪದದ ಬದಲು "ಹತ್ತು ಸಾವಿರ" ಎಂಬ ಪದವನ್ನು ಸೇರಿಸತಕ್ಕದ್ದು.

(ix) (7)ನೇ ಉಪ-ವಿಭಾಗದ ನಂತರ ಈ ಕೆಳಗಿನವುಗಳನ್ನು (7ಎ) ಉಪ-ವಿಭಾಗವಾಗಿ ಸೇರಿಸತಕ್ಕದ್ದು, ಅದೇನೆಂದರೆ:—

"(7ಎ) ಯಾವುದೇ ಸಹಕಾರಿ ಸಂಘದ ಮುಖ್ಯ ಕಾರ್ಯ ನಿರ್ವಾಹಕ ಅಥವಾ ಕಮಿಟಿಯು 59ನೇ ವಿಭಾಗದ (3)ನೇ ಉಪ-ವಿಭಾಗದಲ್ಲಿನ ಉಪಬಂಧಗಳನ್ನು ಉಲ್ಲಂಘಿಸುವುದಾದಲ್ಲಿ ಹತ್ತು ಸಾವಿರ ರೂಪಾಯಿಯವರೆಗಿನ ದಂಡವನ್ನು ವಿಧಿಸಿ ಶಿಕ್ಷಿಸಲ್ಪಡಬಹುದಾಗಿದೆ.".

(x) (10)ನೇ ಉಪ-ವಿಭಾಗದಲ್ಲಿ, "(6) ಮತ್ತು (7)", ಎಂಬ ಆವರಣಗಳ, ಅಂಕೆಗಳ, ಚಿಹ್ನೆಗಳ ಮತ್ತು ಪದದ ಬದಲು "(6), (7)ಮತ್ತು (7ಎ)" ಎಂಬ ಆವರಣಗಳನ್ನು, ಅಂಕೆಗಳನ್ನು, ಚಿಹ್ನೆಗಳನ್ನು, ಪದವನ್ನು ಮತ್ತು ಅಕ್ಷರವನ್ನು ಸೇರಿಸತಕ್ಕದ್ದು.

55. 95ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 95ನೇ ವಿಭಾಗದ (4)ನೇ ಉಪ-ವಿಭಾಗದಲ್ಲಿ, "(2), (3), (4), (5), (6) ಮತ್ತು (7)" ಎಂಬ ಆವರಣಗಳ, ಅಂಕೆಗಳ, ಚಿಹ್ನೆಗಳ ಮತ್ತು ಪದದ ಬದಲು "(2), (3), (4), (5), (6), (7) ಮತ್ತು (7ಎ)" ಎಂಬ ಆವರಣಗಳನ್ನು, ಅಂಕೆಗಳನ್ನು, ಚಿಹ್ನೆಗಳನ್ನು, ಪದವನ್ನು ಮತ್ತು ಅಕ್ಷರವನ್ನು ಸೇರಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

18

56. 106ಎ ಎಂಬ ಹೊಸ ವಿಭಾಗದ ಸೇರ್ಪಡೆ.—*ಪ್ರಧಾನ ಅಧಿನಿಯಮದ 106ನೇ ವಿಭಾಗದ ನಂತರ ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:*—

"*106ಎ ತೊಂದರೆಗಳನ್ನು ನೀಗಿಸುವುದಕ್ಕಿರುವ ಅಧಿಕಾರ.*—*(1) 2023ರ ಕೇರಳ ಸಹಕಾರಿ ಸಂಘಗಳ (ತಿದ್ದುಪಡಿ) ಅಧಿನಿಯಮದ ಪ್ರಕಾರ ತಿದ್ದುಪಡಿ ಮಾಡಿದ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವುದರಲ್ಲಿ ಯಾವುದೇ ತೊಂದರೆಗಳು ಉಂಟಾಗುವುದಾದಲ್ಲಿ, ರಾಜ್ಯ ಸರಕಾರಕ್ಕೆ ಅಧಿಕೃತ ಗಜೆಟಿನಲ್ಲಿ ಅಧಿಸೂಚಿಸಿದ ಸಾಮಾನ್ಯ ಅಥವಾ ವಿಶೇಷ ಆದೇಶದ ಮುಖೇನ ಪ್ರಸ್ತುತ ತೊಂದರೆಯನ್ನು ನೀಗಿಸಲು ಅಗತ್ಯವೆಂದೋ ಯುಕ್ತವೆಂದೋ ಅದಕ್ಕೆ ತೋರುವ ಈ ಅಧಿನಿಯಮದ ಉಪಬಂಧಗಳಿಗೆ ವಿರುದ್ಧವಲ್ಲದ ರೀತಿಯಲ್ಲಿ ಉಪಬಂಧಗಳನ್ನು ರಚಿಸಬಹುದಾಗಿದೆ:*

ಆದರೆ, 2023ರ ಕೇರಳ ಸಹಕಾರಿ ಸಂಘಗಳ (ತಿದ್ದುಪಡಿ) ಅಧಿನಿಯಮದ ಪ್ರಾರಂಭ ದಿನಾಂಕದಿಂದ ಎರಡು ವರ್ಷಗಳ ಕಾಲಾವಧಿಯು ಮುಕ್ತಾಯಗೊಂಡ ನಂತರ ಅಂತಹ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(2) ಈ ಅಧಿನಿಯಮದ ಅಡಿಯಲ್ಲಿ ಹೊರಡಿಸುವ ಯಾವುದೇ ಆದೇಶವನ್ನು ಹೊರಡಿಸಿದ ಕೂಡಲೇ ವಿಧಾನಸಭೆಯ ಸಮಕ್ಷದಲ್ಲಿ ಮಂಡಿಸತಕ್ಕದ್ದು.".

57. I *ನೇ ಅನುಸೂಚಿಯ ತಿದ್ದುಪಡಿ.*—*ಪ್ರಧಾನ ಅಧಿನಿಯಮದ* I*ನೇ ಅನುಸೂಚಿಯಲ್ಲಿ ಕ್ರಮ ನಂಬ್ರ 15ರ ನಂತರ ಈ ಕೆಳಗಿನ ಕ್ರಮನಂಬ್ರಗಳನ್ನು ಮತ್ತು ನಮೂದುಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:*—

"*16. ಕೇರಳ ರಾಜ್ಯ ಮಹಿಳಾ ಸಹಕಾರಿ ಫೆಡರೇಶನ್ ಲಿಮಿಟೆಡ್ (ವನಿತಾ ಫೆಡ್).*

17. ಕೇರಳ ರಾಜ್ಯ ಸಹಕಾರಿ ಟೂರಿಸಂ ಫೆಡರೇಶನ್ ಲಿಮಿಟೆಡ್ (ಟೂರ್ ಫೆಡ್).

18. ಕೇರಳ ರಾಜ್ಯ ಕಾರ್ಮಿಕ ಸಹಕಾರಿ ಫೆಡರೇಶನ್ ಲಿಮಿಟೆಡ್ (ಲೇಬರ್ ಫೆಡ್).

19. ಕೇರಳ ರಾಜ್ಯ ಸಹಕಾರಿ ಆಸ್ಪತ್ರೆ ಫೆಡರೇಶನ್ ಲಿಮಿಟೆಡ್ (ಹೋಸ್ಪಿಟಲ್ ಫೆಡ್).".

This is a digitally signed Gazette.
Authenticity may be verified through https://compose.kerala.gov.in/

கேரள அரசு

சட்ட (சட்டமியற்றல் -பி) துறை

அறிக்கை

எண்:59/ச.இ.எ.பி1/2025/சட்டம். திருவனந்தபுரம், 2025 நவம்பர், 13

1201 துலாம், 27

1947 கார்த்திகம், 22.

கேரள மாநில சட்டப் பேரவையின் பின்வரும் சட்டம் பொதுமக்களின் அறிவிற்காக இதனால் பிரசுரம் செய்யப்படுகிறது. சட்டமன்றப் பேரவையால் நிறைவேற்றப்பட்ட மசோதாவிற்கு 2025-ஆம் ஆண்டு நவம்பர் மாதம் 11-ஆம் தேதி ஆளுநரின் அனுமதி கிடைக்கப்பெற்றது.

ஆளுநரின் ஆணைப்படி,

கெ.ஜி.சனல் குமார்,
சட்ட செயலாளர்.

This is a digitally signed Gazette.
Authenticity may be verified through https://compose.kerala.gov.in/

2025-ன் 17-வது சட்டம்

2025-ன் குருவாயூர் அறநிலைய (திருத்த) சட்டம்

1978-ன் குருவாயூர் அறநிலைய சட்டத்தை மீண்டும் திருத்தம் செய்வதற்கான

ஒரு

சட்டம்

முன்னுரை.- 1978-ன் குருவாயூர் அறநிலைய சட்டம் (1978-ன் 14) இதற்கு பின்வரும் தேவைகளுக்காக மீண்டும் திருத்தம் செய்வது உகந்ததாக இருப்பதால்;

இந்திய குடியரசின் எழுபத்து ஆறாம் ஆண்டில் பின்வரும் படியாக சட்டம் இயற்றப்படுகிறது:-

1. சுருக்கத் தலைப்பு மற்றும் தொடக்கமும்.- (1) இந்த சட்டம் 2025-ன் குருவாயூர் அறநிலைய (திருத்த) சட்டம் என அழைக்கப்படலாம்.

(2) இந்த சட்டம் பிற வகையில் ஏற்பாடு செய்யப்படாத பட்சம்,-

(i) பிரிவு 2 2025 ஆம் ஆண்டு ஜனவரி மாதம் 1-ஆம் தேதி அமலுக்கு வந்ததாக கருதப்பட வேண்டும்.

(ii) மீதமுள்ள பிரிவுகள் உடன் அமலுக்கு வருவதாகும்.

2. பிரிவு 9-ற்கான திருத்தம்.- 1978-ன் குருவாயூர் அறநிலைய சட்டத்தில் (1978-ன் 14), (இதற்குப் பிறகு முதன்மை சட்டம் என குறிப்பிடப்படும்), பிரிவு 9-க்கு பதிலாக பின்வரும் பிரிவு சேர்க்கப்பட வேண்டும், அதாவது:-

''9.தலைவர் மற்றும் உறுப்பினர்களின் ஊதியம்.- குழுவின் தலைவர் மற்றும் உறுப்பினர்களுக்கு அரசு, அவ்வப்போது, அதிகாரப்பூர்வ அரசிதழ் அறிக்கை வாயிலாக, நிர்ணயிக்கப்படும் அத்தகைய கௌரவ ஊதியம் மற்றும் அமர்வு கட்டணத்தை ஒவ்வொரு மாதமும் பெறுவதற்கு தகுதி உடையவர்களாக இருப்பதும் பரிந்துரைக்கப்படலாமெனும் படியான அத்தகைய பயணப்படி மற்றும் தினப்படியைப் பெறுவதற்கு தகுதியுடையவர்களாக இருப்பதுமாகும்;

ஆனால் பிரிவு 4-ன் துணைப்பிரிவு (1)-ல் உட்பிரிவு (டி)-ன் படி பெயர் பரிந்துரை செய்யப்பட்ட ஒரு உறுப்பினருக்கு கௌரவ ஊதியம் பெறுவதற்கு தகுதி கிடையாது.''.

3. பிரிவு 11-ற்கான திருத்தம்.- முதன்மை சட்டத்தின் பிரிவு 11-ன் துணைப்பிரிவு (1)ல் ''ஐயாயிரம் ரூபாய்'' என்ற சொற்களுக்கு பதிலாக ''ஐம்பதினாயிரம் ரூபாய்'' என்ற சொற்கள் சேர்க்கப்பட வேண்டும்.

4. பிரிவு 17-ற்கான திருத்தம்.- முதன்மை சட்டத்தின் பிரிவு 17-ல் துணைப்பிரிவு (3)-ல் ''ஐயாயிரம் ரூபாய்'' என்ற சொற்களுக்கு பதிலாக ''ஐம்பதினாயிரம் ரூபாய்'' என்ற சொற்கள் சேர்க்கப்பட வேண்டும்.

This is a digitally signed Gazette.
Authenticity may be verified through https://compose.kerala.gov.in/

THE GURUVAYOOR DEVASWOM (AMENDMENT) ACT, 2025

2025 ರ ಗುರುವಾಯೂರ್ ದೇವಸ್ವಂ (ತಿದ್ದುಪಡಿ) ಅಧಿನಿಯಮ

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಬಿ) ಇಲಾಖೆ

ಅಧಿಸೂಚನೆ

ನಂಬ್ರ.59/ಲೆಗ್.ಬಿ1/2025/ಕಾನೂನು. ದಿನಾಂಕ, ತಿರುವನಂತಪುರಂ, 2025 ನವೆಂಬರ್ 13
1201 ತುಲಾ 27
1947 ಕಾರ್ತಿಕ 22.

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2025 ನವೆಂಬರ್ 11ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಕೆ.ಜಿ.ಸನಲ್ ಕುಮಾರ್,
ಕಾನೂನು ಕಾರ್ಯದರ್ಶಿ.

This is a digitally signed Gazette.
Authenticity may be verified through https://compose.kerala.gov.in/

2

2025 ರ 17ನೇ ಅಧಿನಿಯಮ

2025 ರ ಗುರುವಾಯೂರ್ ದೇವಸ್ವಂ (ತಿದ್ದುಪಡಿ) ಅಧಿನಿಯಮ

1978ರ ಗುರುವಾಯೂರ್ ದೇವಸ್ವಂ ಅಧಿನಿಯಮವನ್ನು ಮತ್ತೂ ತಿದ್ದುಪಡಿ ಮಾಡುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ.-1978ರ ಗುರುವಾಯೂರ್ ದೇವಸ್ವಂ ಅಧಿನಿಯಮ (1978ರ 14) ವನ್ನು ಇನ್ನು ಮುಂದಿನ ಅಗತ್ಯಗಳಿಗಾಗಿ ಮತ್ತೂ ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು:-

1. ಸಂಕ್ಷಿಪ್ತನಾಮ ಮತ್ತು ಪ್ರಾರಂಭ.-(1) ಈ ಅಧಿನಿಯಮವನ್ನು 2025 ರ ಗುರುವಾಯೂರ್ ದೇವಸ್ವಂ (ತಿದ್ದುಪಡಿ) ಅಧಿನಿಯಮ ಎಂದು ಕರೆಯಬಹುದು.

(2) ಈ ಅಧಿನಿಯಮದಲ್ಲಿ ಇತರ ರೀತಿಯಲ್ಲಿ ಉಪಬಂಧಿಸದಿದ್ದಲ್ಲಿ,-

(i) 2ನೇ ವಿಭಾಗವು, 2025 ಜನವರಿ 1ನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು;

(ii) ಉಳಿದ ವಿಭಾಗಗಳು ಕೂಡಲೇ ಜಾರಿಗೆ ಬರುವುದಾಗಿದೆ.

2. 9ನೇ ವಿಭಾಗದ ತಿದ್ದುಪಡಿ.-1978 ನೇ ಗುರುವಾಯೂರ್ ದೇವಸ್ವಂ ಅಧಿನಿಯಮದ (1978ರ 14), (ಇನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲ್ಪಡುವುದು), 9ನೇ ವಿಭಾಗದ ಬದಲು ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:-

"9.ಚೇರ್ ಮನ್ ಮತ್ತು ಸದಸ್ಯರುಗಳ ಭತ್ತೆಗಳು.-ಸಮಿತಿಯ ಚೇರ್ ಮನ್ ಮತ್ತು ಸದಸ್ಯರಿಗೆ ಸರಕಾರವು, ಕಾಲಾಕಾಲಗಳಲ್ಲಿ, ಅಧಿಕೃತ ಗಜೆಟ್ ಅಧಿಸೂಚನೆ ಮುಖೇನ, ನಿರ್ದರಿಸುವಂತಹ ಗೌರವ ಭತ್ಯೆ

This is a digitally signed Gazette.
Authenticity may be verified through https://compose.kerala.gov.in/

ಮತ್ತು ಆಸೀನ ಭತ್ಯೆ ಪ್ರತಿ ತಿಂಗಳು ಲಭಿಸಲು ಅರ್ಹತೆಯಿರುವುದಾಗಿದೆ ಮತ್ತು ನಿಗದಿಪಡಿಸಬಹುದಾದಂತಹ ಪ್ರಯಾಣ ಭತ್ಯೆಗೆ ಮತ್ತು ದಿನ ಭತ್ಯೆಗಳಿಗೆ ಅರ್ಹತೆಯಿರುವುದಾಗಿದೆ:

ಆದರೆ, 4ನೇ ವಿಭಾಗದ (1) ನೇ ಉಪ-ವಿಭಾಗ (ಡಿ) ಖಂಡದ ಪ್ರಕಾರ ನಾಮನಿರ್ದೇಶಿಸಲ್ಪಟ್ಟ ಒಬ್ಬ ಸದಸ್ಯನಿಗೆ ಗೌರವ ಭತ್ತೆಗೆ ಅರ್ಹತೆಯಿರುವುದಲ್ಲ.".

3. 11ನೇ ವಿಭಾಗದ ತಿದ್ದುಪಡಿ.- ಪ್ರಧಾನ ಅಧಿನಿಯಮದ 11ನೇ ವಿಭಾಗದ (1) ನೇ ಉಪ-ವಿಭಾಗದಲ್ಲಿ "ಐದು ಸಾವಿರ ರೂಪಾಯಿ" ಎಂಬ ಪದಗಳಿಗೆ ಬದಲಾಗಿ "ಐವತ್ತು ಸಾವಿರ ರೂಪಾಯಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

4. 17ನೇ ವಿಭಾಗದ ತಿದ್ದುಪಡಿ.- ಪ್ರಧಾನ ಅಧಿನಿಯಮದ 17ನೇ ವಿಭಾಗದ (3) ನೇ ಉಪ-ವಿಭಾಗದಲ್ಲಿ "ಐದು ಸಾವಿರ ರೂಪಾಯಿ" ಎಂಬ ಪದಗಳಿಗೆ ಬದಲಾಗಿ "ಐವತ್ತು ಸಾವಿರ ರೂಪಾಯಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

PUBLISHED BY THE SUPERINTENDENT OF GOVERNMENT PRESSES
AT THE GOVERNMENT CENTRAL PRESS, THIRUVANANTHAPURAM, 2026.

This is a digitally signed Gazette.
Authenticity may be verified through https://compose.kerala.gov.in/

Digitally signed by VEERAN T
Date:2026.03.10 03:50:09 +05:30